ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



'ಭಾಷೆ: ಸಾಧ್ಯತೆ ಮತ್ತು ಸವಾಲುಗಳು' ಗೋಷ್ಠಿಯಲ್ಲಿ ಎಂ.ಎಸ್‌ ಆಶಾದೇವಿ ಬೇಸರ

'ಹೆಣ್ಣಿಗೆ ಅನಾಗರಿಕ, ಸುಳ್ಳು ಭಾಷೆ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣಿನ ವಿಚಾರದಲ್ಲಿ ಅನಾಗರಿಕ ಮತ್ತು ಸುಳ್ಳು ಭಾಷೆಯನ್ನೇ ಬಳಸಲಾಗುತ್ತಿದೆ. ಹೆಣ್ಣಿನ ದೇಹದ ಲೈಂಗಿಕತೆಯ ಭಾಷೆಯಲ್ಲೇ ಮಾತನಾಡಲಾಗುತ್ತಿದೆ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಬೇಸರ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ 'ಭಾಷೆ: ಸಾಧ್ಯತೆ ಮತ್ತು ಸವಾಲುಗಳು' ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ವೇದಿಕೆಗಳಲ್ಲಿ ಸ್ತ್ರೀಯರ ಬಗ್ಗೆ ಗೌರವಯುತವಾಗಿ ಮಾತನಾಡುವವರೇ ಹೆಣ್ಣಿನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು. ಗಂಡು ಮುಖ್ಯವಾಗಿ ಬರೆದರೆ ಪ್ರಾಮಾಣಿಕ, ಹೆಣ್ಣು ಮುಖ್ಯವಾಗಿ ಬರೆದರೆ ಬೋಲ್ಡ್ ಎಂದು ಕರೆಯಲಾಗುತ್ತದೆ. ಇದನ್ನು ಮಾರ್ಗ ವಿಧಿಸುವ ಸೆನ್ಸಾರ್‌ಶಿಪ್‌ನಿಂದ ಮೊದಲು ಮುಕ್ತರಾಗಬೇಕು' ಎಂದು ಸಲಹೆ ನೀಡಿದರು.

'ಸಂವೇದನೆಯನ್ನು ಕಳೆದುಕೊಂಡು ವರ್ತಿಸಲಾಗುತ್ತಿದೆ. ಪವಿತ್ರ ಎಂಬ ನಟಿ ತನಗೆ ಇಷ್ಟವಾದವರನ್ನು ಮದುವೆಯಾದರೆ 'ಅಪವಿತ್ರ' ಎಂದು ಮಾಧ್ಯಮಗಳು ಯಾಕೆ ತಲೆಬರಹ ಕೊಡಬೇಕು. ತೆರೆದ ಪುಸ್ತಕದಂತೆ ಎಲ್ಲರಿಗೂ ಗೊತ್ತಿರುವ ಸೌಜನ್ಯ ಪ್ರಕರಣದ ಬಗ್ಗೆ ನಾವು ಯಾಕೆ ಅಷ್ಟು ಅಸೂಕ್ಷ್ಮವಾಗಿದ್ದೇವೆ. ಗಂಡಾಳ್ವಿಕೆಯ ಅಸಹ್ಯಕರ ಭಾಷೆ ಯಾಕೆ ಬಳಸುತ್ತೇವೆ' ಎಂದು ಪ್ರಶ್ನಿಸಿದರು.

'ಸಾಹಿತ್ಯದಲ್ಲಿ ಹೆಣ್ಣುಭಾಷೆ' ಬಗ್ಗೆ ಪ್ರಾಧ್ಯಾಪಕ ಸುರೇಶ್ ನಾಗಲಮಡಿಕೆ ಮಾತನಾಡಿ, 'ಬಂಡಾಯದಲ್ಲಿದ್ದ ಅನುಭವಲೋಕವು ಆಧುನಿಕ ಕಾಲದಲ್ಲಿ ಅತಿಮುಖ್ಯತೆ ಕಡೆಗೆ ವಾಲಿದೆ. ಯಾವ ರಾಜೀಯೂ ಇಲ್ಲದೇ ಮುಲಾಜು ಇಲ್ಲದೇ ಬಳಸುತ್ತಿದ್ದಾರೆ. ಸಂಘರ್ಷ ಮತ್ತು ಹೊಂದಾಣಿಕೆ ಭಾಷೆಯ ಜೊತೆಗೆ ಸಂವಾದದ ಭಾಷೆಯೂ ಹೆಣ್ಣುಭಾಷೆಯಲ್ಲಿದೆ' ಎಂದು ಪ್ರತಿಪಾದಿಸಿದರು.

'ಬಹುಮಾಧ್ಯಮಗಳು ಮತ್ತು ಹೆಣ್ಣುಭಾಷೆ' ಬಗ್ಗೆ ಬರಹಗಾರ್ತಿ ಪ್ರೀತಿ ನಾಗರಾಜ್ ಮಾತನಾಡಿ, 'ಮಾಧ್ಯಮಗಳಲ್ಲಿ ಹೆಣ್ಣು ಮಕ್ಕಳ ಬಗ್ಗೆ ಬಳಸುವ ಮಾತುಗಳು ಅಸೂಕ್ಷ್ಮವಾಗಿವೆ. ಎಲ್ಲೋ ಕತ್ತಲಲ್ಲಿ ನಾಚಿಕೆಯಿಂದ ಬಳಸುತ್ತಿದ್ದ ಪದಗಳು ಇಂದು ಮಾಧ್ಯಮಗಳಲ್ಲಿ ದೊಡ್ಡಕ್ಷರಗಳಲ್ಲಿ ಬಳಕೆಯಾಗುತ್ತಿವೆ. ಅತ್ಯಾಚಾರ ಎಸಗಿದವನನ್ನು ಮದುವೆಯಾಗಬೇಕು ಎಂಬ ಒಂದು ತೀರ್ಪು ಮತ್ತು ಬಾಲಕಿಯ ಸ್ತನ ಹಿಡಿದು, ಪೈಜಾಮದ ದಾರ ಎಳೆದಿರುವುದು ಅತ್ಯಾಚಾರ ಯತ್ನ ಅಲ್ಲ ಎಂಬ ಕೋರ್ಟ್‌ನ ಆದೇಶಗಳು ನಮ್ಮ ಸಮಾಜ 40 ವರ್ಷ ಹಿಂದಕ್ಕೆ ಹೋಗುತ್ತಿರುವುದಕ್ಕೆ ಸಾಕ್ಷಿ' ಎಂದು ಕಳವಳ ವ್ಯಕ್ತಪಡಿಸಿದರು.

ಬರಹಗಾರರಾದ ಮಂಜುಶ್ರೀ ಕಡಕೋಳ, ಗಿರೀಶ್ ಕೆ., ಪೂರ್ಣಿಮಾ ಮಾಳಗಿಮನಿ, ವತ್ಸಲಾ ಮೋಹನ್ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ರಾಣಿ ಚಂದ್ರಶೇಖರ್, ರಾಜಲಕ್ಷ್ಮಿ ಬಸವರಾಜ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.



'ಭಾಷೆ: ಸಾಧ್ಯತೆ ಮತ್ತು ಸವಾಲುಗಳು' ಗೋಷ್ಠಿಯಲ್ಲಿ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ವಿಮರ್ಶಕಿ ಎಂ.ಎಸ್.ಆಶಾದೇವಿ, ಸಮ್ಮೇಳನಾಧ್ಯಕ್ಷೆ ಎಚ್.ಎಸ್. ಶ್ರೀಮತಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

> **ಹೆಣ್ಣು ಕುಟುಂಬದ ಕಣ್ಣು ಎಂದು ಹೇಳುತ್ತಲೇ ಕಣ್ಣಿಗೆ ಚುಚ್ಚುವ ಕೆಲಸವಾಗುತ್ತಿದೆ. ಅತ್ಯಾಚಾರವಾದರೆ ಒಬ್ಬಳೇ ಯಾಕೆ ಓಡಾಡಿದಳು ಎಂದು ಹೆಣ್ಣನ್ನೇ ಪ್ರಶ್ನಿಸಲಾಗುತ್ತದೆ**
> **ಕೆ.ವಿ. ಪ್ರಭಾಕರ್**, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ

'ಭಾಷೆ ಬರಡಾದರೆ ನಿಷ್ಪಾಪಿಗಳಿಗೆ ನೋವು'

'ಯಾವುದೇ ಮನುಷ್ಯನಿಗೆ ತನ್ನ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುವಷ್ಟು ಭಾಷೆ ಬರಡು ಆಗಿರಬಾರದು. ಭಾಷೆ ಸಮೃದ್ಧವಾಗಿರದೇ ಇದ್ದರೆ ನಿಷ್ಪಾಪಿಗಳನ್ನು ನೋಯಿಸುತ್ತದೆ' ಎಂದು ವಸುಧೇಂದ್ರ ತಿಳಿಸಿದರು.

'ದೇಹ ಮತ್ತು ಭಾಷೆಯ ಹಂಗು–ನಡುವೆ ಸುಳಿವಾತ್ತ' ಬಗ್ಗೆ ಅವರು ಮಾತನಾಡಿ, 'ಹೆಣ್ಣು–ಗಂಡು ಎಂಬುದನ್ನು ಮೀರಿದ ಅನುಭವ ತಿಳಿಸಲು ಜೀವದ ದಾರಿಯು ಅವರ ನಡುವೆ ಸುಳಿವಾತ್ತ ಪದವನ್ನು ಬಳಸಿದ್ದೇನೆ. ಸಮಾಜದಲ್ಲಿರುವುದು ಅನುಭಾವಗಳು, ಭವದ ಸಮಸ್ಯೆ. ಸರಿ ಹೊಂದುವ ಪದ ಸಿಗದಿರುವುದರಿಂದ ಸುಳಿವಾತ್ತ ಪದವನ್ನು ಬಳಸಿದ್ದೇನೆ' ಎಂದರು.

'ಗೇ ಎನ್ನುವುದಕ್ಕೆ ಕನ್ನಡದಲ್ಲಿ ಪದ ಇಲ್ಲ. ಶಬ್ದ ಇಲ್ಲ ಎಂಬ ಕಾರಣಕ್ಕೆ 'ಗೇ'ಗಳೇ ಇಲ್ಲ ಎಂದು ಅರ್ಥವಲ್ಲ. ದೇಹವು ಭಾಷೆಗಿಂತ ದೊಡ್ಡದು. ದೇಹ ಬಯಸಿದ್ದನ್ನು ಭಾಷೆಯ ಹಂಗಿಲ್ಲದೇ ಹೇಳುವ ಸಾಮರ್ಥ್ಯವನ್ನು ಹೊಂದಿದೆ. ಗಂಡಿಗೆ, ಹೆಣ್ಣಿಗೆ, ಗಂಡಾಗಿ ಹುಟ್ಟಿ ಹೆಣ್ಣಾಗಿ ಬದಲಾದವರ ದೇಹಭಾಷೆ ಯಾರಿಗೂ ಗೊತ್ತು. ಉಳಿದ ಗೇ, ಲೆಸ್ಬಿಯನ್ ಸಹಿತ ಉಳಿದವರ ದೇಹಭಾಷೆ ಯಾರಿಗೆ ಗೊತ್ತಿದೆ. ಅದನ್ನು ಅರ್ಥಮಾಡಿಸುವ ಪದಪುಂಜಗಳು ಯಾಕಿಲ್ಲ' ಎಂದು ಪ್ರಶ್ನಿಸಿದರು.

ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ

ಹೇಮಾ ಪಟ್ಟಣಶೆಟ್ಟಿ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಜ.ನಾ. ತೇಜಶ್ರೀ ಆಶಯ ನುಡಿಗಳನ್ನಾಡಿದರು. ಸಂಜೆ ಪಯಣ ರಂಗತಂಡದವರಿಂದ 'ತಲ್ಕಿ' ನಾಟಕ ಪ್ರದರ್ಶನಗೊಂಡಿತು.

ಸುದ್ದಿ 2 ನಿಮಿಷ

ಸಹಕಾರ ಸಂಘದಲ್ಲೂ ಮೀಸಲಿಗೆ ಕ್ರಮ: ಸಚಿವ ರಾಜಣ್ಣ

ಕೋಲಾರ: ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಮೀಸಲಾತಿ ಮಾದರಿಯಲ್ಲಿ ಸಹಕಾರ ಸಂಘಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೂ ಮೀಸಲಾತಿ ತರಲು ಕ್ರಮ ವಹಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಜಿಲ್ಲಾಡಳಿತ ಕಚೇರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಹಕಾರ ಕ್ಷೇತ್ರದ ಸೊಸೈಟಿ, ಬ್ಯಾಂಕ್‌ಗಳಲ್ಲಿ ಮೀಸಲಾತಿ ತರಬೇಕೆಂದು ಕೋಲಾರ ಜಿಲ್ಲಾ ಆರ್ಯ ಈಡಿಗ ನೀಡಿದ್ದಾರೆ. ಇದಕ್ಕೆ ನನ್ನ ಸಹಮತವಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪ್ಯಾಕ್ಸ್) ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ತರಲು ಚರ್ಚಿಸುತ್ತೇನೆ' ಎಂದರು.



'ನಬಾರ್ಡ್‌ನಿಂದ ನಮಗೆ ₹5,600 ಕೋಟಿ ಕೊಡಬೇಕಿತ್ತು, ರೈತರಿಗೆ ಸಾಲ ಕೊಡಬೇಕೆಂದು ನಾವು ₹9,219 ಕೋಟಿ ಕೇಳಿದ್ದೆವು. ಮುಖ್ಯಮಂತ್ರಿ ಹಾಗೂ ನಾನು ಪತ್ರ ಕೂಡ ಬರೆದೆವು. ಏನೂ ಪ್ರಯೋಜನವಾಗಲಿಲ್ಲ. ಕಳೆದ ವರ್ಷ ₹836 ಕೋಟಿ ನೀಡಿದ್ದಾರೆ. ಮತ್ತಷ್ಟು ನೀಡಿದರೆ ರೈತರಿಗೆ ಸಾಲ ಸೌಲಭ್ಯ ನೀಡಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಶಾಸನಸಭೆಯಿಂದ ಮುನಿರತ್ನ ದೂರವಿರಿಸಿ: ಸಂತ್ರಸ್ತೆ

ಬೆಂಗಳೂರು: 'ಅತ್ಯಾಚಾರ ಹಾಗೂ ಹನಿಟ್ರ್ಯಾಪ್ ಪ್ರಕರಣದಲ್ಲಿ ಆರೋಪಿಯಾಗಿರುವ ಶಾಸಕ ಮುನಿರತ್ನ ಅವರನ್ನು ಶಾಸನಸಭೆಯಿಂದ ದೂರವಿರಿಸಬೇಕು' ಎಂದು ಅತ್ಯಾಚಾರ ಪ್ರಕರಣದ ಸಂತ್ರಸ್ತೆ ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ, ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯ್ಕರ್ ಅವರ ಜತೆಗೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂತ್ರಸ್ತೆ, 'ಮುನಿರತ್ನ ಅವರ ಮೇಲೆ ರಾಮನಗರದಲ್ಲಿ ದೂರು ನೀಡಲಾಗಿತ್ತು. ಪೊಲೀಸ್ ಕಮಿಷನರ್ ಅವರಿಗೂ ಮಾಹಿತಿ ಒದಗಿಸಿದ್ದೆ. ಬಳಿಕ ಮುನಿರತ್ನ ಅವರು ನನಗೆ ದೂರವಾಣಿ ಕರೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮಕ್ಕಳನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಹೆಣ್ಣು ಮಕ್ಕಳನ್ನು ಅವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ' ಎಂದು ದೂರಿದರು.

ಲಗ್ಗೆರೆ ನಾರಾಯಣಸ್ವಾಮಿ, 'ಕೀಚಕಮಾರ್ಗ ವ್ಯಕ್ತಿತ್ವದ ಮುನಿರತ್ನ ಅವರು ಪಾಲಿಕೆ ಮಾಜಿ ಸದಸ್ಯರು, ಶಾಸಕರು, ಪೊಲೀಸ್ ಅಧಿಕಾರಿಗಳ ವಿರುದ್ಧ ಹನಿಟ್ರ್ಯಾಪ್ ಮಾಡಿದ್ದಾರೆ. ಅವರ ವಿರುದ್ಧ ನೂರಾರು ಪ್ರಕರಣಗಳಿವೆ. ಅವರಿಗೆ ಕಾನೂನು ಅನ್ವಯವಾಗುವುದಿಲ್ಲವೆ? ನಮ್ಮಗೆಲ್ಲ ಮುನಿರತ್ನ ಅವರಿಂದ ಪ್ರಾಣಭಯವಿದೆ' ಎಂದರು.

ಪತ್ರಕರ್ತೆ ಜತಿಂದರ್ ಕೌರ್‌ಗೆ ಚಮೇಲಿ ದೇವಿ ಜೈನ್ ಪ್ರಶಸ್ತಿ

ನವದೆಹಲಿ (ಪಿಟಿಐ): ಪ್ರತಿಷ್ಠಿತ 'ದಿ ಮೀಡಿಯಾ ಫೌಂಡೇಷನ್'ನ 'ಚಮೇಲಿ ದೇವಿ ಜೈನ್' ಹೆಸರಿನಲ್ಲಿ ನೀಡುವ ಅತ್ಯುತ್ತಮ ವಾರ್ಷಿಕ ಪತ್ರಕರ್ತೆ ಪ್ರಶಸ್ತಿಗೆ ಜತಿಂದರ್ ಕೌರ್ ತುರ್ ಭಾಜನರಾಗಿದ್ದಾರೆ.

ಮಾನವ ಹಕ್ಕುಗಳ ಸಂಬಂಧ 'ದಿ ಕ್ಯಾರವಾನ್'ನಲ್ಲಿ ಪ್ರಕಟವಾದ ತನಿಖಾ ವರದಿಗಾರಿಕೆಗೆ ಕೌರ್ ತುರ್ ಅವರಿಗೆ ಈ ಪ್ರಶಸ್ತಿ ಸಂದಿದೆ.

ನಿರ್ಭೀತ ಪತ್ರಿಕೋದ್ಯಮಕ್ಕಾಗಿ ಫೌಂಡೇಷನ್ ನೀಡುವ 'ವಿಶ್ವನಾಥ್– ದೆಹಲಿ ಪ್ರೆಸ್ ಅವಾರ್ಡ್' ಅನ್ನು 'ಸ್ಕ್ರಾಲ್'ನ ರೋಕಿಬುಜ್ ಜಮಾನ್ ಹಾಗೂ ಲಿಂಗ ಸೂಕ್ಷ್ಮತೆ ಕುರಿತ ಪತ್ರಿಕೋದ್ಯಮಕ್ಕಾಗಿ ನೀಡುವ 'ಕಮಲಾ ಮಂಕೇಕರ್ ಪ್ರಶಸ್ತಿ'ಯನ್ನು 'ಬೆಹನ್ ಬಾಕ್ಸ್'ನ ಪ್ರಿಯಾಂಕಾ ತುಪೆ ಅವರಿಗೆ ನೀಡಲಾಗಿದೆ.



ಬನ್ನೇರುಘಟ್ಟದ ಅಪೊಲೊ ಆಸ್ಪತ್ರೆಯು ಹಿರಿಯ ನಾಗರಿಕರ ಆರೈಕೆಗೆ 'ಸೀನಿಯರ್ಸ್ ಫಸ್ಟ್' ಶೀರ್ಷಿಕೆಯಡಿ ರೂಪಿಸಿರುವ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್‌. ದೀಕ್ಷಿತ್ ಅವರು ಶನಿವಾರ ಚಾಲನೆ ನೀಡಿದರು. ಅಪೋಲೊ ಆಸ್ಪತ್ರೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಡಾ. ಪ್ರೀತಾ ರೆಡ್ಡಿ ಉಪಸ್ಥಿತರಿದ್ದರು

ಕ್ಷೇತ್ರ ಮರುವಿಂಗಡಣೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ

'ಅನ್ಯಾಯದ ವಿರುದ್ಧ ಒಟ್ಟಾಗಬೇಕು'

ಪ್ರಜಾವಾಣಿ ವಾರ್ತೆ

ಚೆನ್ನೈ/ಬೆಂಗಳೂರು: 'ಕೇಂದ್ರ ಸರ್ಕಾರವು ಜನಸಂಖ್ಯೆಯನ್ನು ಮಾತ್ರ ಆಧಾರವಾಗಿರಿಸಿಕೊಂಡು ಲೋಕ ಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಮುಂದಾಗಿದೆ. ಇದರಿಂದ ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಗೂ ಅನ್ಯಾಯ ವಾಗುತ್ತದೆ. ಇದರ ವಿರುದ್ಧ ನಾವೆಲ್ಲರೂ ಒಟ್ಟಾಗಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದರು.

ಕೇಂದ್ರ ಸರ್ಕಾರದ ಕ್ಷೇತ್ರ ಮರುವಿಂಗಡಣೆ ಮತ್ತು ಹಿಂದಿ ಹೇರಿಕೆ ವಿರುದ್ಧ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಸಂಘಟಿಸಿರುವ 'ಜಂಟಿ ಕ್ರಿಯಾ ಸಮಿತಿ'ಯ ಮೊದಲ ಸಭೆ ಚೆನ್ನೈನಲ್ಲಿ ನಡೆಯಿತು. ಕರ್ನಾಟಕ ಸರ್ಕಾರದ ಪರವಾಗಿ ಡಿ.ಕೆ.ಶಿವಕುಮಾರ್ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದಕ್ಷಿಣ ಭಾರತದ ರಾಜ್ಯಗಳ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುವುದಿಲ್ಲ ಎಂದು ಅರ್ಧಸತ್ಯವನ್ನಷ್ಟೇ ಹೇಳುತ್ತಿದ್ದಾರೆ. ನಮ್ಮ ಸಂಖ್ಯೆ ಕಡಿಮೆಯಾಗುವುದಿಲ್ಲ, ಆದರೆ ಉತ್ತರದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗುತ್ತದೆ. ಪರಿಣಾಮವಾಗಿ ಲೋಕಸಭೆಯಲ್ಲಿ ನಮ್ಮ ಪ್ರಾತಿನಿಧ್ಯದ ಪ್ರಮಾಣ ಕುಸಿಯುತ್ತದೆ. ನಮ್ಮ ದನಿಗೆ ಬೆಲೆಯೇ ಇಲ್ಲದಂತಾಗುತ್ತದೆ. ಈ ಸತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು' ಎಂದರು.

'ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ದಕ್ಷಿಣ ಭಾರತದ ಇತರ ರಾಜ್ಯಗಳು ಭಾರತದ ಪ್ರಗತಿಯಲ್ಲಿ ಗಣನೀಯ ಕೊಡುಗೆ ನೀಡಿವೆ. ಈ ರಾಜ್ಯಗಳು ಶಿಕ್ಷಣ, ಆರೋಗ್ಯ ಸುಧಾರಣೆ, ಸುಸ್ಥಿರ ಅಭಿವೃದ್ಧಿ ಮತ್ತು ಜನಸಂಖ್ಯೆ ನಿಯಂತ್ರಣದಲ್ಲಿ ಗಣನೀಯ ಪ್ರಗತಿ ಸಾಧಿಸಿವೆ. ಜನಸಂಖ್ಯೆ ನಿಯಂತ್ರಣ ಮಾಡಿದ್ದನ್ನೇ ಬಳಸಿಕೊಂಡು ನಮ್ಮ ರಾಜ್ಯಗಳನ್ನು ಶಿಕ್ಷಿಸಲಾಗುತ್ತಿದೆ. ಇದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಆಗ್ರಹಿಸಿದರು.

'ದಕ್ಷಿಣ ಭಾರತದ ರಾಜ್ಯಗಳಂತೆಯೇ ಪಂಜಾಬ್ ಮತ್ತು ಒಡಿಶಾ ಮೇಲೂ ಕೇಂದ್ರವು ದಬ್ಬಾಳಿಕೆ ನಡೆಸುತ್ತಿದೆ. ಈ ಕಾರಣದಿಂದಲೇ ಆ ರಾಜ್ಯದ ನಾಯಕರೂ ಈ ಸಭೆಯಲ್ಲಿ ಭಾಗಿಯಾಗಿದ್ದಾರೆ. ಈ ಹೋರಾಟವನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಿ, ಗುರಿ ಮುಟ್ಟಿಸಬೇಕು' ಎಂದು ಹೇಳಿದರು.

'ಅನ್ಯಾಯವಲ್ಲ, ಲೂಟಿ'



'ಕೇಂದ್ರ ಸರ್ಕಾರವು ದಕ್ಷಿಣದ ರಾಜ್ಯಗಳನ್ನು ತನ್ನ ಎಟಿಎಂನಂತೆ ಬಳಸಿಕೊಳ್ಳುತ್ತಿದೆ. ಈವರೆಗೂ ಕೇಂದ್ರವು ತೆರಿಗೆ ಪಾಲು ಹಂಚಿಕೆಯಲ್ಲಿ ನಮಗೆ ಅನ್ಯಾಯ ಮಾಡುತ್ತಿದೆ ಎನ್ನುತ್ತಿದ್ದೆವು. ಅದು ಬರಿ ಅನ್ಯಾಯವಲ್ಲ, ಲೂಟಿ. ಕೇಂದ್ರವು ದಕ್ಷಿಣದ ರಾಜ್ಯಗಳನ್ನು ಲೂಟಿ ಹೊಡೆಯುತ್ತಿದೆ. ಇದರ ವಿರುದ್ಧವೂ ಹೋರಾಟ ಸಂಘಟಿಸುವ ತುರ್ತು ಇದೆ' ಎಂದು ಶಿವಕುಮಾರ್ ಕಳವಳ ವ್ಯಕ್ತಪಡಿಸಿದರು.

'ಕರ್ನಾಟಕವು ಕೇಂದ್ರಕ್ಕೆ ತೆರಿಗೆ ರೂಪದಲ್ಲಿ ₹4 ಲಕ್ಷ ಕೋಟಿ ನೀಡುತ್ತದೆ. ಆದರೆ ನಮಗೆ ವಾಪಸ್ ಬರುವುದು ₹45,000 ಕೋಟಿ ಮಾತ್ರ. ನಾವು ನೀಡುವ ಪ್ರತಿ ಒಂದು ರೂಪಾಯಿಗೆ ವಾಪಸ್ ಸಿಗುತ್ತಿರುವುದು 13 ಪೈಸೆ ಮಾತ್ರ. ಇದು ವ್ಯವಸ್ಥಿತ ಲೂಟಿ. ಸಂಸತ್ತಿನಲ್ಲಿ ನಮ್ಮ ಪ್ರಾತಿನಿಧ್ಯ ಇನ್ನಷ್ಟು ಕಡಿಮೆಯಾದರೆ, ಈ ಲೂಟಿ ಮತ್ತಷ್ಟು ಹೆಚ್ಚುತ್ತದೆ' ಎಂದರು.

'ಇದು ಕೇವಲ ಹಣಕಾಸಿನ ಲೆಕ್ಕಾಚಾರವಲ್ಲ. ಬದಲಿಗೆ ನಮ್ಮ ಸಂಸ್ಕೃತಿ–ಜೀವನದ ರಕ್ಷಣೆಯ ಹೋರಾಟ. ಕೇಂದ್ರವು ರೈಲ್ವೆ ಚಿಹ್ನೆಯಿಂದ ಆರಂಭಿಸಿ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಹಿಂದಿ ಹೇರಿಕೆ ಮಾಡುತ್ತಿದೆ. ಆ ಮೂಲಕ ನಮ್ಮ ಸಂಸ್ಕೃತಿಗಳನ್ನು ತುಳಿಯುತ್ತಿದೆ. ಕೇಂದ್ರದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳು ನಮ್ಮ ಭಾಷೆಗಳಲ್ಲೂ ನಡೆಯುವಂತೆ ಮಾಡಬೇಕು' ಎಂದು ಕರೆ ನೀಡಿದರು.

ಮೂವರಿಗೆ ಜೈಲುಶಿಕ್ಷೆ ಪ್ರಕಟ

ಮಲಪ್ಪುರ (ಕೇರಳ) (ಪಿಟಿಐ): ಮೈಸೂರಿನ ನಾಟಿ ವೈದ್ಯನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿಂತೆ, ಮಲಪ್ಪುರ ಜಿಲ್ಲಾ ನ್ಯಾಯಾಲಯವು ಮೂವರು ಅಪರಾಧಿಗಳಿಗೆ 5 ವರ್ಷದಿಂದ 13 ವರ್ಷದವರೆಗೆ ಶಿಕ್ಷೆ ವಿಧಿಸಿದೆ.



ಮಲಪ್ಪುರದ ನಿಲಂಬೂರಿನ ಸೈಬೀನ್ ಅಶ್ರಫ್, ಶಿಹಾಬುದ್ದೀನ್ ಮತ್ತು ನಿಶಾದ್ ಶಿಕ್ಷೆಗೊಳಗಾದ ಅಪರಾಧಿಗಳು. ಪ್ರಕರಣ ದಲ್ಲಿ ಇತರ 9 ಆರೋಪಿಗಳನ್ನು ನ್ಯಾಯಾಲಯವು ಖುಲಾಸೆಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ತೀರ್ಪು ಪ್ರಕಟಿಸಿದ ಸೆಷನ್ಸ್ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶ ತುಷಾರ್ ಎಂ. ಅವರು, ಮುಖ್ಯ ಆರೋಪಿ ಸೈಬೀನ್ ಅಶ್ರಫ್‌ಗೆ 13.9 ವರ್ಷ ಜೈಲು ಶಿಕ್ಷೆ ವಿಧಿಸಿದರು. ಉಳಿದಂತೆ ಶಿಹಾಬುದ್ದೀನ್‌ಗೆ 8.9 ವರ್ಷ, ನಿಶಾದ್‌ಗೆ 5.9 ವರ್ಷ ಶಿಕ್ಷೆ ಪ್ರಕಟಿಸಿದರು.

'ಅಪರಾಧಿಗಳಿಗೆ ನ್ಯಾಯಾಲಯವು ₹3.5 ಲಕ್ಷ ದಂಡ ವಿಧಿಸಿದ್ದು, ಈ ಹಣವನ್ನು ಸಂತ್ರಸ್ತ ಕುಟುಂಬಕ್ಕೆ ನೀಡಬೇಕು ಎಂದು ನ್ಯಾಯಾಲಯವು ತಿಳಿಸಿದೆ' ಎಂದರು.

ಮೈಸೂರಿನ ವಿಜಯನಗರದ ಶಾಬಾ ಷರೀಫ್ ಅವರಿಗೆ ತಿಳಿದಿದ್ದ ಮೂಲವ್ಯಾಧಿ ಚಿಕಿತ್ಸಾ ವಿಧಾನವನ್ನು ತಿಳಿದುಕೊಳ್ಳುವ ಉದ್ದೇಶದಿಂದ, ಅಪರಾಧಿಗಳು ಶಾಬಾ ಅವರನ್ನು 2019 ಆಗಸ್ಟ್ 2ರಂದು ಮೈಸೂರಿನಿಂದ ಅಪಹರಿಸಿದ್ದರು. ನಂತರ, ಅಶ್ರಫ್ ಮನೆಯಲ್ಲಿ ಒತ್ತೆಯಾಳಾಗಿ ಇರಿಸಿಕೊಂಡು ಚಿತ್ರಹಿಂಸೆ ನೀಡಿ, ಕ್ರೂರವಾಗಿ ಕೊಲೆಗೈದಿದ್ದರು.

ಎ.7ರಿಂದ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

2ನೇ ವಿಮಾನ ನಿಲ್ದಾಣ: 3 ಸ್ಥಳ ಗುರುತು

- ಕನಕಪುರ ರಸ್ತೆ–ನೈಸ್‌ರಸ್ತೆ ಜಂಕ್ಷನ್‌ನಿಂದ 5.ಕಿ.ಮೀ. ದೂರದಲ್ಲಿ
- ಕನಕಪುರ ರಸ್ತೆ–ನೈಸ್‌ರಸ್ತೆ ಜಂಕ್ಷನ್‌ನಿಂದ 10.ಕಿ.ಮೀ. ದೂರದಲ್ಲಿ
- ನೆಲಮಂಗಲ–ಹಾಸನ ಹೆದ್ದಾರಿಯಲ್ಲಿ ನೆಲಮಂಗಲದಿಂದ 10 ಕಿ.ಮೀ. ಅಂತರದಲ್ಲಿ



ಎಂ.ಬಿ.ಪಾಟೀಲ

ಬೆಂಗಳೂರು: 'ಬೆಂಗಳೂರು ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೂರು ಸ್ಥಳಗಳನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಅಧಿಕಾರಿಗಳು ಇದೇ ಏಪ್ರಿಲ್‌ನಲ್ಲಿ ಅವುಗಳ ಪರಿಶೀಲನೆಗೆ ಬರಲಿದ್ದಾರೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕನಕಪುರ ರಸ್ತೆಯಲ್ಲಿ ಎರಡು ಮತ್ತು ನೆಲಮಂಗಲ–ಹಾಸನ ಹೆದ್ದಾರಿಯಲ್ಲಿ ಒಂದು ಸ್ಥಳವನ್ನು ಗುರುತಿಸಲಾಗಿದೆ. ರಾಜ್ಯದ ತಜ್ಞರ ತಂಡ ಈಗಾಗಲೇ ಅವುಗಳ ಪರಿಶೀಲನೆ ನಡೆಸಿದೆ. ಅವುಗಳನ್ನು ಪರಿಶೀಲಿಸುವಂತೆ ಇದೇ ಮಾರ್ಚ್ 5ರಂದು ಎಎಐಗೆ ಪತ್ರ ಬರೆಯಲಾಗಿತ್ತು. ಎಎಐ ತಂಡವು ಏಪ್ರಿಲ್ 7 ಮತ್ತು 9ರ ಮಧ್ಯೆ ಸ್ಥಳಪರಿಶೀಲನೆಗೆ ಬರಲಿದೆ' ಎಂದು ಮಾಹಿತಿ ನೀಡಿದರು.

'ಸ್ಥಳ ಪರಿಶೀಲನೆಗೆಂದು ಎಎಐಗೆ ಈಗಾಗಲೇ ₹1.21 ಕೋಟಿ ಶುಲ್ಕ ಕಟ್ಟಿದ್ದೇವೆ. ಅದರ ಸೂಚನೆಯಂತೆ ಮೂರೂ ಸ್ಥಳಗಳ ಕಂದಾಯ ನಕಾಶೆ, ಹವಾಮಾನ ದಾಖಲೆ, ಜ್ಯಾಮಿತಿಯ ಲಕ್ಷಣಗಳನ್ನು ವಿವರಿಸುವ ಚಿತ್ರ, ಭಾರತೀಯ ಸರ್ವೆ ಇಲಾಖೆಯ ನಕಾಶೆ ಮತ್ತು ಉದ್ದೇಶಿತ ನಿಲ್ದಾಣದಲ್ಲಿನ ಕಾರ್ಯಾಚರಣೆ ಸ್ವರೂಪ ತಿಳಿಸುವ ವರದಿಗಳನ್ನು ಸಿದ್ಧಪಡಿಸಿ ಇರಿಸಿಕೊಂಡಿದ್ದೇವೆ' ಎಂದರು.

'ಈಗಿನ ವಿಮಾನ ನಿಲ್ದಾಣದ ಮೇಲೆ ವಿಪರೀತ ಒತ್ತಡ ಇದೆ. ಆ ವಿಮಾನ ನಿಲ್ದಾಣದಿಂದ 150 ಕಿ.ಮೀ. ವ್ಯಾಪ್ತಿಯಲ್ಲಿ 2033ರವರೆಗೆ ಮತ್ತೊಂದು ನಿಲ್ದಾಣ ಮಾಡುವಂತಿಲ್ಲ ಎಂಬ ಷರತ್ತು ಇದೆ. ಈಗಿನಿಂದಲೇ ಸಿದ್ಧತೆ ಮತ್ತು ನಿರ್ಮಾಣ ಆರಂಭಿಸಿದರೆ 2033ರ ವೇಳೆಗೆ ಮತ್ತೊಂದು ವಿಮಾನ ನಿಲ್ದಾಣ ಕಾರ್ಯಾರಂಭವಾಗಬಹುದು' ಎಂದು ವಿವರಿಸಿದರು.

ಶಿರಾ ಬಳಿ ಕಾರ್ಯಸಾಧುವಲ್ಲ: 'ತುಮಕೂರಿನ ಶಿರಾ ಬಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಆರಂಭಿಸಬೇಕು ಎಂದು ಕೆಲವರು ಪ್ರಸ್ತಾವ ಸಲ್ಲಿಸಿದ್ದರು. ಆದರೆ ಅದು ಕಾರ್ಯ ಸಾಧುವಲ್ಲ. ಶಿರಾದಲ್ಲಿ ಆರಂಭಿಸಿದರೆ, ಅದು ಶಿವಮೊಗ್ಗ, ವಿಜಯಪುರದಲ್ಲಿ ಇರುವಂತೆ ಜಿಲ್ಲಾಮಟ್ಟದ ನಿಲ್ದಾಣವಾಗುತ್ತದೆ ಅಷ್ಟೆ' ಎಂದು ಸಚಿವ ಪಾಟೀಲ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಬೆಂಗಳೂರಿನ ಜನರಿಗೆ ಅನುಕೂಲ ಆಗಬೇಕಾದರೆ ಅದು ಬೆಂಗಳೂರಿಗೆ ಸನಿಹದಲ್ಲೇ ಇರಬೇಕು. ಆಗ ಮಾತ್ರ ಹೂಡಿಕೆದಾರ ಸಂಸ್ಥೆಗಳು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬರುತ್ತಾರೆ' ಎಂದರು.

ಆನೇಕಲ್: ಧರೆಗುರುಳಿದ ತೇರು- ಯುವಕ ಸಾವು

ಆನೇಕಲ್: ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಯಲ್ಲಿ ಶನಿವಾರ ದೊಡ್ಡ ನಾಗಮಂಗಲ ಮತ್ತು ರಾಯಸಂದ್ರ ತೇರುಗಳು ನೆಲಕ್ಕೆ ಉರುಳಿದ್ದರಿಂದ ಒಬ್ಬ ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ತಮಿಳುನಾಡು ಹೊಸೂರಿನ ಲೋಹಿತ್ (24) ಮೃತರು. ಮಹಿಳೆಯೊಬ್ಬರ ಕಾಲು ಮುರಿದಿದೆ. ದೊಡ್ಡನಾಗ ಮಂಗಲ ಗ್ರಾಮಸ್ಥರು 110 ಅಡಿಗೂ ಹೆಚ್ಚು ಎತ್ತರದ ತೇರನ್ನು ಕಟ್ಟಿ ಎತ್ತುಗಳ ಮೂಲಕ ಎಳೆದುಕೊಂಡು ಹುಸ್ಕೂರಿನತ್ತ ಹೊರಟಿದ್ದರು. ಚಿಕ್ಕನಾಗ ಮಂಗಲ ಸಮೀಪ ತೇರು ಆಯತಪ್ಪಿ ದಿಢೀರನೇ ಧರೆಗುರುಳಿತು.

ದೊಡ್ಡ ನಾಗಮಮಂಗಲ ತೇರು ನೆಲಕ್ಕುರುಳಿದ ಕೆಲ ತಾಸಿನಲ್ಲಿಯೇ ಮತ್ತೊಂದು ರಾಯಸಂದ್ರ ತೇರು ಬಿರುಗಾಳಿಯಿಂದಾಗಿ ನೆಲಕ್ಕೆ ಉರುಳಿತು. ಇದರಿಂದಾಗಿ ಕೆಲವು ವಾಹನಗಳು ಜಖಂಗೊಂಡವು.

ಉಗ್ರನಿಗೆ ಸೇರಿದ ಮನೆ ನೆಲಸಮ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ, ಉಗ್ರನಿಗೆ ಸೇರಿದ್ದ ಮನೆಯೊಂದನ್ನು ಅಧಿಕಾರಿಗಳು ಶನಿವಾರ ನೆಲಸಮಗೊಳಿಸಿದ್ದಾರೆ.

ಪೊಲೀಸರು ಜಿಲ್ಲಾಡಳಿತದ ಸಹಯೋಗದಲ್ಲಿ ಮನೆಯನ್ನು ನೆಲಸಮ ಗೊಳಿಸಿದ್ದಾರೆ. ಸರ್ಕಾರಿ ಜಮೀನು ಅತಿಕ್ರಮಿಸಿ ಈ ಮನೆ ನಿರ್ಮಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದ ನಿಷೇಧಿತ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯೊಂದಿಗೆ ನಂಟು ಹೊಂದಿರುವ, ಹಾರೂನ್ ರಶೀದ್ ಗನಿ ಎಂಬ ಉಗ್ರನಿಗೆ ಸೇರಿದ ಮನೆ ಇದಾಗಿತ್ತು. ಈತ ಪಾಕಿಸ್ತಾನದಲ್ಲಿದ್ದುಕೊಂಡು ಭಾರತದಲ್ಲಿ ಉಗ್ರ ಚಟುವಟಿಕೆಗಳನ್ನು ನಡೆಸುತ್ತಿದ್ದಾನೆ.

'ಜಿಬಿಎಯಿಂದ ಪಾಲಿಕೆಗಳಿಗೆ ಆರ್ಥಿಕ ಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024'ಯಂತೆ ರಚನೆಯಾಗುವ ನಗರ ಪಾಲಿಕೆಗಳಿಗೆ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದಿಂದ (ಜಿಬಿಎ) ಆರ್ಥಿಕ ಬಲ ಬರಲಿದೆ. ಸಂಪನ್ಮೂಲದ ಕೊರತೆಯಿರುವ ನಗರ ಪಾಲಿಕೆಗಳಿಗೆ ಹೆಚ್ಚು ಅನುದಾನ ಸಿಗಲಿದೆ' ಎಂದು ಬಿಬಿಎಂಪಿ ಸುಧಾರಣಾ ಸಮಿತಿಯ (ಬ್ರ್ಯಾಂಡ್ ಬೆಂಗಳೂರು ಸಮಿತಿ) ಸದಸ್ಯ ವಿ. ರವಿಚಂದರ್ ತಿಳಿಸಿದರು.



ವಿ. ರವಿಚಂದರ್

'ನಮ್ಮ ಸಮಿತಿಯಿಂದ ನೀಡಲಾಗಿರುವ ಬಹುತೇಕ ಸಲಹೆಗಳನ್ನು ಮಸೂದೆಯಲ್ಲಿ ಸೇರಿಸಲಾಗಿದೆ. ಸಂವಿಧಾನದ 74ನೇ ತಿದ್ದುಪಡಿಯ ಆಶಯವನ್ನು ಕಡೆಗಣಿಸಲಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಸಂವಿಧಾನದ ಆಶಯದಂತೆಯೇ ನಾವು ಮಸೂದೆಯ ಕರಡನ್ನು ಸಿದ್ಧಪಡಿಸಿದ್ದೇವೆ. ಈ ಬಗ್ಗೆ ರಾಜ್ಯಪಾಲರು ಅಥವಾ ನ್ಯಾಯಾಲಯಗಳು ಸ್ಪಷ್ಟತೆ ನೀಡಬಹುದು' ಎಂದರು.

'ನಗರ ಪಾಲಿಕೆಗಳ ಯಾವುದೇ ಆರ್ಥಿಕ ಸಂಪನ್ಮೂಲದ ಸಂಗ್ರಹದ ಮೇಲೆ ಜಿಬಿಎ ನಿಯಂತ್ರಣ ಇರುವುದಿಲ್ಲ. ನಗರ ಪಾಲಿಕೆಗಳ ವ್ಯಾಪ್ತಿಯ ಆಸ್ತಿ ತೆರಿಗೆ, ಜಾಹೀರಾತು ತೆರಿಗೆಗಳೆಲ್ಲವೂ ಆಯಾ ಪಾಲಿಕೆಗಳೇ ಸಂಗ್ರಹಿಸುತ್ತವೆ. ಜಿಬಿಎ ಅಡಿಯ ಪಾಲಿಕೆಗಳಲ್ಲಿ ಕೆಲವು ಪಾಲಿಕೆಗಳಲ್ಲಿ ಆರ್ಥಿಕ ಕೊರತೆ ಉಂಟಾದರೆ, ಅಂತಹ ಪಾಲಿಕೆಗಳಿಗೆ ಕೇಂದ್ರ ಹಾಗೂ ರಾಜ್ಯದ ಅನುದಾನದಲ್ಲಿ ಹೆಚ್ಚಿನ ಪಾಲನ್ನು ನೀಡಬಹುದಾಗಿದೆ' ಎಂದು ತಿಳಿಸಿದರು.

'ನಗರದ ಅಭಿವೃದ್ಧಿ ಯೋಜನೆಯನ್ನು ರೂಪಿಸುವ ಅಧಿಕಾರ ಜಿಬಿಎಗೆ ಇರಲಿದ್ದು, ಪ್ರಮುಖ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದೆ. ಮೂಲಸೌಕರ್ಯ ಮತ್ತು ಇತರೆ ಯೋಜನೆಗಳನ್ನು ಸಮನ್ವಗೊಳಿಸುವುದು ಮತ್ತು ನಿರ್ವಹಿಸುವುದೂ ಜಿಬಿಎ ಜವಾಬ್ದಾರಿಯಾಗಿರುತ್ತದೆ. ಜಿಬಿಎಗೆ ಆರ್ಥಿಕ ಸಾಮರ್ಥ್ಯ ಇಲ್ಲದಿದ್ದರೆ ಅದಕ್ಕೆ ಮನ್ನಣೆ ಇರುವುದಿಲ್ಲ. ಹೀಗಾಗಿ, ಅನುದಾನಗಳನ್ನು ಜಿಬಿಎ ನಿರ್ವಹಣೆ ಮಾಡುತ್ತದೆ' ಎಂದು ಹೇಳಿದರು.



ಗ್ರೇಟರ್ ಬೆಂಗಳೂರು ಏನೇನಾಗುತ್ತೆ?

ಪಂಚಾಯಿತಿಗಳನ್ನು ಸೇರಿಸಬೇಡಿ



'ಗ್ರೇಟರ್ ಬೆಂಗಳೂರು ಮಾಡುವುದು ಒಳ್ಳೆಯದೇ. ಆದರೆ ಹಲವು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳನ್ನು ಸೇರಿಸಿಕೊಂಡು ಗ್ರೇಟರ್ ಬೆಂಗಳೂರು ಮಾಡುತ್ತಿರುವುದು ಸರಿಯಲ್ಲ. ಏಕೆಂದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ಸಮಸ್ಯೆ ಮತ್ತು ಅನನುಕೂಲಗಳು ಇರುವುದರಿಂದ ಹೊಸದಾಗಿ ಪ್ರದೇಶಗಳನ್ನು ಸೇರ್ಪಡೆ ಮಾಡಿಕೊಂಡು ಅಭಿವೃದ್ಧಿ ಮಾಡುವುದು ಕಷ್ಟ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಲಲಿತವಾಗಿ ಆಡಳಿತ ಮತ್ತು ಕೆಲಸ ಕಾರ್ಯಗಳು ಆಗಬೇಕು ಅಂದರೆ, ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಗ್ರಾಮ ಪಂಚಾಯಿತಿಗಳನ್ನು ಸೇರಿಸಬಾರದು. ಬಿಬಿಎಂಪಿ ವ್ಯಾಪ್ತಿಯನ್ನೇ ವಿಭಜನೆ ಮಾಡಿ ಹೊಸ ಆಡಳಿತ ರಚನೆ ಮಾಡಲಿ.

ಲಿಂಗಧ್ರುವ ಎನ್, ಚುಂಚನಗುಪ್ಪೆ, ಯಶವಂತಪುರ

ಬಿಬಿಎಂಪಿಯನ್ನು ಬಲಿಷ್ಠಗೊಳಿಸಿ



ಅಸ್ತಿತ್ವದಲ್ಲಿರುವ ಬಿಬಿಎಂಪಿಯನ್ನು ಬಲಿಷ್ಠಗೊಳಿಸಿ, ಭ್ರಷ್ಟಾಚಾರ ಮುಕ್ತವಾಗಿಸಿ. ಹೊಸದಾಗಿ ಪಾಲಿಕೆಗಳನ್ನು ರಚಿಸಿ ಕಾರ್ಯಗತಗೊಳಿಸುವ ಹೊತ್ತಿಗೆ ಈ ಸರ್ಕಾರದ ಅವಧಿಯೇ ಮುಗಿದು ಹೋಗಿರುತ್ತದೆಯೇನೋ? ಅಲ್ಲದೆ, ಇದರಿಂದ ಸಾರ್ವಜನಿಕರಿಗೆ ಏನೆಲ್ಲಾ ಅನುಕೂಲವಾಗುತ್ತದೆ ಎಂಬ ಮಾಹಿತಿಯ ಸ್ಪಷ್ಟತೆಯೂ ಇಲ್ಲ.

ಪುಷ್ಪಾ ಶ್ರೀರಾಂ, ವಸಂತಪ್ಪ ಬ್ಲಾಕ್, ಪ್ಯಾಲೇಸ್ ಗುಟ್ಟಹಳ್ಳಿ

ಸಂವಿಧಾನದ ಉಲ್ಲಂಘನೆ



ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮೇಲ್ನೋಟಕ್ಕೆ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳ ಅಧಿಕಾರ ವಿಕೇಂದ್ರೀಕರಣ ತತ್ವದ ಉಲ್ಲಂಘನೆ ಎಂದು ಭಾವಿಸುತ್ತೇನೆ. ಬೆಂಗಳೂರು ಮಹಾನಗರ ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಅದಕ್ಕೆ ಇನ್ನೂ ಕೆಲ ನಗರ ಪಾಲಿಕೆಗಳನ್ನು ಹೆಚ್ಚಳ ಮಾಡಿ, ಚುನಾಯಿತ ಪ್ರತಿನಿಧಿಗಳಿಗೆ ಇನ್ನು ಹೆಚ್ಚಿನ ಅಧಿಕಾರ ನೀಡುವ ನಿಟ್ಟಿನಲ್ಲಿ ಹೆಜ್ಜೆ ಇಡಬಹುದು.

ಭೀಮಾ ನಾಯಕ, ಗೋವಿಂದರಾಜನಗರ

ಮೊದಲು ಚುನಾವಣೆ ಮಾಡಿ



ಸಂವಿಧಾನದ ಮೇಲೆ ನಂಬಿಕೆ, ಗೌರವ ಇದ್ದರೆ ಬೆಂಗಳೂರನ್ನು ಅಧಿಕಾರಿಗಳ ಹಿಡಿತದಿಂದ ಮುಕ್ತಗೊಳಿಸಿ. ಸರ್ಕಾರ, ನಗರವನ್ನು 'ಗ್ರೇಟರ್' ಮಾಡುತ್ತದೋ, ಜೇಬಿಗೆ ಗ್ರೇಟರ್ ಮಾಡಿಕೊಳ್ಳುತ್ತದೋ, 243 ವಾರ್ಡ್, 225 ವಾರ್ಡ್, ಅದಿಲ್ಲದಿದ್ದರೆ ಈಗಿರುವ 198 ವಾರ್ಡ್‌ಗೇ ಮೊದಲು ಚುನಾವಣೆ ನಡೆಸಲಿ.

ಎಸ್. ಕುಮಾರ್ ಪದ್ಮಶಾಲಿ, ತೋಟದೇವರಗಲ್ಲಿ, ಕಾಟನ್ ಪೇಟೆ

ಗೊಂದಲದ ಗೂಡಾಗುವ ಸಂಶಯ



ಚಿಕ್ಕದಿದ್ದರೆ ಚೊಕ್ಕ ಎನ್ನುವ ಹಾಗೆ, ಆಡಳಿತ ಸುಲಲಿತವಾಗಿ, ಪ್ರಗತಿಗೆ ಪೂರಕವಾಗಿ ಸಾಗಲು ಈಗಿರುವ ಬಿಬಿಎಂಪಿ ಮುಂದುವರಿಯುವುದು ಒಳ್ಳೆಯದು. ಇನ್ನುಳಿದ ಪ್ರದೇಶಗಳ ಅಭಿವೃದ್ಧಿಗೆ ಆಯಾ ಪ್ರದೇಶದ ಸ್ವಾಯತ್ತ ಸಂಸ್ಥೆಗಳನ್ನು ಬೆಂಬಲಿಸಿ, ಬಲಪಡಿಸಬೇಕು. ಕೇವಲ ಬದಲಾವಣೆ, ಘೋಷಣೆಗಳಿಂದ ಅಭಿವೃದ್ಧಿ ಆಗುವುದಿಲ್ಲ. ನಾಗರಿಕ ಕೇಂದ್ರೀಕೃತ ಮೂಲಸೌಕರ್ಯಗಳನ್ನು ಒದಗಿಸಲು ಹೆಚ್ಚು ಆಸ್ಥೆ ವಹಿಸುವುದು ಅಗತ್ಯ. ಜನಪರ ಕಾಳಜಿ ಇರದ ಗ್ರೇಟರ್ ಬೆಂಗಳೂರು ವ್ಯವಸ್ಥೆ ಗೊಂದಲದ ಗೂಡಾಗುವ ಸಂಶಯ ಮೂಡುತ್ತಿದೆ.

ದಾನಪ್ಪ ಎಂ.ಸಿ, ವಕೀಲ, ಜ್ಞಾನಭಾರತಿ ರಸ್ತೆ

'ಗ್ರೇಟರ್ ಬೆಂಗಳೂರು': ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024' ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು 'ಪ್ರಜಾವಾಣಿ'ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

ಆದೇಶ ಜಾರಿಗೊಳಿಸದಂತೆ ಕೈಗಾರಿಕಾ ಸಂಘಟನೆಗಳಿಂದ ಸರ್ಕಾರಕ್ಕೆ ಪತ್ರ

ಪಿಂಚಣಿ ಹೊರೆ: ಜನ ವಿರೋಧಿ ನಡೆ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: ವಿದ್ಯುತ್ ಪ್ರಸರಣ ಮತ್ತು ಸರಬರಾಜು ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಯ ಸರ್ಕಾರದ ಪಾಲಿನ ಹೊರೆಯನ್ನು ಗ್ರಾಹಕರ ಮೇಲೆ ಹೊರಿಸುವ ಆದೇಶದ ವಿರುದ್ಧ ರಾಜ್ಯದ ವಿವಿಧ ಕೈಗಾರಿಕಾ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

'ಇದು ಜನ ವಿರೋಧಿ ನಡೆಯಾಗಿದೆ. ಕೈಗಾರಿಕೋದ್ಯಮಿಗಳ ಹಿತದೃಷ್ಟಿಯಿಂದ ಸರ್ಕಾರ ಈ ಆದೇಶವನ್ನು ಹಿಂಪಡೆಯಬೇಕು' ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಶಿವಕುಮಾರ್ ಆಗ್ರಹಿಸಿದ್ದಾರೆ.

'ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ನೌಕರರನ್ನು ಸರ್ಕಾರಿ ನೌಕರರೆಂದೇ ಪರಿಗಣಿಸಲಾಗಿದೆ. ಆ ನೌಕರರ ಪಿಂಚಣಿ, ಗ್ರಾಚ್ಯುಟಿಯಂತಹ ಸೌಲಭ್ಯಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲ ಒದಗಿಸುವುದು ಸರ್ಕಾರದ ಜವಾಬ್ದಾರಿ. ಉದ್ಯೋಗದಾತ ಮತ್ತು ಉದ್ಯೋಗಿಗಳಿಗೆ ಸಂಬಂಧಪಟ್ಟ ವಿಷಯದಲ್ಲಿ ಗ್ರಾಹಕರನ್ನು ಮಧ್ಯೆ ತರುವುದು ಸರಿಯಲ್ಲ' ಎಂದು ಅವರು ತಿಳಿಸಿದ್ದಾರೆ.

'ಕೋವಿಡ್‌ನಿಂದ ನಲುಗಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ, ಈ ದರ ಏರಿಕೆ ಬಿಸಿ ತುಪ್ಪವಾಗುತ್ತದೆ. ನೌಕರರ ಸೌಲಭ್ಯಕ್ಕೆ ಸರ್ಕಾರ ಪರ್ಯಾಯ ವ್ಯವಸ್ಥೆಯತ್ತ ಗಮನಹರಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ವಿದ್ಯುತ್ ಪ್ರಸರಣ ಮತ್ತು ಸರಬರಾಜು ಕಂಪನಿಗಳ ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿಯ ಸರ್ಕಾರದ ಪಾಲಿನ ಹಣವನ್ನು ಗ್ರಾಹಕರಿಂದ ಸಂಗ್ರಹಿಸಬೇಕೆಂಬ ಕೆಇಆರ್‌ಸಿ ಆದೇಶವನ್ನು ಜಾರಿಗೊಳಿಸಬಾರದು ಎಂದು ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ ವಿಶ್ವನಾಥ ಹಾಗೂ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

'ನೌಕರರ ಪಿಂಚಣಿ ಮತ್ತು ಗ್ರಾಚ್ಯುಟಿ ಬಾಬ್ತಿನ ಹಣವನ್ನು ಗ್ರಾಹಕರ ವಿದ್ಯುತ್ ಬಿಲ್‌ನಲ್ಲಿ ಸೇರಿಸುವ ತೀರ್ಮಾನವನ್ನು ಮೈಸೂರು ಕೈಗಾರಿಕೆಗಳ ಸಂಘ ವಿರೋಧಿಸುತ್ತದೆ. ಹಿಂದೆಯೂ ನಾವು ಈ ಪ್ರಸ್ತಾವವನ್ನು ವಿರೋಧಿಸಿದ್ದೆವು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಕಾನೂನು ಹೋರಾಟ ಮುಂದುವರಿಸಲಿದ್ದೇವೆ'


'ಕೆಪಿಟಿಸಿಎಲ್ ಮತ್ತು ಎಸ್ಕಾಂ ನೌಕರರ ಪಿಂಚಣಿ ಹಾಗೂ ಗ್ರಾಚ್ಯುಟಿ ನೀಡುವುದು ಸರ್ಕಾರದ ಕರ್ತವ್ಯ. ಅದನ್ನು ಗ್ರಾಹಕರಿಗೆ ವರ್ಗಾಯಿಸುವುದರಿಂದ, ಗ್ರಾಹಕರಿಗೆ, ಅದರಲ್ಲೂ ಸಣ್ಣ ಉದ್ಯಮದವರಿಗೆ ಹೊರೆಯಾಗಲಿದೆ. ಇದನ್ನು ಪ್ರಶ್ನಿಸಿ ಕಾನೂನು ಹೋರಾಟ ಮುಂದುವರೆಸಲಿದ್ದೇವೆ' ಎಂದು ಕಲಬುರಗಿಯ ಕೆಕೆಸಿಸಿಐ ಅಧ್ಯಕ್ಷ ಶಶಿಕಾಂತ ಪಾಟೀಲ್ ಹೇಳಿದ್ದಾರೆ.

'ಈಗಾಗಲೇ ವ್ಯಾಪಾರ– ವಹಿವಾಟು ಮಂದಗತಿಯಲ್ಲಿ ಸಾಗುತ್ತಿದೆ. ವಿದ್ಯುತ್ ದರ ಏರಿಕೆಯಿಂದ ಉತ್ತರ ಕರ್ನಾಟಕ ಭಾಗದ ಸಣ್ಣ ಕೈಗಾರಿಕೆಗಳಿಗೆ ಭಾರಿ ನಷ್ಟವಾಗುತ್ತದೆ. ಕೈಗಾರಿಕೆಗಳನ್ನು ನಡೆಸುವುದೇ ಕಷ್ಟವಾಗುತ್ತದೆ' ಎಂದು ಹುಬ್ಬಳ್ಳಿಯ ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಲಿಂಗಣ್ಣ ಬಿರಾದಾರ ಆತಂಕ ವ್ಯಕ್ತಪಡಿಸಿದ್ದಾರೆ.

ಕಚ್ಚಾ ವಸ್ತುಗಳು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಉತ್ಪಾದನಾ ವೆಚ್ಚವೂ ವಿಪರೀತವಾಗಿದೆ. ವಿದ್ಯುತ್ ದರ ಏರಿಸಿರು ವುದು, ಗಾಯದ ಮೇಲೆ ಬರೆ ಎಳೆದಂತಾಗಿದೆ' ಎಂದು ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ (ಕೆಸಿಸಿಐ) ಅಧ್ಯಕ್ಷ ಎಸ್.ಪಿ. ಸಂಶಿಮಠ ಹೇಳಿದರು.

ಭಾನುವಾರ, ಮಾರ್ಚ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 82 | ಪುಟ 20
www.prajavani.net
prajavani.net | prajavani | prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಧಾರ: ಇಂಡಿಯಾ ಬಯೋ ಎಕಾನಮಿ ರಿಪೋರ್ಟ್, 2025

ವಿನೋದ್ ಕುಮಾರ್ ಶುಕ್ಲಾಗೆ ಜ್ಞಾನಪೀಠ 9
ಬಂದ್ ನೀರಸ: ಪ್ರತಿಭಟನೆಗೆ ಸೀಮಿತ 7
‘ಪೀಠದ ಗೌರವ ಉಳಿಸಲು ಅಮಾನತು’ 4
‘ಗಲಭೆಕೋರರಿಂದಲೇ ನಷ್ಟ ವಸೂಲಿ’ 9

ಒಳನೋಟ

ಆಹಾರ ಪಾರ್ಕ್ ಆಮೆ ನಡಿಗೆ



8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸಿ.ಎಂ.ಗೆ ರಾಜೇಂದ್ರ ಮಾಹಿತಿ • ಡಿಸಿಎಂ ವಿರುದ್ಧ ತಿರುಗಿ ಬಿದ್ದ ಸಚಿವರ ದಂಡು

ಡಿಕೆಶಿ ‘ಹಲೋ’ಗೆ ಎದಿರೇಟು

‘ಹನಿ ಟ್ರ್ಯಾಪ್ ಮಾಡುವವರು ಸುಮ್ಮನೆ ನಿಮ್ಮ ಹತ್ತಿರಕ್ಕೆ ಬರುತ್ತಾರೆಯೇ? ನೀವು ಹಲೋ ಎಂದರೆ ಅವರೂ ಹಲೋ ಎನ್ನುತ್ತಾರೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತಿಗೆ, ಸಚಿವ ಸಂಪುಟದ ಸಹೋದ್ಯೋಗಿಗಳೇ ಶನಿವಾರ ತಿರುಗಿ ಬಿದ್ದಿದ್ದಾರೆ. ಏತನ್ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಸಚಿವ ಕೆ.ಎನ್. ರಾಜಣ್ಣ ಮಗ, ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಅವರು ‘ಮಧುಬಲೆ’ಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿದ್ದಾರೆ. ಡಿಜಿಪಿಗೆ ಮಂಗಳವಾರ ಅಥವಾ ಬುಧವಾರ ದೂರು ನೀಡುವುದಾಗಿಯೂ ರಾಜೇಂದ್ರ ತಿಳಿಸಿದ್ದಾರೆ

ವಿಚಾರ ಹೈಕಮಾಂಡ್ ಗಮನಕ್ಕೆ ಹೋಗಿದೆ: ರಾಜಣ್ಣ

ಕೋಲಾರ: ‘ಹನಿಟ್ರ್ಯಾಪ್ ವಿಚಾರ ಹೈಕಮಾಂಡ್ ಗಮನಕ್ಕೂ ಹೋಗಿದೆ. ನಾನು ಬುಧವಾರ ಬೆಂಗಳೂರಿಗೆ ಹೋಗಲಿದ್ದು, ಗೃಹ ಸಚಿವರಿಗೆ ದೂರು ನೀಡುತ್ತೇನೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನ್ನ ಮೇಲೆ ಹನಿಟ್ರ್ಯಾಪ್ ನಡೆದಿದೆ ಎಂದೆಲ್ಲೂ ನಾನು ಹೇಳಿಲ್ಲ. ಅದಕ್ಕೆ ಪ್ರಯತ್ನ ಮಾಡಿದ್ದಾರೆ ಅಷ್ಟೆ. ಸಿ.ಡಿ ಫ್ಯಾಕ್ಟರಿ ನಮ್ಮ ಕಡೆಯೂ ಇರಬಹುದು, ಪ್ರತಿ ಪಕ್ಷಗಳಲ್ಲಿಯೂ ಇರಬಹುದು ಎಂಬುದಾಗಿ ಸದನದಲ್ಲಿ ಹೇಳಿದ್ದೇನೆ. ತನಿಖೆ ನಡೆದರೆ ಎಲ್ಲಿ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ’ ಎಂದರು.

‘ನ್ಯಾಯಾಧೀಶರೂ ಇದ್ದಾರೆ ಎಂಬುದಾಗಿ ನಾನೆಲ್ಲೂ ಹೇಳಿಲ್ಲ. ನನಗೆ ಸಂಬಂಧಿಸಿದಂತೆ ಹನಿಟ್ರ್ಯಾಪ್ ಪ್ರಯತ್ನ ನಡೆದು ಸುಮಾರು ದಿನಗಳಾಗಿವೆ. ಏಕೆ ಹೇಳುವುದು ಎಂದು ಸುಮ್ಮನಿದ್ದೆ’ ಎಂದರು.

7ನೇ ಪುಟ ನೋಡಿ

‘ಗರ್ಜಿಸುವ ಹುಲಿಗಳಿಗೆ ಸಿ.ಡಿ ಬೆದರಿಕೆ’

ಬೆಳಗಾವಿ: ‘ಗರ್ಜಿಸುವ ಹುಲಿಗಳೇ ಯಾವಾಗಲೂ ಗುರಿಯಾಗುತ್ತವೆ. ಹನಿಟ್ರ್ಯಾಪ್ ವಿಷಯದಲ್ಲೂ ಅಂಥದ್ದೇ ಹುಲಿಗಳನ್ನು ಗುರಿಯಾಗಿಸಿ, ಸಿ.ಡಿ ತೋರಿಸಿ ಹೆದರಿಸಲಾಗುತ್ತಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.


‘ಹಲೋ, ಹಾಯ್ ಎನ್ನುವವರು ಯಾವ ದೃಷ್ಟಿಯಿಂದ ಹೀಗೆ ಹೇಳುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಹನಿಟ್ರ್ಯಾಪ್ ಬಗ್ಗೆ ಹೆದರಿಕೆ ಇದ್ದವರು, ಯಾರಾದರೂ ಹಾಯ್ ಎಂದರೆ ಅದಕ್ಕೆ ಪ್ರತಿಯಾಗಿ ಹಲೋ ಎನ್ನುವುದಿಲ್ಲ. ಯಾರದ್ದಾದರೂ ಕರೆ ಬಂದಾಗ ಜಾಗರೂಕರಾಗಿರಬೇಕು. ಸೂಕ್ತವಾಗಿ ಪ್ರತಿಕ್ರಿಯಿಸಬೇಕು ಎಂಬ ಪರಿಸ್ಥಿತಿ ಈಗ ಉದ್ಭವಿಸಿದೆ’ ಎಂದರು.

7ನೇ ಪುಟ ನೋಡಿ

‘ರಾಜಣ್ಣ ಹಲೋ ಎನ್ನುವ ವ್ಯಕ್ತಿಯಲ್ಲ’

ಯಾರಾದರು ಹಲೋ ಎಂದರೆ ಏನು ನಿಮ್ಮ ಕೆಲಸ ಎನ್ನುವ ವ್ಯಕ್ತಿತ್ವದವರು ರಾಜಣ್ಣ, ಅವರು ಮರಳಿ ಹಲೋ ಎನ್ನುವುದಿಲ್ಲ. ಅದು ಅವರ ಸ್ವಭಾವವೂ ಅಲ್ಲ. ಹಾಗಾಗಿಯೇ ಅವರನ್ನು ಪ್ರಕರಣದಲ್ಲಿ ಸಿಲುಕಿಸಲು ಸಾಧ್ಯವಾಗಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಹನಿಟ್ರ್ಯಾಪ್ ಪ್ರಕರಣ ಕೆಟ್ಟ ಚಾಳಿ, ಉದ್ದೇಶಪೂರ್ವಕವಾಗಿ ಇಂತಹ ಕೃತ್ಯ ಎಸಗುವುದು ತಪ್ಪು ನಡೆ. ಇಂತಹ ಕೃತ್ಯಗಳಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಬೇಕು ಎಂದರು.



ಐಪಿಎಲ್ ರಂಗು ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಶನಿವಾರ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯ ಉದ್ಘಾಟನೆ ಸಮಾರಂಭದಲ್ಲಿ ಕಲಾವಿದೆಯರು ನೃತ್ಯ ಪ್ರದರ್ಶಿಸಿದರು -ಪಿಟಿಐ ಚಿತ್ರ

ನ್ಯಾ. ವರ್ಮ ವಿಚಾರಣೆಗೆ ಸಮಿತಿ



ಯಶವಂತ ವರ್ಮ

ಮುಖ್ಯಾಂಶಗಳು
- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ವರದಿ ಸಲ್ಲಿಕೆ
- ಮೂವರು ನ್ಯಾಯಮೂರ್ತಿಗಳಿಂದ ಆಂತರಿಕ ವಿಚಾರಣೆ
- ನ್ಯಾ. ವರ್ಮ ಅವರಿಗೆ ನ್ಯಾಯಾಂಗದ ಹೊಣೆ ವಹಿಸದಿರಲು ಸೂಚನೆ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ ವರ್ಮ ಅವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿದ್ದಾರೆ.

ಅಗ್ನಿ ಅವಘಡದ ನಂತರ ನ್ಯಾಯಮೂರ್ತಿ ವರ್ಮ ಅವರ ಅಧಿಕೃತ ನಿವಾಸದಲ್ಲಿ ಭಾರಿ ಪ್ರಮಾಣದಲ್ಲಿ ನಗದು ಪತ್ತೆಯಾಗಿದೆ ಎಂದು ವರದಿಯಾಗಿತ್ತು.

ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರಿಂದ ವರದಿ ಪಡೆದ ನಂತರ ಸಿಜೆಐ ಖನ್ನಾ ಅವರು ಆಂತರಿಕ ವಿಚಾರಣೆಗೆ ಸಮಿತಿ ರಚಿಸಿ ಆದೇಶ ಹೊರಡಿಸಿದರು. ನ್ಯಾಯಮೂರ್ತಿ ವರ್ಮ ಅವರಿಗೆ ನ್ಯಾಯಾಂಗಕ್ಕೆ ಸಂಬಂಧಿಸಿದ ಯಾವುದೇ ಕೆಲಸವನ್ನು ಈಗ ವಹಿಸಬಾರದು ಎಂದು ಸಿಜೆಐ ಅವರು ನ್ಯಾಯಮೂರ್ತಿ ಉಪಾಧ್ಯಾಯ ಅವರಿಗೆ ಸೂಚಿಸಿದ್ದಾರೆ.

ವಿಚಾರಣಾ ಸಮಿತಿಯಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರು ಇದ್ದಾರೆ.

‘ನ್ಯಾಯಮೂರ್ತಿ ಉಪಾಧ್ಯಾಯ ಅವರು ಸಲ್ಲಿಸಿದ ವರದಿ, ನ್ಯಾಯಮೂರ್ತಿ ವರ್ಮ ಅವರ ಪ್ರತಿಕ್ರಿಯೆ ಮತ್ತು ಇತರ ದಾಖಲೆಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ’ ಎಂದು ಸುಪ್ರೀಂ ಕೋರ್ಟ್‌ನ ಪ್ರಕಟಣೆ ತಿಳಿಸಿದೆ.

ನ್ಯಾಯಮೂರ್ತಿ ವರ್ಮ ಅವರ ಅಧಿಕೃತ ನಿವಾಸದಲ್ಲಿ ಮಾರ್ಚ್ 14ರ ರಾತ್ರಿ ಬೆಂಕಿ ಹೊತ್ತಿಕೊಂಡಾಗ, ಅದನ್ನು ಆರಿಸಲು ಅಗ್ನಿಶಾಮಕ ಸಿಬ್ಬಂದಿ ಅಲ್ಲಿಗೆ ಧಾವಿಸಿದರು. ಆಗ ನಿವಾಸದಲ್ಲಿ ಭಾರಿ ಪ್ರಮಾಣದಲ್ಲಿ ನಗದು ಪತ್ತೆಯಾಗಿದೆ ಎನ್ನಲಾಗಿದೆ.

ಆದರೆ, ಭಾರಿ ಪ್ರಮಾಣದಲ್ಲಿ ನಗದು ಪತ್ತೆಯಾಗಿದೆ ಎಂಬ ಹೇಳಿಕೆಗಳನ್ನು ದೆಹಲಿ ಅಗ್ನಿಶಾಮಕ ದಳದ ಮುಖ್ಯಸ್ಥ ಅತುಲ್ ಗರ್ಗ್ ಅಲ್ಲಗಳೆದಿದ್ದಾರೆ.

ಪರಿಷ್ಕರಣೆ 25 ವರ್ಷ ಬೇಡ

ಕ್ಷೇತ್ರ ಮರುವಿಂಗಡಣೆ: ಜಂಟಿ ಕ್ರಿಯಾ ಸಮಿತಿ ನಿರ್ಣಯ

ಪ್ರಜಾವಾಣಿ ವಾರ್ತೆ/ಪಿಟಿಐ

> ದಕ್ಷಿಣ ಭಾರತದ ರಾಜ್ಯಗಳು ಸಂಸತ್ತಿನಲ್ಲಿ ಹೊಂದಿರುವ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ಉದ್ದೇಶಿಸಿದೆ
> **ಡಿ.ಕೆ. ಶಿವಕುಮಾರ್,** ಕರ್ನಾಟಕದ ಉಪ ಮುಖ್ಯಮಂತ್ರಿ

> ನಮ್ಮ ಹಕ್ಕುಗಳಿಗಾಗಿ ಹೋರಾಡುವುದು ಅಂದರೆ ನಾವು ಬೇರೆಯವರ ವಿರುದ್ಧ ಇದ್ದೇವೆ ಎಂದಲ್ಲ. ಮರುವಿಂಗಡಣೆಯಿಂದಾಗಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕುಗ್ಗಲಿದೆ
> **ಕನಿಮೊಳಿ,** ಡಿಎಂಕೆ ಸಂಸದೆ

ಮುಖ್ಯಾಂಶಗಳು
- ಪ್ರಸಕ್ತ ಅಧಿವೇಶನದಲ್ಲಿ ಮನವಿ ಸಲ್ಲಿಸಲು ನಿರ್ಧಾರ
- 14 ಪಕ್ಷಗಳ ನಾಯಕರು ಭಾಗಿ

ಚೆನ್ನೈ: ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ತಡೆಹಿಡಿದಿರುವುದನ್ನು 2026ರ ನಂತರ 25 ವರ್ಷಗಳ ವರೆಗೆ ಮುಂದುವರಿಸಬೇಕು ಎಂದು ಡಿಎಂಕೆ ನೇತೃತ್ವದ ಜಂಟಿ ಕ್ರಿಯಾ ಸಮಿತಿ (ಜೆಎಸಿ) ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಈ ಆಗ್ರಹ ಇರುವ ಮನವಿಯನ್ನು ಸಂಸದರು ಒಟ್ಟಾಗಿ, ಈ ಸಂಸತ್ ಅಧಿವೇಶನದಲ್ಲಿಯೇ ಪ್ರಧಾನಿ ಮೋದಿ ಅವರಿಗೆ ಸಲ್ಲಿಸಬೇಕು ಎಂದು 14 ಪಕ್ಷಗಳ ಪ್ರತಿನಿಧಿಗಳು ಭಾಗಿಯಾಗಿದ್ದ ಸಭೆಯು ಶನಿವಾರ ತೀರ್ಮಾನಿಸಿದೆ.

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತು ಚರ್ಚಿಸಲು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಚೆನ್ನೈನಲ್ಲಿ ಆಯೋಜಿಸಿದ್ದ ಸಭೆಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ, ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಂದಿದ್ದರು.

ಜನಸಂಖ್ಯೆಯ ಏರಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ದೇಶದ ಬೆಳವಣಿಗೆಗೆ ಕೊಡುಗೆ ನೀಡಿದ ರಾಜ್ಯಗಳಿಗೆ ದಂಡ ವಿಧಿಸುವ ಕೆಲಸವನ್ನು ಮರುವಿಂಗಡಣೆ ಪ್ರಕ್ರಿಯೆ ಮಾಡಬಾರದು ಎಂದು ಸಭೆ ಒತ್ತಿಹೇಳಿತು.

ಸಭೆಗೆ ಬರುವುದಾಗಿ ಹೇಳಿದ್ದ ಟಿಎಂಸಿ ಮತ್ತು ವೈಎಸ್‌ಆರ್‌ಸಿಪಿ ದೂರ ಉಳಿದವು. ಒಡಿಶಾ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು.

ಪ್ರಜಾತಂತ್ರ ವ್ಯವಸ್ಥೆಯ ಸ್ವರೂಪವನ್ನು ಸುಧಾರಿಸುವ ಉದ್ದೇಶದಿಂದ ಕೇಂದ್ರದ ಮರುವಿಂಗಡಣೆ ಪ್ರಕ್ರಿಯೆಯು ಪಾರದರ್ಶಕವಾಗಿ ಇರಬೇಕು; ಎಲ್ಲ ರಾಜ್ಯಗಳ ರಾಜಕೀಯ ಪಕ್ಷಗಳಿಗೆ, ರಾಜ್ಯ ಸರ್ಕಾರಗಳಿಗೆ ಹಾಗೂ ಸಂಬಂಧಪಟ್ಟ ಎಲ್ಲರಿಗೆ ಚರ್ಚಿಸಲು, ಮರುವಿಂಗಡಣೆ ಪ್ರಕ್ರಿಯೆಗೆ ತಮ್ಮದೇ ಕೊಡುಗೆ ನೀಡಲು ಅವಕಾಶ ಇರಬೇಕು ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

9ನೇ ಪುಟ ನೋಡಿ

ಈರುಳ್ಳಿ: ರಫ್ತು ಸುಂಕ ಶೇ 20ರಷ್ಟು ಕಡಿತ

ನವದೆಹಲಿ (ಪಿಟಿಐ): ಈರುಳ್ಳಿ ಮೇಲಿನ ರಫ್ತು ಸುಂಕದಲ್ಲಿ ಶೇ 20ರಷ್ಟನ್ನು ಹಿಂಪಡೆಯುವುದಾಗಿ ಕೇಂದ್ರ ಸರ್ಕಾರ ಶನಿವಾರ ಘೋಷಿಸಿದೆ. ಇದು ಏಪ್ರಿಲ್ 1ರಿಂದ ಜಾರಿಯಾಗಲಿದೆ. ಗ್ರಾಹಕ ವ್ಯವಹಾರಗಳ ಇಲಾಖೆಯ ಸಂವಹನದ ಬಳಿಕ ಕಂದಾಯ ಇಲಾಖೆ ಅಧಿಸೂಚನೆ ಹೊರಡಿಸಿದೆ. ರೈತರ ಹಿತಕಾಯಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡಿಗರ ಮೇಲಿನ ಪರಭಾಷಿಕರ ದಬ್ಬಾಳಿಕೆ, ಉದ್ಯೋಗದಲ್ಲಿ ಕನ್ನಡಿಗರ ಕಡೆಗಣನೆಗೆ ಖಂಡನೆ

ಬಂದ್: ಬೆಂಗಳೂರಿನಲ್ಲಿ ನೀರಸ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕನ್ನಡಿಗರ ಮೇಲಿನ ಪರಭಾಷಿಕರ ದಬ್ಬಾಳಿಕೆ, ಉದ್ಯೋಗದಲ್ಲಿ ಕನ್ನಡಿಗರ ಕಡೆಗಣನೆಯನ್ನು ಖಂಡಿಸಿ ಸಾರಿಗೆ ಸಂಸ್ಥೆಯ ಬಸ್‌ಗಳ ಚಾಲಕ, ನಿರ್ವಾಹಕರಿಗೆ ರಕ್ಷಣೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ವಾಟಾಳ್ ಪಕ್ಷ ಮತ್ತು ವಿವಿಧ ಕನ್ನಡ ಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಬೆಂಗಳೂರು ನಗರದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಳಿಗ್ಗೆಯಿಂದಲೂ ಆಟೊ, ವಾಹನಗಳ ಸಂಚಾರ ಹಾಗೂ ಹೋಟೆಲ್, ಅಂಗಡಿ ವ್ಯಾಪಾರ, ತರಕಾರಿ, ಹಣ್ಣು–ಹೂವಿನ ಮಾರುಕಟ್ಟೆಗಳಲ್ಲಿ ವಹಿವಾಟುಗಳು ನಿರಾತಂಕವಾಗಿ ನಡೆಯಿತು. ಸರ್ಕಾರಿ, ಖಾಸಗಿ ಕಚೇರಿಗಳು ಹಾಗೂ ಶಾಲಾ-ಕಾಲೇಜುಗಳು ಸಹ ಎಂದಿನಂತೆಯೇ ಕಾರ್ಯನಿರ್ವಹಿಸಿದವು. ಎಲ್ಲ ಮಾಲ್‌ಗಳು ತೆರೆದಿದ್ದವು. ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ಪ್ರದರ್ಶನ ನಡೆಯುತ್ತಿತ್ತು. ಮುಂಜಾಗ್ರತಾ ಕ್ರಮವಾಗಿ ನಗರದ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಆಟೊ, ಕ್ಯಾಬ್‌ಗಳ ಸಂಖ್ಯೆ ಕಡಿಮೆ ಇತ್ತು. ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಎಂದಿನಂತೆಯೇ ಇತ್ತು. ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಕೆಲ ಪ್ರತಿಭಟನಕಾರರು ಬಿಎಂಟಿಸಿ ಬಸ್‌ಗಳನ್ನು ತಡೆದು, ಬಸ್‌ಗಳ ಗಾಜಿನ ಮೇಲೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಬರೆದರು. ಕೆಲ ಓಲಾ, ಊಬರ್‌ನ ಆಟೊ ಚಾಲಕರು ಪ್ರತಿಭಟನೆಗೆ ವಿರೋಧ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ಬೇರೆ ಕಡೆಗೆ ಯಾವುದೇ ಮೆರವಣಿಗೆ, ಪ್ರತಿಭಟನೆಗೆ ಪೊಲೀಸರ ಅವಕಾಶವಿರಲಿಲ್ಲ. ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ರ‍್ಯಾಲಿಗೆ ತೀರ್ಮಾನಿಸಲಾಗಿತ್ತು. ರ‍್ಯಾಲಿಯಲ್ಲಿ ಭಾಗವಹಿಸಲು ಪುರಭವನದ ಬಳಿ ಬರುತ್ತಿದ್ದಂತೆಯೇ ವಾಟಾಳ್ ನಾಗರಾಜ್, ಸಾ.ರಾ. ಗೋವಿಂದು ಅವರನ್ನು ಪೊಲೀಸರು ವಶಕ್ಕೆ ಪಡೆದು, ಬಸ್‌ನಲ್ಲಿ ಸ್ವಾತಂತ್ರ್ಯ ಉದ್ಯಾನಕ್ಕೆ ಕರೆದುಕೊಂಡು ಹೋದರು.

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ರಾಜಾಜಿನಗರ ಮೆಟ್ರೊ ನಿಲ್ದಾಣಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕನ್ನಡಪರ ಸಂಘಟನೆಗಳ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಕನ್ನಡ ಪರ ಹೋರಾಟಗಾರರು 'ಎಂಇಎಸ್' ಸಂಘಟನೆಯ ತಿಥಿ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. 'ಬೆಳಗಾವಿ ನಮಗೆ, ತಿಥಿ ವಡೆ ನಿಮಗೆ' ಎಂದು ಘೋಷಣೆಗಳನ್ನು ಕೂಗಿದರು.




ಬಂದ್ ಹಿನ್ನೆಲೆಯಲ್ಲಿ ಮೆಜೆಸ್ಟಿಕ್‌ನಲ್ಲಿ ಶನಿವಾರ ವಾಹನ ಸಂಚಾರ ವಿರಳವಾಗಿತ್ತು (ಎಡಚಿತ್ರ) ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಬಂದಿದ್ದ ವಾಟಾಳ್ ನಾಗರಾಜ್ ಅವರನ್ನು ಪೊಲೀಸರು ವಶಕ್ಕೆ ಪಡೆದರು ಪ್ರಜಾವಾಣಿ ಚಿತ್ರ

ಬಸ್ಸಿನ ಗಾಜಿಗೆ ಮಸಿ: ಪ್ರಕರಣ ದಾಖಲು

ಕರ್ನಾಟಕ ಬಂದ್ ವೇಳೆ ಬೆಳಿಗ್ಗೆ 10 ಗಂಟೆಗೆ ಮೆಜೆಸ್ಟಿಕ್‌ನಿಂದ ಉತ್ತರಹಳ್ಳಿಗೆ ತೆರಳುತ್ತಿದ್ದ, ಬಿಎಂಟಿಸಿ ಬಸ್ ಗಾಜಿಗೆ ಮಸಿ ಬಳಿದ ಆರೋಪದ ಮೇಲೆ ಕನ್ನಡಪರ ಸಂಘಟನೆಗಳ ಮೂವರು ಕಾರ್ಯಕರ್ತರ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಹಾಯಕ ಸಂಚಾರ ಅಧೀಕ್ಷಕ ಎನ್.ನಟರಾಜು ಅವರ ದೂರಿನ ಮೇರೆಗೆ ಆರೋಪಿಗಳಾದ ಶ್ರೀನಿವಾಸ, ಮಂಜುನಾಥ್ ಮತ್ತು ಡಿ. ಮಂಜುನಾಥ್ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.



ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ಖಂಡಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಕೊರಳಿಗೆ ಪ್ಲಾಸ್ಟಿಕ್ ಬಾಟಲಿಗಳ ಮಾಲೆ ಹಾಕಿಕೊಂಡು ಉರುಳು ಸೇವೆ ಮಾಡಿದರು ಪ್ರಜಾವಾಣಿ ಚಿತ್ರ

ಸುಧಾ, ಮಯೂರ ಓದಿರಿ

'ವಿದ್ಯುತ್ ಕಡಿತದಿಂದಾಗಿ ಸಾರ್ವಜನಿಕರಿಗೆ ತೊಂದರೆ'

ಪ್ರಜಾವಾಣಿ ವಾರ್ತೆ



ಯಲಹಂಕ: ಬ್ಯಾಟರಾಯನಪುರ ಹಾಗೂ ಯಲಹಂಕ ಭಾಗದ ಗ್ರಾಮಗಳಲ್ಲಿ ವಿದ್ಯುತ್ ಕಡಿತದ ಸಮಸ್ಯೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗಿದೆ.

ಬ್ಯಾಟರಾಯನಪುರ, ಜಕ್ಕೂರು, ಕೊಡಿಗೇಹಳ್ಳಿ, ಅಮೃತಹಳ್ಳಿ, ಕೆಂಪಾಪುರ, ದಾಸರಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಇತ್ತೀಚಿನ ದಿನಗಳಲ್ಲಿ ಪದೇ ಪದೇ ವಿದ್ಯುತ್ ಕಡಿತವಾಗುತ್ತಿದೆ. ಇದರಿಂದ ಮನೆಗಳು, ಸಣ್ಣಪುಟ್ಟ ಕಾರ್ಖಾನೆಗಳು ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ನಿತ್ಯದ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿದೆ ಎಂದು ನಾಗರಿಕರು ದೂರಿದ್ದಾರೆ.

'ದಿನದಲ್ಲಿ ಐದಾರು ಬಾರಿ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಅದರಲ್ಲೂ ಬೆಳಿಗ್ಗೆ ಮತ್ತು ಸಂಜೆ ವೇಳೆಯಲ್ಲಿ ವಿದ್ಯುತ್ ಕಡಿತಗೊಳಿಸುವುದರಿಂದ ಕೆಲಸಗಳಿಗೆ ತೆರಳುವ ಕಾರ್ಮಿಕರಿಗೆ ಮತ್ತು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಿದೆ. ಉಪಾಹಾರ ತಯಾರಿಸಲು ಸಾಧ್ಯವಾಗುತ್ತಿಲ್ಲ. ಬೆಸ್ಕಾಂ ಅಧಿಕಾರಿಗಳಿಗೆ ಕರೆ ಮಾಡಿದರೆ, ಅವರು ಸ್ವೀಕರಿಸುವುದಿಲ್ಲ' ಎಂದು ಜಕ್ಕೂರು ಗ್ರಾಮದ ನಿವಾಸಿ ಗೋವಿಂದರಾಜ್ ದೂರಿದರು.

'ಪ್ರತಿದಿನ ಆಗಾಗ್ಗೆ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಅಡುಗೆ ಕೆಲಸ, ಟ್ಯಾಂಕ್‌ಗೆ ನೀರು ತುಂಬಿಸುವುದು ಸೇರಿದಂತೆ ಹಲವು ಕಾರ್ಯಗಳಿಗೆ ತೊಂದರೆಯಾಗಿದೆ. ಫ್ಯಾನ್ ಇಲ್ಲದೇ ಹಿರಿಯ ನಾಗರಿಕರು ಮತ್ತು ರೋಗಿಗಳು ಸೆಖೆಯಿಂದ ಬಳಲುವಂತಾಗಿದೆ. ಪರೀಕ್ಷೆ ಆರಂಭವಾಗಿರುವುದರಿಂದ ವಿದ್ಯಾರ್ಥಿಗಳ ಅಧ್ಯಯನಕ್ಕೂ ಸಮಸ್ಯೆಯಾಗುತ್ತಿದೆ. ಕೂಡಲೇ ಅಸಮರ್ಪಕ ವಿದ್ಯುತ್ ಪೂರೈಕೆ ಸಮಸ್ಯೆಯನ್ನು ನಿವಾರಣೆ ಮಾಡಬೇಕು' ಎಂದು ಮಾರುತಿನಗರ ನಿವಾಸಿ ಶಾರದ ಒತ್ತಾಯಿಸಿದರು.

ಕಾಮಗಾರಿಗಳಿಂದ ಸಮಸ್ಯೆ: ಬೆಸ್ಕಾಂ

ಕಲ್ಯಾಣ ಮಂಟಪ ಮುಖ್ಯರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ಜಲಮಂಡಳಿಯವರು ಕಾವೇರಿ ಕೊಳವೆ ಅಳವಡಿಸಲು ರಾತ್ರೋ ರಾತ್ರಿ ರಸ್ತೆ ಅಗೆಯುತ್ತಾರೆ, ನಮ್ಮ ಗಮನಕ್ಕೆ ತರುವುದಿಲ್ಲ. ಖಾಸಗಿ ಕಂಪನಿಗಳು ಕೇಬಲ್‌ಗಳ ಅಳವಡಿಕೆಗೂ ರಸ್ತೆ ಅಗೆಯುವುದು, ಇಂಥ ಕಾಮಗಾರಿಗಳ ವೇಳೆ ವಿದ್ಯುತ್ ತಂತಿಗಳು ತುಂಡಾಗುತ್ತವೆ. ಇವುಗಳನ್ನು ಪರಿಶೀಲಿಸಿ ಸರಿಪಡಿಸಲು ಕೆಲವೊಮ್ಮೆ ಗಂಟೆಗಳೇ ಹಿಡಿಯುತ್ತವೆ. ಇಷ್ಟನ್ನು ಹೊರತುಪಡಿಸಿ, ವಿದ್ಯುತ್ ನಿರ್ವಹಣೆಯಲ್ಲಿ ಯಾವುದೇ ಸಮಸ್ಯೆಯಿಲ್ಲ' ಎಂದು ಬೆಸ್ಕಾಂನ ಸಹಕಾರನಗರ, ಸಿ-8 ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಡಾಕಾ ನಾಯಕ್ ತಿಳಿಸಿದರು.

8 ಜನರ ಬಂಧನ 6 ಮಂದಿ ಗಡೀಪಾರು

ನವದೆಹಲಿ (ಪಿಟಿಐ): ಬಾಂಗ್ಲಾದೇಶದವರ ಅಕ್ರಮ ವಲಸೆ ಜಾಲವನ್ನು ಭೇದಿಸಿರುವ ದೆಹಲಿ ಪೊಲೀಸರು ಎಂಟು ಜನರನ್ನು ಬಂಧಿಸಿದ್ದು, ಆರು ಮಂದಿಯನ್ನು ಗಡೀಪಾರು ಮಾಡಿದ್ದಾರೆ.

ದಕ್ಷಿಣ ದೆಹಲಿಯಲ್ಲಿ ನುಸುಳುಕೋರರ ವಾಸ್ತವ್ಯಕ್ಕೆ ಅನುಕೂಲ ಕಲ್ಪಿಸುತ್ತಿದ್ದ ಬಾಂಗ್ಲಾದೇಶದ ಎಂಟು ಮಂದಿ ಸೇರಿದಂತೆ ಇವರಿಗೆ ಸಹಕರಿಸುತ್ತಿದ್ದ ಅನೇಕ ಭಾರತೀಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.



ಸಿ.ವಿ ರಾಮನ್‌ನಗರದ ಹೊಸ ತಿಪ್ಪಸಂದ್ರದಲ್ಲಿ ಶಾಸಕರ ನಿಧಿಯಿಂದ ನಿರ್ಮಿಸಿರುವ 'ಪುನೀತ್ ರಾಜ್‌ಕುಮಾರ್ ಬಸ್ ತಂಗುದಾಣ'ವನ್ನು ಪುನೀತ್ ಅವರ 50ನೇ ಜನ್ಮದಿನದ ಸಂದರ್ಭದಲ್ಲಿ ಸ್ಥಳೀಯ ಹಿರಿಯರು ಉದ್ಘಾಟಿಸಿದರು. ಶಾಸಕ ಎಸ್. ರಘು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಕಾಲೇಜುಗಳಿಗೆ ಅನಿಲ್ ಸಹಸ್ರಬುದ್ಧೆ ಸಲಹೆ

'ಎನ್‌ಬಿಎ ಮಾನ್ಯತೆಗೆ ಸಜ್ಜಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನ್ಯತೆ ಮಂಡಳಿ(ಎನ್‌ಬಿಎ) ಪದವೀಧರ ಗುಣಲಕ್ಷಣಗಳು ಮತ್ತು ವೃತ್ತಿಪರ ಸಾಮರ್ಥ್ಯಗಳು (ಜಿಎಪಿಸಿ-4) ಎಂಬ ಹೊಸ ಪದ್ಧತಿಯನ್ನು ಅವಳವಡಿಸಿಕೊಳ್ಳಲಾಗುತ್ತಿದೆ. ಇದನ್ನು ಕಾಲೇಜುಗಳು ಅರ್ಥಮಾಡಿಕೊಂಡು ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಎನ್‌ಬಿಎ ಮಾನ್ಯತೆ ಪಡೆಯಬೇಕು ಎಂದು ಮಂಡಳಿಯ ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ ತಿಳಿಸಿದರು.

ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸಹಯೋಗದಲ್ಲಿ ಆಯೋಜಿಸಿದ್ದ 'ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಮಾನ್ಯತೆ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಎನ್‌ಬಿಎ ಜಿಎಪಿಸಿ-4 ಪದ್ಧತಿಯಲ್ಲಿ ತಂತ್ರಜ್ಞಾನ ಬಳಕೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಕೌಶಲ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಕಾಲೇಜುಗಳು ಗಮನವಿಟ್ಟುಕೊಂಡು ಎನ್‌ಬಿಎ ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

'ಪ್ರತಿ ವರ್ಷ 15 ಲಕ್ಷ ಪದವೀಧರರು ಹೊರ ಬರುತ್ತಿದ್ದಾರೆ. ಎಲ್ಲರಿಗೂ ಉದ್ಯೋಗ ಬೇಕೆಂದಿಲ್ಲ. 10 ವರ್ಷಗಳ ಹಿಂದೆ 400 ಇದ್ದ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಈಗ 1.7 ಲಕ್ಷಕ್ಕೆ ತಲುಪಿದೆ. ಮುಂದಿನ 10 ವರ್ಷಗಳಲ್ಲಿ 17 ಲಕ್ಷಕ್ಕೆ ತಲುಪುವ ನಿರೀಕ್ಷೆ ಇದೆ. ಹಾಗಾಗಿ ಉದ್ಯೋಗಿಗಳಾಗುವುದಕ್ಕಿಂತ ತಾವೇ ಹೊಸ ಉದ್ಯೋಗ ಸೃಷ್ಟಿಸಬೇಕು' ಎಂದು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್ ಮಾತನಾಡಿ, 'ಕಾಲೇಜು ಆಡಳಿತ ಮಂಡಳಿಯು ಸಂಜೆ ವೇಳೆಗೆ ತರಗತಿಗಳನ್ನು ಬಂದ್ ಮಾಡುವುದು ನಿಲ್ಲಿಸಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಮಯ ಕಲಿಕೆಯಲ್ಲಿ ತೊಡಗಿಸಿ, ಉದ್ಯೋಗ ಮಾರುಕಟ್ಟೆಯಲ್ಲಿ ಉದ್ಯೋಗ ಪಡೆಯಲು ಅಣಿಗೊಳಿಸಬೇಕು' ಎಂದು ಸಲಹೆ ನೀಡಿದರು.

ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಮ್, ಸಲಹೆಗಾರ ಪಿ.ಎಸ್. ರಾಜ್ದನ್, ಎನ್‌ಬಿಎ ಸದಸ್ಯ ಕಾರ್ಯದರ್ಶಿ ಅನಿಲ್ ಕುಮಾರ್ ನಾಸಾ, ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಅಕಾಡೆಮಿಕ್ ಡೀನ್ ಆರ್.ವಿ. ರಂಗನಾಥ್ ಭಾಗವಹಿಸಿದ್ದರು. ರಾಜ್ಯದ 100ಕ್ಕೂ ಹೆಚ್ಚು ಕಾಲೇಜುಗಳ ಆಡಳಿತ ಮಂಡಳಿ ಸದಸ್ಯರು ಪಾಲ್ಗೊಂಡಿದ್ದರು.



ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆದ 'ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಮಾನ್ಯತೆ' ಕಾರ್ಯಾಗಾರದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್ ಗಿಡಕ್ಕೆ ನೀರೆರೆದರು

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಒಳ ಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಹರಿಹರದಿಂದ ಬೆಂಗಳೂರಿನವರೆಗೆ ನಡೆದ ಕ್ರಾಂತಿಕಾರಿ ಪಾದಯಾತ್ರೆಯು ಸ್ವಾತಂತ್ರ್ಯ ಉದ್ಯಾನಕ್ಕೆ ತಲುಪಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರದ ಬಳಿ ಇರುವ ದತ್ತಾಂಶ ಗಳನ್ನು ಪರಿಗಣಿಸಿ, ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಒಳ ಮೀಸಲಾತಿ ಜಾರಿ ಮಾಡಿ, ಇಲ್ಲವೇ ಖುರ್ಚಿ ಖಾಲಿ ಮಾಡಿ ಎಂಬ ಘೋಷಣೆಗಳನ್ನು ಕೂಗಿದರು.

'ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸುವವರೆಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲವೆಂದು ಹೇಳಿತ್ತು. ಆದರೆ, ಇತ್ತೀಚೆಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ಅವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಹೇಳಿಕೆ ನೀಡಿದ್ದಾರೆ. ಇದು ಖಂಡನೀಯ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಸಚಿವರು ಹಾಗೂ ಸಮಿತಿಯ ಸಮ್ಮುಖದಲ್ಲಿ ಸಭೆಯೊಂದನ್ನು ಆಯೋಜಿಸಬೇಕು. ಇಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಕುರಿತು ಚರ್ಚಿಸಬೇಕು. ನಿಖರ ದತ್ತಾಂಶಗಳ ಆಧಾರದ ಮೇಲೆ ಇದನ್ನು ಜಾರಿಗೊಳಿಸಬೇಕು' ಎಂದು ಸಮಿತಿಯ ಮುಖಂಡ ಹರಿರಾಮ್ ಅವರು ಒತ್ತಾಯಿಸಿದರು.

'ತೆಲಂಗಾಣ ಹಾಗೂ ಆಂಧ್ರಪ್ರದೇಶದಲ್ಲಿ ಒಳಮೀಸಲಾತಿಯನ್ನು ಜಾರಿಗೊಳಿಸಿದಂತೆ ನಮ್ಮ ರಾಜ್ಯದಲ್ಲೂ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ, ಪ್ರತಿಭಟನಕಾರರ ಮನವಿ ಸ್ವೀಕರಿಸಿದರು.

ಸಮಿತಿಯ ಭಾಸ್ಕರ್ ಪ್ರಸಾದ್, ಪ್ರಭು ಕೆ., ಎನ್. ಮಹೇಶ್, ಉಪಸ್ಥಿತರಿದ್ದರು.

ಮಕ್ಕಳಿಗೆ ಸಂಸ್ಕೃತಿ ತಿಳಿಸಿಕೊಡಿ: ಡೆಬೋರಾ


ಬೆಂಗಳೂರು: 'ನಮ್ಮ ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರಗಿಟ್ಟು, ನಮ್ಮ ಸಂಸ್ಕೃತಿ ಮೂಲಬೇರನ್ನು ತಿಳಿಸಿಕೊಡಬೇಕು' ಎಂದು ಲೇಖಕಿ ಡೆಬೋರಾ ತ್ಯಾಗರಾಜನ್ ಹೇಳಿದರು.

ಗ್ರಾಮೀಣ ಕಲೆ, ವಾಸ್ತುಶಿಲ್ಪ ಮತ್ತು ಪ್ರದರ್ಶನ ಕಲೆಗಳನ್ನು ತಮ್ಮ 'ಕರ್ನಾಟಕ ಗ್ರಾಮೀಣ ಸೃಜನಶೀಲ' ಪುಸ್ತಕದಲ್ಲಿ ದಾಖಲಿಸಿರುವುದನ್ನು ಉಲ್ಲೇಖಿಸಿ ಮಾತನಾಡಿದ ಅವರು, 'ಮಕ್ಕಳು ಇಂದು ಮೊಬೈಲ್‌ಗಳಲ್ಲಿ ಮುಳುಗಿಹೋಗಿದ್ದಾರೆ. ಅವರಿಗೆ ಭಾರತೀಯ ಸಂಸ್ಕೃತಿಯ ಗುರುತನ್ನು ನೀಡಬೇಕು. ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು' ಎಂದರು.

'ಯುವ ಜನಾಂಗದಲ್ಲಿ ಸೃಜನಶೀಲತೆಯನ್ನು ಕೌಶಲಯುತಗೊಳಿಸಲು ಅತ್ಯಂತ ಪ್ರಭಾವಿಯುತ ಶಿಕ್ಷಕರ ಅಗತ್ಯವಿದೆ. ಇಂತಹ ಶಾಲೆಗಳನ್ನು ಹೆಚ್ಚು ಪ್ರಾರಂಭಿಸಬೇಕು' ಎಂದು ಹೇಳಿದರು.

'ಡೆಬೋರಾ ತ್ಯಾಗರಾಜನ್ ಅವರ 'ಕರ್ನಾಟಕ ಗ್ರಾಮೀಣ ಸೃಜನಶೀಲ' ಪುಸ್ತಕದಲ್ಲಿ ಕರ್ನಾಟಕದ ಕಲೆ, ವಾಸ್ತುಶಿಲ್ಪದ ಕರಕುಶಲತೆ, ಪ್ರದರ್ಶನ ಕಲೆಗಳ ಮಾಹಿತಿ, ಅವುಗಳ ಮೂಲ ಸೇರಿದಂತೆ ಕ್ಯೂಆರ್ ಕೋಡ್ ನೀಡಲಾಗಿದೆ. ಇದರ ಮೂಲಕ ಸ್ಥಳೀಯ ಜನರ ಪ್ರದರ್ಶನ, ಸಂಗೀತ, ಸೃಜನಶೀಲತೆಯನ್ನೂ ನೋಡಬಹುದಾಗಿದೆ' ಎಂದು ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಮಾಜಿ ಅಧ್ಯಕ್ಷೆ ಗೀತಾ ರಾವ್ ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್‌ನ ಉಪಾಧ್ಯಕ್ಷ ಟಿ. ಪ್ರಭಾಕರ್ ಉಪಸ್ಥಿತರಿದ್ದರು.



ಬೆಂಗಳೂರಿನಿಂದ ಡ್ರಗ್ಸ್ ಕಳ್ಳಸಾಗಣೆ: ಮಹಿಳೆ ಬಂಧನ

ಕೊಲ್ಲಂ (ಕೇರಳ), (ಪಿಟಿಐ): ಬೆಂಗಳೂರಿನಿಂದ ಸಿಂಥೆಟಿಕ್ ಡ್ರಗ್ ಎಂಡಿಎಂಎ ಕಳ್ಳಸಾಗಣೆ ಮಾಡುತ್ತಿದ್ದ ಅಂಚಲುಮೂಡು ನಿವಾಸಿ ಅನಿಲಾ ರವೀಂದ್ರನ್ ಅವರನ್ನು ಇಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ಹಿಂದೆಯೂ ಮಾದಕವಸ್ತು ಕಳ್ಳಸಾಗಣೆಯಲ್ಲಿ ಇವರು ಸಿಕ್ಕಿಬಿದ್ದಿದ್ದರು.

ಬೆಂಗಳೂರಿನಿಂದ ಕಾರಿನಲ್ಲಿ ತೆರಳುತ್ತಿದ್ದ ಅನಿಲಾ ಅವರನ್ನು ನೀಂಡಕರ ಸೇತುವೆ ಬಳಿ ಶುಕ್ರವಾರ ಸಂಜೆ ವಶಕ್ಕೆ ಪಡೆಯಲು ಶಕ್ತಿಕುಲಂಗರ ಪೊಲೀಸರು ಹಾಗೂ ಕೊಲ್ಲಂ ನಗರ ಪೊಲೀಸರ ಜಿಲ್ಲಾ ಮಾದಕದ್ರವ್ಯ ವಿರೋಧಿ ವಿಶೇಷ ಕಾರ್ಯಾಚರಣೆ ಪಡೆಯ ಸಿಬ್ಬಂದಿ ಯತ್ನಿಸಿದರು.

ಕಾರನ್ನು ವೇಗವಾಗಿ ಓಡಿಸುವ ಮೂಲಕ ಸ್ಥಳದಿಂದ ತಪ್ಪಿಸಿಕೊಂಡ ಅನಿಲಾರನ್ನು ಬೆನ್ನಟ್ಟಿದ್ದ ಪೊಲೀಸರು, ಕಾರನ್ನು ತಡೆದು ಲಕ್ಷಾಂತರ ರೂಪಾಯಿ ಮೌಲ್ಯದ 90 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಕಾರನ್ನು ತಪಾಸಣೆ ನಡೆಸಿದಾಗ 50 ಗ್ರಾಂ ಎಂಡಿಎಂಎ ಸಿಕ್ಕಿತು. ಅನಿಲಾರನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದಾಗ ಖಾಸಗಿ ಭಾಗದಲ್ಲಿ 40 ಗ್ರಾಂ ಎಂಡಿಎಂಎ ಅಡಗಿಸಿಟ್ಟುಕೊಂಡಿದ್ದು ಪತ್ತೆಯಾಯಿತು. ಇದರ ನಿಖರ ಪ್ರಮಾಣವನ್ನು ಇನ್ನೂ ನಿರ್ಧರಿಸಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಹಲವೆಡೆ ಮಳೆ: ತಂಪಾದ ಇಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಶನಿವಾರ ಮಳೆಯಾಗಿದೆ. ಚಿಕ್ಕಬಳ್ಳಾಪುರ, ಕೋಲಾರ, ಬೀದರ್, ಯಾದಗಿರಿ, ಚಿಕ್ಕಮಗಳೂರು, ಮೈಸೂರು ಮತ್ತು ಹಾಸನ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಮಳೆ ಸುರಿದಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕತ್ತರಗುಪ್ಪೆ, ಮಹಮದ್‌ಪುರಗಳಲ್ಲಿ ಆಲಿಕಲ್ಲು ಮಳೆ ಸುರಿಯಿತು. ಶಿಡ್ಲಘಟ್ಟ, ಗೌರಿಬಿದನೂರು, ಚಿಕ್ಕಬಳ್ಳಾಪುರ ತಾಲ್ಲೂಕಿನ ವಿವಿಧೆಡೆ ತುಂತುರು ಮಳೆ ಆಗಿದೆ.

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಎನ್.ವಡ್ಡಹಳ್ಳಿ, ಶ್ರೀರಂಗಪುರ ಮತ್ತಿತರ ಕಡೆ ಹತ್ತು ನಿಮಿಷ ಎಡೆಬಿಡದೆ ಮಳೆ ಸುರಿಯಿತು.

ದೊಡ್ಡಬಳ್ಳಾಪುರ ತಾಲ್ಲೂಕಿನಾದ್ಯಂತ ಮಿಂಚು–ಗುಡುಗು ಸಮೇತ ಮುಂಗಾರು ಪೂರ್ವ ಮಳೆ ಹದವಾಗಿ ಸುರಿಯಿತು. ಮಳೆಯೊಂದಿಗೆ ಬೀಸಿದ ಬಿರುಗಾಳಿಗೆ ಮಾವಿನ ಈಚು ಉದುರಿದೆ. ದೇವನಹಳ್ಳಿಯಲ್ಲಿ ಸಂಜೆ ಬಿರುಸಿನ ಮಳೆ ಆಯಿತು. ಹೊಸಕೋಟೆಯಲ್ಲೂ ತುಂತುರು ಮಳೆ ಸುರಿಯಿತು.

ಬೀದರ್, ಗುರುಮಠಕಲ್‌ನಲ್ಲಿ ಮಳೆ (ಕಲಬುರಗಿ ವರದಿ): ಬೀದರ್, ಹುಮನಾಬಾದ್, ಯಾದಗಿರಿ ಜಿಲ್ಲೆಯ ಗುರುಮಠಕಲ್‌ನಲ್ಲಿ ಮಳೆ ಸುರಿದಿದೆ.

ಬೀದರ್, ಹುಮನಾಬಾದ್‌ನಲ್ಲಿ ಶನಿವಾರ ಬಿರುಗಾಳಿ ಸಹಿತ ಮಳೆಯಾಗಿದೆ. ಬೀದರ್ ತಾಲ್ಲೂಕಿನ ಜನವಾಡ, ಮರಕಲ್, ಚಿಕ್ಕಪೇಟೆ, ಇಸ್ಲಾಂಪುರ, ಬೆನಕನಳ್ಳಿ, ಮಾಮನಕೇರಿ ಸೇರಿದಂತೆ ವಿವಿಧೆಡೆ ಮಳೆಯಾಗಿದೆ. ಶುಕ್ರವಾರ ರಾತ್ರಿ ಸುರಿದ ಮಳೆಗೆ ಜಿಲ್ಲೆಯ ಚಿಟಗುಪ್ಪದ ಪೋಲಕಪಳ್ಳಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಬಿದ್ದಿದೆ.

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಂಜೆ ವೇಳೆ ಆಲಿಕಲ್ಲು ಸಹಿತ ಮಳೆಯಾಗಿದೆ.

ಚಿಕ್ಕಮಗಳೂರು ವರದಿ: ನಗರ ಮತ್ತು ಸುತ್ತಮುತ್ತ ಉತ್ತಮ ಮಳೆಯಾಗಿದ್ದು, ಬಿಸಿಲಿನಿಂದ ಕಂಗೆಟ್ಟಿದ್ದ ನಗರಕ್ಕೆ ವರ್ಷದ ಮೊದಲ ಮಳೆ ತಂಪೆರೆಯಿತು.

ಬೇಲೂರು, ಸಾಲಿಗ್ರಾಮದಲ್ಲಿ ಆಲಿಕಲ್ಲು ಮಳೆ (ಮೈಸೂರು ವರದಿ): ಹಾಸನ ಜಿಲ್ಲೆಯ ಬೇಲೂರು ಹಾಗೂ ಸುತ್ತಮುತ್ತ ಶನಿವಾರ ಅರ್ಧ ಗಂಟೆ ಆಲಿಕಲ್ಲು ಮಳೆ ಸುರಿಯಿತು. ಹೊಳೆನರಸೀಪುರದಲ್ಲಿ ಸಾಧಾರಣ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನಲ್ಲಿ ಆಲಿಕಲ್ಲು ಮಳೆಯಾಗಿದೆ. ಮಳೆಗೆ ಮಾವಿನ ಹೂವು ಉದುರಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಜೋರು ಮಳೆಯಾಗಿದೆ. ಮಂಡ್ಯ ನಗರ, ಕೆ.ಆರ್.ಪೇಟೆ, ಕೊಡಗಿನ ಕುಶಾಲನಗರದಲ್ಲಿ ಮಳೆಯಾಗಿದೆ.



ಚಿಕ್ಕಬಳ್ಳಾಪುರ ತಾಲ್ಲೂಕಿನ ಚಲಕಾಯಲಪರ್ತಿ ರಸ್ತೆ ಮಳೆಗೆ ಕೆರೆಯಂತಾಗಿದೆ

5 ದಿನ ಮಳೆ ಸಾಧ್ಯತೆ

ರಾಜ್ಯದ ವಿವಿಧೆಡೆ ಮುಂದಿನ ಐದು ದಿನ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ಕೆಲ ಜಿಲ್ಲೆಗಳಲ್ಲಿ 27ರವರೆಗೂ ಮಳೆ ಮುಂದುವರಿಯುವ ಸಾಧ್ಯತೆಯಿದೆ’ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಚಿತ್ರದುರ್ಗ, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಕೆಲವೆಡೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಂದೆರಡು ಕಡೆ ಭಾನುವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಹೇಳಿದೆ.

18 ಬಿಜೆಪಿ ಶಾಸಕರ ವಿರುದ್ಧದ ಕ್ರಮ ಸಮರ್ಥಿಸಿಕೊಂಡ ಯು.ಟಿ.ಖಾದರ್

‘ಪೀಠದ ಗೌರವ ಉಳಿಸಲು ಅಮಾನತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಸದಸ್ಯರಿಗೆ ತಿದ್ದಿಕೊಳ್ಳಲು ಅವಕಾಶವಿದ್ದರೂ, ಕಲಾಪ ಮತ್ತೆ ಸೇರಿದ ನಂತರವೂ ಅದೇ ವರ್ತನೆ ಮುಂದುವರಿಸಿದರು. ದುರ್ವರ್ತನೆ ಸಹಿಸಲು ಸಾಧ್ಯವಿಲ್ಲ’ ಎಂದು ಬಿಜೆಪಿಯ 18 ಶಾಸಕರ ಅಮಾನತು ಕ್ರಮವನ್ನು ಸ್ಪೀಕರ್ ಯು.ಟಿ. ಖಾದರ್ ಸಮರ್ಥಿಸಿಕೊಂಡರು.



ಯು.ಟಿ. ಖಾದರ್

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಧ್ಯಾಹ್ನ 12ರ ಸುಮಾರಿಗೆ ಘಟನೆ ನಡೆದಿತ್ತು. ಸಂಜೆ 4ಕ್ಕೆ ಕಲಾಪ ಮತ್ತೆ ಸೇರಿದಾಗಲೂ ಅವರ ವರ್ತನೆ ಬದಲಾಗಲಿಲ್ಲ. ಪೀಠಕ್ಕೆ ಅಗೌರವವಾಗಿದೆ. ತಪ್ಪು ಮಾಡಿದ್ದೇವೆ ಎಂಬ ಭಾವನೆ ಅವರಲ್ಲಿ ಕಾಣಲಿಲ್ಲ. ಪೀಠದ ಗೌರವಕ್ಕಾಗಿ ಅಮಾನತು ಶಿಕ್ಷೆ ಅನಿವಾರ್ಯ ಆಗಿತ್ತು. ಬಿಜೆಪಿ ಸದಸ್ಯರ ವರ್ತನೆ ಇತರರಿಗೆ ಮಾದರಿಯಾಗಬಾರದು. ಜಿಲ್ಲಾ, ತಾಲ್ಲೂಕು ಸಭೆಗಳಲ್ಲಿ ಇಂತಹದು ಮರುಕಳಿಸಬಾರದು’ ಎಂದರು.

‘ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಹನಿಟ್ರ್ಯಾಪ್ ವಿಷಯ ಪ್ರಸ್ತಾಪಿಸಿದಾಗ ಅವಕಾಶ ಕೊಟ್ಟೆ. ಚರ್ಚೆಯಾಯಿತು. ಗೃಹ ಸಚಿವರು, ಮುಖ್ಯಮಂತ್ರಿ ತನಿಖೆಯ ಭರವಸೆ ನೀಡಿದರು. ಆದರೂ, ಧನ ವಿನಿಯೋಗ ಮಸೂದೆಗೆ ಅಡ್ಡಿಪಡಿಸಲು ಪ್ರಯತ್ನಿಸಿದರು. ಗೊಂದಲ ಸೃಷ್ಟಿಸಿದರು. ಆರೋಗ್ಯ ಸಮಸ್ಯೆ ಇರುವ ಮುಖ್ಯಮಂತ್ರಿಗೆ ನಿರಂತರವಾಗಿ ಅಡ್ಡಿ ಮಾಡಿದರು. ಪೀಠದ ಮೇಲೇರಲು ಪ್ರಯತ್ನಿಸಿದರು’ ಎಂದು ಘಟನೆ ವಿವರಿಸಿದರು.

‘ಅವರಿಗೆ ಹೆದರಿ ಅಧಿವೇಶನ ಮೊಟಕುಗೊಳಿಸಬೇಕಿತ್ತಾ? ಧನ ವಿನಿಯೋಗ ಮಸೂದೆಗೆ ಅಂಗೀಕಾರ ಪಡೆಯಲು ಮತ್ತೆ ಅಧಿವೇಶನ ಕರೆಯಬೇಕಿತ್ತಾ? ಭಾವನಾತ್ಮಕವಾಗಿ ಯೋಚಿಸಿದರೆ ಸಂವಿಧಾನ ಪೀಠದ ಗೌರವ ಉಳಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ಅವರಿಗೆ ಬುದ್ಧಿ ಕಲಿಸಲು ಎಚ್ಚರಿಕೆಯ ಸಂದೇಶ ನೀಡಬೇಕಾಯಿತು’ ಎಂದರು.

ಪ್ರತಿಭಟನೆ ಮಾಡಿದ್ದಕ್ಕೇ ಅಮಾನತು: ಆರ್. ಅಶೋಕ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಹಿಂದೆ ಸದನದ ಬಾಗಿಲು ಒದ್ದಿದ್ದರು, ಜಮೀರ್ ಅಹಮದ್ ಸಭಾಧ್ಯಕ್ಷರ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಆಗ ಅಮಾನತಿಗೆ ಆದೇಶಿಸಿರಲಿಲ್ಲ. ಈಗ ನಮ್ಮವರು ಪ್ರತಿಭಟಿಸಿದ್ದಕ್ಕೇ ಅಮಾನತು ಮಾಡಲಾಗಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.



ಆರ್.ಅಶೋಕ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಾಸಕರನ್ನು ಹನಿಟ್ರ್ಯಾಪ್ ಮಾಡುವ ಹುನ್ನಾರಗಳ ವಿರುದ್ಧ ತನಿಖೆ ಮತ್ತು ಸರ್ಕಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ ವಿರೋಧಿಸಿ ಸದಸ್ಯರು ಪ್ರತಿಭಟಿಸುತ್ತಿದ್ದರು. ಅಷ್ಟಕ್ಕೇ ಅಮಾನತು ಮಾಡಲಾಗಿದೆ. ಇದು ತುಘಲಕ್ ಆಡಳಿತ’ ಎಂದು ಹೇಳಿದರು.

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ಸಭಾಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕಿತ್ತು. ಆದರೆ ಸರ್ಕಾರದ ತಾಳಕ್ಕೆ ಕುಣಿದರು. ಅಮಾನತಾದ ಶಾಸಕರು ವಿಧಾನಸಭೆ ಲಾಬಿ, ಸಭಾಂಗಣ ಪ್ರವೇಶಿಸುವಂತಿಲ್ಲ ಎಂದಿದ್ದಾರೆ. ಅವರೇನು ಭಯೋತ್ಪಾದಕರೇ,ನಕ್ಸಲರೇ’ ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಸುದ್ದಿಗೋಷ್ಠಿಯಲ್ಲಿ ಇದ್ದರು.

‘ಪೀಠದತ್ತ ನುಗ್ಗಿ ಎಂದಿದ್ದು ಅಶೋಕ’



ರಮೇಶ್ ಬಾಬು

‘ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠಕ್ಕೆ ಮುತ್ತಿಗೆ ಹಾಕುವಂತೆ ಪ್ರಚೋದಿಸಿದ್ದೇ ಆರ್.ಅಶೋಕ. ಪೀಠದತ್ತ ನುಗ್ಗಿ ಎಂದು ಅವರು ಹೇಳಿದ್ದು ಮಾಧ್ಯಮಗಳಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಹೀಗಾಗಿ ಅವರ ವಿರುದ್ಧ ಕ್ರಮತೆಗೆದುಕೊಳ್ಳಬೇಕು’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಒತ್ತಾಯಿಸಿದ್ದಾರೆ.

ಈ ಸಂಬಂಧ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಪತ್ರ ಬರೆದಿದ್ದಾರೆ. ‘ಸದನದ ನಿಯಮಾವಳಿ ಮೀರಿ, ಇಡೀ ಘಟನೆಗೆ ಕಾರಣಕರ್ತರಾದ ಅಶೋಕ ಅವರನ್ನು ಅಮಾನತು ಪಡಿಸಿ, ಅವರ ವಿರುದ್ಧವೂ ಕ್ರಮಜರುಗಿಸಿ’ ಎಂದು ಮನವಿ ಮಾಡಿದ್ದಾರೆ.

‘ಆದೇಶ ನಿಮ್ಮದೋ? ಸಿ.ಎಂ.ದೋ’



ವಿ.ಸುನಿಲ್ ಕುಮಾರ್

‘ಶಾಸಕರ ಜತೆ ಸಂಧಾನಸಭೆ ನಡೆಸದೆಯೇ ಅಮಾನತು ಆದೇಶ ಮಾಡಿದ ನಿಮ್ಮ ಕ್ರಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಪಾಲಿಗೆ ಶಾಶ್ವತ ಕಪ್ಪುಚುಕ್ಕೆ’ ಎಂದು ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್ ಅವರು ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಪತ್ರ ಬರೆದಿದ್ದಾರೆ.

‘ಬಿಜೆಪಿ–ಜೆಡಿಎಸ್ ಶಾಸಕರ ಜತೆ ಸಭೆ ನಡೆಸದೆಯೇ ಮುಖ್ಯಮಂತ್ರಿ ಮತ್ತು ಕಾನೂನು ಸಚಿವರ ಜತೆ ರಹಸ್ಯ ಸಭೆ ನಡೆಸಿದಿರಿ. ಅಮಾನತು ಆದೇಶ ತಮ್ಮದೋ ಅಥವಾ ಮುಖ್ಯಮಂತ್ರಿಯೇ ಕೈಹಿಡಿದು ಬಲವಂತದಿಂದ ಬರೆಸಿದ್ದೋ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಸ್ಪೀಕರ್ ನಿರ್ಧಾರ ಆಘಾತಕಾರಿ’

ಪ್ರಜಾವಾಣಿ ವಾರ್ತೆ

ಶಿರಸಿ: ‘ಬಿಜೆಪಿಯ 18 ಶಾಸಕರನ್ನು ಸದನದಿಂದ ಅಮಾನತು ಮಾಡಿದ ವಿಧಾನಸಭೆ ಸ್ಪೀಕರ್ ನಿರ್ಧಾರ ಆಘಾತಕಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡೆ ಆಗಿದೆ’ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

‘ಮಧುಬಲೆ ಪ್ರಕರಣದ ತನಿಖೆಗೆ ಆಗ್ರಹಿಸಿ ವಿರೋಧಪಕ್ಷದವರ ಧರಣಿ ನ್ಯಾಯಸಮ್ಮತವಾಗಿದ್ದು, ಅವರ ಹಕ್ಕು ಕೂಡ ಆಗಿತ್ತು. ಆದರೆ, ಮುಖ್ಯಮಂತ್ರಿ ಅಣತಿಯಂತೆ ವಿಧಾನಸಭೆ ಅಧ್ಯಕ್ಷರು, ಸದಸ್ಯರನ್ನು ಸದನದಿಂದ 6 ತಿಂಗಳು ಅಮಾನತು ಮಾಡಿದ್ದು ದುರದೃಷ್ಟಕರ’ ಎಂದು ಅವರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ವಿರೋಧ ಪಕ್ಷದ ಶಾಸಕರ ಮೇಲೆ ದಮನಕಾರಿ ನೀತಿ ನಡೆದಿದೆ. ಸದಸ್ಯರ ಹಕ್ಕು ಮತ್ತು ಅವರ ಹಿತವನ್ನು ಕಾಪಾಡಬೇಕಿದ್ದ ವಿಧಾನಸಭೆ ಅಧ್ಯಕ್ಷ ಯು.ಟಿ ಖಾದರ್ ಅವರು ಮುಖ್ಯಮಂತ್ರಿ ಮತ್ತು ಕಾನೂನು ಸಚಿವರ ಒತ್ತಡಕ್ಕೆ ಮಣಿದು, ಅತಿರೇಕದ ನಿರ್ಣಯ ಕೈಗೊಂಡು ಪ್ರಜಾಪ್ರಭುತ್ವದ ಹತ್ಯೆ ಎಸಗಿದ್ದಾರೆ. ನಿರ್ಧಾರ ಪುನರ್ ಪರಿಶೀಲಿಸಬೇಕು’ ಎಂದು ಅವರು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

‘ಅಮಾನತು ಮಾಡಬಾರದಿತ್ತು’ (ಮಂಗಳೂರು ವರದಿ): ‘ವಿಧಾನಸಭಾ ಅಧಿವೇಶನದ ಕಲಾಪದ ವೇಳೆ ಅನುಚಿತ ವರ್ತನೆ ತೋರಿದ ಆರೋಪದ ಮೇಲೆ ಶಾಸಕರನ್ನು ಆರು ತಿಂಗಳು ಅಮಾನತು ಮಾಡಬಾರದಿತ್ತು’ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಶನಿವಾರ ಇಲ್ಲಿ ಹೇಳಿದರು.

‘ಇಂಥ ಗಲಾಟೆ ನೋಡಿರಲಿಲ್ಲ’

ಮೈಸೂರು: ‘40 ವರ್ಷಗಳ ರಾಜಕೀಯ ಜೀವನದಲ್ಲಿ ಇಂಥ ಗಲಾಟೆ ನೋಡಿರಲಿಲ್ಲ. ಸಂಸದೀಯ ಭಾಷೆಯೇ ಬಳಕೆಯಾಗಲಿಲ್ಲ. ಪ್ರಜಾಪ್ರಭುತ್ವದ ಆಶಯಗಳನ್ನು ಬಿಜೆಪಿ ಗಾಳಿಗೆ ತೂರಿದೆ. ಅಮಾನತು ಮಾಡದೇ ಸ್ಪೀಕರ್‌ಗೆ ಬೇರೆ ದಾರಿ ಇರಲಿಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶನಿವಾರ ಪ್ರತಿಕ್ರಿಯಿಸಿದ್ದಾರೆ.

ಈ ಘಟನೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಪ್ಪು ಚುಕ್ಕೆ. ಬಜೆಟ್ ಮೇಲಿನ ಉತ್ತರಕ್ಕೆ ಪ್ರತಿಪಕ್ಷಗಳು ಅಡ್ಡಿಪಡಿಸಿವೆ. ಇದೊಂದು ಪೂರ್ವಯೋಜಿತ ಪಿತೂರಿ

ಕೆ.ಎನ್.ರಾಜಣ್ಣ, ಸಹಕಾರ ಸಚಿವ

ವಂಚನೆ ಪ್ರಕರಣ ಬಬಲಾದಿ ಮಠದ ಸ್ವಾಮೀಜಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಗೋಕಾಕ(ಬೆಳಗಾವಿ ಜಿಲ್ಲೆ): ಇಲ್ಲಿನ ಮಹಾಲಕ್ಷ್ಮಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ನಡೆದ ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಹೊಸ ಬಬಲಾದಿ ಮಠದ ಸದಾಶಿವ ಸ್ವಾಮೀಜಿ ಅವರನ್ನು ಸಿಐಡಿ ಅಧಿಕಾರಿಗಳು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.



ಸದಾಶಿವ ಸ್ವಾಮೀಜಿ

‘ವಂಚನೆ ಪ್ರಕರಣದಲ್ಲಿ ಆರೋಪಿಗಳಿಂದ ಸ್ವಾಮೀಜಿಗೆ ಮತ್ತು ಅವರ ಕುಟುಂಬದವರಿಗೆ ಹಣ ವರ್ಗಾವಣೆ ಆಗಿದೆ. ಆ ಹಣದಲ್ಲೇ ಸ್ವಾಮೀಜಿ ನಿವೇಶನ ಖರೀದಿಸಿದ್ದಾರೆ’ ಎಂಬ ಆರೋಪವಿದೆ. ಮಠದ ಜಾತ್ರೆ ಮತ್ತು ಮಹಾಪ್ರಸಾದ ವ್ಯವಸ್ಥೆಗೂ ಆರೋಪಿಗಳು ಆರ್ಥಿಕ ನೆರವು ಒದಗಿಸಿದ್ದಾರೆಂದು ಗೊತ್ತಾಗಿದೆ. ಅದಕ್ಕೆ ಸದಾಶಿವ ಸ್ವಾಮೀಜಿ ವಶಕ್ಕೆ ಪಡೆದು, ಗೋಕಾಕ ಶಹರ ಠಾಣೆಯಲ್ಲಿ ಸಿಐಡಿ ಪೊಲೀಸರಿಂದ ವಿಚಾರಣೆ ನಡೆದಿದೆ.

ಈ ಬ್ಯಾಂಕ್‌ನಲ್ಲಿ ₹74 ಕೋಟಿಗೂ ಅಧಿಕ ಮೊತ್ತದ ವಂಚನೆಯಾಗಿದ್ದು, ಅಲ್ಲಿ ಕೆಲಸ ಮಾಡುವ ಸಿಬ್ಬಂದಿಯೇ ಅಕ್ರಮದಲ್ಲಿ ಭಾಗಿಯಾದ ಆರೋಪ ಕೇಳಿಬಂದಿತ್ತು.

ದ್ವೇಷ ಭಾಷಣ ಪ್ರಮೋದ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಬಂದರಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಲ್ಲಿ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ವಿರುದ್ಧ ಮಲ್ಪೆ ಠಾಣೆಯ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಮೋದ್ ಮಧ್ವರಾಜ್ ಅವರು, ‘ನಮ್ಮ ಮನೆಗೆ ಕಳ್ಳರು ಬಂದರೆ ನಾವು ಏನು ಮಾಡುತ್ತೇವೆ? ಪೊಲೀಸರು ಬರುವುದಕ್ಕೆ ಐದಾರು ಗಂಟೆ ತಡವಾದರೆ ಕಳ್ಳರನ್ನು ಕಟ್ಟಿ ಹಾಕಲೇಬೇಕು. ಅವರಿಗೆ ಮಚ್ಚಿನಲ್ಲಿ, ಖಡ್ಗದಲ್ಲಿ ತಲವಾರಿನಲ್ಲಿ ಹೊಡೆದಿದ್ದಾ? ಕೆನ್ನೆಗೆ ಎರಡು ಬಾರಿಸಿದ್ದು’ ಎಂದು ಹೇಳಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಕಳ್ಳಿ ಅಂತ ಆರೋಪಿಸಿರುವ ಮಹಿಳೆಗೆ ಏನಾದರೂ ಆಕ್ಷೇಪ ಉಂಟಾ?’ ಎಂದು ಮಹಿಳೆಗೆ ಸಾರ್ವಜನಿಕವಾಗಿ ಕಟ್ಟಿ ಹಾಕಿ ಹೊಡೆದುದ್ದನ್ನು ಸಮರ್ಥನೆ ಮಾಡಿಕೊಂಡು, ಸಾರ್ವಜನಿಕರಿಂದ ಇಂತಹ ಅಪರಾಧ ಮಾಡಿಸಲು ಪ್ರೇರಣೆ ನೀಡಿ ದ್ವೇಷ ಭಾವನೆಯಿಂದ ಭಾಷಣ ಮಾಡಿದ್ದಾರೆ ಎಂಬುದೂ ದೂರಿನಲ್ಲಿದೆ.

ದೊಂಬಿ ನಡೆಯುವ ಸಂಭವ ಇದೆ ಎಂದು ಗೊತ್ತಿದ್ದೂ ಅಲ್ಲಿದ್ದವರನ್ನು ಪ್ರಚೋದಿಸುತ್ತಾ ಉದ್ರೇಕಕಾರಿ ಭಾಷಣ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

PUBLIC NOTICE

PUBLIC NOTICE FOR SALE OF PROPERTY

Notice is hereby given to public at large that the undersigned Advocates are investigating the title of the Schedule Property and ownership rights of the Owner listed in the table below (herein referred to as the “Owner”) in respect of the property described in the Schedule below and referred to herein as the “Schedule Property”.

The Owner has represented that he is the absolute Owner of the Schedule Property, having unrestricted rights of alienation over the same and that the Schedule Property is free from all encumbrances, mortgages, charges, court cases, attachments, lien, litigation and/or any family dispute and/or third party rights/claims of any nature whatsoever.

Public is notified that if any person/s, entity, company, firm or institution has or asserts any rights, title or interest by way of sale, lease, license, tenancy, mortgage, charge, lien, easement, objection, agency, license, gift, inheritance, share, possession, assignment, right of prescription or pre-emption or under any agreement or other disposition or under any suit, decree, injunction order or attachment or award passed by any Court or Authority, litigation, lis-pendens, decree or order of any adjudicating authority, exchange, partition, power of attorney, Will, bequest, FAR/FSI, tenancy, development rights, family arrangement / settlement, allotment, acquisition, requisition, beneficial right/ interest under any trust, pending litigation, claim, demand or any other interest of whatsoever nature in or upon the Schedule Properties or any part thereof, the same may be brought to the notice of the undersigned in writing together with all details and documents in support of such claim within 30 (thirty) days from the date of this Notice, failing which it shall conclusively be presumed and deemed that the Owner has a clear and marketable title to the Schedule Property and that no one else has any right, title, interest or claim whatsoever in respect of the Schedule Property and claim/s if any, will be deemed to have been waived.

SCHEDULE PROPERTIES


An area of 38283.2600 Square meters of commercial vacant site in property number 151800207600320061 (as grama panchayath records DCB NO 333 PROPERTY NUMBER 578) corresponding to that piece and parcel of coffee land bearing (1) Survey Number 76/1 measuring 1.88 acres, (2) Survey Number 76/2 measuring 4.08 acres, (3) Survey Number 76/3 measuring 2.30 acres and (4) Survey Number 76/4 measuring 1.20 acres, totally measuring 9.46 Acres of commercially converted land (FROM NO. 9 and 11A issued by Kedakal Gramapanchayath) situated at Kedakal Village, Sunticoppa hobli, Somwarpet Taluk Earlier, Now Coming Under Kushalnagar Taluk, Kodagu District, Karnataka State and held by the respective Owner as hereunder:-

Owners	Survey Nos	Extent		Boundaries			
		Acres	Guntas	East by	West by	North by	South by
M/S R.P.S.S Hotels Private Limited, Rep By., M.RAJENDRA	76/1	1.88		ROAD	Sy.No. 78/3, Sy.No. 77/2 & Sy.No. 77/1	Sy No. 43 & Thodu (Stream)	ROAD
	76/2	4.08					
	76/3	2.30					
	76/4	1.20					
	TOTAL	9.46					

Mr.M.S.Harsha Prabhu – Advocate
Address: House Of Hiranandani Villa No. 437, 5th Street, Devanahalli, Bangalore North, Karnataka - 562110,
Email : msharshaprabhu@gmail.com
Mobile: +91-6369530633 Mobile: +91-8310566865

Place: Bengaluru
Date : 18.03.2025

ಮೂರನೇ ವರ್ಷದ ಚಿರಸ್ಮರಣೆ



ಶ್ರೀ ಸಿ. ಲಕ್ಷ್ಮೀನಾರಾಯಣ
Class-1 PWD Contractor
#25, 4ನೇ ಅಡ್ಡ ರಸ್ತೆ, ಮಲ್ಲೇಶ್ವರಂ. ಬೆಂಗಳೂರು.
ನಿಧನ: 23.03.2022

ನೀವು ನಮ್ಮನ್ನಗಲಿ ಮೂರು ವರ್ಷ ಕಳೆದರು ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ, ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ಸದಾ ಸ್ಮರಿಸುವ:
ಧರ್ಮಪತ್ನಿ ವಿ.ರತ್ನಮ್ಮ ಮತ್ತು ಕುಟುಂಬವರ್ಗದವರು

ಪುಣ್ಯಸ್ಮರಣೆ



ಶ್ರೀಮತಿ ವಿಜಯಲಕ್ಷ್ಮಿ ಬಿ.ಎಸ್
ನಿಧನ: 12–03–2025
ಶ್ರೀ ದಯಾಕರ್‌ರವರ ಧರ್ಮಪತ್ನಿ,
ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ಬೆಂಗಳೂರು.
ಮೊ: +91 9448361656

ಇವರ ಅಗಲಿಕೆ ನಮ್ಮೆಲ್ಲರಿಗೆ ಅಪಾರ ದುಃಖ ತಂದಿದೆ. ಇವರ ಆತ್ಮ ಸದ್ಗತಿಗೆ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು
ಪತಿ ದಯಾಕರ್ ಹಾಗೂ ಕುಟುಂಬವರ್ಗ ಮತ್ತು ಸ್ನೇಹಿತರು

ಆಡಳಿತ ಲೋಪಕ್ಕೆ ಪ್ರಯಾಣಿಕರ ತರಾಟೆ: ವೈಫಲ್ಯದ ವಿರುದ್ಧ ತನಿಖೆ

ಹೀಥ್ರೊ ನಿಲ್ದಾಣ ಸಹಜ ಸ್ಥಿತಿಗೆ

ಲಂಡನ್ (ಎಪಿ): ಲಂಡನ್‌ನ ಹೀಥ್ರೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಾಚರಣೆಯು ಸಹಜ ಸ್ಥಿತಿಗೆ ಮರಳಿದ್ದು, ವಿಮಾನಗಳ ಸಂಚಾರ ಶನಿವಾರ ಪುನರಾರಂಭವಾಗಿದೆ’ ಎಂದು ವಿಮಾನ ನಿಲ್ದಾಣ ತಿಳಿಸಿದೆ.

ನಿಲ್ದಾಣ ಸಮೀಪದ ವಿದ್ಯುತ್ ಉಪ ಸ್ಥಾವರದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಿಂದಾಗಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ವಿಮಾನಗಳ ಸಂಚಾರವನ್ನು ರದ್ದುಪಡಿಸಲಾಗಿತ್ತು. ಕೆಲ ವಿಮಾನಗಳ ಸಂಚಾರ ಮಾರ್ಗ ಬದಲಿಸಲಾಗಿತ್ತು.

‘ಹೆಚ್ಚುವರಿ 10,000 ಪ್ರಯಾಣಿಕರ ಅನುಕೂಲಕ್ಕಾಗಿ ಮತ್ತಷ್ಟು ವಿಮಾನಗಳ ಹಾರಾಟಕ್ಕೆ ಸಮಯ ನಿಗದಿಪಡಿಸಿದ್ದೇವೆ’ ಎಂದು ವಿಮಾನ ನಿಲ್ದಾಣದ ಮುಖ್ಯಸ್ಥರು ಹೇಳಿಕೆ ನೀಡಿದ್ದಾರೆ.

ಅಗ್ನಿ ಅವಘಡದ ಹಿನ್ನೆಲೆಯಲ್ಲಿ ಶುಕ್ರವಾರ ಅಂದಾಜು 1,300 ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿತ್ತು. ಇದರಿಂದಾಗಿ 2 ಲಕ್ಷ ಪ್ರಯಾಣಿಕರಿಗೆ ಅನನುಕೂಲ ಆಗಿತ್ತು.

ಅಗ್ನಿ ಅವಘಡ ಹಾಗೂ ಇದರಿಂದಾಗಿ ಪ್ರಮುಖ ವಿಮಾನ ನಿಲ್ದಾಣದ ಕಾರ್ಯ ಚಟುವಟಿಕೆ ಬಂದ್ ಕುರಿತಂತೆ ಹಲವರು ನಿಲ್ದಾಣದ ಆಡಳಿತವನ್ನು ತೀವ್ರವಾಗಿ ಟೀಕಿಸಿದ್ದಾರೆ.

‘ಸ್ಥಳೀಯ ಆಡಳಿತವು ಹಲವು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ. ವೈಫಲ್ಯ ಕುರಿತು ವಿಸ್ತೃತ ತನಿಖೆ ಅಗತ್ಯವಿದ್ದು, ಮತ್ತೆ ಇಂತಹ ಸ್ಥಿತಿಮರಳದಂತೆ ಜಾಗ್ರತೆ ವಹಿಸಬೇಕಾಗಿದೆ’ ಎಂದು ಬ್ರಿಟನ್ ಸರ್ಕಾರ ಪ್ರತಿಕ್ರಿಯಿಸಿದೆ.

ವಿಮಾನ ಹಾರಾಟ ಪುನರಾರಂಭ

ನವದೆಹಲಿ (ಪಿಟಿಐ): ಹೀಥ್ರೊ ವಿಮಾನ ನಿಲ್ದಾಣಕ್ಕೆ ಏರ್ ಇಂಡಿಯಾ, ವರ್ಜಿನ್ ಅಟ್ಲಾಂಟಿಕ್ ಮತ್ತು ಬ್ರಿಟಿಷ್ ಏರ್‌ವೇಸ್‌ನಿಂದ ವಿಮಾನ ಕಾರ್ಯಾಚರಣೆ ಶನಿವಾರ ಪುನರಾಂಭಗೊಂಡಿದೆ.

ವಿಮಾನಗಳ ಹಾರಾಟ ರದ್ದಾಗಿದ್ದರಿಂದ ದೆಹಲಿ ಸೇರಿ ವಿವಿಧ ಸ್ಥಳಗಳಿಂದ ಲಂಡನ್‌ಗೆ ಪ್ರಯಾಣಿಸಲು ಸಜ್ಜಾಗಿದ್ದ ಸಾವಿರಾರು ಪ್ರಯಾಣಿಕರು ತೊಂದರೆಗೆ ಸಿಲುಕಿದ್ದರು. ಈ ಮೊದಲೇ ನಿಗದಿಯಾಗಿದ್ದಂತೆ ವಿಮಾನಗಳ ಹಾರಾಟ ಬೆಳಿಗ್ಗೆಯೇ ಆರಂಭಗೊಂಡಿದೆ ಎಂದು ವಿಮಾನಯಾನ ಕಂಪನಿಗಳು ತಿಳಿಸಿವೆ.

ಪ್ರತಿದಿನ ಮುಂಬೈ ಮತ್ತು ದೆಹಲಿಯಿಂದ ಬ್ರಿಟಿಷ್ ಏರ್‌ವೇಸ್‌ನ ಎಂಟು ವಿಮಾನಗಳು ಹೀಥ್ರೊಗೆ ಹಾರಾಟ ನಡೆಸುತ್ತವೆ. ದೆಹಲಿ, ಮುಂಬೈ ಮತ್ತು ಬೆಂಗಳೂರಿನಿಂದ ವರ್ಜಿನ್ ಅಟ್ಲಾಂಟಿಕ್‌ಗೆ ಸೇರಿದ ಐದು ವಿಮಾನಗಳು ಮತ್ತು ಏರ್ ಇಂಡಿಯಾದ ಆರು ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ.

357 ಅಕ್ರಮ ಆನ್‌ಲೈನ್ ಗೇಮಿಂಗ್ ವೆಬ್‌ಸೈಟ್ ಸ್ಥಗಿತ

ನವದೆಹಲಿ (ಪಿಟಿಐ): ಕೇಂದ್ರ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯವು (ಡಿಜಿಜಿಐ) ದೇಶದಲ್ಲಿ ಅಕ್ರಮವಾಗಿ ಕಾರ್ಯಾಚರಣೆ ನಡೆಸುತ್ತಿದ್ದ 357 ಆನ್‌ಲೈನ್ ಗೇಮಿಂಗ್ ಯುಆರ್‌ಎಲ್/ವೆಬ್‌ಸೈಟ್‌ಗಳನ್ನು ಸ್ಥಗಿತಗೊಳಿಸಿದ್ದು, 2,400 ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿದೆ ಎಂದು ಹಣಕಾಸು ಸಚಿವಾಲಯವು ಶನಿವಾರ ತಿಳಿಸಿದೆ.

ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿರುವ ಈ ಗೇಮಿಂಗ್ ವೆಬ್‌ಸೈಟ್‌ಗಳನ್ನು ಸಾರ್ವಜನಿಕರು ಬಳಸುತ್ತಿದ್ದಾರೆ. ಇಂತಹ ಅಕ್ರಮ ವೇದಿಕೆಗಳಿಗೆ ಬಾಲಿವುಡ್ ನಟ, ನಟಿಯರು, ಕ್ರಿಕೆಟಿಗರು ಮತ್ತು ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್‌ಗಳು ಕೂಡ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ತಿಳಿಸಿದೆ.

ಡಿಜಿಜಿಐ 700ಕ್ಕೂ ಹೆಚ್ಚು ಇ–ಗೇಮಿಂಗ್ ಕಂಪನಿಗಳ ವಿರುದ್ಧ ತನಿಖೆ ನಡೆಸಿದೆ. ನೋಂದಣಿ ಮಾಡದೆ ಜಿಎಸ್‌ಟಿ ವಂಚನೆ ಎಸಗುತ್ತಿರುವುದನ್ನು ಪತ್ತೆ ಹಚ್ಚಿದೆ. ಈ ಕಂಪನಿಗಳು ತೆರಿಗೆ ನಿಯಮಾವಳಿ ಉಲ್ಲಂಘನೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ ಎಂದು ವಿವರಿಸಿದೆ.

ಈ ಕಂಪನಿಗಳು ಅನ್ಯ ವ್ಯಕ್ತಿಗಳ ಬ್ಯಾಂಕ್ ಖಾತೆ ಬಳಸಿಕೊಂಡು ಹಣ ವರ್ಗಾವಣೆ ಮಾಡಿಕೊಳ್ಳುತ್ತವೆ. ಇಂತಹ 166 ಖಾತೆಗಳನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಸಿರಿಧಾನ್ಯ ರಫ್ತು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ಅಂತ್ಯದವರೆಗೆ ಭಾರತವು ₹255 ಕೋಟಿ ಮೌಲ್ಯದ ಸಿರಿಧಾನ್ಯಗಳನ್ನು ರಫ್ತು ಮಾಡಿದೆ. ಕಳೆದ ಮೂರು ವರ್ಷದಿಂದಲೂ ರಫ್ತು ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಬಳಕೆ ಕುರಿತು ಗ್ರಾಹಕರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು, ಸಂಸತ್‌ಗೆ ತಿಳಿಸಿದೆ.


2020–21ರಲ್ಲಿ ₹224 ಕೋಟಿ, 2021–22ರಲ್ಲಿ ₹245 ಕೋಟಿ ಹಾಗೂ 2022–23ರಲ್ಲಿ ₹342 ಕೋಟಿ ಮೌಲ್ಯದ ಸಿರಿಧಾನ್ಯ ರಫ್ತು ಮಾಡಲಾಗಿದೆ. 2023–24ರಲ್ಲಿ 351 ಕೋಟಿ ಮೌಲ್ಯದ ಸಿರಿಧಾನ್ಯ ರಫ್ತಾಗಿದೆ ಎಂದು ವಿವರಿಸಿದೆ.

ನ್ಯಾನೊ ಗೊಬ್ಬರ ತಯಾರಿಕೆಗೆ ₹300 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಇಫ್ಕೊ ಸೇರಿ ಐದು ಖಾಸಗಿ ಕಂಪನಿಗಳು ದೇಶದಲ್ಲಿ ನ್ಯಾನೊ ರಸಗೊಬ್ಬರ ತಯಾರಿಕೆಗೆ ಕಳೆದ ಐದು ವರ್ಷಗಳಲ್ಲಿ ₹300 ಕೋಟಿ ಬಂಡವಾಳ ಹೂಡಿಕೆ ಮಾಡಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಇಫ್ಕೊ, ಕೋರಮಂಡಲ್ ಇಂಟರ್‌ನ್ಯಾಷನಲ್, ಮೇಘಮಣಿ ಕಂಪನಿ, ಪ್ಯಾರದೀಪ್ ಫಾಸ್ಫೇಟ್ಸ್ ಮತ್ತು ರಾಯ್ ನ್ಯಾನೊ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರವು ನ್ಯಾನೊ ಗೊಬ್ಬರ ಉತ್ಪಾದನೆ ಮತ್ತು ಪ್ರಚಾರದಲ್ಲಿ ತೊಡಗಿವೆ ಎಂದು ತಿಳಿಸಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹198
ಆರ್‌ಎಸ್‌ಎಸ್-5 ₹193
ಗುಡ್ ಲಾಟ್ ₹185
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) - ₹275-620
ದ್ವಿತಳಿ (ಬಿ.ವಿ) - ₹312-712

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹470
12 ಕ್ಕೆ ₹63
ಮೈಸೂರು
100ಕ್ಕೆ ₹470

ಅವಳ ಸಾಧನೆ ಸಂಭ್ರಮ

ಪ್ರಜಾವಾಣಿ ಸಾಧಕಿಯರು

> ಕಸ ಸಂಗ್ರಹಿಸುವ 'ಸ್ವಚ್ಛ ವಾಹಿನಿ'ಯ ಚಾಲಕಿಯಾಗಿ ಮಾಡಿರುವ ಕೆಲಸವನ್ನು ಗುರುತಿಸಿದ್ದು ಅವಿಸ್ಮರಣೀಯ. ಇಂತಹ ಕೆಲಸವೂ ಪ್ರಶಸ್ತಿ ತಂದು ಕೊಟ್ಟಿರುವುದು ವಿಸ್ಮಯ ಮೂಡಿಸಿದೆ. 'ಪ್ರಜಾವಾಣಿ'ಯ ಸನ್ಮಾನವನ್ನು ಮರೆಯಲ್ಲ
> **ನಫೀಸಾ ಪೆರುವಾಯಿ,** ಗ್ರಾಮ ಪಂಚಾಯಿತಿ ಅಧ್ಯಕ್ಷೆ, 'ಸ್ವಚ್ಛತಾ ವಾಹಿನಿ' ಚಾಲಕಿ

> ಸಾಧನೆ ಇನ್ನೂ ತೃಪ್ತಿ ತಂದುಕೊಟ್ಟಿಲ್ಲ. ಈ ನಡುವೆಯೇ ನನ್ನನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಹೆಮ್ಮೆ ಮೂಡಿಸಿದೆ. ಇದರಿಂದ ಜವಾಬ್ದಾರಿ ಇನ್ನಷ್ಟು ಹೆಚ್ಚಿದೆ. ಇದಕ್ಕೆ 'ಪ್ರಜಾವಾಣಿ'ಗೆ ಚಿರಋಣಿ ಆಗಿದ್ದೇನೆ
> **ಜಯಶ್ರೀ ಗುಳಗಣ್ಣನವರ,** ಅಂಗವಿಕಲ ಬಿಲ್ಲುಗಾರ್ತಿ

> ಅದ್ಭುತ ಕೆಲಸ ಮಾಡುತ್ತಿರುವವರನ್ನು ಗುರುತಿಸಿದ್ದು ಸಂತಸ ಮೂಡಿಸಿದೆ. ಸಾಮಾಜಿಕ ಕಳಕಳಿ ಇಟ್ಟುಕೊಂಡಿರುವ ವ್ಯಕ್ತಿಗಳನ್ನು ಮಾದರಿಯಾಗಿ ಮುಂದಿಟ್ಟಿರುವುದರಿಂದ ಇತರರಿಗೂ ಸ್ಫೂರ್ತಿ ಆಗಲಿದೆ. ಸಮಾಜ ಸೇವೆ, ಸಾಧನೆಯ ಹುಮ್ಮಸ್ಸು ಮೂಡಿಸಿದೆ
> **ರೂಪಾ ಎಂ.ವಿ.,** ಬಾಹ್ಯಾಕಾಶ ವಿಜ್ಞಾನಿ

> ಪ್ರಶಸ್ತಿಯು ಸಾಧನೆಗೆ ಇನ್ನಷ್ಟು ಪ್ರೇರಣೆ ನೀಡಿದೆ. 'ಪ್ರಜಾವಾಣಿ'ಯ ಹಿರಿಮೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಆಸೆ ಇಮ್ಮಡಿಗೊಂಡಿದೆ. ಮುಂದಿನ ಜೀವನಕ್ಕೆ ಈ ಪ್ರಶಸ್ತಿಯೇ ಸ್ಫೂರ್ತಿಯಾಗಿದೆ
> **ರಕ್ಷಿತಾ ರಾಜು,** ಅಂಧ ಅಥ್ಲೀಟ್

> ಜೀತ ಪದ್ಧತಿಯಲ್ಲಿ ನಲುಗಿದ 'ಪಣಿಯನ್' ಬುಡಕಟ್ಟು ಸಮುದಾಯ ಇತ್ತೀಚೆಗೆ ಮುಖ್ಯವಾಹಿನಿಗೆ ಬರುತ್ತಿದೆ. ಜೀತ ಪದ್ಧತಿಯಿಂದ ಹೊರಬಂದು ಶಿಕ್ಷಣ ಪಡೆದುಕೊಳ್ಳುವುದು ಕಷ್ಟವಾಗಿತ್ತು. ಶಿಕ್ಷಣದ ಅರಿವು ಇಲ್ಲದ ಸಮುದಾಯದಲ್ಲಿ ಕೆಲಸ ಮಾಡುತ್ತಿರುವುದನ್ನು ಗುರುತಿಸಿದ್ದು ಹೆಮ್ಮೆ
> **ದಿವ್ಯಾ ಎಸ್.ಆರ್.,** ಪಣಿಯನ್ ಸಮುದಾಯದ ಮೊದಲ ಪಿಎಚ್‌ಡಿ ಪದವಿ ಪಡೆದವರು



> ಬಡಗಿ ಕೆಲಸದಲ್ಲಿ ತೊಡಗಿಕೊಂಡ ನನ್ನಂತಹ ಮಹಿಳೆಯನ್ನೂ ಗುರುತಿಸಿರುವುದು ಹೆಮ್ಮೆ ಮೂಡಿಸಿದೆ. ಮರದ ಕೆಲಸದಲ್ಲಿ ಮಹಿಳೆ ಕೂಡ ತೊಡಗಿಸಿಕೊಳ್ಳಬಹುದು ಎಂಬುದಕ್ಕೆ ಇದು ಸ್ಫೂರ್ತಿಯಾಗಿದೆ. ಪ್ರಶಸ್ತಿಯು ಸಮಾಜದಲ್ಲಿ ನನ್ನ ಗೌರವವನ್ನು ಹೆಚ್ಚಿಸಿದೆ
> **ಲಲಿತಾ ರಘುನಾಥ್,** ಬಡಗಿ, ಉದ್ಯಮಿ, ಸಮಾಜಸೇವಕಿ

> ಕೊರಗ ಸಮುದಾಯದಲ್ಲಿ ಮೊದಲ ಬಾರಿಗೆ ಉನ್ನತ ಶಿಕ್ಷಣ ಪಡೆದಿರುವ ನನ್ನನ್ನು ಮೊದಲು ಗುರುತಿಸಿದ್ದು 'ಪ್ರಜಾವಾಣಿ'. ಸಮುದಾಯದಲ್ಲಿ ಇನ್ನಷ್ಟು ಜಾಗೃತಿ ಮೂಡಿಸಬೇಕು. ಹೊಸ ತಲೆಮಾರಿನವರಿಗೆ ಶಿಕ್ಷಣ ಸಿಗಬೇಕು. ಕೊರಗ ಸಮುದಾಯದ ಬಗೆಗಿನ ಸಮಾಜದ ಅಭಿಪ್ರಾಯ ಕೂಡ ಬದಲಾಗಬೇಕು
> **ಸಬಿತಾ ಗುಂಡ್ಮಿ,** ಕೊರಗ ಸಮುದಾಯದ ಮೊದಲ ಸಹಾಯಕ ಪ್ರಾಧ್ಯಾಪಕಿ

> ಬುದ್ಧಿವಂತರ ಪತ್ರಿಕೆ ಎಂಬ ಹೆಗ್ಗಳಿಕೆ ಹೊಂದಿರುವ 'ಪ್ರಜಾವಾಣಿ'ಯ ಪ್ರಶಸ್ತಿ ಸಿಕ್ಕಿರುವುದಕ್ಕೆ ಹೆಮ್ಮೆಯಾಗಿದೆ. ಅರ್ಜಿ, ಶಿಫಾರಸು ಇಲ್ಲದೇ ಪ್ರಶಸ್ತಿ ಪಡೆಯುತ್ತಿರುವುದು ಹೆಚ್ಚು ಖುಷಿ ಕೊಟ್ಟಿದೆ. ಶಾಲಾ ವಿದ್ಯಾರ್ಥಿಗಳ ಕಾರಿನ ಚಾಲಕಿಯಾಗಿ ಮಾಡುತ್ತಿರುವ ಕೆಲಸವನ್ನು ನಾಡಿಗೆ ಪರಿಚಯಿಸಿದ್ದು ಸಂತೋಷ ಉಂಟುಮಾಡಿದೆ
> **ಜಲಜಾಕ್ಷಿ ಕೆ.ಡಿ.** 'ಅಕ್ಷರವಾಹಿನಿ' ಶಾಲಾ ವಾಹನದ ಚಾಲಕಿ

> ಇದೊಂದು ಅನಿರೀಕ್ಷಿತ ಸನ್ನಿವೇಶ. ಹೆಚ್ಚು ಖುಷಿಯಾಗಿದೆ. ಮೀನುಗಾರಿಕೆ ಮಾಡಲು ಮಹಿಳೆಯರಿಗೆ ಇದರಿಂದ ಸ್ಫೂರ್ತಿ ಸಿಕ್ಕರೆ ನನ್ನ ಕಾರ್ಯ ಸಾರ್ಥಕವಾಗುತ್ತದೆ. ಇಂತಹ ಧೈರ್ಯ ಇರುವ ಮಹಿಳೆಯರಿಗೆ ಬೆಂಬಲವಾಗಿ ಇರಲು ಬಯಸುತ್ತೇನೆ
> **ಪ್ರಾಪ್ತಿ ಮೆಂಡನ್,** ಸಾಂಪ್ರದಾಯಿಕ ದೋಣಿಯ ಮೀನುಗಾರ್ತಿ

ದಾವಣಗೆರೆಯಲ್ಲಿ ನಡೆದ **ಪ್ರಜಾವಾಣಿ ಸಾಧಕಿಯರು** 2025 ಕಾರ್ಯಕ್ರಮದಲ್ಲಿ ನಫೀಸಾ ಪೆರುವಾಯಿ, ಜಯಶ್ರೀ ಗುಳಗಣ್ಣನವರ, ರೂಪಾ.ಎಂ.ವಿ, ರಕ್ಷಿತಾ ರಾಜು, ದಿವ್ಯಾ ಎಸ್ ಆರ್, ಲಲಿತಾ ರಘುನಾಥ್, ಸಂಗಮ್ಮ ಸಾಣಕ ಪರವಾಗಿ ಅವರ ಸೊಸೆ ಶ್ರೀದೇವಿ, ಸಬಿತಾ ಗುಂಡ್ಮಿ, ಜಲಜಾಕ್ಷಿ ಕೆ.ಡಿ, ಪ್ರಾಪ್ತಿ ಮೆಂಡನ್ ಅವರಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಹಾಗೂ ಲೇಖಕಿ ಧರಣಿದೇವಿ ಮಾಲಗತ್ತಿ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಬಿಎಸ್‌ಸಿ ಮಾಲೀಕರಾದ ಬಿ.ಸಿ ಶಿವಕುಮಾರ್, ಲೇಖಕಿ ಬಾನು ಮುಷ್ತಾಕ್, ಮಹೇಶಪ್ಪ ಪಾಲ್ಗೊಂಡಿದ್ದರು

ಸಂಸದೆ ಡಾ.ಪ್ರಭಾ ಶ್ಲಾಘನೆ



ಕಾರ್ಯಕ್ರಮದ ಮುಖ್ಯಅತಿಥಿಯಾಗಿ ಭಾಗವಹಿಸಬೇಕಿದ್ದ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಆದರೂ ಕಾರ್ಯಕ್ರಮಕ್ಕೆ ಶುಭಕೋರಿ ಸಾಧಕಿಯರನ್ನು ಅಭಿನಂದಿಸಿ ಸಂದೇಶ ಕಳುಹಿಸಿದ್ದರು. ಅದರಲ್ಲಿ 'ಪ್ರಜಾವಾಣಿ' ಪತ್ರಿಕೆಯ ಇತಿಹಾಸ, ಮಹತ್ವ, ವಿಶ್ವಾಸಾರ್ಹತೆ ಹಾಗೂ ಎಲೆಮರೆಕಾಯಿಯಂತೆ ಇರುವವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದನ್ನು ಶ್ಲಾಘಿಸಿದರು.

ವಿಶ್ವಾಸದ ಅಲೆ ಎಬ್ಬಿಸಿದ ಛಲಗಾತಿಯರು...

ಭಾವುಕ ಕ್ಷಣಗಳಿಗೆ ಸಾಕ್ಷಿಯಾಯಿತು ಸಮಾರಂಭ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬೆಣ್ಣೆನಗರಿಯಲ್ಲಿ ಮಧ್ಯಾಹ್ನದ ಉರಿ ಬಿಸಿಲು ತಗ್ಗಿ ಮುಸ್ಸಂಜೆ ತಂಪೆರುವ ಹೊತ್ತಿಗೆ 'ಛಲಗಾತಿಯರ ಕತೆ'ಗಳು ಎಳೆಎಳೆಯಾಗಿ ತೆರೆದುಕೊಂಡವು. 'ಸಾಮಾನ್ಯ' ಮಹಿಳೆಯರ 'ಅಸಾಮಾನ್ಯ' ಹೆಜ್ಜೆ ಗುರುತುಗಳು ಸಭಾಂಗಣದಲ್ಲಿ ಸೇರಿದ್ದ ನೂರಾರು ಪ್ರೇಕ್ಷಕರನ್ನು ಭಾವುಕತೆಯ ಉತ್ತುಂಗಕ್ಕೆ ಕೊಂಡೊಯ್ದವು.

ರಾಜ್ಯದ ವಿವಿಧೆಡೆಯಿಂದ ಹೆಕ್ಕಿ ತೆಗೆದು ತಂದಿದ್ದ 10 ಜನ ಸಾಧಕಿಯರ ಸ್ಫೂರ್ತಿಯ ಸಂಗತಿಗಳು ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ರೋಮಾಂಚನ ಸೃಷ್ಟಿಸಿದವು. ಅವರು ಸಾಗಿಬಂದ ಸವಾಲು ಪ್ರೇಕ್ಷಕರ ಕಣ್ಣಾಲಿಗಳನ್ನು ತುಂಬಿಸಿತು. ಕಡುಕಷ್ಟಗಳನ್ನು ಮೀರಿ ಸಾಧನೆಯ ವೇದಿಕೆ ಹತ್ತಿ ನಿಂತ ಕ್ಷಣವು ಪ್ರಶಸ್ತಿ ಪುರಸ್ಕೃತರಲ್ಲೂ ಆನಂದ ಭಾಷ್ಪ ಉಕ್ಕಿಸಿತು.

ಊರ ಸ್ವಚ್ಛತೆಗಾಗಿ ತರಿಸಿದ್ದ ಕಸ ಸಂಗ್ರಹಿಸುವ ವಾಹನ ಓಡಿಸಲು ಚಾಲಕರೇ ಸಿಗದಿದ್ದಾಗ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆಯಾಗಿದ್ದ ನಫೀಸಾ ಅವರೇ ಸ್ಟೇರಿಂಗ್ ಹಿಡಿದು ಕೂತ ಕತೆ ಪ್ರೇಕ್ಷಕರ ಕಣ್ಣರಳಿಸಿತು. 'ಕಸದ ವಾಹನವಲ್ಲೋ ಅಣ್ಣ, ಅದು ಸ್ವಚ್ಛತೆಯ ತೇರು' ಎನ್ನುವ ಅವರ ಮಾತುಗಳು ಮಹಿಳಾ ಶಕ್ತಿಯನ್ನು ಅನಾವರಣಗೊಳಿಸಿತು.

ಕಣ್ಣಲ್ಲಿ ಬೆಳಕಿಲ್ಲದಿದ್ದರೂ ಕಾಲಿನಲ್ಲಿದ್ದ ಶಕ್ತಿಯನ್ನೇ ನಂಬಿ ಓಡಿದ, ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ರಕ್ಷಿತಾ ರಾಜು ಅವರ ಬದುಕು ವಿಶ್ವಾಸದ ಅಲೆ ಸೃಷ್ಟಿಸಿತು. ಪ್ರಶಸ್ತಿ ಸ್ವೀಕಾರ ಮುಗಿದರೂ ವೇದಿಕೆಯಿಂದ ಕೆಳಗಿಳಿಯದೇ ತಾನು ಮಾತನಾಡಲೇಬೇಕು ಎನ್ನುತ್ತಾ ಅವಕಾಶದ ಹಕ್ಕಿ ಎಂಬಂತೆ ಮೈಕ್ ಹಿಡಿದ ರಕ್ಷಿತಾ ಅವರ ಉತ್ಸಾಹ ವಿದ್ಯುತ್ ಸಂಚಾರದಂತೆ ಹರಡಿತು. ಸಾಧನೆಗೆ ಸಹಾಯ ಮಾಡಿದವರನ್ನು ಮನಸಾರೆ ಸ್ಮರಿಸಿದ ಅವರು ಕೃತಜ್ಞತೆಯ ಮಾತುಗಳನ್ನಾಡಿದರು. ಆಕೆಯ ಮಾತು ಕೇಳಿದ ಪ್ರೇಕ್ಷಕರು ಮೇಲೆದ್ದು ಕರತಾಡನದ ಮಳೆಗರೆದರು.

ಬರೀ ವೇದನೆಗಳನ್ನೇ ಮೈದುಂಬಿಕೊಂಡಿದ್ದ ಜಯಶ್ರೀ ಗುಳಗಣ್ಣನವರ ಅವರು ತಮ್ಮ ಕಷ್ಟ ಹೇಳಿಕೊಳ್ಳಲಿಲ್ಲ. 'ನನ್ನ ಬದುಕು ಮ್ಯೂಸಿಕ್ ಪ್ಲೇಯರ್ ಅಲ್ಲ, ಬರೀ ರೇಡಿಯೊ. ರೇಡಿಯೊದಲ್ಲಿ ಪ್ರಸಾರವಾದುದನ್ನು ಕೇಳಲೇಬೇಕು. ಹಾಗೆಯೇ ಬಂದಂತೆಯೇ ಬದುಕು' ಎನ್ನುತ್ತಾ ವಾಸ್ತವವನ್ನು ತೆರೆದಿಟ್ಟಾಗ ಕೇಳುವ ಮನಸ್ಸುಗಳು ಅಹುದಹುದು ಎಂದವು. 'ನನ್ನ ಕಷ್ಟ ಹೇಳಿದರೆ ನೀವು ಅಳುತ್ತೀರಿ, ಅದೆಲ್ಲಾ ಬೇಡವೇ ಬೇಡ, ಈ ಕ್ಷಣವನ್ನು ಅನುಭವಿಸುತ್ತೇನೆ' ಎನ್ನುವಾಗಲೂ ಪ್ರೇಕ್ಷಕರ ಕಣ್ಣಂಚು ಜಿನುಗಿತು.

ವಿಜ್ಞಾನಿ ಎಂ.ವಿ.ರೂಪಾ ಅವರು ಹೇಳಿದ 'ಇಸ್ರೋ ಕುಟುಂಬದ ಕತೆ' ನೋಡುಗರನ್ನು ಕುತೂಹಲದ ಲೋಕಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾಯಿತು. ಚಂದ್ರಯಾನ, ಮಂಗಳಯಾನ ಕಾರ್ಯಾಚರಣೆಯ ಕಾಲದಲ್ಲಿ ಬಸುರಿ, ಬಾಣಂತಿಯರಾಗಿದ್ದ ವಿಜ್ಞಾನಿಗಳು ತೋರಿದ ಕರ್ತವ್ಯ ಪ್ರಜ್ಞೆಯನ್ನು ತೆರೆದಿಟ್ಟಿತು. ನಿಗದಿತ ಕರ್ತವ್ಯ ಸಮಯಕ್ಕೆ ಸೀಮಿತಗೊಳ್ಳದ ಮಹಿಳಾ ವಿಜ್ಞಾನಿಗಳು ಹಗಲು–ರಾತ್ರಿ ತೊಡಗಿಸಿಕೊಂಡ ಪರಿ, ಹೆಣ್ಣು– ಗಂಡೆಂಬ ತಾರತಮ್ಯವಿಲ್ಲದ ಭಾವ, ಸಹೋದ್ಯೋಗಿಗಳ ಪರಸ್ಪರ ಸಹಾಯ ಎಲ್ಲವೂ ಮಹಿಳಾ ಶಕ್ತಿಯನ್ನು ಅನಾವರಣಗೊಳಿಸಿದವು.

ಮೀನುಗಾರಿಕೆಯ ದೋಣಿ ಏರಿ ನಿಂತ ಪ್ರಾಪ್ತಿ ಮೆಂಡನ್ ಅವರ ದೃಷ್ಟಿಕೋನ ಹೊಸ ದಾರಿ ತೋರಿಸಿತು. ಕಿತ್ತುತಿನ್ನುವ ಬಡತನದ ನಡುವೆಯೂ ಶಿಕ್ಷಣದ ಏಣಿ ಹತ್ತಿ ನಿಂತ ಪಣಿಯನ್ ಬುಡಕಟ್ಟು ಸಮುದಾಯದ ದಿವ್ಯಾ ಅವರ ಕತೆ ನೋಡುಗರಲ್ಲಿ 'ಹೆಮ್ಮೆಯ ಭಾವ' ತರಿಸಿತು. ಜಾತಿಯ ಸಂಕೋಲೆ ಕಳಚಿ ಕೊರಗ ಸಮುದಾಯಕ್ಕೆ ಶಕ್ತಿಯಾದ ಸಬಿತಾ ಗುಂಡ್ಮಿ ಅವರ ಕತೆಯೂ ಕೇಳುಗರ ಹೃದಯ ತುಂಬಿಸಿತು.

ಪ್ರಶಸ್ತಿ ಪ್ರದಾನ ಸಮಾರಂಭದ ನಡುವೆ ನಡೆದ 'ಹೊಸ ತಲೆಮಾರಿನ ಸ್ವತಂತ್ರ' ಮಹಿಳೆ ಸಂವಾದ ಮಹಿಳೆಯ ಅಸ್ತಿತ್ವದ ದರ್ಶನ ಮಾಡಿಸಿತು. ತಾರಕ್ ಡಾನ್ಸ್ ಅಕಾಡೆಮಿ ಕಲಾವಿದರು ಪ್ರದರ್ಶಿಸಿದ ನೃತ್ಯ ಮಗಳಾಗಿ, ಅಕ್ಕ– ತಂಗಿಯಾಗಿ, ಪತ್ನಿಯಾಗಿ, ತಾಯಿಯಾಗಿ ವಿವಿಧ ಪಾತ್ರ ನಿರ್ವಹಿಸುವ ಮಹಿಳಾ ಶಕ್ತಿಯನ್ನು ತೋರಿಸಿತು.

ನಫೀಸಾ ಪೆರುವಾಯಿ, ರಕ್ಷಿತಾ ರಾಜು ಹಾಗೂ ಕೆ.ಡಿ.ಜಲಜಾಕ್ಷಿ ಅವರಿಗೆ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಮತ್ತು ಬಿ.ಎಸ್.ಚನ್ನಬಸಪ್ಪ ಜವಳಿ ಮಳಿಗೆಯ ಮಾಲೀಕ ಬಿ.ಸಿ. ಶಿವಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ಜಯಶ್ರೀ ಗುಳಗಣ್ಣನವರ, ಎಂ.ವಿ.ರೂಪಾ ಹಾಗೂ ಪ್ರಾಪ್ತಿ ಮೆಂಡನ್ ಅವರಿಗೆ ಕಲಾವಿದೆ ಮಾಳವಿಕಾ ಅವಿನಾಶ್ ಮತ್ತು ಜಿ.ಎಂ. ವಿಶ್ವವಿದ್ಯಾಲಯದ ಸಹ ಕುಲಪತಿ ಪ್ರೊ. ಎಚ್.ಡಿ.ಮಹೇಶಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಸಂಗಮ್ಮ ಸಾಣಕ, ಲಲಿತಾ ರಘುನಾಥ್, ಸಬಿತಾ ಗುಂಡ್ಮಿ, ದಿವ್ಯಾ ಎಸ್.ಆರ್. ಅವರಿಗೆ ಐಪಿಎಸ್ ಅಧಿಕಾರಿ ಧರಣಿದೇವಿ ಮಾಲಗತ್ತಿ ಪ್ರದಾನ ಮಾಡಿದರು.

'ಸುಧಾ' ವಾರಪತ್ರಿಕೆಯ ಯುಗಾದಿ ವಿಶೇಷಾಂಕವನ್ನು ಲೇಖಕಿ ಬಾನು ಮುಷ್ತಾಕ್ ಬಿಡುಗಡೆ ಮಾಡಿದರು. ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಸ್ವಾಗತಿಸಿದರು. ಟಿಪಿಎಂಎಲ್ ಸಿಒಒ ಕಿರಣ್ ಸುಂದರರಾಜನ್, ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಬಿ.ಎ.ರವಿ, ಜಾಹೀರಾತು ವಿಭಾಗದ ನ್ಯಾಷನಲ್ ಸೇಲ್ಸ್ ಹೆಡ್ ಆನಂದ್ ಬಿಲ್ದಿಕರ್, ಡಿಜಿಎಂ ಅನಂತ್ ವಿ., 'ಪ್ರಜಾವಾಣಿ' ಸುದ್ದಿ ಸಂಪಾದಕ ಪ್ರವೀಣ ಕುಲಕರ್ಣಿ, ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಇದ್ದರು. ಆರ್.ಜೆ.ನಿಖಿತಾ ಕಾರ್ಯಕ್ರಮ ನಿರೂಪಿಸಿದರು. ❖

ಬಾಯಲ್ಲಿ ನೀರು ತರಿಸಿದ ಬೆಣ್ಣೆ ದೋಸೆ

'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ದಾವಣಗೆರೆಯ ವೈಶಿಷ್ಟ್ಯಗಳನ್ನು ಹೇಳುತ್ತಾ 'ಇದು ದಾನಿಗಳ ಊರು' ಎಂದಾಗ ದೇವನಗರಿಯ ಜನರ ಕಣ್ಣುಗಳು ಹೂವಿನಂತೆ ಅರಳಿದವು. ನಂತರ ಮಾತಿಗೆ ಬಂದ ನಟಿ ಮಾಳವಿಕಾ 'ದಾವಣಗೆರೆ ದಾನಿಗಳ ಊರು ಇರಬಹುದು, ಆದರೆ ನಮಗಿದು ಬೆಣ್ಣೆ ದೋಸೆಯ ತವರು' ಎಂದಾಗ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಜನರ ಬಾಯಿಯಲ್ಲಿ ನೀರು ಬಂತು.



ದಾವಣಗೆರೆಯಲ್ಲಿ ಪ್ರಜಾವಾಣಿ ಆಯೋಜಿಸಿದ್ದ ಸಾಧಕಿಯರು 2025 ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ



ನಟಿ ಮಾಳವಿಕಾ ಅವಿನಾಶ್

ಅಭಿನಂದನೆಗಳ ಮಹಾಪೂರ

ಕಾರ್ಯಕ್ರಮ ಮುಗಿದ ನಂತರವೂ ಮನೆಗೆ ತೆರಳದ ಜನರು ಸಾಧಕಿಯರನ್ನು ಮಾತನಾಡಿಸುತ್ತಾ, ಅವರ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಾ ಸಂಭ್ರಮಿಸಿದರು. ಅವರನ್ನು ಅಭಿನಂದಿಸಿ ಸಾಧನೆಯ ಹಾದಿಯನ್ನು ಮನಸಾರೆ ಮೆಚ್ಚಿಕೊಂಡರು. ಕಡೆಗೆ ಒಟ್ಟಿಗೆ ಕುಳಿತು ರಾತ್ರಿಯೂಟ ಸವಿದರು. ಅಭಿನಂದನೆಗಳ ಮಳೆ ಕಂಡ ಸಾಧಕಿಯರು ಕೂಡ ಆಶ್ಚರ್ಯ ಹಾಗೂ ಸಂತೋಷ ಅನುಭವಿಸಿದರು.

ಶನಿವಾರ ಸಾಧಕಿಯರ ಪರಿಚಯವನ್ನೊಳಗೊಂಡ 'ಅವಳ ಸಾಧನೆ ಸಂಭ್ರಮ' ವಿಶೇಷ ಪುಟಗಳು ಪ್ರಕಟವಾಗಿದ್ದ ಕಾರಣ ಅವರಿಗೆ ಬೆಳಿಗ್ಗೆಯಿಂದಲೂ ಅಭಿನಂದನೆಗಳ ಕರೆಗಳೇ ಬರುತ್ತಿದ್ದವು. 'ರಾಜ್ಯದ ಬೇರೆ ಬೇರೆ ಭಾಗಗಳಿಂದ, ಹೊರರಾಜ್ಯಗಳಿಂದಲೂ ಜನರು ಕರೆ ಮಾಡಿ ಅಭಿನಂದಿಸುತ್ತಿದ್ದಾರೆ. ಸನ್ಮಾನಕ್ಕೆ ಆಹ್ವಾನಿಸುತ್ತಿದ್ದಾರೆ' ಎನ್ನುವ ಮಾತುಗಳನ್ನು ಹಂಚಿಕೊಂಡರು. ಸಂಜೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜನರ ಮೆಚ್ಚುಗೆಯ ಮಾತುಗಳನ್ನು ಕೇಳಿ ಬೆರಗುಗೊಂಡರು.

ಮಹಿಳೆ ಆರೋಗ್ಯದ ದ್ಯೋತಕವೂ ಹೌದು...

'ಕೃಷಿಯಲ್ಲಿ ಮೊದಲು ತೊಡಗಿಸಿಕೊಂಡವಳು ಮಹಿಳೆ ಎಂಬ ಮಾತೊಂದಿದೆ. ಕೃಷಿ ಆಕೆಯ ಮೇಲ್ವಿಚಾರಣೆಯಲ್ಲಿದ್ದಾಗ ವಿಷಮಯ ಆಹಾರ ಇರಲಿಲ್ಲ. ಅಡುಗೆ ಮನೆಯಲ್ಲಿ ಚಾಕು, ಚೂರಿ, ಖಾರದ ಪುಡಿ, ಲಟ್ಟಣಿಗೆಯಂತಹ 'ಶಸ್ತ್ರಾಸ್ತ್ರ'ಗಳನ್ನು ಬಳಸಿ, ಹವಾಮಾನಕ್ಕೆ ತಕ್ಕಂತೆ ರುಚಿ ರುಚಿಯಾದ ಅಡುಗೆ ಮಾಡುತ್ತಾ ಎಲ್ಲರನ್ನೂ ಪೋಷಿಸಿಕೊಂಡು, ಬೆಳೆಸಿಕೊಂಡು ಬಂದವಳು ಮಹಿಳೆ' ಎಂದು ಸಂವಾದ ನಡೆಸಿಕೊಟ್ಟ ತರೀಕೆರೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಸಬಿತಾ ಬನ್ನಾಡಿ ಮಾರ್ಮಿಕವಾಗಿ ಹೇಳಿದರು.

'ಆಕೆಯ ಕೈಯಲ್ಲಿ ಅಡುಗೆ ಮನೆ ಇದ್ದಾಗ ಜಂಕ್ ಫುಡ್ ಇರಲಿಲ್ಲ. ಅಡುಗೆ ಇಂದು ಲಾಭದ ಉದ್ಯಮ ಆದ ತಕ್ಷಣ ಅದು ಗಂಡಿನ ಕೈಗೆ ಹೋಗಿದೆ. ಆತನ ಮೇಲ್ವಿಚಾರಣೆಯ ಕೃಷಿಯಲ್ಲಿ ಆಹಾರ ವಿಷಮಯವಾಗಿ ಮಾರ್ಪಟ್ಟಿದೆ. ಮಹಿಳೆಯ ಸ್ವಾತಂತ್ರ್ಯದಲ್ಲಿ ಜೀವಸಂಕುಲದ ಆರೋಗ್ಯವೂ ಅಡಗಿದೆ ಎಂಬುದರ ದ್ಯೋತಕವಿದು' ಎಂದರು.

ಹೆಣ್ಣು ಕೂಡ ಯೋಧೆ: ಬಾನು ಮುಷ್ತಾಕ್



ದಾವಣಗೆರೆ: 'ನಿತ್ಯ ಸಂಕಟ, ಸಂಕಷ್ಟ ಎದುರಿಸುತ್ತ, ಯುದ್ಧೋಪಾದಿಯಲ್ಲಿ ಕೆಲಸ ಮಾಡುವ ಮಹಿಳೆ ಕೂಡ ಒಂದರ್ಥದಲ್ಲಿ ಯೋಧೆ. ಅವಳ ದೈಹಿಕ ಮತ್ತು ಮಾನಸಿಕ ಹೋರಾಟದ ಪ್ರತೀಕವೇ ಸಾಧನೆ' ಎಂದು ಲೇಖಕಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

'ಹೆಣ್ಣಿನ ಸಾಧನೆಯನ್ನು ಸಮಾಜ ಗೌಣ ಮಾಡುತ್ತಾ ಬಂದಿದೆ. ಮಾನಸಿಕ ದಿಗ್ಬಂಧನ ವಿಧಿಸಿ ಮಹಿಳೆ ಹೊಸ್ತಿಲು ದಾಟದಂತೆ ಮಾಡಲಾಗಿತ್ತು. ಇದಕ್ಕೆ ಪೂರಕವಾದ ನಾಣ್ಣುಡಿ ಕೂಡ ಹಾಸುಹೊಕ್ಕಾಗಿವೆ. ಮಹಿಳೆಯನ್ನು ನಗಣ್ಯ ಮಾಡುವ ತಂತ್ರಗಾರಿಕೆಯೂ ಸಮಾಜದಲ್ಲಿದೆ. ಇದನ್ನು ಮೀರಿ ಸಾಧನೆ ಮಾಡಿದ್ದು ನಿಜಕ್ಕೂ ಶ್ಲಾಘನೀಯ' ಎಂದು ಹೇಳಿದರು.

'ಮಲ್ಟಿ ಟಾಸ್ಕಿಂಗ್ ಮಾಡುವ ಶಕ್ತಿ, ಸಾಮರ್ಥ್ಯ ಇರುವುದು ಮಹಿಳೆಗೆ ಮಾತ್ರ. ಪಾರಿತೋಷಕ ಪಡೆಯುವ ಅದಮ್ಯ ಶಕ್ತಿಯೂ ಅವಳಲ್ಲಿದೆ. ಇವರನ್ನು ಗುರುತಿಸುವ ಕೆಲಸ ಮಾಡಿರುವ 'ಪ್ರಜಾವಾಣಿ' ಕಾರ್ಯ ಮೆಚ್ಚುಗೆಗೆ ಪಾತ್ರವಾಗಿದೆ. ಇದು ಮಹಿಳೆಯ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣವಾಗಲಿ. ಮಹಿಳೆಯ ಸಾಧನೆಯನ್ನು ಕುಟುಂಬ, ಸಮುದಾಯ, ಸಮಾಜ ಸಂಭ್ರಮಿಸುತ್ತಿದೆ. ಮಹಿಳೆಯರ ಪರಿಶ್ರಮ, ನೋವು, ಕಣ್ಣೀರು, ಪ್ರತಿಫಲಕ್ಕೆ ಅವರ ಜೊತೆಗೆ ಇದ್ದೇವೆ' ಎಂದು ತಿಳಿಸಿದರು.

> ಸಾಧಕಿಯರ ಪ್ರಶಸ್ತಿಗೆ ಸಮಿತಿಯ ಮುಂದೆ 30 ಶಿಫಾರಸುಗಳು ಬಂದಿದ್ದವು. ಸಾಧನೆ ತೋರಿದ ಮಹಿಳೆಯ ಹಿನ್ನೆಲೆ, ಪರಿಸ್ಥಿತಿ, ಕಾರ್ಯದ ಸಾಧಕ–ಬಾಧಕ ಗಮನಿಸಿ ಅಂಕಗಳನ್ನು ನೀಡಿದೆವು
> **ರತ್ನಕಲಾ,** ನಿವೃತ್ತ ನ್ಯಾಯಮೂರ್ತಿ

> ನೈಜ ಸಾಧಕರನ್ನು ಆಯ್ಕೆ ಮಾಡುವುದು ಸವಾಲಿನ ಕೆಲಸವಾಗಿತ್ತು. ಆರ್ಥಿಕ, ಸಾಮಾಜಿಕ ಸ್ತರಗಳನ್ನು ಗಮನಿಸಿ ಆಯ್ಕೆಗೆ ಮಾನದಂಡ ರೂಪಿಸಿದೆವು. ಬದುಕಿನಲ್ಲಿ ಕಷ್ಟಪಟ್ಟು ಮೇಲೆ ಬಂದು ಸಾಧನೆ ತೋರಿದವರಿಗೆ ಆದ್ಯತೆ ಸಿಕ್ಕಿದೆ.
> **ಧರಣಿದೇವಿ ಮಾಲಗತ್ತಿ,** ಐಪಿಎಸ್ ಅಧಿಕಾರಿ

> ಜನಪ್ರಿಯತೆ ಗಳಿಸಿದವರಿಗೆ ಮಾತ್ರವೇ ಗೌರವ, ಸನ್ಮಾನ ಸಿಗುತ್ತದೆ. ಎಲೆಮರೆಯ ಕಾಯಿಗಳನ್ನು ಗುರುತಿಸುವ ಅವಕಾಶ ಸಿಕ್ಕಿದ್ದಕ್ಕೆ 'ಪ್ರಜಾವಾಣಿ'ಗೆ ಆಭಾರಿಯಾಗಿದ್ದೇನೆ. ಎಲ್ಲ ಕ್ಷೇತ್ರ, ಸ್ಥಳಗಳನ್ನು ಆಧರಿಸಿ ಸಾಧಕಿಯರನ್ನು ಆಯ್ಕೆ ಮಾಡಿದ್ದೇವೆ
> **ಮಾಳವಿಕಾ ಅವಿನಾಶ್,** ನಟಿ

ಬೆಳೆಯುವ ಅಸೀಮತೆಯೇ ಹೆಣ್ಣಿನ ನೈಜ ಸ್ವಾತಂತ್ರ್ಯ

'ಹೊಸ ಕಾಲದ ಸ್ವತಂತ್ರ ಮಹಿಳೆ' ಕುರಿತ ಸಂವಾದ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಹುಟ್ಟಿದ್ದೆಲ್ಲವೂ ವಿಕಾಸವಾಗುವ ಅಸೀಮ ಸಾಧ್ಯತೆಯೇ ಸ್ವಾತಂತ್ರ್ಯ. ಆ ಹಾದಿಯಲ್ಲಿ ವ್ಯವಸ್ಥೆ ನಿರ್ಮಿಸಿದ ಎಲ್ಲಾ ಸಂಕೋಲೆ, ಪ್ರತಿಕೂಲ ಪರಿಸ್ಥಿತಿಯನ್ನು ತನ್ನ ಆತ್ಮಶಕ್ತಿಯಿಂದ ದಾಟುತ್ತಾ ಬೆಳೆಯುವ ಅಸೀಮತೆಯೇ ಹೆಣ್ಣಿನ ನೈಜ ಸ್ವಾತಂತ್ರ್ಯ' ಎಂದು ತುಮಕೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಗೀತಾ ವಸಂತ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ 'ಪ್ರಜಾವಾಣಿ' ಸಾಧಕಿಯರಿಗಾಗಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಹೊಸ ಕಾಲದ ಸ್ವತಂತ್ರ ಮಹಿಳೆ' ಕುರಿತ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು.

'ಹೆಣ್ಣು ತಾನು ಬೆಳೆಯುವ ಸಾಧ್ಯತೆಯನ್ನು ಕಳೆದುಕೊಳ್ಳದಿರುವುದು, ಅದನ್ನು ದಕ್ಕಿಸಿಕೊಳ್ಳುವುದೇ ವಾಸ್ತವವಾಗಿ ಆಕೆಯ ಧೀಶಕ್ತಿ. ತನ್ನ ದೇಹ, ಮನಸ್ಸು ಹೇಗಿರಬೇಕು ಎಂದು ನಿರ್ಣಯಿಸುವುದು ಹೆಣ್ಣಿನ ಅರಿವು. ಅದನ್ನು ಕಂಡುಕೊಳ್ಳುವ ಹಾದಿ ಮುಕ್ತವಾಗಿ ತೆರೆದುಕೊಳ್ಳುವುದೇ ವಿಕಾಸದ ಮಾದರಿ' ಎಂದರು.

'ಶೌಚಾಲಯ, ಅಡುಗೆ ಮನೆಯೂ ಇಲ್ಲದ, ಕನಸು ಕಾಣಲು ಆಗದ ಸ್ಥಿತಿಯಿಂದ ಬಂದ ಮಹಿಳೆಯರು ಸಾಧನೆಯ ಹಾದಿಯಲ್ಲಿ ಸಾಗುವಾಗ ತಮ್ಮ ಮುಂದೆ ಏನೇನು ಸವಾಲುಗಳಿವೆ ಎಂಬುದನ್ನು ತಳಮೂಲದಿಂದ ಅರ್ಥಮಾಡಿಕೊಳ್ಳಬೇಕು. ಆ ಮೂಲಕ ತಾನೊಂದು ಸಮುದಾಯವಾಗಿ ಹೊರಹೊಮ್ಮಬೇಕು' ಎಂದರು.

'ಮೊದಲಿನ ಪೀಳಿಗೆಯೊಂದಿಗೆ ತೌಲನಿಕವಾಗಿ ನೋಡಿದಾಗ, ಹೊಸ ತಲೆಮಾರಿನ ಹೆಣ್ಣು ಅಸ್ತಿತ್ವ, ಅಸ್ಮಿತೆ ಕಂಡುಕೊಳ್ಳುವಲ್ಲಿ ತನ್ನ ಮೇಲೆ ಹೇರಲ್ಪಟ್ಟ ಎಲ್ಲಾ ಪ್ರತಿಮಾದರ್ಶವನ್ನು ಮುರಿಯುತ್ತಾ ಹೋಗುತ್ತಿದ್ದಾಳೆ. ತನ್ನ ಜೀವನವನ್ನು ಕಟ್ಟಿಕೊಳ್ಳುವಲ್ಲಿ ಪ್ರಯತ್ನಶಾಲಿಯಾಗಿ ಹೊರಹೊಮ್ಮುತ್ತಿದ್ದಾಳೆ' ಎಂಬುದು ದಾವಣಗೆರೆಯ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕಿ ಜಿ.ಕಾವ್ಯಶ್ರೀ ಅವರ ಅಭಿಮತ.

'ನಾನು ಮಧ್ಯದ ತಲೆಮಾರಿನವಳು' ಎಂದು ಮಾತು ಆರಂಭಿಸಿದ ವೈದ್ಯೆ ಪೂರ್ಣಿಮಾ ಪಾಟೀಲ್, 'ಹೆಣ್ಣಿಗೆ ಸ್ವಾತಂತ್ರ್ಯ ಹುಟ್ಟಿನಿಂದಲೇ ಇದ್ದೇ ಇದೆ. ಅದನ್ನು ಬಳಸಿಕೊಳ್ಳುವುದು ಬಿಡುವುದು ಆಕೆಯ ಕೈಯಲ್ಲಿಯೇ ಇದೆ. ತ್ಯಾಗ ಹಾಗೂ ಹೊಂದಾಣಿಕೆ ಎಂಬ ಹೆಸರು ಕೊಟ್ಟುಕೊಂಡು ಸ್ವಯಂಕೃತ ತಪ್ಪಿನಿಂದಲೇ ಆಕೆ ತನ್ನನ್ನು ಚೌಕಟ್ಟಿನಲ್ಲಿಯೇ ರೂಪಿಸಿಕೊಳ್ಳುತ್ತಾಳೆ. ನನ್ನ ಕಾಯಿಲೆಗೆ ಚಿಕಿತ್ಸೆಯನ್ನು ಪತಿಯೇ ನಿರ್ಧರಿಸಲಿ ಎಂದು ಬಯಸುವ ಹಿಂದಿನ ಪೀಳಿಗೆಯ ಹೆಣ್ಣುಮಕ್ಕಳ ಜೊತೆಗೆ ತನಗೆ ಅಗತ್ಯವಿರುವ ಚಿಕಿತ್ಸೆಯ ಬಗ್ಗೆ ತಾನೇ ನಿರ್ಧಾರ ಕೈಗೊಳ್ಳುವ ಹೊಸ ಪೀಳಿಗೆಯನ್ನು ವೈದ್ಯೆಯಾಗಿ ಇಂದು ಕಾಣುತ್ತಿದ್ದೇನೆ' ಎಂದರು.

'ಆಡಳಿತ ಇಲ್ಲವೇ ಅಧಿಕಾರವನ್ನು ಬರೀ ಚಲಾಯಿಸುವುದೇ ಅಲ್ಲ. ಎಲ್ಲರನ್ನೂ ಒಳಗೊಳ್ಳುತ್ತಾ ಹೋಗುವುದೇ ಆಗಿದೆ. ಆದರೆ ಈ ಹಾದಿಯಲ್ಲಿ ತಾನು ಸಮರ್ಥಳು ಎಂಬುದನ್ನು ಹೆಣ್ಣು ಆಗಾಗ ನಿರೂಪಿಸುತ್ತಾ ಸಾಗಬೇಕಿದೆ. ಅದರಿಂದ ಹೊರಬರಲು ಹೆಣ್ಣು ಅದೇ ಹಳೆಯ ಮಾದರಿ ಅನುಸರಿಸುತ್ತಾ ವಿಫಲವಾಗುವ ಬದಲು ಆಡಳಿತದಲ್ಲಿ ಹೊಸ ಮಾದರಿ ಸೃಷ್ಟಿಸುವ ದೊಡ್ಡ ಸವಾಲನ್ನು ನಿಭಾಯಿಸಬೇಕಿದೆ. ಆದರೆ ಇಂದು ದೊಡ್ಡ ಆತ್ಮವಿಶ್ವಾಸದಿಂದ ಮಹಿಳೆ ಮುನ್ನುಗ್ಗುತ್ತಿದ್ದಾಳೆ. ಇದು ಸಕಾರಾತ್ಮಕ ಸಂಗತಿ' ಎಂದು ದಾವಣಗೆರೆಯ ಜಿ.ಎಂ. ವಿಶ್ವವಿದ್ಯಾಲಯದ ಡೀನ್ ಪ್ರೊ.ಶ್ವೇತಾ ಮರಿಗೌಡರ್ ಹೇಳಿದರು. ❖

ದಾವಣಗೆರೆಯಲ್ಲಿ ನಡೆದ 'ಪ್ರಜಾವಾಣಿ ಸಾಧಕಿಯರು' ಕಾರ್ಯಕ್ರಮದಲ್ಲಿ ಡಾ. ಜಿ.ಕಾವ್ಯಾಶ್ರೀ, ಲೇಖಕಿ ಗೀತಾ ವಸಂತ್, ಸಬಿತಾ ಬನ್ನಾಡಿ, ನೇತ್ರ ತಜ್ಞರಾದ ಡಾ. ಪೂರ್ಣಿಮಾ ಪಾಟೀಲ್, ಜಿ.ಎಂ ವಿಶ್ವವಿದ್ಯಾಲಯದ ಡೀನ್ ಶ್ವೇತಾ ಮರಿಗೌಡರ್ ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರಗಳು



ಬಲಹೀನರ ತುಳಿದು ನಿಯಂತ್ರಿಸುವ ತಂತ್ರಗಾರಿಕೆ • ಲೇಖಕಿಯರ ಸಮ್ಮೇಳನದ ಅಧ್ಯಕ್ಷೆ ಎಚ್.ಎಸ್.ಶ್ರೀಮತಿ ವ್ಯಾಖ್ಯಾನ

‘ಪಿತೃಪ್ರಧಾನ ವ್ಯವಸ್ಥೆ ಅಧಿಕಾರದ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿತೃ ಪ್ರಧಾನ ವ್ಯವಸ್ಥೆಯನ್ನು ಹೇರುವ ಸಾಮಾಜಿಕ ಚಹರೆಯು ಅಧಿಕಾರ ಮತ್ತು ಅಧೀನತೆಯ ಮಾದರಿಯದಾಗಿದೆ. ಬಲಾಢ್ಯರು ಬಲಹೀನರನ್ನು ತುಳಿದು, ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ತಂತ್ರಗಾರಿಕೆಯಾಗಿದೆ’ ಎಂದು ಲೇಖಕಿ ಎಚ್.ಎಸ್.ಶ್ರೀಮತಿ ಶನಿವಾರ ಪ್ರತಿಪಾದಿಸಿದರು.

ಕರ್ನಾಟಕ ಲೇಖಕಿಯರ ಸಂಘ ನಗರದಲ್ಲಿ ಏರ್ಪಡಿಸಿದ್ದ ‘ಎಂಟನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ’ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಅರಿವೆಂಬುದು ಬಿಡುಗಡೆ’ ಎಂಬ ಸಮ್ಮೇಳನದ ಆಶಯ ನುಡಿಯನ್ನೇ ಕೇಂದ್ರವಾಗಿರಿಸಿ ಮಾತುಗಳನ್ನು ವಿಸ್ತರಿಸಿದ ಅವರು, ‘ಪಿತೃಪ್ರಧಾನ ವ್ಯವಸ್ಥೆ ರೂಪಿಸಿರುವ ಮಾದರಿಯು ಮಹಿಳೆಯರಲ್ಲಿ ಸೃಷ್ಟಿಸಿರುವ ಸಾಮಾಜಿಕ ತೊಳಲಾಟವನ್ನು ಮೀರುವ ಬಗೆ, ಸ್ತ್ರೀವಾದದ ವಿಶಾಲ ನೆಲೆ ಹೇಗಿರಬೇಕು’ ಎಂದು ವಿಶ್ಲೇಷಿಸಿದರು.

12 ವರ್ಷದ ಬಳಿಕ ನಡೆಯುತ್ತಿರುವ ಸಮ್ಮೇಳನದ ಬಗ್ಗೆ ಶ್ಲಾಘಿಸುತ್ತಲೇ ಮಾತು ಆರಂಭಿಸಿದ ಅವರು, ‘ಸ್ವಂತದ ಚಹರೆಯ ಅರಿವಿನಿಂದಲೇ ನಮ್ಮ ಅರಿವಿನ ಪಯಣ ಮೊದಲಾಗಬೇಕು.

> **ಮನುಷ್ಯರನ್ನು ಬದಲಾಯಿಸುವ ಶಕ್ತಿ ಬರವಣಿಗೆಗೆ ಇದೆ. ಪುರುಷರ ಯಶಸ್ಸಿನ ಹಿಂದೆ ಮಹಿಳೆಯರಿದ್ದಾರೆ. ಮುಂದಿನ ಸಮ್ಮೇಳನವನ್ನು ಗಡಿಭಾಗದಲ್ಲಿ ನಡೆಸಿ**
> **ಸೋಮಣ್ಣ ಬೇವಿನಮರದ,** ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

> **ರಾಜಕೀಯದಿಂದಾಗಿ ಮಹಿಳೆ ಸುರಕ್ಷಿತವಾಗಿ ಇರಲಾಗುತ್ತಿಲ್ಲ. ಆಕೆಗೆ ಒಂದೆಡೆ ಅವಕಾಶ ತೆರೆದುಕೊಂಡರೆ, ಇನ್ನೊಂದೆಡೆ ಅಸ್ತಿತ್ವವೇ ಇರದಂತೆ ಮಾಡುವ ಹಿಂಸೆ ನಡೆಯುತ್ತಿದೆ**
> **ರಾಜೇಂದ್ರ ಚೆನ್ನಿ,** ವಿಮರ್ಶಕ

ಇಲ್ಲವಾದರೆ ನಮ್ಮ ಅರಿವು ಬೌದ್ಧಿಕ ನೆಲೆಗೆ ತಲುಪಬಹುದೇ ಹೊರತು, ಬದುಕಿನ ಭಾಗವಾಗಿ ಉಳಿಯದು’ ಎಂದು ಎಚ್ಚರಿಸಿದರು.

‘ಸಾಮಾಜಿಕ ಚಹರೆ ಎಂಬುದು ಆಳ್ವಿಕೆಯ ಪ್ರಾಬಲ್ಯಕ್ಕಾಗಿ ಜಾರಿಗೊಳಿಸಿದ ಒಂದು ರಾಜಕಾರಣ ಹಾಗೂ ತಂತ್ರಗಾರಿಕೆ. ಮನುಷ್ಯ ಚರಿತ್ರೆಯ ಒಂದು ಹಂತದಲ್ಲಿ ಪಿತೃಪ್ರಧಾನ ವ್ಯವಸ್ಥೆಯು ಪ್ರಭಾವಶಾಲಿಯಾಗಿ ನೆಲಸಿದ ಮೇಲೆ ಸಾಮಾಜಿಕ ಚಹರೆ ಎಂಬ ಈ ತಂತ್ರಗಾರಿಕೆಯು ನಮ್ಮೆಲ್ಲರ ಮೇಲೂ ಅಧಿಕಾರ ಸ್ಥಾಪಿಸಿಬಿಟ್ಟಿದೆ’ ಎಂದರು.



ಸಮ್ಮೇಳನಾಧ್ಯಕ್ಷೆ ಎಚ್.ಎಸ್.ಶ್ರೀಮತಿ ಅವರನ್ನು ಜಾನಪದ ಕಲಾ ತಂಡಗಳ ಮೆರವಣಿಗೆಯ ಮೂಲಕ ಲೇಖಕಿಯರ ಸಂಘದ ಪದಾಧಿಕಾರಿಗಳು ಬರಮಾಡಿಕೊಂಡರು —ಪ್ರಜಾವಾಣಿ ಚಿತ್ರ

‘ಪಿತೃಪ್ರಧಾನ ವ್ಯವಸ್ಥೆ ಅಂದರೆ ಅಪ್ಪನೇ ಮುಖ್ಯಸ್ಥನೆಂದು ಬಿಂಬಿಸಲಾಗಿದೆ. ವಂಶದ ಕಲ್ಪನೆಯಲ್ಲಿ ಗಂಡು ಮಕ್ಕಳನ್ನು ಬೆಳೆಸಲಾಗುತ್ತಿದೆ. ಮನೆಯಲ್ಲಿ ಹುಟ್ಟಿದ ಮಗಳು ವಂಶವಲ್ಲವೆ’ ಎಂದು ಶ್ರೀಮತಿ ಪ್ರಶ್ನಿಸಿದರು.

‘ಮನೆ, ಸಂಬಂಧ, ಸಾರ್ವಜನಿಕ ವಲಯ, ಕೊನೆಗೆ ಸಂತೆ ಮಾರುಕಟ್ಟೆಗಳಲ್ಲೂ ಹೆಣ್ಣು ಗಂಡು ನಡುವೆ ಅಧಿಕಾರ–ಅಧೀನತೆಯ ಸಂಬಂಧಗಳೇ ಕಾಣುತ್ತವೆ. ನಮ್ಮ ಸಾಮಾಜಿಕ ಚಿಂತನೆ, ಪಿತೃಪ್ರಧಾನದ ಸಮೀಕರಣ ಬದಲಾಗಬೇಕು. ಸ್ತ್ರೀವಾದವು ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಬೇಕು ಎನ್ನುತ್ತದೆ. ಆದ್ದರಿಂದ ಪಿತೃಪ್ರಧಾನ ಕಲಿಸಿದ ಸಾಮಾಜೀಕರಣದ ಪಾಠಗಳನ್ನು ಮರೆತು, ಅದರಿಂದ ಹೊರಬರಬೇಕು. ಹಿರಿಯರು ಅನುಭವಗಳನ್ನು ಹೊಸ ತಲೆಮಾರಿನವರ ಜೊತೆ ಹಂಚಿಕೊಳ್ಳುವ ಮೂಲಕ ದಾರಿ ತೋರಿಸಬೇಕು’ ಎಂದು ಸಲಹೆ ಮಾಡಿದರು.

ಇದಕ್ಕೂ ಮೊದಲು ಜಾನಪದ ಕಲಾ ತಂಡಗಳ ಮೆರವಣಿಗೆ ಮೂಲಕ ಸಮ್ಮೇಳನಾಧ್ಯಕ್ಷೆ ಶ್ರೀಮತಿ ಅವರನ್ನು ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ಕಾರ್ಯದರ್ಶಿ ಭಾರತಿ ಹೆಗಡೆ, ಪದಾಧಿಕಾರಿಗಳು ಬರಮಾಡಿಕೊಂಡರು.

‘ಪುರುಷರು ನಮ್ಮ ಶತ್ರುಗಳಲ್ಲ’

‘ಪುರುಷರು ಕೂಡಾ ತಮ್ಮ ಸ್ವಂತ ಚಹರೆಯ ಗೊಂದಲದಲ್ಲಿ ಇದ್ದಾರೆ. ನಾವು ವ್ಯವಸ್ಥೆಯ ವಿರುದ್ಧ ಇದ್ದೇವೆಯೇ ಹೊರತು, ಪುರುಷರ ವಿರುದ್ಧವಲ್ಲ. ಸ್ತ್ರೀಯರ ಮೇಲೆ ಆಕ್ರಮಣ, ದಬ್ಬಾಳಿಕೆ, ಹಿಂಸೆ ಮತ್ತು ದೌರ್ಜನ್ಯವನ್ನು ನಡೆಸುವುದಿಲ್ಲ ಎಂಬ ತೀರ್ಮಾನವನ್ನು ಪುರುಷರು ಕೈಗೊಳ್ಳಬೇಕು. ಸ್ತ್ರೀಯರ ಜೀವನದಲ್ಲಿ ಪ್ರೀತಿಯನ್ನು ತುಂಬಬೇಕು’ ಎಂದು ಎಚ್.ಎಸ್.ಶ್ರೀಮತಿ ಹೇಳಿದರು.

‘ಅನ್ಯ ವಿಷಯ ತಜ್ಞರಿಂದ ಕನ್ನಡ ಪಠ್ಯ ಬೋಧನೆಗೆ ಆಕ್ಷೇಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಪಠ್ಯವನ್ನು ಅನ್ಯವಿಷಯ ತಜ್ಞರು ಬೋಧಿಸುತ್ತಿರುವುದು ವೃತ್ತಿ ಶಿಕ್ಷಣದಲ್ಲಿ ಕನ್ನಡದ ಉಳಿವಿಗೆ ಮಾರಕ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರಿಗೆ ಪತ್ರ ಬರೆದಿರುವ ಅವರು, ‘ವಿಶ್ವ-ವಿದ್ಯಾಲಯ ವ್ಯಾಪ್ತಿಯ ಎಲ್ಲ ಕಾಲೇಜುಗಳಲ್ಲಿ ಕನ್ನಡ ಪಠ್ಯ ಬೋಧನೆಗೆ ಕನ್ನಡ ವಿಷಯತಜ್ಞರನ್ನೇ ಬಳಸಿಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ವೃತ್ತಿ ಶಿಕ್ಷಣದಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವಂತೆ ಕನ್ನಡ ಅಭಿವೃದ್ಧಿ ಪ್ರಾಧಿ ಕಾರವು2015ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿ, ವಿಶ್ವವಿ-ದ್ಯಾಲಯಗಳಿಗೆ ಕನ್ನಡ ಬೋಧನೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸಲಹೆ ನೀಡಿತ್ತು. ವರದಿ ಪೂರ್ವದಲ್ಲಿ ಎಲ್ಲ ವೃತ್ತಿಪರ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಅಧ್ಯಯನ ನಡೆಸಿತ್ತು’ ಎಂದಿದ್ದಾರೆ.



ಪುರುಷೋತ್ತಮ ಬಿಳಿಮಲೆ

‘ಈ ಕಲಿಕಾ ಶಿಸ್ತು ಗ್ರಾಮೀಣ ಪ್ರದೇಶ ಮತ್ತು ಜನಸಾಮಾನ್ಯರಿಗೆ ಸಂಬಂಧಿಸಿದ ವಿಷಯವಾಗಿರುವ ಕಾರಣ, ಕನ್ನಡ ಪಠ್ಯ ರಚನೆ ಮತ್ತು ಬೋಧನೆ ಅಗತ್ಯವಿದೆ ಎನ್ನುವ ಅಂಶವನ್ನು ಪ್ರಾಧಿಕಾರ ದಾಖಲಿಸಿತ್ತು. ನಂತರದ ದಿನಗಳಲ್ಲಿ ರಾಜ್ಯ ಸರ್ಕಾರವು ಪ್ರಾಧಿಕಾರದ ಶಿಫಾರಸನ್ನು ಪರಿಗಣಿಸಿ, ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯ ವಿಷಯಗಳ ಬೋಧನೆಗೆ ಆದೇಶ ಹೊರಡಿಸಿದೆ’ ಎಂದು ಸ್ಮರಿಸಿದ್ದಾರೆ.

‘ಕನ್ನಡೇತರ ಮತ್ತು ಕನ್ನಡಿಗ ವಿದ್ಯಾರ್ಥಿಗಳ ಕನ್ನಡ ಭಾಷಾ ಪ್ರೌಢಿಮೆಯನ್ನು ಖಚಿತಪಡಿಸಿಕೊಳ್ಳಲು ಅಳವಡಿಸಲಾಗಿರುವ ಪಠ್ಯಕ್ರಮದ ಬೋಧನೆಗೆ ಕನ್ನಡ ಭಾಷಾ ಬೋಧಕರ ಅವಶ್ಯಕತೆಯಿದೆ. ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಭಾಷಾ ಬೋಧಕರ ನೇಮಕಾತಿಯಾಗಿಲ್ಲ. ಇದು ಭಾಷಾ ವಿಷಯಗಳ ಬೋಧನೆಯ ಬಗ್ಗೆ ಶಿಕ್ಷಣ ಸಂಸ್ಥೆಗಳಿಗೆ ಇರುವ ಅನಾದರವನ್ನು ಅಭಿವ್ಯಕ್ತಿಸುತ್ತದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಂದ್ ನೀರಸ: ಪ್ರತಿಭಟನೆಗೆ ಸೀಮಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್ಆರ್‌ಟಿಸಿ ಬಸ್ ಚಾಲಕ, ನಿರ್ವಾಹಕರ ಮೇಲೆ ಮಹಾರಾಷ್ಟ್ರದ ಶಿವಸೇನೆ ಮತ್ತು ಎಂಇಎಸ್ ಕಾರ್ಯಕರ್ತರ ದೌರ್ಜನ್ಯ ಖಂಡಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಜನರು ಸ್ಪಂದಿಸಿಲ್ಲ.

ವಾಟಾಳ್ ನಾಗರಾಜ್ ಮತ್ತಿತರರು ಕರೆ ನೀಡಿದ್ದ ಬಂದ್‌ಗೆ ಇತರ ಕನ್ನಡಪರ ಸಂಘಟನೆಗಳು ನೈತಿಕ ಬೆಂಬಲ ಸೂಚಿಸಿದ್ದವು. ರಾಜ್ಯದ ಯಾವುದೇ ಸ್ಥಳಗಳಲ್ಲಿ ಬಂದ್ ಆಗಿಲ್ಲ. ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತ, ಮೆಜೆಸ್ಟಿಕ್ ಬಸ್ ನಿಲ್ದಾಣ, ಪುರಭವನದ ಬಳಿ ಸಣ್ಣ ಮಟ್ಟದ ಪ್ರತಿಭಟನೆಗಳು ನಡೆದವು.

ಮೈಸೂರು, ಮಂಡ್ಯ, ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೈಕ್‌ರ‍್ಯಾಲಿ ನಡೆಸಿ, ಅಂಗಡಿ ಮುಚ್ಚಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ಉಳಿದಂತೆ ವಿವಿಧೆಡೆ ಎಂಇಎಸ್, ಶಿವಸೇನಾ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆದಿವೆ.



ಬೆಳಗಾವಿ ನಗರ ಬಸ್ ನಿಲ್ದಾಣಕ್ಕೆ ಶನಿವಾರ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಪ್ರಯಾಣಿಕರು ಬಸ್‌ಗಾಗಿ ಕಾಯುತ್ತ ನಿಂತಿದ್ದರು ಚಿತ್ರ: ಏಕನಾಥ ಅಗಸಿಮನಿ

ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ ಬಂದ್‌ನ ಯಾವುದೇ ಲಕ್ಷಣಗಳು ಕಂಡು ಬರಲಿಲ್ಲ. ಜನಜೀವನ ಎಂದಿನಂತಿತ್ತು. ಬಂದ್‌ಗೆ ಕರೆ ಕೊಟ್ಟಿದ್ದ ಹಿನ್ನೆಲೆಯಲ್ಲಿ ಬೀದರ್ ನಗರ ಸೇರಿದಂತೆ ಜಿಲ್ಲೆಯ ಮೂಲಕ ಸಂಚರಿಸಿದ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳಿಗೆ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು.

ರಾಜ್ಯ ಸಾರಿಗೆ ನಿಗಮಗಳ ಬಸ್‌ಗಳು ಎಂದಿನಂತೆ ಕಾರ್ಯಾಚರಣೆ ನಡೆಸಿದವು. ಬೆಂಗಳೂರಿನ ಮೆಜೆಸ್ಟಿಕ್, ಮೈಸೂರು ರಸ್ತೆ ಸ್ಯಾಟಲೈಟ್, ಶಾಂತಿನಗರ ಬಸ್ ನಿಲ್ದಾಣಗಳಲ್ಲಿ ಬಸ್‌ಗಳು ಪ್ಲಾಟ್‌ಫಾರಂಗಳಲ್ಲಿ ನಿಂತಿದ್ದವು. ಪ್ರಯಾಣಿಕರಿರಲಿಲ್ಲ. ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲೂ ಇದೇ ಸ್ಥಿತಿ ಇತ್ತು. ಮಧ್ಯಾಹ್ನ ಸಹಜ ಸ್ಥಿತಿಗೆ ಮರಳಿತು.

ರಸ್ತೆಗಳಲ್ಲಿ ಜನರು, ವಾಹನಗಳ ಓಡಾಟ ಕಡಿಮೆ ಇತ್ತು. ಬಿಎಂಟಿಸಿ ಬಸ್‌ಗಳು ಖಾಲಿ ಓಡಾಡುತ್ತಿದ್ದವು, ಓಲಾ, ಉಬರ್ ಬಂದ್‌ಗೆ ಬೆಂಬಲ ಸೂಚಿಸಿದ್ದವು. ಆಟೊಗಳ ಸಂಖ್ಯೆಯೂ ಕಡಿಮೆ ಇತ್ತು.

‘ಕೃಷಿಗೆ ಪಿಎಲ್‌ಡಿ ಬ್ಯಾಂಕ್‌ಗಳಲ್ಲೂ ಶೂನ್ಯ ಬಡ್ಡಿ ಸಾಲ’

ಬೆಂಗಳೂರು: ‘ರೈತರಿಗೆ ಸಹಕಾರ ಸಂಘಗಳ ಮೂಲಕ ನೀಡುತ್ತಿರುವ ₹5 ಲಕ್ಷದವರೆಗಿನ ಶೂನ್ಯ ಬಡ್ಡಿಯ ಬೆಳೆ ಸಾಲವನ್ನು ಪಿಎಲ್‌ಡಿ ಬ್ಯಾಂಕ್‌ಗಳಿಗೂ ವಿಸ್ತರಿಸಲಾಗುವುದು’ ಎಂದು ಸಿ.ಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಬಜೆಟ್ ಮೇಲೆ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಶುಕ್ರವಾರ ಉತ್ತರಿಸಿದ ಅವರು, ‘ಪಿಎಲ್‌ಡಿ ಬ್ಯಾಂಕ್‌ಗಳಿಗೂ ಈ ಸವಲತ್ತು ವಿಸ್ತರಿಸುವುದರಿಂದ ಸರ್ಕಾರ ₹38 ಕೋಟಿ ಹೆಚ್ಚು ಮೊತ್ತವನ್ನು ಭರಿಸಬೇಕಾಗಿದೆ’ ಎಂದರು.

ಸಾರಿಗೆ ನಿಗಮಗಳಿಗೆ ಹೆಚ್ಚುವರಿಯಾಗಿ 1,000 ಬಸ್‌ಗಳನ್ನು ಖರೀದಿಸಲಾಗುತ್ತದೆ.ಬಜೆಟ್‌ನಲ್ಲಿ 1,000 ಹೊಸ ಬಸ್ ಖರೀದಿಸಲಾಗುತ್ತದೆ ಎಂದು ಹೇಳಿದ್ದೆ. ಈಗ ಅದನ್ನು ಪರಿಷ್ಕರಿಸಲಾಗಿದೆ. ಹೊಸದಾಗಿ 2,000 ಬಸ್ ಖರೀದಿಸಲಿದ್ದು, ಅನುದಾನ ಒದಗಿಸುತ್ತೇವೆ’ ಎಂದಿದ್ದಾರೆ.

ವಿಮಾನ ನಿಲ್ದಾಣದಲ್ಲಿ ದಟ್ಟಣೆ

ದೇವನಹಳ್ಳಿ: ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಬೆಳಗ್ಗೆ 8ಗಂಟೆ ನಂತರ ಓಲಾ, ಉಬರ್ ಕ್ಯಾಬ್ ಸಂಚಾರ ಇರುವುದಿಲ್ಲ ಎಂದು ಪ್ರಯಾಣಿಕರು ಬೆಳಗ್ಗೆಯೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಇದರಿಂದ ವಿಮಾನ ನಿಲ್ದಾಣ ಪ್ರಯಾಣಿಕರಿಂದ ತುಂಬಿತ್ತು.

ವಿಮಾನ ನಿಲ್ದಾಣದ ಡ್ರಾಪ್ ಪಾಯಿಂಟ್‌ನಲ್ಲಿ ದಟ್ಟಣೆ ಇತ್ತು. ಟರ್ಮಿನಲ್‌ಗಳ ಮುಂದೆ ಜನರ ದಂಡೇ ನೆರೆದಿತ್ತು. ಬಿಎಂಟಿಸಿ ವಾಯುವಜ್ರ ಬಸ್‌ಗಳು ಸಂಚರಿಸಿದವು. ಮಧ್ಯಾಹ್ನದ ಹೊತ್ತಿಗೆ ಟ್ಯಾಕ್ಸಿ ಆರಂಭದೊಂದಿಗೆ ವಿಮಾನ ನಿಲ್ದಾಣ ಯಥಾಸ್ಥಿತಿಗೆ ಮರಳಿತು.

ನೀರಿನಲ್ಲಿ ಮುಳುಗಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಶನಿವಾರ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ ನೀರಿನಲ್ಲಿ ಮುಳುಗಿ ನಾಲ್ವರು ಮೃತಪಟ್ಟಿದ್ದಾರೆ.

ಸಕಲೇಶಪುರ ತಾಲ್ಲೂಕಿನ ಹೆನ್ನಲಿ ಗ್ರಾಮದಲ್ಲಿ ಸ್ನೇಹಿತರ ಜೊತೆಗೆ ಈಜಲು ತೆರಳಿದ್ದ ಕಾಟಳ್ಳಿಯ ಪ್ರಕಾಶ್ (29) ಮತ್ತು ಚಿಕ್ಕಮಗಳೂರು ಜಿಲ್ಲೆಯ ಹಾಂದಿ ಗ್ರಾಮದ ಭರತ್ (27) ಹೇಮಾವತಿ ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮತ್ತೊಂದೆಡೆ, ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ಮಣಜೂರು ಗ್ರಾಮದ ಕೆರೆಯಲ್ಲಿ ಮುಳುಗಿ ಲಕ್ಷ್ಮಣ (46), ರವಿ (40) ಮೃತಪಟ್ಟಿದ್ದು, ರವಿಯ ಮೃತದೇಹ ದೊರೆತಿದೆ. ಲಕ್ಷ್ಮಣ ಮೃತದೇಹದ ಪತ್ತೆಗಾಗಿ ಅಗ್ನಿಶಾಮಕದಳದ ಸಿಬ್ಬಂದಿ ಶೋಧ ನಡೆಸಿದ್ದಾರೆ.

‘ನೀರಿನ ಖಾಲಿ ಬಾಟಲ್ ಮರು ಖರೀದಿಗೆ ನಿಯಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೀರಿನ ಬಾಟಲ್ ಮಾರುವವರೇ, ಕನಿಷ್ಠ ದರ ನೀಡಿ ಕಡ್ಡಾಯವಾಗಿ ಖಾಲಿ ಬಾಟಲಿ ಖರೀದಿಸುವ ನಿಯಮ ರೂಪಿಸಬೇಕು’ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ.ಖಂಡ್ರೆ ಸೂಚಿಸಿದ್ದಾರೆ.



ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಅವರು, ‘ನೀರಿನ ಪ್ಲಾಸ್ಟಿಕ್ ಬಾಟಲ್‌ಗಳನ್ನು ಎಲ್ಲೆಂದರಲ್ಲಿ ಎಸೆಯದಂತೆ ಕಡಿವಾಣ ಹಾಕಬೇಕಿದೆ. ಪ್ಲಾಸ್ಟಿಕ್ ಹಾವಳಿ ತಡೆ ಈ ಕ್ರಮ ಅಗತ್ಯ’ ಎಂದಿದ್ದಾರೆ.

‘ಬಾಟಲ್ ಮೂಲಕ ಕುಡಿಯುವ ನೀರು ಮಾರುವ ಕಂಪನಿಗಳಿಗೆ ಖಾಲಿ ಬಾಟಲ್‌ಗಳನ್ನು ವೈಜ್ಞಾನಿಕ ವಿಲೇವಾರಿ ಹೊಣೆಯೂ ಇರುತ್ತದೆ’ ಎಂದಿದ್ದಾರೆ.

‘ಕೇಂದ್ರ ಸರ್ಕಾರ ನಿರ್ದಿಷ್ಟ ಏಕ ಬಳಕೆ ಪ್ಲಾಸ್ಟಿಕ್ ತಯಾರಿಕೆ, ದಾಸ್ತಾನು, ಮಾರಾಟ, ಬಳಕೆಯನ್ನು ನಿಷೇಧಿಸಿದೆ. ರಾಜ್ಯ ಸರ್ಕಾರವೂ ಈ ಸಂಬಂಧ ನಿಯಮಗಳನ್ನು ರೂಪಿಸಿದೆ. ಆದರೂ, ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತಿದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ’ ಎಂದಿದ್ದಾರೆ.

‘ಪರಿಸರ ಹಾಳು ಮಾಡುತ್ತಿರುವ ನೀರಿನ ಬಾಟಲಿಗಳಿಗೆ (ಮಿನರಲ್ ವಾಟರ್) ಕಡಿವಾಣ ಹಾಕಬೇಕು. ಉತ್ಪಾದಕರ ವಿಸ್ತರಿತ ಜವಾಬ್ದಾರಿಯಂತೆ (ಇಪಿಆರ್) ಯಾವುದೇ ಉತ್ಪನ್ನದ ತಯಾರಕರಿಗೆ, ಉತ್ಪನ್ನ ಗ್ರಾಹಕ ಕೈಸೇರಿದ ನಂತರವೂ ಪರಿಸರದ ಮೇಲೆ ಪರಿಣಾಮ ಬೀರುವಂತಿದ್ದರೆ ಅವುಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ. ಈ ಬಗ್ಗೆ ಕಟ್ಟುನಿಟ್ಟಿನ ನಿಯಮ ರೂಪಿಸಿ, ಜಾರಿಗೆ ತರಬೇಕು’ ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬೆಳಾಲು: ಮೂರು ತಿಂಗಳ ಹೆಣ್ಣು ಶಿಶು ಕಾಡಿನಲ್ಲಿ ಪತ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳಾಲು ಗ್ರಾಮದ ಕೊಡೋಳುಕೆರೆ ಎಂಬಲ್ಲಿ ಮೂರು ತಿಂಗಳ ಹೆಣ್ಣು ಶಿಶು ಕಾಡಿನ ಮಧ್ಯೆ ಶನಿವಾರ ಪತ್ತೆಯಾಗಿದೆ.



ಪತ್ತೆಯಾದ ಮಗು

ದಾರಿಹೋ-ಕರೊಬ್ಬರಿಗೆ ಶಿಶು ಅಳುವ ಶಬ್ದ ಕೇಳಿಸಿತ್ತು. ಅವರು ಸ್ಥಳಕ್ಕೆ ಧಾವಿಸಿ ನೋಡಿದಾಗ ಅಲ್ಲಿ ಶಿಶು ಇರುವುದು ಕಾಣಿಸಿತು. ಅವರು ನೀಡಿದ ಮಾಹಿತಿ ಆಧಾರದ ಮೇಲೆ, ಧರ್ಮಸ್ಥಳ ಪೊಲೀಸರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ಹಾಗೂ ಬೆಳಾಲು ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿದ್ಯಾ ಶ್ರೀನಿವಾಸ ಗೌಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಶಿಶುವನ್ನು ಪುತ್ತೂರಿನ ಶ್ರೀರಾಮ ಸೇವಾ ಸಮಿತಿಯ ವಾತ್ಸಲ್ಯಧಾಮ ದತ್ತು ಕೇಂದ್ರದ ಸುಪರ್ದಿಗೆ ವಹಿಸಿದ್ದೇವೆ. ಅವರು ಶಿಶುವಿನ ಆರೈಕೆ ಮಾಡಲಿದ್ದಾರೆ. ಸೋಮವಾರ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸಭೆಯಲ್ಲಿ ಶಿಶುವಿನ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲಿದ್ದೇವೆ’ ಎಂದು ಸಮಿತಿಯ ಅಧ್ಯಕ್ಷೆ ಅಕ್ಷತಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶಿಶು ಆರೋಗ್ಯವಾಗಿದೆ. ಅಗತ್ಯ ವೈದ್ಯಕೀಯ ತಪಾಸಣೆಗೂ ವ್ಯವಸ್ಥೆ ಮಾಡಿದ್ದೇವೆ’ ಎಂದರು. ಶಿಶು ಪತ್ತೆಯಾದ ಬಗ್ಗೆ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಶಿಶುವಿನ ತಂದೆ ತಾಯಿ ಯಾರು ಎಂದು ಪತ್ತೆಯಾಗಿಲ್ಲ. ಪೋಷಕರೇ ಅದನ್ನು ಕಾಡಿನಲ್ಲಿ ಬಿಟ್ಟುಹೋಗಿರುವ ಸಾಧ್ಯತೆ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಾವು

ಅಫಜಲಪುರ (ಕಲಬುರಗಿ ಜಿಲ್ಲೆ): ಪಟ್ಟಣದ ಬಾಲಕ, ಮಹಾಂತೇಶ್ವರ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಶ್ರೀಶೈಲ ನಿಲೆಗಾರ (16) ಶನಿವಾರ ಕೃಷಿ ಹೊಂಡದಲ್ಲಿ ಈಜಲು ಹೋಗಿ ಮೃತಪಟ್ಟಿದ್ದಾನೆ.

‘ವಿದ್ಯಾರ್ಥಿ ತನ್ನ ಗೆಳೆಯರ ಜೊತೆ ಈಜು ಕಲಿಯಲು ಡಬ್ಬಿ ಕಟ್ಟಿಕೊಂಡು ಕಲಬುರಗಿ ಮುಖ್ಯರಸ್ತೆಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಕೃಷಿಹೊಂಡಕ್ಕೆ ಇಳಿದಿದ್ದ. ಈ ವೇಳೆ ಡಬ್ಬಿಗೆ ಕಟ್ಟಿರುವ ಹಗ್ಗ ಹರಿದು ನೀರಲ್ಲಿ ಮುಳುಗಿ ಮೃತಪಟ್ಟಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.




ಶ್ರೀಶೈಲ ನಿಲೆಗಾರ

ಬಾಲಕನ ತಂದೆ ಪಾನಿಪುರಿ ವ್ಯಾಪಾರ ಮಾಡುತ್ತಿದ್ದರು. ಶ್ರೀಶೈಲ ಕನ್ನಡ ಪರೀಕ್ಷೆ ಬರೆದಿದ್ದ.

ಬಾಯ್ಲರ್‌ಗೆ ಬಿದ್ದು ಕಾರ್ಮಿಕ ಸಾವು

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಇಲ್ಲಿಗೆ ಸಮೀಪದ ಬಿಎಂಎಂ ಇಸ್ಪಾತ್ ಕಾರ್ಖಾನೆಯಲ್ಲಿ ಶನಿವಾರ ಬಿಸಿ ನೀರಿನ ಬಾಯ್ಲರ್‌ನಲ್ಲಿ ಕಾಲುಜಾರಿ ಬಿದ್ದು ಗುತ್ತಿಗೆ ಕಾರ್ಮಿಕ ನಾಗರಾಜ್ (39) ಮೃತಪಟ್ಟಿದ್ದಾರೆ.



ನಾಗರಾಜ್

ಹೊಸಪೇಟೆ ತಾಲ್ಲೂಕಿನ ಕಮಲಾಪುರದ 6ನೇ ವಾರ್ಡ್ ನಿವಾಸಿ ನಾಗರಾಜ್ ಅವರು ಗುತ್ತಿಗೆದಾರರ ಬಳಿ ಕಾರ್ಖಾನೆಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಶನಿವಾರ ಬೆಳಿಗ್ಗೆ ಕೆಲಸ ಮುಗಿಸಿಕೊಂಡು ಮನೆಗೆ ಮರಳುವಾಗ ಘಟನೆ ನಡೆದಿದೆ’ ಎಂದು ಮರಿಯಮ್ಮನಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕಸಾಪ ದತ್ತಿ ಪ್ರಶಸ್ತಿಗೆ ಸದಾನಂದ ಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ‘ಮಾಹಿತಿ ತಜ್ಞ ಜೆ.ಎಂ. ರಾಜಶೇಖರ ಪ್ರಶಸ್ತಿ’ಗೆ ವಕೀಲರೂ ಆಗಿ ರುವ ಮಾಹಿತಿ ಹಕ್ಕು ಹೋರಾಟಗಾರ ಸದಾನಂದ ಗೌಡ ಆಯ್ಕೆಯಾಗಿದ್ದಾರೆ.



ಸದಾನಂದ ಗೌಡ

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ಮಾಹಿತಿ ಹಕ್ಕು ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಪ್ರತಿಭಾ ಪರಿಷತ್ತು ಈ ದತ್ತಿ ಪ್ರಶಸ್ತಿ ಸ್ಥಾಪಿಸಿದೆ. ಮಾಹಿತಿ ಹಕ್ಕು, ಗ್ರಾಹಕರ ಹಕ್ಕುಗಳ ಅನುಷ್ಠಾನಕ್ಕೆ ಹೋರಾಟ ನಡೆಸಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಮಂಡ್ಯ ಜಿಲ್ಲೆಯ ಸಾತೇನಹಳ್ಳಿಯ ಸದಾನಂದ ಗೌಡ ಅವರು, 15 ವರ್ಷಗಳಿಂದಲೂ ಮಾಹಿತಿ ಹಕ್ಕು ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

ಕೆಇಎ: ವಿಧಾನಪರಿಷತ್ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಪ್ರಥಮ ಪ್ರಯೋಗ

ಮೊಬೈಲ್‌ನಲ್ಲೇ ಅಭ್ಯರ್ಥಿಗಳ ದೃಢೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ಬಳಸಿ ಸಿದ್ಧಪಡಿಸಿದ ಮೊಬೈಲ್ ಆಧಾರಿತ ಅಭ್ಯರ್ಥಿ ದೃಢೀಕರಣ (ಮೊಬೈಲ್ ಬೇಸ್ಡ್ ಅಥೆಂಟಿಕೇಷನ್) ವ್ಯವಸ್ಥೆಯನ್ನು ಶನಿವಾರ ನಡೆದ ನೇಮಕಾತಿ ಪರೀಕ್ಷೆಯಲ್ಲಿ ಮೊದಲ ಬಾರಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಯಶಸ್ವಿಯಾಗಿ ಬಳಸಿತು.



ಎಚ್. ಪ್ರಸನ್ನ

ವಿಧಾನಪರಿಷತ್‌ನಲ್ಲಿ ಖಾಲಿ ಇರುವ ಕಂಪ್ಯೂಟರ್ ಆಪರೇಟರ್ ಹಾಗೂ ಇತರೆ ಹುದ್ದೆಗಳ ನೇಮಕಾತಿಗಾಗಿ ನಾಲ್ಕು ದಿನಗಳ ಪರೀಕ್ಷೆ ಶನಿವಾರ ಆರಂಭವಾಗಿದೆ. ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯುವುದನ್ನು ತಡೆಯಲು ಪ್ರಾಧಿಕಾರದ ಎಂಜಿನಿಯರ್‌ಗಳ ತಂಡ ರೂಪಿಸಿದ ತಾಂತ್ರಿಕತೆಯನ್ನು ಪ್ರಯೋಗಾರ್ಥವಾಗಿ ಬಳಸಲಾಯಿತು.

‘ಅಭ್ಯರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶಿಸುವಾಗ ಮೊಬೈಲ್ ಆ್ಯಪ್ ಬಳಸಿ ಅವರ ಮುಖದ ಚಿತ್ರವನ್ನು ಸೆರೆ ಹಿಡಿಯಲಾಗುತ್ತದೆ. ಇದು, ತಕ್ಷಣವೇ ಕೆಇಎ ಸರ್ವರ್ ನೊಂದಿಗೆ ಆನ್‌ಲೈನ್ ಮೂಲಕ ಸಂಪರ್ಕಗೊಂಡು ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಿದ್ದ ಭಾವಚಿತ್ರದ ಜತೆ ತಾಳೆ ನೋಡುತ್ತದೆ. ಅಭ್ಯರ್ಥಿಯ ನೈಜತೆ ದೃಢಪಡಿಸುತ್ತದೆ. ಆ ಮೂಲಕ ನಕಲಿ ಅಭ್ಯರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶಿಸದಂತೆ ತಡೆಯಲು ಸಾಧ್ಯವಾಗುತ್ತದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ವಿವರಿಸಿದರು.

ಮೊದಲ ದಿನ ಬೆಳಿಗ್ಗೆ 74 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ 267 ಅಭ್ಯರ್ಥಿಗಳು ಪರೀಕ್ಷೆ ಬರೆದರು. ಈ ತಾಂತ್ರಿಕ ವ್ಯವಸ್ಥೆಯು ಮೊದಲ ದಿನದ ಪ್ರಯೋಗ ಯಶಸ್ವಿಯಾಗಿದ್ದು, ಇನ್ನು ಮುಂದೆ ಇತರ ಪರೀಕ್ಷೆಗಳಿಗೂ ಈ ತಂತ್ರಜ್ಞಾನದ ಬಳಕೆ ವಿಸ್ತರಿಸಲಾಗುತ್ತದೆ ಎಂದೂ ಮಾಹಿತಿ ನೀಡಿದರು.

ವೆಬ್‌ಸೈಟ್‌ಗೆ ಒಎಂಆರ್ ಶೀಟ್

ಪರೀಕ್ಷೆ ಮುಗಿದ ತಕ್ಷಣವೇ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಕೆಇಎ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ. ಈ ಪ್ರಯತ್ನ ಸಹ ಇದೇ ಮೊದಲು. ಪಾರದರ್ಶಕ ಪರೀಕ್ಷಾ ವ್ಯವಸ್ಥೆಗೆ ಕನ್ನಡಿಯಾಗಿದೆ ಎಂದು ಪ್ರಸನ್ನ ಹೇಳಿದರು.

ಡಿಕೆಶಿ ‘ಹಲೋ’ಗೆ ಎದಿರೇಟು...

ಸದ್ಯವೇ ಡಿಜಿಪಿಗೆ ದೂರು: ರಾಜೇಂದ್ರ

ಬೆಂಗಳೂರು: ಮುಖ್ಯಮಂತ್ರಿ ಸೂಚನೆ ಮೇರೆಗೆ ‘ಕಾವೇರಿ’ ನಿವಾಸಕ್ಕೆ ಭೇಟಿ ನೀಡಿದ ರಾಜೇಂದ್ರ ರಾಜಣ್ಣ, ಮಧುಬಲೆಯ ಯತ್ನದ ಕುರಿತು ಮಾಹಿತಿ ನೀಡಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿ, ‘ಮೂರು ತಿಂಗಳಿನಿಂದ ಪ್ರಯತ್ನ ಆಗಿದೆ. ಯತ್ನ ನಡೆಸಿದವರು ಕ್ಯಾತ್ಸಂದ್ರಕ್ಕೆ ಬಂದಿರಲಿಲ್ಲ. ಮಧುಗಿರಿಗೆ ಬಂದಿದ್ದರು ಎಂಬ ಮಾಹಿತಿ ಇದೆ. ಇರುವ ಮಾಹಿತಿಯನ್ನು ಮುಖ್ಯಮಂತ್ರಿ ಅವರಿಗೆ ನೀಡಿದ್ದೇನೆ. ಮೊದಲು ತುಮಕೂರು ಎಸ್‌ಪಿಯವರನ್ನು ಭೇಟಿಯಾಗಿ ವಿವರ ನೀಡಿ, ಮಂಗಳವಾರ–ಬುಧವಾರದಂದು ಡಿಜಿಪಿಯವರನ್ನು ಭೇಟಿಯಾಗಿ ದೂರು ನೀಡುತ್ತೇನೆ. ಬಳಿಕ ಹೈಕಮಾಂಡ್‌ಗೂ ದೂರು ಕೊಡುತ್ತೇವೆ’ ಎಂದರು.

‘ಕಚ್ಚೆ ಸರಿ ಇದ್ದರೆ ಹೆದರಬೇಕಿಲ್ಲ’

ಮಂಗಳೂರು: ‘ಜನಪ್ರತಿನಿಧಿಗಳಾದವರು, ಆದರ್ಶ ವ್ಯಕ್ತಿಗಳಾಗಿರಬೇಕು. ಇದರಲ್ಲಿ ಆ ಪಕ್ಷ, ಈ ಪಕ್ಷ ಎಂಬ ಭೇದವಿಲ್ಲ. ಕೈ, ಬಾಯಿ, ಕಚ್ಚೆಯನ್ನು ಸರಿಯಾಗಿ ಇಟ್ಟುಕೊಂಡರೆ, ದೇವರಿಗೂ ಹೆದರಬೇಕಾದ ಅಗತ್ಯವಿಲ್ಲ’ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು. ‘ಕಚ್ಚೆ ಕೈ ಬಾಯಿಗಳು ಇಚ್ಚೆಯಲ್ಲಿ ಇದ್ದಿಹರೆ, ಅಚ್ಯುತನಪ್ಪ ಅಜನಪ್ಪ ಲೋಕದಲಿ, ನಿಶ್ಚಿಂತನಪ್ಪ ಸರ್ವಜ್ಞ’ ಎಂಬ ತ್ರಿಪದಿಯನ್ನು ಅವರು ಉಲ್ಲೇಖಿಸಿದರು.

ಹಲೋ ಎಂದರೆ ಬಲೆ ಹೇಗೆ: ಮಹದೇವಪ್ಪ

ಮೈಸೂರು: ‘ನಾನು ಎಲ್ಲರಿಗೂ ಹಲೋ ಎನ್ನುತ್ತೇನೆ. ಎಲ್ಲರೂ ನನಗೆ ಹಲೋ ಎಂದೇ ಪ್ರತಿಕ್ರಿಯಿಸುತ್ತಾರೆ. ಅದರಿಂದ ಬಲೆ ಎನ್ನುವುದು ಹೇಗೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಪ್ರತಿಕ್ರಿಯಿಸಿದರು.

ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ.ನನ್ನನ್ನು ತುಳಿಯಲು ಯಾರು ಯತ್ನಿಸುತ್ತಾರೆ, ಯತ್ನಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನಂತೂ ಸದೃಢವಾಗಿ ಕುಳಿತಿದ್ದೇನೆ’ ಎಂದರು.

‘ಹನಿಟ್ರ್ಯಾಪ್ ಜಾಲದ ವಿರುದ್ಧ ಕಠಿಣ ಶಿಕ್ಷೆಗೆ ಒಳಪಡಿಸುವಂಥ ಕಾನೂನು ದೇಶದಲ್ಲಿ ಜಾರಿಯಾಗಬೇಕು. ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಾಗುತ್ತಿದೆ. ಖಾಸಗಿ ಕ್ಷಣಗಳನ್ನು ಬಹಿರಂಗಗೊಳಿಸಿ, ವ್ಯಕ್ತಿತ್ವ ಹರಣ ಮಾಡುವವವರ ವಿರುದ್ಧ ಸದೃಢ ಕಾನೂನು ಜಾರಿಗೊಳಿಸಬೇಕು’ ಎಂದರು.

‘ಸಿದ್ದರಾಮಯ್ಯ ಪರ ಮಾತನಾಡಿದರೆ, ಸಣ್ಣ ಮನಸ್ಸಿನವರಿಗೆ ಹೊಟ್ಟೆ ಕಿಚ್ಚಾಗಬಹುದು. ಆದರೆ, ಅದೇ ಕಾರಣಕ್ಕೆ ರಾಜಕೀಯವಾಗಿ ಟಾರ್ಗೆಟ್ ಆಗುತ್ತೇವೆ ಎಂಬುದನ್ನು ಒಪ್ಪಲಾರೆ’ ಎಂದರು.

‘ಹನಿಟ್ರ್ಯಾಪ್ ಮಾಡಿಸಿದವರು ಡಿ.ಕೆ.ಶಿವಕುಮಾರ್’ ಎಂಬ ಆರೋಪಕ್ಕೆ, ‘ಸುಮ್ಮನೆ ಏನು ಹೇಳಿದರೂ ನಡೆಯುತ್ತಾ? ನಾಳೆ ನಾನೇ ಮಾಡಿಸಿದ್ದು ಎನ್ನುತ್ತಾರೆ, ಅದಕ್ಕೆ ಅರ್ಥ ಇದೆಯೇ? ರಾಜಣ್ಣ ಯಾರ ಹೆಸರನ್ನಾದರೂ ಹೇಳಿದ್ದಾರಾ’ ಎಂದು ಕೇಳಿದರು.

ವಿಚಾರ ಹೈಕಮಾಂಡ್ ಗಮನಕ್ಕೆ ಹೋಗಿದೆ: ರಾಜಣ್ಣ

ಒಂದನೇ ಪುಟದಿಂದ...

ಪ್ರಭಾವಿ ಸಚಿವರೊಬ್ಬರ ಮೇಲೆ ಮಧುಬಲೆ ಪ್ರಯತ್ನ ನಡೆದಿದೆ ಎಂಬುದಾಗಿ ಮಾಧ್ಯಮಗಳಲ್ಲಿ ಸುದ್ದಿ ಬರತೊಡಗಿತು. ಸದನದಲ್ಲಿ ಶಾಸಕ ಸುನಿಲ್ ಕುಮಾರ್ ಪ್ರಸ್ತಾಪಿಸಿದರು, ಆದರೆ, ಹೆಸರು ಹೇಳಿರಲಿಲ್ಲ. ಶಾಸಕ ಬಸನಗೌಡ ಪಾಟೀಲ ಯತ್ನಾಳ ನನ್ನ ಹೆಸರು ಹೇಳಿದ ಮೇಲೆ ಪ್ರತಿಕ್ರಿಯಿಸದಿದ್ದರೆ ಲೋಪವಾಗುತ್ತದೆ ಎಂದು ಘಟನೆ ವಿವರಿಸಿದೆ ಎಂದರು.

ಗರ್ಜಿಸುವ ಹುಲಿಗಳಿಗೆ ಸಿ.ಡಿ ಬೆದರಿಕೆ: ಸತೀಶ ಜಾರಕಿಹೊಳಿ

ಒಂದನೇ ಪುಟದಿಂದ...

‘ಹನಿಟ್ರ್ಯಾಪ್ ವಿಷಯದಲ್ಲಿ ಸಚಿವ ಕೆ.ಎನ್.ರಾಜಣ್ಣ ಕಾನೂನು ಅಭಿಪ್ರಾಯ ಪಡೆದು, ದೂರು ದಾಖಲಿಸಬೇಕು. ಪ್ರಕರಣವನ್ನು ಸಿಬಿಐಗೆ ವಹಿಸಬೇಕಿಲ್ಲ. ರಾಜ್ಯ ಪೊಲೀಸರು ತನಿಖೆ ನಡೆಸಿ, ಆರೋಪಿಗಳನ್ನು ಬಂಧಿಸಲು ಸಮರ್ಥರಾಗಿದ್ದಾರೆ’ ಎಂದರು.


‘ಹನಿಟ್ರ್ಯಾಪ್ ವಿಷಯದಲ್ಲಿ 40ಕ್ಕೂ ಅಧಿಕ ಶಾಸಕರು ಗುರಿ ಆಗಿರಬಹುದು ಎಂದು ರಾಜಣ್ಣ ಹೇಳಿದ್ದಾರೆ. ತನಿಖೆಯಾಗಲಿ. ಯಾವ ಕಾರಣಕ್ಕೆ ಮತ್ತು ಯಾರ ಕೈವಾಡವಿದೆ ಎಂಬುದು ಗೊತ್ತಾಗಬೇಕು’ ಎಂದು ಸತೀಶ ಜಾರಕಿಹೊಳಿ ತಿಳಿಸಿದರು.

ಭಾರತ ವಿರೋಧಿ ಧೋರಣೆಯಿಂದ ಎರಡು ದೇಶಗಳ ಸಂಬಂಧಕ್ಕೆ ಹಾನಿ: ಆರ್‌ಎಸ್‌ಎಸ್

ಬಾಂಗ್ಲಾದಲ್ಲಿ ದೌರ್ಜನ್ಯ: ಪ್ರತಿನಿಧಿ ಸಭಾ ಖಂಡನಾ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂಗಳು ಸೇರಿದಂತೆ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಖಂಡಿಸಿ, ಆರ್‌ಎಸ್‌ಎಸ್‌ನ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ನಿರ್ಣಯ ಕೈಗೊಂಡಿದೆ. ಭಾರತ ವಿರೋಧಿ ಧೋರಣೆ ರಡು ದೇಶಗಳ ನಡುವಿನ ಸಂಬಂಧವನ್ನು ಹಾನಿಗೊಳಿಸಲಿದೆ ಎಂದೂ ಸಭಾ ಕಳವಳ ವ್ಯಕ್ತಪಡಿಸಿದೆ.



ಅರುಣ್ ಕುಮಾರ್

ಸಭಾದ ನಿರ್ಣಯದ ಬಗ್ಗೆ ಶನಿವಾರ ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಅರುಣ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಮೂಲಭೂತವಾದಿ ಇಸ್ಲಾಮಿಕ್ ಶಕ್ತಿಗಳಿಂದ ನಿರಂತರವಾಗಿ ಮತ್ತು ಯೋಜನಾಬದ್ಧವಾಗಿ ಹಿಂಸಾಚಾರ, ಅನ್ಯಾಯ ಮತ್ತು ದಬ್ಬಾಳಿಕೆ ನಡೆಯುತ್ತಿದೆ. ಮಠ, ದೇವಸ್ಥಾನ, ದುರ್ಗಾಪೂಜಾ ಪೆಂಡಾಲು ಹಾಗೂ ಶೈಕ್ಷಣಿಕ ಸಂಸ್ಥೆಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ದೇವರ ಪ್ರತಿಮೆಗಳನ್ನು ವಿರೂಪಗೊಳಿಸಲಾಗುತ್ತಿದೆ. ಹತ್ಯೆ, ಆಸ್ತಿಪಾಸ್ತಿ ದರೋಡೆ, ಮಹಿಳೆಯರ ಅಪಹರಣ, ಅತ್ಯಾಚಾರ, ಬಲವಂತದ ಮತಾಂತರಗಳು ನಡೆಯುತ್ತಿವೆ’ ಎಂದರು.

ಬಾಂಗ್ಲಾದೇಶದ ಹಿಂದೂ ಸಮುದಾಯವು ಈ ದೌರ್ಜನ್ಯಗಳನ್ನು ಶಾಂತಿಯುತ, ಒಗ್ಗಟ್ಟಿನ ಮತ್ತು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಎದುರಿಸಿದೆ. ಈ ಗಟ್ಟಿತನಕ್ಕೆ ಭಾರತ ಮತ್ತು ವಿಶ್ವದೆಲ್ಲೆಡೆಯ ಹಿಂದೂ ಸಮಾಜದಿಂದ ನೈತಿಕ ಮತ್ತು ಮಾನಸಿಕ ಬೆಂಬಲ ದೊರಕಿದೆ. ಭಾರತ ಸರ್ಕಾರವು ಬಾಂಗ್ಲಾದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳ ಬೆಂಬಲಕ್ಕೆ ನಿಂತಿದೆ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಈ ವಿಚಾರವನ್ನು ಎತ್ತಿದೆ. ಜೊತೆಗೆ ಹಿಂದೂ ಸಮುದಾಯದ ಭದ್ರತೆ, ಗೌರವ ಮತ್ತು ಕಲ್ಯಾಣ ರಕ್ಷಣೆಗಾಗಿ ಬಾಂಗ್ಲಾ ಸರ್ಕಾರದೊಂದಿಗೆ ನಿರಂತರ ಮತ್ತು ಅರ್ಥಪೂರ್ಣ ಸಂವಾದವನ್ನು ನಡೆಸಬೇಕು ಎಂದು ಪ್ರತಿನಿಧಿ ಸಭಾ ಆಗ್ರಹಿಸಿದೆ ಎಂದು ಹೇಳಿದರು.

ಬಾಂಗ್ಲಾದಲ್ಲಿ ಹಿಂದೂಗಳ ಜನಸಂಖ್ಯೆ ಇಳಿಕೆಯಾಗುತ್ತಿದೆ. 1951ರಲ್ಲಿ ಶೇ 22ರಷ್ಟು ಇದ್ದ ಜನಸಂಖ್ಯೆ ಈಗ ಶೇ 7.95ಕ್ಕೆ ಕುಸಿದಿದೆ. ಕಳೆದ ವರ್ಷ ಕಂಡ ಈ ಹಿಂಸಾಚಾರ ಮತ್ತು ದ್ವೇಷಕ್ಕೆ ಅಲ್ಲಿನ ಸರ್ಕಾರ ಮತ್ತು ಸಂಸ್ಥೆಗಳಿಂದ ಸಿಕ್ಕ ಬೆಂಬಲ ಕಳವಳಕಾರಿಯಾಗಿದೆ. ಅಂತರರಾಷ್ಟ್ರೀಯ ಶಕ್ತಿಗಳು ಬುದ್ಧಿಪೂರ್ವಕವಾಗಿ ಭಾರತದ ನೆರೆಹೊರೆಯ ಪ್ರದೇಶದಲ್ಲಿ ಅವಿಶ್ವಾಸ ಮತ್ತು ವೈರುಧ್ಯದ ವಾತಾವರಣವನ್ನು ನಿರ್ಮಾಣ ಮಾಡುತ್ತಿವೆ ಎಂದು ಆರೋಪಿಸಿದರು.

ಭಾರತ ವಿರೋಧಿ ವಾತಾವರಣ, ಪಾಕಿಸ್ತಾನ ಮತ್ತು ‘ಡೀಪ್ ಸ್ಟೇಟ್’ ಶಕ್ತಿಗಳ ಚಟುವಟಿಕೆ ಮೇಲೆ ದೃಷ್ಟಿಯಿರಿಸಬೇಕು. ಅವುಗಳನ್ನು ಬಹಿರಂಗಪಡಿಸಬೇಕು ಎಂದು ಚಿಂತನಶೀಲ ವರ್ಗ ಮತ್ತು ಅಂತರರಾಷ್ಟ್ರೀಯ ವಿಷಯಗಳ ವಿಶೇಷಜ್ಞರಲ್ಲಿ ಪ್ರತಿನಿಧಿ ಸಭಾ ಒತ್ತಾಯಿಸಿದೆ ಎಂದು ತಿಳಿಸಿದರು.

ವಿಶ್ವಸಂಸ್ಥೆ, ಅಂತರರಾಷ್ಟ್ರೀಯ ಸಂಸ್ಥೆಗಳು ಬಾಂಗ್ಲಾದೇಶದ ಘಟನಾವಳಿಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಹಿಂಸಾಚಾರ ನಿಲ್ಲಿಸಲು ಬಾಂಗ್ಲಾ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಎಲ್ಲ ದೇಶಗಳ ಹಿಂದೂ ಸಮುದಾಯಗಳು ಬಾಂಗ್ಲಾದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳ ಬೆಂಬಲಕ್ಕೆ ನಿಲ್ಲಬೇಕು ಎಂದು ಆಗ್ರಹಿಸಿದರು.

‘ಬಿಜೆಪಿ–ಆರ್‌ಎಸ್‌ಎಸ್ ನಡುವೆ ವ್ಯತ್ಯಾಸಗಳಿಲ್ಲ’

‘ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡುವೆ ವ್ಯತ್ಯಾಸಗಳಿಲ್ಲ. ಪರಸ್ಪರ ನಂಬಿಕೆಯ ಆಧಾರದಲ್ಲಿ ಕೆಲಸ ಮಾಡುತ್ತಿದ್ದು, ಅದು ಮುಂದುವರಿಯಲಿದೆ’ ಎಂದು ಅರಣ್ ಕುಮಾರ್ ಸ್ಪಷ್ಟಪಡಿಸಿದರು.

‘ಸಂಘ ಪರಿವಾರದಲ್ಲಿ ಬಿಜೆಪಿ ಸೇರಿ 32 ಸಂಘಟನೆಗಳಿವೆ. ಪ್ರತಿ ಸಂಸ್ಥೆಯು ಸ್ಥಳೀಯ, ಜಿಲ್ಲಾ ಮತ್ತು ಮಂಡಲ ಮಟ್ಟದಲ್ಲಿ ತನ್ನದೇ ಸದಸ್ಯತ್ವ, ಚುನಾವಣೆಗಳು, ರಚನೆಗಳನ್ನು ಹೊಂದಿದೆ ಮತ್ತು ಅವು ತಮ್ಮದೇ ಆದ ಪ್ರಕ್ರಿಯೆ ಅನುಸರಿಸುತ್ತವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿಯಲ್ಲಿ ಮುಂದಿನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಈ ಪ್ರಕ್ರಿಯೆಯು ಜನವರಿಯಲ್ಲಿ ಪೂರ್ಣಗೊಳ್ಳಬೇಕಿತ್ತು. ದೆಹಲಿ ವಿಧಾನಸಭೆ ಚುನಾವಣೆ ಮತ್ತು ವಿವಿಧ ರಾಜ್ಯ ಘಟಕಗಳಲ್ಲಿ ಬಾಕಿ ಇರುವ ಚುನಾವಣೆಗಳಿಂದ ಅಧ್ಯಕ್ಷರ ಆಯ್ಕೆ ವಿಳಂಬವಾಗಿದೆ ಎಂದರು.



ಬಾಗಲಕೋಟೆ ಫುಡ್ ಪಾರ್ಕ್ ಜಾಗದಲ್ಲಿ ಕುರಿಗಳು ಮೇಯುತ್ತಿರುವುದು



ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಅಕ್ಷಯಫುಡ್ ಪಾರ್ಕ್‌ನಲ್ಲಿರುವ ಗೋದಾಮು

ಪುನಶ್ಚೇತನಕ್ಕೆ 'ನ್ಯಾಬ್‌ಕಾನ್ಸ್' ಸಲಹೆಗಳು

- ನಿವೇಶನ ಪಡೆದು ಉದ್ದಿಮೆ ಆರಂಭಿಸದಿದ್ದರೆ, ಅಂಥವರಿಂದ ನಿವೇಶನಗಳನ್ನು ಹಿಂಪಡೆದು, ಹೊಸ ಉದ್ದಿಮೆದಾರರಿಗೆ/ರೈತ ಉತ್ಪಾದಕ ಸಂಸ್ಥೆಗಳಿಗೆ/ ಸಹಕಾರ ಸಂಘಗಳಿಗೆ ಮರು ಹಂಚಿಕೆ ಮಾಡಬಹುದು.
- ಕೇಂದ್ರ ಮತ್ತು ರಾಜ್ಯ (ಹೊಸ ಕೈಗಾರಿಕೆ ನೀತಿ 2020–25) ಸರ್ಕಾರಗಳ ಪ್ರಾಯೋಜಿತ ಯೋಜನೆಗಳ ಬಗ್ಗೆ ಹೊಸ ಉದ್ದಿಮೆದಾರರಿಗೆ ಅರಿವು ಮೂಡಿಸಿ, ಅವುಗಳ ಪ್ರಯೋಜನ ಪಡೆದುಕೊಳ್ಳುವಂತೆ ಮಾಡಬಹುದು.
- ಫುಡ್‌ಪಾರ್ಕ್‌ಗಳನ್ನೂ ಸಹ ಇತರೆ ಕೈಗಾರಿಕೆಗಳಂತೆ ಪರಿಗಣಿಸಿ, ರಾಜ್ಯ ಸರ್ಕಾರದ ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯ ಕ್ರಿಟಿಕಲ್ ಇನ್‌ಫ್ರಾಸ್ಟ್ರಕ್ಚರ್ ಸ್ಕೀಂನಲ್ಲಿರುವ ಅನುದಾನ ಬಳಸಿಕೊಳ್ಳಲು ಅವಕಾಶ ನೀಡಬಹುದು.
- ಆಹಾರ ಸಂಸ್ಕರಣಾ ಕೈಗಾರಿಕಾ ಸಚಿವಾಲಯ, ಕೇಂದ್ರ ಕೃಷಿ ಸಚಿವಾಲಯ, ಕೇಂದ್ರ ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಯೋಜನೆಗಳನ್ನು ಫುಡ್‌ಪಾರ್ಕ್‌ಗಳು ಬಳಸಿಕೊಳ್ಳುವಂತೆ ಮಾಡಬಹುದು.
- ಫುಡ್‌ಪಾರ್ಕ್‌ನಲ್ಲಿ ಸಾಮಾನ್ಯ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ನಬಾರ್ಡ್‌ನಲ್ಲಿ ಆಹಾರ ಸಂಸ್ಕರಣಾ ಯೋಜನೆಗಳಿಗಿರುವ ಅನುದಾನವನ್ನು ಉಪಯೋಗಿಸಿಕೊಳ್ಳಬಹುದು. ಫುಡ್‌ಪಾರ್ಕ್‌ನಲ್ಲಿ ಉದ್ಯಮ ಆರಂಭಿಸುವ ಎಫ್‌ಪಿಒ ತರಹದ ಸಂಸ್ಥೆಗಳು, ನಬಾರ್ಡ್‌ನ ಸಹಾಯ ಪಡೆಯಬಹುದು.

ಉದ್ಯೋಗ ಸೃಷ್ಟಿ – ಉದ್ಯಮಗಳ ಸ್ಥಾಪನೆಯಲ್ಲೂ ವಿಫಲ

ಆಹಾರ ಪಾರ್ಕ್: ಆಮೆ ನಡಿಗೆ

• ಗಾಣಧಾಳು ಶ್ರೀಕಂಠ

ಬೆಂಗಳೂರು: 'ಫುಡ್‌ಪಾರ್ಕ್‌ನವರು ಆ ಕ್ಲಿಯರೆನ್ಸ್ ಪತ್ರ ಕೊಟ್ಟಿದ್ದರೆ, ನನಗೆ ಸಾಲ ಸಿಕ್ಕಿಬಿಡೋದು, ಉದ್ಯಮ ಆರಂಭಿಸಿ ಎಂಟು ವರ್ಷವಾಗುತ್ತಿತ್ತು. ಅವರು ಪತ್ರ ಕೊಡಲಿಲ್ಲ, ಇವರು ಸಾಲ ಕೊಡಲಿಲ್ಲ. ಉದ್ದಿಮೆ ಆರಂಭಿಸುವ ಕನಸು ಈಡೇರಲಿಲ್ಲ' – ಬ್ಯಾಂಕ್‌ಗಳಿಂದ ಸಾಲ ಸಿಗದೇ ಹಿರಿಯೂರಿನ ಅಕ್ಷಯ ಫುಡ್‌ಪಾರ್ಕ್‌ನಲ್ಲಿ ಉದ್ದಿಮೆ ಆರಂಭಿಸಲು ವಿಫಲರಾದ ಕಥೆಯನ್ನು ಶಿವಮೊಗ್ಗದ ರಾಘವೇಂದ್ರ ಹೀಗೆ ಬೇಸರದಿಂದಲೇ ವಿವರಿಸಿದರು.

'ಎಂಟು ವರ್ಷಗಳ ಹಿಂದೆ ಫುಡ್‌ಪಾರ್ಕ್‌ನಲ್ಲಿ ಕಾರ್ಖಾನೆ ಆರಂಭಿಸಿ, ಸಾಲ ಸೌಲಭ್ಯವಿಲ್ಲದೇ ಸಂಕಷ್ಟದಲ್ಲೇ ಉದ್ದಿಮೆ ನಡೆಸುತ್ತಿದ್ದೇನೆ. ನಿಯಮಾನುಸಾರ ಮೂರು ವರ್ಷದ ನಂತರ ಕಾರ್ಖಾನೆಯ ನಿವೇಶನವನ್ನು ನನ್ನ ಹೆಸರಿಗೆ 'ಶುದ್ಧ ಕ್ರಯಪತ್ರ' ಮಾಡಿಕೊಡಬೇಕಿತ್ತು. ಹಾಗಾಗದ ಕಾರಣ, ಬ್ಯಾಂಕ್‌ನಿಂದ ಸಾಲ ಸೌಲಭ್ಯ ಸಿಗದೇ ಉದ್ದಿಮೆ ನಡೆಸುವುದೇ ಕಷ್ಟವಾಗಿದೆ' ಎಂದು ಅವಲತ್ತುಕೊಂಡರು ಜೇವರ್ಗಿ ಫುಡ್‌ಪಾರ್ಕ್‌ನಲ್ಲಿ ರವೆ ತಯಾರಿಕಾ ಘಟಕ ನಡೆಸುತ್ತಿರುವ ಬಸಯ್ಯ ಗದ್ದಗಿಮಠ ಕೋಳಕೂರ.

ರಾಜ್ಯದಲ್ಲಿರುವ ನಾಲ್ಕು ಫುಡ್‌ಪಾರ್ಕ್‌ಗಳಲ್ಲಿ ಉದ್ದಿಮೆ ಆರಂಭಿಸಲು ನಿವೇಶನ ಪಡೆದಿರುವ ಹಲವು ಉದ್ಯಮ ಆಕಾಂಕ್ಷಿಗಳ ಸಾಮಾನ್ಯ ಸಮಸ್ಯೆಗಳಿವು. ಇಂಥ ಹಲವು ಸಮಸ್ಯೆಗಳಿಂದಾಗಿ ಫುಡ್‌ಪಾರ್ಕ್ ಪ್ರಗತಿ 'ಆಮೆ ನಡಿಗೆ'ಯಾಗಿದೆ ಎಂದು ಉದ್ಯಮ ಕ್ಷೇತ್ರದ ತಜ್ಞರು, ಫುಡ್‌ಪಾರ್ಕ್‌ನಲ್ಲಿರುವ ಹಾಲಿ ಉದ್ಯಮಿಗಳು ಅಭಿಪ್ರಾಯಪಡುತ್ತಾರೆ.

ಸ್ಥಳೀಯ ಆಹಾರ ಧಾನ್ಯಗಳ ಮೌಲ್ಯವರ್ಧನೆ, ಆಹಾರ ಸಂಸ್ಕರಣೆ ಉದ್ಯಮಗಳ ಸ್ಥಾಪನೆ ಮತ್ತು ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸುವುದಕ್ಕಾಗಿ ಎರಡು ದಶಕಗಳ ಹಿಂದೆ ರಾಜ್ಯದಲ್ಲಿ ಫುಡ್‌ಪಾರ್ಕ್ ಪರ್ವ ಆರಂಭವಾಯಿತು.

ಆಹಾರ ಸಂಸ್ಕರಣಾ ಉದ್ಯಮಕ್ಕೆ ಉತ್ತೇಜನ, ಕಚ್ಚಾವಸ್ತು ಖರೀದಿ, ಮೌಲ್ಯವರ್ಧನೆ, ಮಾರುಕಟ್ಟೆ, ದರ ನಿಗದಿಯಂತಹ ವ್ಯವಸ್ಥೆಯನ್ನು ಒಂದೇ ಸೂರಿನಡಿ ತರಬೇಕು. ಧಾನ್ಯ ಸಂಸ್ಕರಣೆ, ಗ್ರೇಡಿಂಗ್‌ನಂತಹ ಸೌಲಭ್ಯಗಳು ಒಂದೇ ಜಾಗದಲ್ಲಿ ರೈತರಿಗೆ ಸಿಗುವಂತಾಗಬೇಕು ಎಂಬುದು ಫುಡ್‌ಪಾರ್ಕ್ ಪರಿಕಲ್ಪನೆಯ ಮೂಲ ಉದ್ದೇಶ. ಇದಕ್ಕಾಗಿಯೇ ಸರ್ಕಾರ ಹಾಗೂ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ (ಜಂಟಿ ಉದ್ಯಮವಾಗಿ) ನಾಲ್ಕು ಫುಡ್‌ಪಾರ್ಕ್‌ಗಳು ಸ್ಥಾಪನೆಯಾದವು.

ಫುಡ್‌ಪಾರ್ಕ್ ಆರಂಭಕ್ಕಾಗಿ, ರಾಜ್ಯ ಸರ್ಕಾರವು ಕಂಪನಿಗಳಿಗೆ ಕೆಐಎಡಿಬಿ ಮೂಲಕ ಕಡಿಮೆ ದರದಲ್ಲಿ ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಿದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ₹4 ಕೋಟಿ ಪ್ರೋತ್ಸಾಹಧನ ನೀಡಿವೆ. ಕೃಷಿ ಇಲಾಖೆ ವ್ಯಾಪ್ತಿಯಲ್ಲಿರುವ ಫುಡ್ ಕರ್ನಾಟಕ ಲಿಮಿಟೆಡ್ (ಎಫ್‌ಕೆಲ್) ಫುಡ್‌ಪಾರ್ಕ್‌ಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ.

ಇಷ್ಟೆಲ್ಲ ಸರ್ಕಾರದ ನೆರವಿದ್ದರೂ, ಯಾವ ಫುಡ್‌ಪಾರ್ಕ್‌ಗಳೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಉದ್ದಿಮೆದಾರರು ಹೇಳುತ್ತಿದ್ದಾರೆ. ಎಫ್‌ಕೆಎಲ್, ಎರಡು ವರ್ಷಗಳ ಹಿಂದೆ ಫುಡ್‌ಪಾರ್ಕ್‌ಗಳ ಕುರಿತು ನಬಾರ್ಡ್ ಕನ್ಸಲ್ಟೆನ್ಸಿ ಸರ್ವೀಸ್ ಪ್ರೈ. ಲಿಮಿಟೆಡ್ (ನ್ಯಾಬ್‌ಕಾನ್ಸ್) ಮೂಲಕ ನಡೆಸಿದ ಇಂಪ್ಯಾಕ್ಟ್ ಸ್ಟಡಿ ಅಸೆಸ್‌ಮೆಂಟ್ ವರದಿಯಲ್ಲೂ ಇದೇ ಅಂಶಗಳು ಉಲ್ಲೇಖವಾಗಿವೆ. 'ನಾಲ್ಕೂ ಪಾರ್ಕ್‌ಗಳಲ್ಲಿ ಶೇ 15ರಷ್ಟು ಉದ್ದಿಮೆಗಳಷ್ಟೇ ಕಾರ್ಯನಿರ್ವಹಿಸುತ್ತಿವೆ. ಪ್ರತಿ ಪಾರ್ಕ್‌ನಿಂದ ವಾರ್ಷಿಕ ₹500 ಕೋಟಿ ವಹಿವಾಟು ಮತ್ತು ಪ್ರತಿ ಪಾರ್ಕ್‌ನಲ್ಲಿ ಅಂದಾಜು 30 ಸಾವಿರ ಮಂದಿ ಉದ್ಯೋಗಿಗಳಿರಬೇಕಿತ್ತು. ಈಗ ಕೇವಲ 436 ಉದ್ಯೋಗಿಗಳಿದ್ದಾರೆ. ಒಂದು ಪಾರ್ಕ್ ಮಾತ್ರ ₹500 ಕೋಟಿ ವಹಿವಾಟು ದಾಖಲಿಸಿದೆ. ಉಳಿದ ಮೂರು ₹100 ಕೋಟಿ ಗಡಿ ದಾಟಿಲ್ಲ' ಎಂದು ಅಧ್ಯಯನ ವರದಿಯಲ್ಲಿ ಉಲ್ಲೇಖವಾಗಿದೆ. ಈ ವರದಿಯು ಫುಡ್‌ಪಾರ್ಕ್‌ಗಳ ವೈಫಲ್ಯಕ್ಕೆ ಸಾಕ್ಷಿಯಾಗಿದೆ.

ಹೀಗಿವೆ ಫುಡ್‌ಪಾರ್ಕ್‌ಗಳು: ಬಾಗಲಕೋಟೆಯ ನವನಗರದಲ್ಲಿ 2005 ರಲ್ಲಿ 'ಗ್ರೀನ್ ಫುಡ್ ಪಾರ್ಕ್' ಆರಂಭವಾಯಿತು. ಇದಕ್ಕಾಗಿ ಉದ್ಯಮಿ ಆದಿಕೇಶವಲು ಅವರ ಸಂಸ್ಥೆಗೆ ಕೆಐಎಡಿಬಿ 100 ಎಕರೆ ಜಮೀನನ್ನು ಗುತ್ತಿಗೆ ಆಧಾರದಲ್ಲಿ ನೀಡಿತು. ಆರಂಭದಲ್ಲಿ 6 ವರ್ಷಗಳಿಗೆ ಗುತ್ತಿಗೆ ನೀಡಲಾಗಿತ್ತು. ಫುಡ್‌ಪಾರ್ಕ್ ಸರಿಯಾಗಿ ಅಭಿವೃದ್ಧಿ ಹೊಂದಿಲ್ಲ ಎಂಬ ಕಾರಣಕ್ಕಾಗಿ 100 ಎಕರೆ ಪೈಕಿ 53 ಎಕರೆ ಜಮೀನನ್ನು ಸರ್ಕಾರ ವಾಪಸ್ ಪಡೆದು, ಅದನ್ನು 2022ರಲ್ಲಿ ಗುರುದತ್ತ ಇಂಟಗ್ರೇಟೆಡ್ ಟೆಕ್ಸ್‌ಟೈಲ್ಸ್‌ನವರಿಗೆ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಿದೆ. ಆ ಸಂಸ್ಥೆಯಿಂದಲೂ ನಿರೀಕ್ಷಿತ ಪ್ರಗತಿಯಾಗಿಲ್ಲ. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘದ ಒಕ್ಕೂಟಕ್ಕೆ 10 ಎಕರೆ ಜಮೀನನ್ನು ನೀಡಲಾಗಿದೆ. ಕೃಷಿ ಇಲಾಖೆಯ ಪ್ರಕಾರ, ಅಲ್ಲಿ 19 ಘಟಕಗಳಿಗೆ ಜಾಗ ನೀಡಲಾಗಿದೆ. ಅದರಲ್ಲಿ ಎಂಟು ಘಟಕಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಪಾರ್ಕ್‌ನಲ್ಲಿ ರಸ್ತೆಗಳು ಹಾಳಾಗಿವೆ. ಬೀದಿ ದೀಪಗಳು ಎಂದೋ ನಂದಿ ಹೋಗಿವೆ. ಕೈಗಾರಿಕೆಗಳಿದ್ದ ಜಾಗದಲ್ಲಿ ಜಾಲಿ ಗಿಡಗಳು ಬೆಳೆದಿವೆ. ಮೇಕೆ–ಕುರಿ ಮೇಯಿಸುವವ ತಾಣವಾಗಿದೆ. ಇಲ್ಲಿ ಸ್ಮಶಾನ ಮೌನ ನಿಧಾನವಾಗಿ ಆವರಿಸುತ್ತಿದೆ.

ಹೊಸ ಉದ್ದಿಮೆಗಳಿಲ್ಲ: ಇದೇ ಅವಧಿಯಲ್ಲಿ (2006) ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ 105 ಎಕರೆಯಲ್ಲಿ ಜೇವರ್ಗಿ ಫುಡ್‌ಪಾರ್ಕ್ ಆರಂಭಕ್ಕೆ ಜಮೀನು ಮಂಜೂರಾಯಿತು. ಇಲ್ಲಿ 117 ಉದ್ಯಮಿಗಳಿಗೆ ನಿವೇಶಗಳನ್ನು ಉಪಗುತ್ತಿಗೆ ನೀಡಲಾಗಿದೆ. 96 ನಿವೇಶನಗಳು ನೋಂದಣಿಯಾಗಿವೆ. ಇದರಲ್ಲಿ ಕೇವಲ ಆರು ಉದ್ದಿಮೆಗಳಷ್ಟೇ ಆರಂಭವಾಗಿವೆ, ಎರಡು ನಿರ್ಮಾಣ ಹಂತದಲ್ಲಿವೆ. ಉಗ್ರಾಣ, ವೇ ಬ್ರಿಡ್ಜ್, ಕೋಲ್ಡ್ ಸ್ಟೋರೇಜ್ ಇದೆ. ಡಾಂಬರ್ ರಸ್ತೆ, ಚರಂಡಿ, ಬೀದಿ ದೀಪ ಬಿಟ್ಟು ಬೇರೆ ಮೂಲಸೌಕರ್ಯಗಳಿಲ್ಲ. ಉದ್ಯಮ ಆರಂಭಿಸಲು ನಿವೇಶನ ಪಡೆದ ಕೆಲವರು ಇಲ್ಲಿ ಗೋದಾಮುಗಳನ್ನು ನಿರ್ಮಿಸಿಕೊಂಡಿದ್ದಾರೆ. ಗುತ್ತಿಗೆ ಅವಧಿಯನ್ನು ಮೂರ್ನಾಲ್ಕು ಬಾರಿ ವಿಸ್ತರಿಸಿದರೂ ಹೊಸ ಉದ್ದಿಮೆಗಳು ಆರಂಭವಾಗಿಲ್ಲ.

ಸೌಲಭ್ಯಗಳಿವೆ, ರೈತರಿಗೆ ಮಾಹಿತಿ ಇಲ್ಲ: 2007-08ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ಕೈಗಾರಿಕಾ ಪ್ರದೇಶದಲ್ಲಿ 86 ಎಕರೆ 7 ಗುಂಟೆ ಜಾಗದಲ್ಲಿ ಇನೋವಾ ಅಗ್ರಿ ಬಯೋಪಾರ್ಕ್(ಫುಡ್ ಪಾರ್ಕ್) ಆರಂಭವಾಯಿತು.

ಫುಡ್‌ಪಾರ್ಕ್‌ನಲ್ಲಿ 20 ನಿವೇಶನಗಳನ್ನು ಉಪಗುತ್ತಿಗೆ ನೀಡಲಾಗಿದೆ. 6 ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ. ಒಂದು ಉದ್ಯಮ ನಿರ್ಮಾಣ ಹಂತದಲ್ಲಿದೆ. ಪಾರ್ಕ್‌ನಲ್ಲಿ ವಿವಿಧ ಆಹಾರ ಸಂಸ್ಕರಣಾ ಘಟಕಗಳಿವೆ. ಹಣ್ಣು, ತರಕಾರಿಗಳ ಶ್ರೇಣೀಕರಣ (ಗ್ರೇಡಿಂಗ್), ವಿಂಗಡನೆ, ಸಂಸ್ಕರಣೆ, ಪ್ಯಾಕಿಂಗ್ ಘಟಕ, ಬೇಳೆ ಕಾಳುಗಳ ಸಂಸ್ಕರಣೆ, ಶೀತಲೀಕರಣ ಘಟಕಗಳು ಸೇರಿದಂತೆ ಹಲವು ಉನ್ನತ ತಂತ್ರಜ್ಞಾನದ ಸೌಲಭ್ಯಗಳಿವೆ. 'ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳಿವೆ. ಆದರೆ, ರೈತರು ಸರಿಯಾಗಿ ಬಳಕೆ ಮಾಡಿಕೊಳ್ಳುತ್ತಿಲ್ಲ' ಎಂದು ಫುಡ್‌ಪಾರ್ಕ್‌ನ ವ್ಯವಸ್ಥಾಪಕ ನಿರ್ದೇಶಕ ರವಿ ಹೇಳುತ್ತಾರೆ. 'ಇಂಥದ್ದೊಂದು ಸೌಲಭ್ಯಗಳಿರುವ ಫುಡ್‌ಪಾರ್ಕ್ ಜಿಲ್ಲೆಯಲ್ಲಿದೆ' ಎಂಬುದೇ ಗೊತ್ತಿಲ್ಲ ಎಂದು ಸ್ಥಳೀಯ ರೈತರು ಹೇಳುತ್ತಾರೆ. ಫುಡ್‌ಪಾರ್ಕ್ ಚಟುವಟಿಕೆ ಕುರಿತು ಸ್ಥಳೀಯ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳಲ್ಲಿ ವಿಚಾರಿಸಿದರೆ, ಅಲ್ಲೆಲ್ಲೂ ಸಮರ್ಪಕ ಮಾಹಿತಿ ಇಲ್ಲ.

ಮೂಲ ಸೌಕರ್ಯದ ಕೊರತೆ: 2011ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಬಳಿಯ ಹುಚ್ಚವ್ವನಹಳ್ಳಿಯಲ್ಲಿ 106 ಎಕರೆಯಲ್ಲಿ ಆರಂಭವಾಗಿರುವ ಅಕ್ಷಯ ಫುಡ್ ಪಾರ್ಕ್ ಕಥೆಯೂ ಭಿನ್ನವಾಗೇನಿಲ್ಲ. ಇಲ್ಲಿ 90 ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದ್ದರೂ, ಸದ್ಯ 10 ಉದ್ಯಮಗಳು ನಡೆಯುತ್ತಿವೆ. ಎಂಟು ಪ್ರಗತಿಯಲ್ಲಿವೆ.

ಪಾರ್ಕ್‌ನಲ್ಲಿರುವ ಉದ್ದಿಮೆದಾರರಿಗೆ ಹಾಗೂ ಸುತ್ತಮುತ್ತಲಿನ ರೈತರ ಅನುಕೂಲಕ್ಕಾಗಿ ಫುಡ್‌ಪಾರ್ಕ್‌ನಲ್ಲಿ ಬೃಹತ್ ಶೀತಲಘಟಕ, ಸಂಸ್ಕರಣಾ ಘಟಕಗಳು, ಹಣ್ಣುಗಳ ಗ್ರೇಡಿಂಗ್ ಸೇರಿದಂತೆ ಹಲವು ಸೌಲಭ್ಯಗಳಿವೆ. ಆದರೆ ಇವುಗಳನ್ನು ಬಳಸಿಕೊಳ್ಳುವಷ್ಟು ಉದ್ದಿಮೆಗಳು ಇಲ್ಲಿಲ್ಲ, ಸುತ್ತಮುತ್ತಲಿನ ರೈತರೂ ಇವುಗಳನ್ನು ಬಳಸಿಕೊಳ್ಳುವುದು ವಿರಳ.

'ರಾಷ್ಟ್ರೀಯ ಹೆದ್ದಾರಿಯಿಂದ ಅಕ್ಷಯ ಫುಡ್‌ಪಾರ್ಕ್ ಸಂಪರ್ಕಿಸುವ ರಸ್ತೆ ಕಿರಿದಾಗಿದೆ. ಉದ್ದಿಮೆದಾರರು ಘಟಕಗಳನ್ನು ತೆರೆಯಲು ಹಿಂದೇಟು ಹಾಕಲು ಈ ಕಾರಣವೂ ಒಂದು' ಎಂದು ಹೇಳುವ ಅಕ್ಷಯ ಫುಡ್‌ಪಾರ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ನಾರಾಯಣಸ್ವಾಮಿ, ಇದಕ್ಕಾಗಿ ಸರ್ಕಾರದ ನೆರವು ಬೇಕಿದೆ ಎನ್ನುತ್ತಾರೆ. 'ಮೂಲಸೌಲಭ್ಯಗಳ ಕೊರತೆಯ ಕಾರಣದಿಂದ ಪಾರ್ಕ್‌ನಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳಲು ರೈತರು ಬರುತ್ತಿಲ್ಲ' ಎಂಬುದು ಸ್ಥಳೀಯ ರೈತರು, ರೈತ ಮುಖಂಡರು ಹಾಗೂ ಉದ್ಯಮಿಗಳ ಅಭಿಪ್ರಾಯವಾಗಿದೆ.

ಹಿನ್ನಡೆಗೆ ಸಾಮಾನ್ಯ ಕಾರಣಗಳು: 'ಫುಡ್‌ಪಾರ್ಕ್'ನಲ್ಲಿ ಹೊಸ ಉದ್ದಿಮೆಗಳು ಆರಂಭವಾಗದಿರಲು ನವೋದ್ಯಮಿಗಳಿಗೆ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ಸಿಗದಿರುವುದೇ ಕಾರಣ' ಎಂಬುದು ನಾಲ್ಕೂ ಫುಡ್‌ಪಾರ್ಕ್‌ಗಳಲ್ಲಿ ನಿವೇಶನ ಪಡೆದರೂ ಉದ್ಯಮ ಆರಂಭಿಸಲಾಗದವರ ಅಭಿಪ್ರಾಯ.

'ಯಶಸ್ವಿಯಾಗಿ ಉದ್ದಿಮೆ ನಡೆಸಿ, ಅವಧಿ ಪೂರ್ಣಗೊಂಡರೂ ಫುಡ್‌ಪಾರ್ಕ್‌ನವರು ಉದ್ದಿಮೆದಾರರ ಹೆಸರಿಗೆ 'ಶುದ್ಧ ಕ್ರಯ' ಪತ್ರ ನೀಡಲ್ಲ. ಇದು ಕೂಡ ಹೊಸ ಉದ್ದಿಮೆಗಳು ಆರಂಭವಾಗದಿರಲು ಕಾರಣ ಎಂಬುದು ಈಗಾಗಲೇ ಉದ್ಯಮ ನಡೆಸುತ್ತಿರುವವರ ಅನಿಸಿಕೆ. ಸರ್ಕಾರ ಸಮರ್ಪಕವಾಗಿ ಅನುದಾನ ನೀಡದೇ, ಫುಡ್‌ಪಾರ್ಕ್‌ಗಳಿಗೆ ಅಗತ್ಯವಾದ ರಸ್ತೆ, ನೀರಿನಂತಹ ಮೂಲಸೌಲಭ್ಯ ಕಲ್ಪಿಸದಿರುವುದೂ, ಹೊಸ ಉದ್ದಿಮೆಗಳು ಶುರುವಾಗದಿರಲು ಕಾರಣ ಎಂಬುದು ಫುಡ್‌ಪಾರ್ಕ್ ನಡೆಸಲು ಗುತ್ತಿಗೆ ಪಡೆದಿರುವ ಕಂಪನಿಗಳ ಅನಿಸಿಕೆ.

ಸಬ್ ಲೀಸ್ ದಾಖಲೆಗಳನ್ನು ಆಧರಿಸಿ ಬ್ಯಾಂಕ್‌ನವರು ಸಾಲ ಕೊಡುವುದಿಲ್ಲ. ಸಾಲ ನೀಡಲು ಜಾಮೀನು ಭದ್ರತೆ ಕೇಳುತ್ತಾರೆ. ಉದ್ದಿಮೆದಾರರು ಕೆಐಎಡಿಬಿ ಅಥವಾ ಫುಡ್‌ಪಾರ್ಕ್‌ನವರು ಶ್ಯೂರಿಟಿ ಕೊಡಬೇಕೆಂದು ನಿರೀಕ್ಷಿಸುತ್ತಾರೆ. 'ಸರ್ಕಾರದ ನಿಯಮದಂತೆ ಉದ್ದಿಮೆದಾರರೇ ಶ್ಯೂರಿಟಿ ಹೊಂದಿಸಿಕೊಳ್ಳಬೇಕು' ಎಂದು ಫುಡ್‌ಪಾರ್ಕ್‌ನವರು ಪ್ರತಿಪಾದಿಸುತ್ತಾರೆ. ಇದರ ನಡುವೆ 'ಸ್ವಂತ ಹಣ ತೊಡಗಿಸಿ ಉದ್ಯಮ ಆರಂಭಿಸುವುದು ಕಷ್ಟ' ಎಂದು ನಿವೇಶನ ಪಡೆದವರು ಹೇಳುತ್ತಾರೆ.

ನ್ಯಾಬ್‌ಕಾನ್ಸ್ ವರದಿಯಲ್ಲಿ ಫುಡ್‌ಪಾರ್ಕ್‌ಗಳಲ್ಲಿ ಮೂಲಸೌಕರ್ಯಗಳ ಕೊರತೆಯಿರುವುದನ್ನು ಉಲ್ಲೇಖಿಸಿದೆ. ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಸಿಗದಿರುವ ಕಾರಣದಿಂದ ಉದ್ದಿಮೆಗಳು ಆರಂಭವಾಗಿಲ್ಲ ಎಂಬ ಅಂಶವನ್ನು ಒತ್ತಿ ಹೇಳಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳಡಿ ಆಹಾರ ಉದ್ಯಮ ಆರಂಭಿಸುವ ಉದ್ದಿಮೆದಾರರನ್ನು ಆಯ್ಕೆ ಮಾಡಲು ಕನಿಷ್ಠ ಅರ್ಹತೆಗಳನ್ನು ನಿಗದಿಪಡಿಸುತ್ತವೆ. ಆದರೆ, ಈ ಫುಡ್‌ಪಾರ್ಕ್‌ಗಳಲ್ಲೂ ಉದ್ದಿಮೆದಾರರ ಆಯ್ಕೆಯಲ್ಲಿ ಕನಿಷ್ಠ ಅರ್ಹತೆಗಳನ್ನೂ ಪರಿಗಣಿಸಿಲ್ಲ ಎಂಬುದನ್ನೂ ನ್ಯಾಬ್‌ಕಾನ್ಸ್ ವರದಿಯಲ್ಲಿ ಪ್ರಸ್ತಾಪಿಸಿದೆ.

ಸರ್ಕಾರದ 'ಸಹಕಾರ', ನಿಗಾ ಅಗತ್ಯ: 'ಸರ್ಕಾರದ ಉದ್ಯಮ ಸ್ನೇಹಿ ನೀತಿ –ನಿಯಮಗಳ ಕೊರತೆಯಿಂದ, ಸರ್ಕಾರ–ಖಾಸಗಿ ಜಂಟಿ ಸಹಭಾಗಿತ್ವದ ಫುಡ್‌ಪಾರ್ಕ್ ಉದ್ಯಮ ಸಂಪೂರ್ಣ ವಿಫಲವಾಗಿದೆ. ನಿರೀಕ್ಷಿತ ಪ್ರಗತಿ ಕಾಣದ ಫುಡ್‌ಪಾರ್ಕ್‌ಗಳ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಬೇಕು. ಪ್ರಗತಿ ಕಾಣದ ಫುಡ್‌ಪಾರ್ಕ್‌ಗಳನ್ನು ಸರ್ಕಾರ ವಾಪಸ್ ಪಡೆದು, ಉದ್ಯಮ ಸ್ನೇಹಿ ನೀತಿ– ನಿಯಮಗಳನ್ನು ರೂಪಿಸುವಂತೆ ಉದ್ದಿಮೆದಾರರು ಸರ್ಕಾರವನ್ನು ಒತ್ತಾಯಿಸುತ್ತಾರೆ.

ನ್ಯಾಬ್‌ಕಾನ್ಸ್ ಕೂಡ 'ಫುಡ್‌ಪಾರ್ಕ್‌ಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕು. ನಿವೇಶನ ಹಂಚಿಕೆಯಾದರೂ ಉದ್ಯಮ ಆರಂಭಿಸದವರಿಗೆ ಗಡುವು ನೀಡಿ, ಆ ಗಡುವು ಮೀರಿದರೆ, ನಿವೇಶನ ವಾಪಸ್ ಪಡೆದು, ಕನಿಷ್ಠ ಅರ್ಹತೆಗಳನ್ನು ನಿಗದಿಪಡಿಸಿ ಹೊಸಬರಿಗೆ ಹಂಚಿಕೆ ಮಾಡಬೇಕು ಎಂದು ಶಿಫಾರಸು ಮಾಡಿದೆ.

ಪೂರಕ ಮಾಹಿತಿ: ಎಂ.ಎನ್. ಯೋಗೇಶ್, ಚಿತ್ರದುರ್ಗ; ಬಸವರಾಜ ಹವಾಲ್ದಾರ್, ಬಾಗಲಕೋಟೆ, ಇಮಾಮ್‌ಸಾಬ್, ಬೆಳಗಾವಿ; ಮನೋಜ್‌ಕುಮಾರ್ ಗುದ್ದಿ, ಕಲಬುರ್ಗಿ; ವಿಜಯಕುಮಾರ್ ಕಲ್ಲಾ, ಜೇವರ್ಗಿ; ಓಂಕಾರಮೂರ್ತಿ, ಕೋಲಾರ



ಕಲಬುರಗಿ ಜಿಲ್ಲೆಯ ಜೇವರ್ಗಿ ಫುಡ್‌ಪಾರ್ಕ್ ಪ್ರವೇಶ ದ್ವಾರ

ರಾಗಿಗೆ ಸಂಬಂಧಿಸಿದ ಉತ್ಪನ್ನ ತಯಾರಿಕಾ ಘಟಕ ಆರಂಭಿಸಲು ನಿವೇಶನ ಪಡೆದುಕೊಂಡೆ. ಕೆಎಸ್‌ಎಫ್‌ಸಿಯಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದೆ. ಸಾಲ ಮಂಜೂರಾಯಿತು. ಆದರೆ, ಹಣ ಖಾತೆಗೆ ಬಂದಿರಲಿಲ್ಲ. ಮುಂದೆ ಹಣ ಬರಬಹುದೆಂದು ತಿಳಿದು, ಸುಮಾರು ₹6 ಲಕ್ಷ ಸ್ವಂತ ಹಣ ಹಾಕಿ ಕಟ್ಟಡ ನಿರ್ಮಾಣ ಆರಂಭಿಸಿದೆ. ಈ ನಡುವೆ ಕೆಎಸ್‌ಎಫ್‌ಸಿಯವರು, ಫುಡ್‌ಪಾರ್ಕ್ ಕಡೆಯಿಂದ 'ಅಂಡರ್ ಟೇಕನ್' ಪತ್ರ ತರುವಂತೆ ಕೇಳಿದರು. ಫುಡ್‌ಪಾರ್ಕ್ ನವರು 'ಅದನ್ನು ನಾವು ಕೊಡುವುದಕ್ಕೆ ಬರುವುದಿಲ್ಲ' ಎಂದರು. ಹೀಗಾಗಿ ಮಂಜೂರಾದ ಹಣ ಸಿಗಲಿಲ್ಲ, ಉದ್ದಿಮೆ ಆರಂಭವಾಗಲಿಲ್ಲ. ಈಗ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟುತ್ತಿದ್ದೇನೆ ನನ್ನ ಹಾಗೆ 'ಅತಂತ್ರ' ಸ್ಥಿತಿಯಲ್ಲಿರುವವರು ಹಲವರಿದ್ದಾರೆ.

ರಾಘವೇಂದ್ರ, ಶಿವಮೊಗ್ಗ
(ಅಕ್ಷಯ ಫುಡ್‌ಪಾರ್ಕ್‌ನಲ್ಲಿ ನಿವೇಶನ ಪಡೆದವರು)

ಉಪಗುತ್ತಿಗೆ ದಾಖಲೆ ಇಟ್ಟುಕೊಂಡು ಬ್ಯಾಂಕ್‌ಗಳು ಸಾಲ ನೀಡಲು ಹಿಂದೇಟು ಹಾಕುತ್ತವೆ. ಆ ದಾಖಲೆಗಳ ಜೊತೆಗೆ ಹೆಚ್ಚುವರಿಯಾಗಿ ನಮ್ಮ ಆಸ್ತಿಯ ಅಡಮಾನ ಮಾಡಿದರೆ ಸಾಲ ಕೊಡುತ್ತಾರೆ. ಸಾಲ ಸಿಗದೆ ಉದ್ದಿಮೆ ಆರಂಭಿಸಲು ಸಾಧ್ಯವಾಗುತ್ತಿಲ್ಲ.
ಶರಣು ರಾಂಪೂರ, ಜೇವರ್ಗಿ
(ಜೇವರ್ಗಿ ಫುಡ್‌ಪಾರ್ಕ್‌ನಲ್ಲಿ ನಿವೇಶನ ಪಡೆದವರು)

ಜೇವರ್ಗಿ ಫುಡ್‌ಪಾರ್ಕ್‌ಗೆ ಅಗತ್ಯ ಸೌಕರ್ಯ ಕಲ್ಪಿಸಬೇಕು. ನಿವೇಶನ ಸಿಕ್ಕವರಿಗೆ ಬ್ಯಾಂಕ್ ಸಾಲ ಸಿಗಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಸಚಿವರಿಗೆ ಮನವಿ ಸಲ್ಲಿಸಿದ್ದೇವೆ. ಆದರೂ ಪ್ರಯೋಜನವಾಗಿಲ್ಲ.
ಮಂಜುಳಾ ಭಜಂತ್ರಿ, ಜಿಲ್ಲಾ ಅಧ್ಯಕ್ಷೆ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ, ಕಲಬುರಗಿ

ಹೊಸ ತಂತ್ರಜ್ಞಾನ, ಅತ್ಯಾಧುನಿಕ ಸೌಲಭ್ಯಗಳು ನಮ್ಮ ಫುಡ್‌ಪಾರ್ಕ್‌ನಲ್ಲಿವೆ. ಆ ಸೌಲಭ್ಯಗಳನ್ನು ರೈತರು ಬಳಸಿಕೊಳ್ಳಬೇಕಿದೆ. ಇಲ್ಲದಿದ್ದರೆ ನಮಗೂ ನಷ್ಟ, ರೈತರಿಗೂ ನಷ್ಟ'
ಕೆ.ಎನ್.ರವಿ, ವ್ಯವಸ್ಥಾಪಕ ನಿರ್ದೇಶಕ, ಇನೋವಾ ಅಗ್ರಿ ಬಯೋಪಾರ್ಕ್, ಮಾಲೂರು

ಈಗ ಫುಡ್‌ಪಾರ್ಕ್‌ಗಳು ಒಂದು ಹಂತಕ್ಕೆ ತಲುಪಿವೆ. ಈ ಸಮಯದಲ್ಲಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ನೀಡುವುದು ಸೂಕ್ತ. ಫುಡ್‌ಪಾರ್ಕ್‌ಗಳಿರುವ ಕ್ಷೇತ್ರಗಳ ಸಚಿವರು, ಶಾಸಕರು ಕೂಡ ಫುಡ್‌ಪಾರ್ಕ್ ಅಭಿವೃದ್ಧಿಗೆ ನೆರವಾಗುವಂತೆ ಕೇಳಿದ್ದಾರೆ. ಇವೆಲ್ಲವನ್ನೂ ಗಮನಿಸಿ, ಹೆಚ್ಚುವರಿ ನೆರವಿನ ಕುರಿತು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುತ್ತೇನೆ.
ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಫುಡ್‌ಪಾರ್ಕ್‌ಗಳು ಪ್ರಗತಿಯಲ್ಲಿ ಹಿಂದುಳಿಯಲು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳೇ ನೇರ ಕಾರಣ. ಫುಡ್‌ಪಾರ್ಕ್ ವಿಷಯದಲ್ಲಿ ಸರ್ಕಾರ ತನ್ನ ಕೆಲಸ ಮಾಡುತ್ತಿದೆ. ನಿವೇಶನದಾರರು ಉದ್ಯಮ ಆರಂಭಿಸಲು ಈಗಿರುವ ಕಟು ನೀತಿ ನಿಯಮಗಳನ್ನು ಸಡಿಲಗೊಳಿಸಿ, ನವೋದ್ಯಮಿಗಳ ಬೆಂಬಲಕ್ಕೆ ನಿಲ್ಲಬೇಕು.
ಪ್ರಕಾಶ್ ಕಮ್ಮರಡಿ
ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

ನಿವೇಶನ ಪಡೆದು, ನಿಯಾಮನುಸಾರ ಉದ್ಯಮ ಆರಂಭಿಸದವರಿಂದ ನಿವೇಶನ ಹಿಂಪಡೆದಿಲ್ಲ. ಈ ಕುರಿತು ಕ್ರಮ ಜರುಗಿಸುವಂತೆ ಕೆಐಎಡಿಬಿಗೆ ಪತ್ರ ಬರೆದಿದ್ದೇವೆ. ಅಕ್ಷಯಫುಡ್ ಪಾರ್ಕ್‌ನಿಂದ ಉದ್ದಿಮೆದಾರರಿಗೆ ಬ್ಯಾಂಕ್ ಸಾಲ ಪಡೆಯಲು ಶ್ಯೂರಿಟಿ ಕೊಡುವ ಪ್ರಸ್ತಾವನೆ ಇಲ್ಲ. ಕೆಲವು ಬ್ಯಾಂಕ್‌ಗಳು ಸಬ್‌ಲೀಸ್ ಆಧಾರದಲ್ಲಿ ಸಾಲ ಕೊಡುತ್ತಿಲ್ಲ. ಹೆಚ್ಚುವರಿ ಶೂರಿಟಿ ಕೇಳುತ್ತಿದ್ದಾರೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ.
ಎಂ.ನಾರಾಯಣಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ, ಅಕ್ಷಯ ಫುಡ್ ಪಾರ್ಕ್, ಹಿರಿಯೂರು

ಗುತ್ತಿಗೆ – ಉಪಗುತ್ತಿಗೆಯ 'ಫುಡ್‌ಪಾರ್ಕ್'

ಆಹಾರ ಪಾರ್ಕ್‌ಗಳ ಸ್ಥಾಪನೆಗಾಗಿ ಕೆಐಎಡಿಬಿ, ಕಂಪನಿಗಳಿಗೆ 10 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ಭೂಮಿ ನೀಡಿದೆ. ಆಗಾಗ್ಗೆ ಗುತ್ತಿಗೆ ನವೀಕರಿಸಿದೆ. ಜಮೀನು ಪಡೆದ ಕಂಪನಿಯವರು, ಉದ್ದಿಮೆ ಆರಂಭಿಸುವವರಿಗೆ ಉಪ ಗುತ್ತಿಗೆ (ಸಬ್ ಲೀಸ್) ಆಧಾರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ನಿವೇಶನ ಪಡೆದವರು ನಿಯಮಾನು ಸಾರ ನಿಗದಿತ ಅವಧಿಯೊಳಗೆ ಉದ್ದಿಮೆ ಆರಂಭಿಸಬೇಕು. ಗಡುವು ಮೀರಿದರೆ, ನಿವೇಶನಗಳನ್ನು ಹಿಂಪಡೆದು, ಬೇರೆಯವರಿಗೆ ಹಂಚಿಕೆ ಮಾಡಬೇಕು. ಹಾಗೆಯೇ, ನಿಯಮಾನುಸಾರ ಯಶಸ್ವಿಯಾಗಿ ಉದ್ಯಮ ನಡೆಸಿದರೆ, ನಿವೇಶವನ್ನು ಅವರ ಹೆಸರಿಗೆ ನೋಂದಣಿ ಮಾಡಿಕೊಡಬೇಕು ಎಂಬ ಷರತ್ತುಗಳಿವೆ.

ಮಾಹಿತಿ ಪ್ರಕಾರ, ಯಾವುದೇ ಅರ್ಹತೆಗಳನ್ನು ನಿಗದಿಪಡಿಸದೇ, 'ಮೊದಲ ಬಂದವರಿಗೆ ಆದ್ಯತೆ' ಯಂತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಒಂದೆರಡು ಕಡೆ ಉದ್ದಿಮೆ ಆರಂಭಿಸದವರಿಂದ ಕೆಲ ನಿವೇಶನಗಳನ್ನು ಹಿಂಪಡೆದಿದ್ದರೂ, ಅದನ್ನು ಹೆಚ್ಚಿನ ಬೆಲೆಗೆ ಮತ್ತೆ ಉಪಗುತ್ತಿಗೆ ನೀಡಿದ್ದು, ಇದೊಂದು ರೀತಿಯ 'ರಿಯಲ್ ಎಸ್ಟೇಟ್'ನಂತಹ ದಂಧೆಯಂತಾಗಿದೆ ಎಂಬ ಆರೋಪಗಳಿವೆ.

ಇಂಥ ಹಲವು 'ಅವ್ಯವಸ್ಥೆ'ಗಳಿಂದ ಬೇಸತ್ತ ಕೆಲವು ಉದ್ದಿಮೆದಾರರು ಫುಡ್‌ಪಾರ್ಕ್‌ಗಳ ವಿರುದ್ಧ ಸರ್ಕಾರಕ್ಕೆ ದೂರು ನೀಡಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 23-3-2000

• ಕೋಲ್ಹಾರ: ಹೋಳಿ ಘರ್ಷಣೆ, ಗೋಲಿಬಾರ್

ವಿಜಯಪುರ, ಮಾರ್ಚ್ 22– ಇಲ್ಲಿಗೆ 50 ಕಿ.ಮೀ ದೂರದಲ್ಲಿರುವ ಕೊಲ್ಹಾರ ಗ್ರಾಮದಲ್ಲಿ ಇಂದು ಮುಂಜಾನೆ ಹೋಳಿ ಹಬ್ಬದ ಸಂದರ್ಭದಲ್ಲಿ ಎರಡು ಕೋಮುಗಳ ನಡುವೆ ಸಂಭವಿಸಿದ ಘರ್ಷಣೆಯಲ್ಲಿ ಸುಮಾರು 10 ಅಂಗಡಿಗಳು ಭಸ್ಮವಾಗಿದ್ದವು. ಗಲಭೆ ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ ಮೂವರು ಗಾಯಗೊಂಡಿದ್ದಾರೆ.

ಘರ್ಷಣೆಯಲ್ಲಿ ಕಲ್ಲುತೂರಾಟದಿಂದ ಮತ್ತೊಬ್ಬನ ತಲೆಗೂ ಪೆಟ್ಟು ಬಿದ್ದಿದ್ದು, ಇವರೆಲ್ಲರನ್ನು ವಿಜಾಪುರದ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 23-3-1975

• ಹಾಕಿ ತಂಡ ತೆತ್ತ ತೆರಿಗೆ ದಂಡ ವಾಪಸ್: ಇಂದಿರಾ ಕ್ರಮ

ನವದೆಹಲಿ, ಮಾರ್ಚ್ 22– ಈ ವಾರದ ಆರಂಭದಲ್ಲಿ ಸಿಂಗಪುರದಿಂದ ಮದ್ರಾಸ್‌ಗೆ ಆಗಮಿಸಿದ ಭಾರತೀಯ ಹಾಕಿ ತಂಡದ ಸದಸ್ಯರಿಗೆ ವಿಧಿಸಲಾದ ಎಲ್ಲ ದಂಡಗಳನ್ನೂ ತೆರಿಗೆಗಳನ್ನೂ ಹಿಂತಿರುಗಿಸುವಂತೆ ಮದ್ರಾಸ್ ಕಡಲಸುಂಕದ ಅಧಿಕಾರಿಗಳಿಗೆ ಪ್ರಧಾನಿ ಇಂದಿರಾ ಗಾಂಧಿ ಅವರು ತಿಳಿಸಿದ್ದಾರೆ.

ವಿಶ್ವಕಪ್ ಹಾಕಿ ಟೂರ್ನಮೆಂಟ್‌ನಲ್ಲಿ ನಮ್ಮ ಹಾಕಿ ಆಟಗಾರರು ರಾಷ್ಟ್ರದ ಪ್ರತಿಷ್ಠೆಗೆ ಅಮೋಘ ಕೊಡುಗೆ ನೀಡಿದ್ದಾರೆ ಎಂದು ಭಾರತೀಯ ತಂಡದ ಮ್ಯಾನೇಜರ್ ಬಲಬೀರ್‌ಸಿಂಗ್ ಅವರು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮಾರ್ಚ್ 23, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣನವಮಿ ಗಂ. 29-39 ನಕ್ಷತ್ರ: ಪೂರ್ವಾಷಾಢ ಗಂ. 28-18 ಯೋಗ: ವರಿಯಾನ್ ಗಂ. 17-59 ಕರಣ: ತೈತಿಲ ಗಂ. 17-37, ಮೀನ ಮಾಸದ 09 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-37 **ಸೂರ್ಯಾಸ್ತ:** 06-38
ಮುಸ್ಲಿಂ ದಿನಾಂಕ: 22 ರಂಜಾನ್
ಅದೃಷ್ಟ ಸಂಖ್ಯೆ: 7, 4

ಮೇಷ: ಇಂದು ಬೆಳಿಗ್ಗೆಯಿಂದ ಇದ್ದ ಸಮಸ್ಯೆಗಳು ಸಂಜೆಯ ವೇಳೆ ನಿಮ್ಮ ಪ್ರಯತ್ನದಿಂದ ದೂರವಾಗಲಿವೆ. ತಾಯಿಯ ಆರೋಗ್ಯದ ಬಗ್ಗೆ ಕಳವಳಗೊಳ್ಳುವಿರಿ. ಹೆಂಡತಿ ಮಾತಿಗೆ ಬೆಲೆ ಕೊಡುವುದು ಸೂಕ್ತ.

ವೃಷಭ: ಈಗಿನ ಪರಿಸ್ಥಿತಿಯಲ್ಲಿ ಬಿಡುವಿನ ಸಂದರ್ಭದಲ್ಲಿಯೂ ಕೆಲಸ ಮಾಡುವಂತಹ ಅನಿವಾರ್ಯ ಎದುರಾಗಲಿದೆ. ಜೀವನದಲ್ಲಿ ಅನಿಶ್ಚಿತ ಬದಲಾವಣೆಗಳು ಉಂಟಾಗುವುದು. ಕ್ರಿಮಿಕೀಟಗಳ ಬಾಧೆ ಉಂಟಾಗಬಹುದು.

ಮಿಥುನ: ನೀವು ಹೊಸದಾಗಿ ಕೆಲಸಕ್ಕೆ ಸೇರಿರುವ ಜಾಗದಲ್ಲಿ ಹೊಂದಾಣಿಕೆಯು ಸವಾಲಾಗುವುದು. ಸಹೋದರಿಯ ಸಹಾಯದಿಂದ ನಿಮ್ಮ ಇಂದಿನ ಕೆಲಸಗಳು ಸರಾಗವಾಗಿ ನಡೆಯಲಿವೆ. ಹಳೆಯ ವಸ್ತುಗಳನ್ನು ವಿಲೇವಾರಿ ಮಾಡುವಿರಿ.

ಕರ್ಕಾಟಕ: ಒಂದು ವಿಚಾರವನ್ನು ಸೂಕ್ಷ್ಮವಾಗಿ ಅವಲೋಕಿಸುವುದರಿಂದ ಹೆಚ್ಚು ಜ್ಞಾನ ಪಡೆಯುವಿರಿ. ಜೊತೆಗಾರರಿಗಿಂತ ವಿಭಿನ್ನ ರೀತಿಯಲ್ಲಿ ಆಲೋಚಿಸುವುದು ನಿಮ್ಮ ನಾಯಕತ್ವ ಗುಣಕ್ಕೆ ಕಾರಣವಾಗಲಿದೆ.

ಸಿಂಹ: ನೀವು ಖರ್ಚು ಮಾಡುತ್ತಿರುವ ರೀತಿ, ಮುಂದೆ ನಿಮಗೆ ತೊಂದರೆ ಉಂಟುಮಾಡುವುದು. ಸಾಹಿತ್ಯಾತ್ಮಕವಾದ ನಿಮ್ಮ ಬಹುದಿನದ ಕನಸು ನನಸಾಗುವುದು. ಎಲ್ಲ ಕಾರ್ಯದಲ್ಲೂ ಅಧಿಕ ಪ್ರಯತ್ನ ಇರಲಿ.

ಕನ್ಯಾ: ಕೃಷಿಯಲ್ಲಿ ಹೊಸ ಪ್ರಯೋಗ ಮಾಡುವುದರಿಂದ ಲಾಭ ಗಳಿಸುವಿರಿ. ಚಿನ್ನಾಭರಣ ಖರೀದಿಯು ಅನಿವಾರ್ಯ ಇಲ್ಲದಿದ್ದಲ್ಲಿ ಅದಕ್ಕೆ ಈ ಸಂದರ್ಭದಲ್ಲಿ ದುಡ್ಡು ಖರ್ಚು ಮಾಡಲು ಹೋಗದಿರಿ.

ತುಲಾ: ಗಾಜಿನ ವಸ್ತುಗಳನ್ನು ಬಳಸುವಾಗ ಅತ್ಯಂತ ಜಾಗರೂಕತೆ ಅತ್ಯಗತ್ಯ. ಗೃಹೋಪಯೋಗಿ ವಸ್ತುಗಳ ಖರೀದಿಗೆ ನೀವೊಬ್ಬರೇ ಹೋಗುವುದಕ್ಕಿಂತ ಕುಟುಂಬದವರನ್ನೂ ಕರೆದುಕೊಂಡು ಹೋಗಿ.

ವೃಶ್ಚಿಕ: ಅಲಂಕಾರಿಕ ವಸ್ತುಗಳ ಮಾರಾಟದಿಂದ ಲಾಭ ಗಳಿಸುವಿರಿ. ಮೃತರ ಕುಟುಂಬಕ್ಕೆ ಸಾಂತ್ವನ ಹೇಳುವಂತಹ ಕರ್ತವ್ಯವನ್ನು ಮಾಡಬೇಕಾಗುವುದು. ನೀವು ನ್ಯಾಯದ ಪರವಾಗಿದ್ದರೆ ಜನಬಲ ದೊರೆಯುವುದು.

ಧನು: ದೊಡ್ಡ ಮಟ್ಟದಲ್ಲಿ ಕರಿದ ತಿಂಡಿ ಹಾಗೂ ಸಿಹಿ ತಿಂಡಿಗಳ ವಾಹಿವಾಟುಗಳನ್ನು ಮಾಡುವವರಿಗೆ ಲಾಭದಾಯಕ ದಿನ. ದೇವಸ್ಥಾನದ ಜಾತ್ರಾದಿ ಮಹೋತ್ಸವಗಳಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗುವಿರಿ.

ಮಕರ: ತಂದೆ ತಾಯಿಯನ್ನು ಹಲವು ದಿನಗಳ ನಂತರ ಭೇಟಿ ಮಾಡಿ ಈಗ ಮತ್ತೆ ಅವರನ್ನು ಅಗಲಿ ಕಾರ್ಯಕ್ಷೇತ್ರಕ್ಕೆ ತೆರಳುವುದು ದುಃಖದ ಸಂಗತಿಯಾಗುವುದು. ಜಲ ಸಂಪನ್ಮೂಲದಿಂದ ಆದಾಯ ಗಳಿಸುವಿರಿ.

ಕುಂಭ: ಸದ್ಯದ ಸಮಯದಲ್ಲಿ ದೂರದ ಪ್ರಯಾಣಗಳನ್ನು ರದ್ದುಗೊಳಿಸುವುದು ಸೂಕ್ತಕರ. ಹೆಂಡತಿಯ ಆರೋಗ್ಯದ ಮೇಲೆ ಕಾಳಜಿ ಉಂಟಾಗುವುದು. ಮನೆಗೆ ಅತಿಥಿಗಳ ಆಗಮನವು ನಿಮ್ಮ ವೇಳಾಪಟ್ಟಿಯನ್ನು ಏರುಪೇರುಗೊಳಿಸುವುದು.


ಮೀನ: ಒಬ್ಬರ ಬಗ್ಗೆ ನೀವು ಕೇಳಿದ ವಿಚಾರಗಳನ್ನೇ ತಲೆಯಲ್ಲಿ ಇಟ್ಟುಕೊಂಡು ಶಂಕಿಸುವುದಕ್ಕಿಂತ ಅವರ ಬಳಿಯೇ ಅದನ್ನು ಪರಿಹರಿಸಿಕೊಳ್ಳುವುದು ಒಳ್ಳೆಯದು. ಎಲೆಕ್ಟ್ರಾನಿಕ್ ವಸ್ತುಗಳ ಮೇಲೆ ಹಣವನ್ನು ಹಾಕುವಿರಿ.

ಪದಬಂಧ 5990

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕುದುರೆ ಬಂಡಿಯಿದು (3)
6.ಉತ್ತರ ಕೊಟ್ಟಿದ್ದಕ್ಕೇ ಈ ಹೊಣೆಗಾರಿಕೆ! (5)
7.ನಾದಮಾಧುರ್ಯವಿದು (3)
8.ಯೌವ್ವನದಲ್ಲಿ ನೋಡಿರುವ ಕಾಡು (2)
10.ಶರೀರದಲ್ಲಿ ತೂರಿದ ಬಾಣ (2)
11.ಗಣಪತಿಯ ವಾಹನ (3)
13.ಆ ಮನೆ ಮುಂದೆ ನಿಂತಿರುವ ಗಜ (2)
14.ದಿಟ್ಟೆ ನುಡಿದ ಸತ್ಯ ಉಲ್ಟಾ ಆಗಿಬಿಟ್ಟಿದೆಯಲ್ಲಾ? (2)
18.ದನಕರುಗಳ ಮೂತ್ರ (3)
19.ಈತ ದಾರಿ ತೋರುವವನು (5)
20.ಜೀರ್ಣಾಂಗವಿಲ್ಲಿ ತಿರುವು ಮುರುವಾಗಿದೆ (3)

ಮೇಲಿಂದ ಕೆಳಕ್ಕೆ
1.ಗೆಲುವನ್ನು ಪಡೆದವನೀತ (4)
2.ಮಧುರವಾದ ಧ್ವನಿ (4)
3.ಅಂಜದೆ ಬೊಗಸೆ ತೋರಿಸಿ! (3)
4.ನೀರನ್ನು ಹೊತ್ತಿರುವ ಮೋಡ (4)
5.ತುರಿಯುವ ಸಾಧನ (4)
9.ಮೂಲೆ ಮನೆಯ ಮಾದರಿ ! (3)
10.ಕಟ ಕಟ ಶಬ್ದ ಮಾಡುತ್ತಾ ಬರುತ್ತಿರುವ ಬಂಡಿ (3)
12.ಉಪ್ಪರಿಗೆ ಇಲ್ಲಿದೆ (4)
13.ಪಾದ ನಡುವಿಟ್ಟು ತಪ್ಪನ್ನು ಹೊರಿಸುವುದು (4)
15.ಬರ ಬಂದಿರುವಾಗಿನ ನಗ್ನತೆ (4)
16.ಮಲಯ ಪರ್ವತದಲ್ಲಿರುವ ಶ್ರೀಗಂಧ (4)
17.ಕೂದಲಿಲ್ಲದೆ ಬೋಳಾದುದು (3)



5989ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ವಾವಲಂಬನೆ 3.ಪುರುಷ
5.ತಗಡು 7.ಪುಳಕ
9.ಸಂದೂಕ 12.ಕಲಹ
14.ಸರಕು 16.ಗುಜರಿ
17.ವಿಕಟಕವಿ

ಮೇಲಿಂದ ಕೆಳಕ್ಕೆ:
1.ಸ್ವಾಗತ 2.ನೆನಪು
3.ಪುಸ್ತಕ 4.ಷಡ್ಡಕ
6.ಗರ್ಜನೆ 8.ಳವಕ
9.ಸಂಕುಲ 10.ಅಧರ
11.ಅಲಗು 12.ಕಸ್ತೂರಿ
13.ಹರವಿ 15.ಕುಲಾವಿ

ಸುಡೊಕು 6375

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6374 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚೆನ್ನೈನಲ್ಲಿ ನಡೆದ ದಕ್ಷಿಣ ಭಾರತದ ವಿವಿಧ ರಾಜಕೀಯ ಪಕ್ಷಗಳ ಸಭೆಗೆ ಡಿಎಂಕೆ ನೇತೃತ್ವ

ಕ್ಷೇತ್ರ ಮರುವಿಂಗಡಣೆ: 'ನ್ಯಾಯ'ಕ್ಕೆ ಆಗ್ರಹ

ಚೆನ್ನೈ (ಪಿಟಿಐ): ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಸಂದರ್ಭದಲ್ಲಿ ಜನಸಂಖ್ಯೆಯನ್ನು ಮಾನದಂಡವಾಗಿ ಪರಿಗಣಿಸುವುದರ ವಿರುದ್ಧ ಹೋರಾಡಬೇಕು, ಪ್ರಾತಿನಿಧ್ಯವನ್ನು ಕಳೆದುಕೊಳ್ಳದೆ ಇರಲು 'ನ್ಯಾಯಸಮ್ಮತ ಮರುವಿಂಗಡಣೆಗಾಗಿ' ಆಗ್ರಹಿಸಬೇಕು...

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತು ಚರ್ಚಿಸಲು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷದ ಬೆಂಬಲ ಇರುವ 'ಜಂಟಿ ಕ್ರಿಯಾ ಸಮಿತಿ'ಯು (ಜೆಎಸಿ) ಆಯೋಜಿಸಿದ್ದ ಸಭೆಯಲ್ಲಿ ವ್ಯಕ್ತವಾದ ರಾಜಕೀಯ ಒಮ್ಮತ ಇದು.

ಹೋರಾಟವನ್ನು ಕಾನೂನಿನ ಮೂಲಕವೂ ಮುಂದಕ್ಕೆ ಒಯ್ಯುವ ಸಾಧ್ಯತೆ ಇದೆ ಎಂಬುದನ್ನು ಶನಿವಾರ ಇಲ್ಲಿ ನಡೆದ ಸಭೆಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸ್ಪಷ್ಟವಾಗಿ ಹೇಳಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯು ನೆತ್ತಿಯ ಮೇಲಿನ ತೂಗುಕತ್ತಿಯಂತೆ ಆಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಯಾರ ಜೊತೆಯೂ ಸಮಾಲೋಚನೆ ನಡೆಸದೆ ಮರುವಿಂಗಡಣೆಯ ಯೋಜನೆಯೊಂದಿಗೆ ಮುಂದೆ ಸಾಗುತ್ತಿದೆ ಎಂದು ವಿಜಯನ್ ದೂರಿದರು. 'ಈ ಹಠಾತ್ ಕ್ರಮವು ಸಾಂವಿಧಾನಿಕ ತತ್ವಗಳು ಹಾಗೂ ಪ್ರಜಾತಾಂತ್ರಿಕ ಅಗತ್ಯಗಳಿಗೆ ಅನುಗುಣವಾಗಿ ಇಲ್ಲ. ಬದಲಿಗೆ ಇದು ಸಂಕುಚಿತ ರಾಜಕೀಯ ಹಿತಾಸಕ್ತಿಗಳಿಂದ ಕೂಡಿದೆ' ಎಂದು ಆರೋಪಿಸಿದರು.

ಜನಗಣತಿಯ ನಂತರ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆದರೆ ಉತ್ತರದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗುತ್ತದೆ, ದಕ್ಷಿಣದ ರಾಜ್ಯಗಳ ಕ್ಷೇತ್ರಗಳ ಸಂಖ್ಯೆ ಕಡಿಮೆ ಆಗುತ್ತದೆ. ದಕ್ಷಿಣದ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಿ, ಉತ್ತರದ ಕ್ಷೇತ್ರಗಳ ಸಂಖ್ಯೆ ಹೆಚ್ಚಾದರೆ ಬಿಜೆಪಿಗೆ ಅನುಕೂಲ ಆಗುತ್ತದೆ. ಏಕೆಂದರೆ ಬಿಜೆಪಿ ಉತ್ತರದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿದೆ ಎಂದು ವಿಜಯನ್ ವಿವರಿಸಿದರು.

'ಕ್ಷೇತ್ರ ಮರುವಿಂಗಡಣೆಯನ್ನು ನಾವು ವಿರೋಧಿಸುತ್ತಿಲ್ಲ. ಮರುವಿಂಗಡಣೆ ನ್ಯಾಯಸಮ್ಮತವಾಗಿ ಇರಬೇಕು ಎಂದು ನಾವು ಹೇಳುತ್ತಿದ್ದೇವೆ' ಎಂದು ಸ್ಟಾಲಿನ್ ಹೇಳಿದರು.

'ಜನಸಂಖ್ಯೆ ಆಧರಿಸಿ ಮರುವಿಂಗಡಣೆ ನಡೆದಲ್ಲಿ ದಕ್ಷಿಣ ಭಾರತ ರಾಜಕೀಯ ದನಿ ಕಳೆದುಕೊಳ್ಳುತ್ತದೆ. ಉತ್ತರ ಭಾರತವು ನಮ್ಮನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಮಾಡುತ್ತದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಹೇಳಿದರು. ಈ ನಡುವೆ ಸಭೆಯನ್ನು ವಿರೋಧಿಸಿ ತಮಿಳುನಾಡು ಬಿಜೆಪಿ ಘಟಕವು ಕಪ್ಪು ಬಾವುಟ ಪ್ರದರ್ಶಿಸಿತು. ಈ ಸಭೆಯನ್ನು ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು 'ನಾಟಕ' ಎಂದು ಬಣ್ಣಿಸಿದರು.


ಪಿಣರಾಯಿ ವಿಜಯನ್, ಎಂ.ಕೆ. ಸ್ಟಾಲಿನ್, ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎ. ರೇವಂತ ರೆಡ್ಡಿ, ಭಗವಂತ ಮಾನ್ ಮತ್ತಿತರರು ಸಭೆಯಲ್ಲಿ ಭಾಗಿಯಾಗಿದ್ದರು —ಪಿಟಿಐ ಚಿತ್ರ

ತಾನು ಗೆಲ್ಲುವ ರಾಜ್ಯಗಳ ಸೀಟುಗಳ ಸಂಖ್ಯೆ ಹೆಚ್ಚಿಸುವುದು, ತಾನು ಸೋಲುವಲ್ಲಿ ಸೀಟುಗಳ ಸಂಖ್ಯೆ ತಗ್ಗಿಸುವುದು ಬಿಜೆಪಿಯ ಬಯಕೆ
ಭಗವಂತ್ ಮಾನ್, ಪಂಜಾಬ್ ಮುಖ್ಯಮಂತ್ರಿ

ಸಾರಾಯಿ ಹಗರಣದಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದ ಡಿಎಂಕೆ ಪಕ್ಷವು ಕ್ಷೇತ್ರ ಮರುವಿಂಗಡಣೆ ಕುರಿತ ಸಭೆ ನಡೆಸಿದೆ
ಬಂಡಿ ಸಂಜಯ್ ಕುಮಾರ್, ಕೇಂದ್ರ ಸಚಿವ

ಪರ್ಯಾಯ ಆಯ್ಕೆ ಬಗ್ಗೆ ರಾಮರಾವ್ ಸಲಹೆ

ಹೈದರಾಬಾದ್ (ಪಿಟಿಐ): ಜನಸಂಖ್ಯೆಯನ್ನು ಆಧರಿಸಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡುವ ಬದಲು ಪರ್ಯಾಯ ಸಾಧ್ಯತೆಗಳನ್ನು ಪರಿಶೀಲಿಸಬೇಕು ಎಂದು ಬಿಆರ್‌ಎಸ್ ನಾಯಕ ಕೆ.ಟಿ. ರಾಮರಾವ್ ಹೇಳಿದರು.

ರಾಜ್ಯಗಳ ಆರ್ಥಿಕ ಪ್ರಗತಿಯನ್ನು, ಆಡಳಿತಾತ್ಮಕ ದಕ್ಷತೆಯನ್ನು, ಅಭಿವೃದ್ಧಿಯಲ್ಲಿನ ಸಾಧನೆಗಳನ್ನು ಪರಿಗಣಿಸಿ ಕ್ಷೇತ್ರ ಮರುವಿಂಗಡಣೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಲೋಕಸಭೆಯ ಕ್ಷೇತ್ರಗಳ ಸಂಖ್ಯೆಯನ್ನು ಜನಸಂಖ್ಯೆಯೊಂದನ್ನೇ ಆಧರಿಸಿ ಹೆಚ್ಚಿಸುವ ಬದಲು, ಕೇಂದ್ರ ಸರ್ಕಾರವು ಆ ಕ್ಷೇತ್ರಗಳ ಸಂಖ್ಯೆಯನ್ನು ಈಗಿರುವ ಮಟ್ಟದಲ್ಲೇ ಉಳಿಸಿಕೊಳ್ಳಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚು ಮಾಡಲು ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು ಎಂದು ಅವರು ಸಲಹೆ ನೀಡಿದರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣದ ರಾಜ್ಯಗಳ ಪಾಲು ಶೇಕಡ 19ರಷ್ಟು ಮಾತ್ರ. ಹೀಗಿದ್ದರೂ ದೇಶದ ಜಿಡಿಪಿಗೆ ದಕ್ಷಿಣದ ರಾಜ್ಯಗಳು ಶೇಕಡ 36ರಷ್ಟು ಕೊಡುಗೆ ನೀಡುತ್ತಿವೆ. ಈ ರಾಜ್ಯಗಳಿಗೆ ಅವುಗಳು ನೀಡುತ್ತಿರುವ ಆರ್ಥಿಕ ಉತ್ಪಾದನೆಯನ್ನು ಆಧರಿಸಿ ಸಂಸತ್ತಿನಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂದು ಅವರು ಹೇಳಿದರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ವಿನೋದ್ ಶುಕ್ಲಾಗೆ ಜ್ಞಾನಪೀಠ

ನವದೆಹಲಿ (ಪಿಟಿಐ): ಛತ್ತೀಸಗಢದ ಸಣ್ಣ ಕಥೆಗಾರ ವಿನೋದ್ ಕುಮಾರ್ ಶುಕ್ಲಾ ಅವರು 59ನೇ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಾಹಿತ್ಯಕ್ಕಾಗಿ ನೀಡುವ ಈ ಅತ್ಯುನ್ನತ ಪ್ರಶಸ್ತಿ ಛತ್ತೀಸಗಢ ರಾಜ್ಯದವರಿಗೆ ಇದೇ ಮೊದಲ ಬಾರಿಗೆ ಲಭಿಸಿದೆ.

ಹಿಂದಿ ಭಾಷೆಯ ಈಗಿನ ಬರಹಗಾರರಲ್ಲಿ 88 ವರ್ಷದ ವಿನೋದ್, ಪ್ರಮುಖರು. ಸಣ್ಣ ಕಥೆಗಳು, ಕವಿತೆ, ಪ್ರಬಂಧ... ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿನೋದ್ ಅವರು ಸಾಹಿತ್ಯ ರಚಿಸಿದ್ದಾರೆ. ಹಿಂದಿ ಭಾಷೆಗೆ ದೊರೆಯುತ್ತಿರುವ 12ನೇ ಜ್ಞಾನಪೀಠ ಪ್ರಶಸ್ತಿ ಇದಾಗಿದೆ. ಪ್ರಶಸ್ತಿಯು ₹11 ಲಕ್ಷ ನಗದು ಮತ್ತು ಸರಸ್ವತಿಯ ಕಂಚಿನ ಪ್ರತಿಮೆ ಒಳಗೊಂಡಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಥೆಗಾರ್ತಿ ಪ್ರತಿಭಾ ರಾಯ್ ಅಧ್ಯಕ್ಷತೆಯ ಆಯ್ಕೆ ಸಮಿತಿಯು ವಿನೋದ್ ಅವರನ್ನು ಆಯ್ಕೆ ಮಾಡಿದೆ. 'ಹಿಂದಿ ಸಾರಸ್ವತ ಲೋಕಕ್ಕೆ ವಿನೋದ್ ಅವರ ಕೊಡುಗೆಗಳನ್ನು ಗಮನಿಸಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಾಹಿತ್ಯ, ಕ್ರಿಯಾತ್ಮಕತೆ ಮತ್ತು ವಿಶಿಷ್ಟವಾದ ಬರಹ ಶೈಲಿಗಾಗಿ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ' ಎಂದು ಸಮಿತಿ ಹೇಳಿದೆ.

ಪ್ರಮುಖ ಕೃತಿಗಳು: 'ದಿವಾರ್ ಮೇ ಏಕ್ ಖಿಡಕಿ ರಹತೀ ಥಿ' ಕೃತಿಗೆ ವಿನೋದ್ ಅವರಿಗೆ 1999ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. 'ನೌಕರ್ ಕಿ ಕಮೀಜ್' (1979) ಅವರ ಪ್ರಮುಖ ಕೃತಿಯಾಗಿದೆ. ಈ ಕಾದಂಬರಿಯನ್ನೇ ಇಟ್ಟುಕೊಂಡು, ಇದೇ ಹೆಸರಿನ ಸಿನಿಮಾವನ್ನು ಮೌನಿ ಕೌಲ್ ಅವರು ನಿರ್ದೇಶಿಸಿದ್ದಾರೆ. 'ಸಬ್ ಕುಚ್ ಹೋನಾ ಬಚಾ ರಹೇಗಾ' (1992) ಅವರ ಪ್ರಮುಖ ಕವನ ಸಂಕಲನವಾಗಿದೆ.



● ಇದು ನಿಜಕ್ಕೂ ದೊಡ್ಡ ಪ್ರಶಸ್ತಿಯೇ ಸರಿ. ನನಗೆ ಇಂಥದ್ದೊಂದು ಪ್ರಶಸ್ತಿ ಲಭಿಸುತ್ತದೆ ಎಂದು ಎಣಿಸಿರಲಿಲ್ಲ. ಪ್ರಶಸ್ತಿಗಳಿಗೆಲ್ಲ ತಲೆಕೆಡಿಸಿಕೊಂಡವನೂ ನಾನಲ್ಲ. ನಾನು ಜ್ಞಾನಪೀಠ ಪಡೆಯುವುದಕ್ಕೆ ಅರ್ಹನಾಗಿದ್ದೇನೆ ಎಂದು ಸ್ನೇಹಿತರೊಂದಿಗೆ ಮಾತುಕತೆ ನಡೆಸುವಾಗಲೆಲ್ಲಾ ಅವರು ನನಗೆ ಹೇಳುತ್ತಿದ್ದರು. ಅವರಿಗೆ ನಾನೇನು ಉತ್ತರಿಸಲಿ. ಹಿಂಜರಿಕೆಯಿಂದ ನಾನೇನು ಹೇಳುತ್ತಲೇ ಇರಲಿಲ್ಲ.

● ಬರವಣಿಗೆ ಎನ್ನುವುದು ಸಣ್ಣ ಕೆಲಸವಲ್ಲ. ನೀವು ಬರಿಯುತ್ತಿದ್ದರೆ ಸದಾ ಬರೆಯುತ್ತಲೇ ಇರಿ. ನಿಮ್ಮ ಮೇಲೆ ನಿಮಗೆ ಆತ್ಮವಿಶ್ವಾಸ ಇರಲಿ. ನಿಮ್ಮ ಪುಸ್ತಕ ಪ್ರಕಟವಾದ ಬಳಿಕ ಯಾರಾದರೂ ಅದನ್ನು ವಿಮರ್ಶಿಸಿದರೆ, ಆ ವಿಮರ್ಶೆ ಬಗ್ಗೆ ನೀವು ಗಮನ ಹರಿಸಬೇಕು

ವಿನೋದ್ ಕುಮಾರ್ ಶುಕ್ಲಾ, ಕಥೆಗಾರ

ಸರ್ವಪಕ್ಷಗಳೊಂದಿಗೆ ಚುನಾವಣಾ ಅಧಿಕಾರಿಗಳ ಸಭೆ

ನವದೆಹಲಿ (ಪಿಟಿಐ): ಬೂತ್ ಮಟ್ಟದ ಸಮಸ್ಯೆಗಳ ಪರಿಹಾರಕ್ಕಾಗಿ ಸುಮಾರು 4,000 ಚುನಾವಣಾ ನೋಂದಣಾಧಿಕಾರಿಗಳು ಸಂಬಂಧಿಸಿದ ವಿಧಾನಸಭೆ ಕ್ಷೇತ್ರದಲ್ಲಿ ಸರ್ವ ಪಕ್ಷಗಳ ಸಭೆ ನಡೆಸುತ್ತಿದ್ದಾರೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

ಸಮಸ್ಯೆಗಳ ಪರಿಹಾರಕ್ಕಾಗಿ ರಾಜಕೀಯ ಪಕ್ಷಗಳೊಂದಿಗೆ ಬಹುಹಂತಗಳಲ್ಲಿ ಸಂವಾದ ನಡೆಸಬೇಕು ಎಂದು ಆಯೋಗ ಇತ್ತೀಚೆಗೆ ನಿರ್ದೇಶನ ನೀಡಿತ್ತು. ಅದರ ಭಾಗವಾಗಿ ಈ ಸಭೆಗಳು ನಡೆಯುತ್ತಿವೆ.

788 ಜಿಲ್ಲಾ ಚುನಾವಣಾ ಅಧಿಕಾರಿಗಳು, 36 ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗಳಿಗೂ ಇಂಥ ಸಭೆಗಳನ್ನು ಆಯೋಜಿಸಲು ಸೂಚಿಸಲಾಗಿದೆ. ಈ ಸಭೆಗಳು ಮಾರ್ಚ್ 31ಕ್ಕೆ ಅಂತ್ಯಗೊಳ್ಳಲಿವೆ. ಹಲವು ರಾಜ್ಯಗಳ ಮತದಾರರ ಗುರುತಿನ ಚೀಟಿಗಳು ಒಂದೇ ಎಪಿಕ್ ಸಂಖ್ಯೆ ಹೊಂದಿವೆ ಎಂದು ಇತ್ತೀಚೆಗೆ ಟಿಎಂಸಿ ಆರೋಪಿಸಿತ್ತು.

ಮೇಕ್ ಇನ್ ಇಂಡಿಯಾ ಪ್ರಚಾರಕ್ಕೆ ಸೀಮಿತ: ಖರ್ಗೆ

ನವದೆಹಲಿ (ಪಿಟಿಐ): ಬಿಜೆಪಿ ಸರ್ಕಾರದ 'ಮೇಕ್ ಇನ್ ಇಂಡಿಯಾ' ಪರಿಕಲ್ಪನೆ ಕೇವಲ ಘೋಷಣೆಯಾಗಿಯೇ ಉಳಿದುಕೊಂಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಟೀಕಿಸಿದ್ದಾರೆ.

'ಮೋದಿ ಸರ್ಕಾರವು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದಕ್ಕಿಂತ ಪ್ರಚಾರಕ್ಕೆ ಮಾತ್ರ ಪ್ರಾಮುಖ್ಯತೆ ನೀಡುತ್ತದೆ ಎನ್ನುವುದಕ್ಕೆ ಮೇಕ್ ಇನ್ ಇಂಡಿಯಾ ಪರಿಕಲ್ಪನೆ ಅತ್ಯುತ್ತಮ ಉದಾಹರಣೆಯಾಗಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಿಜೆಪಿಯು 2014ರ ತನ್ನ ಪ್ರಣಾಳಿಕೆಯಲ್ಲಿ ಭಾರತವನ್ನು 'ಜಾಗತಿಕ ತಯಾರಿಕಾ ಕೇಂದ್ರ'ವನ್ನಾಗಿಸುವುದಕ್ಕೆ ಸಂಬಂಧಿಸಿದಂತೆ 10 ಭರವಸೆಗಳನ್ನು ನೀಡಿತ್ತು. ಆದರೆ ಯಾವುದನ್ನೂ ಈಡೇರಿಸಿಲ್ಲ' ಎಂದಿದ್ದಾರೆ.



ಕಾಂಗ್ರೆಸ್ ಆಡಳಿತದಲ್ಲಿ ನಿಜವಾದ 'ಆತ್ಮನಿರ್ಭರ ಭಾರತ' ಇತ್ತು ಎಂಬುದು ಪ್ರಧಾನಿ ಮೋದಿ ಅವರಿಗೆ ಈಗ ಮನವರಿಕೆಯಾಗಿರಬಹುದು
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಪರಿಷ್ಕರಣೆ 25 ವರ್ಷ ಬೇಡ

ಒಂದನೇ ಪುಟದಿಂದ...

'ಸಂವಿಧಾನಕ್ಕೆ ತಂದ 42ನೇ, 84ನೇ ಹಾಗೂ 87ನೇ ತಿದ್ದುಪಡಿಯ ಉದ್ದೇಶವು ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ ರಾಜ್ಯಗಳನ್ನು ರಕ್ಷಿಸುವುದಾಗಿತ್ತು, ಅವುಗಳಿಗೆ ಉತ್ತೇಜನ ನೀಡುವುದಾಗಿತ್ತು. ದೇಶದ ಜನಸಂಖ್ಯೆ ಬೆಳವಣಿಗೆಯನ್ನು ಸ್ಥಿರಗೊಳಿಸುವ ಗುರಿಯನ್ನು ಇನ್ನೂ ತಲುಪಿ ಆಗಿಲ್ಲದಿರುವಾಗ, 1971ರ ಜನಗಣತಿಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಸ್ಥಿರಗೊಳಿಸಿರುವ ಕ್ರಮವನ್ನು ಇನ್ನೂ 25 ವರ್ಷಗಳಿಗೆ ವಿಸ್ತರಿಸ ಬೇಕು' ಎಂದು ನಿರ್ಣಯದಲ್ಲಿ ಹೇಳಲಾಗಿದೆ.

'ಇಲ್ಲಿ ವಿವರಿಸಿರುವ ತತ್ವಗಳಿಗೆ ವಿರುದ್ಧವಾದ ಬಗೆಯಲ್ಲಿ ಕೇಂದ್ರ ಸರ್ಕಾರವು ಕ್ಷೇತ್ರ ಮರುವಿಂಗಡಣೆಗೆ ಯತ್ನಿಸಿದರೆ ಅದನ್ನು ವಿರೋಧಿಸಲು ಸಂಸದೀಯ ಕಾರ್ಯತಂತ್ರ ಏನಿರಬೇಕು ಎಂಬುದನ್ನು ಪ್ರಮುಖ ಸಂಸದರ ಸಮಿತಿಯು ಸಮನ್ವಯದಿಂದ ತೀರ್ಮಾನಿಸಲಿದೆ' ಎಂದು ನಿರ್ಣಯದಲ್ಲಿ ವಿವರಿಸಲಾಗಿದೆ.

ಸಭೆಯಲ್ಲಿ ಭಾಗಿಯಾಗಿದ್ದ ವಿವಿಧ ರಾಜಕೀಯ ಪಕ್ಷಗಳು, ತಮ್ಮ ರಾಜ್ಯಗಳ ವಿಧಾನಸಭೆಯಲ್ಲಿ ಕ್ಷೇತ್ರ ಮರುವಿಂಗಡಣೆ ವಿಚಾರವಾಗಿ ಸೂಕ್ತವಾದ ನಿರ್ಣಯ ಅಂಗೀಕರಿಸಲು, ಅದನ್ನು ಕೇಂದ್ರಕ್ಕೆ ಕಳುಹಿಸಲು ಯತ್ನಿಸಲಿವೆ.

ಹಿಂದೆ ಕ್ಷೇತ್ರ ಮರುವಿಂಗಡಣೆ ಯಾವಾಗ, ಎಂತಹ ಸಂದರ್ಭಗಳಲ್ಲಿ ನಡೆದಿತ್ತು ಎಂಬುದರ ಮಾಹಿತಿಯನ್ನು, ಪ್ರಸ್ತಾವಿತ ಮರುವಿಂಗಡಣೆಯ ಪರಿಣಾಮಗಳನ್ನು ಜನರಿಗೆ ತಿಳಿಸಲು ಜೆಎಸಿಯು ಅಗತ್ಯ ಪ್ರಯತ್ನ ನಡೆಸಲಿದೆ ಎಂಬುದು ಕೂಡ ನಿರ್ಣಯದ ಭಾಗವಾಗಿದೆ.

'ಗಲಭೆಕೋರರಿಂದಲೇ ನಷ್ಟ ವಸೂಲಿ'

ನಾಗ್ಪುರ (ಪಿಟಿಐ): 'ನಾಗ್ಪುರ ಹಿಂಸಾಚಾರದಲ್ಲಿ ಹಾನಿಗೊಳಗಾದ ಸಾರ್ವಜನಿಕ ಆಸ್ತಿಗಳ ನಷ್ಟವನ್ನು ಗಲಭೆಕೋರರಿಂದಲೇ ವಸೂಲಿ ಮಾಡಲಾಗುವುದು. ಹಣ ಪಾವತಿಸಲಿಲ್ಲ ಎಂದಾದರೆ ಅಂಥವರ ಆಸ್ತಿಗಳನ್ನು ಮಾರಾಟ ಮಾಡಿ ಅಥವಾ ಜಪ್ತಿ ಮಾಡಿ ಹಣ ಪಡೆಯಲಾಗುವುದು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ಹೇಳಿದರು.

ಹಿಂಸಾಚಾರ ನಡೆದ ಬಳಿಕ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನಾಗ್ಪುರಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬಳಿಕ ಮಾಧ್ಯಮಗೋಷ್ಠಿ ನಡೆಸಿದರು.

'ಪರಿಸ್ಥಿತಿಗೆ ತುಪ್ಪ ಸುರಿಯುವ ಕೆಲಸ ಮಾಡಿದ ಸಾಮಾಜಿಕ ಜಾಲತಾಣಗಳ 68 ಖಾತೆಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಅಳಿಸಿ ಹಾಕಲಾಗಿದೆ. ಇಂಥ ಪೋಸ್ಟ್‌ಗಳನ್ನು ಹಂಚಿಕೊಂಡವರನ್ನೂ ಆರೋಪಿಗಳನ್ನಾಗಿ ಮಾಡಲಾಗುವುದು. ಹಿಂಸಾಚಾರದಲ್ಲಿ ವಿದೇಶಿಯರ ಅಥವಾ ಬಾಂಗ್ಲಾದೇಶಿಯರ ಕೈವಾಡವಿದೆ ಎಂಬುದರ ಕುರಿತು ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ' ಎಂದರು.

ಅಂಕಿ ಅಂಶಗಳು

4 ಶುಕ್ರವಾರ ಬಂಧನಕ್ಕೆ ಒಳಗಾದವರ ಸಂಖ್ಯೆ

10 ಶುಕ್ರವಾರ ಬಂಧನಕ್ಕೆ ಒಳಗಾದ ಬಾಲಕರ ಸಂಖ್ಯೆ

105 ಹಿಂಸಾಚಾರದಲ್ಲಿ ಇಲ್ಲಿಯವರೆಗೆ ಬಂಧನಕ್ಕೆ ಒಳಗಾದವರ ಒಟ್ಟು ಸಂಖ್ಯೆ



ತಪ್ಪು ಮಾಡಿದವರನ್ನು ಬಿಡುವುದೇ ಇಲ್ಲ. ಮಹಾರಾಷ್ಟ್ರ ಸರ್ಕಾರಕ್ಕೆ ತನ್ನದೇ ಆದ ಶೈಲಿಯೊಂದಿದೆ. ಅಗತ್ಯ ಬಿದ್ದರೆ, ಬುಲ್ಡೋಜರ್ ಕಾರ್ಯಪ್ರವೃತ್ತವಾಗಲಿದೆ
ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಮುಖ್ಯಮಂತ್ರಿ

ಮಣಿಪುರದ ಜನರಿಗೆ 'ಸುಪ್ರೀಂ' ನ್ಯಾಯಮೂರ್ತಿ ಬಿ.ಆರ್ ಗವಾಯಿ ಮನವಿ

'ಶಾಂತಿ ಸ್ಥಾಪನೆಗೆ ಒಟ್ಟಾಗಿ ಶ್ರಮಿಸಿ'

ಇಂಫಾಲ್ (ಪಿಟಿಐ): ಜನಾಂಗೀಯ ಸಂಘರ್ಷದಿಂದ ನಲುಗಿರುವ ಮಣಿಪುರದ ಜನರು ಶಾಂತಿ ಮತ್ತು ಸೌಹಾರ್ದ ಮರು ಸ್ಥಾಪಿಸಲು ಒಟ್ಟಾಗಿ ಕೆಲಸ ಮಾಡುವಂತೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಮನವಿ ಮಾಡಿದ್ದಾರೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನಿಯೋಗವು ಮಣಿಪುರದ ಚುರಾಚಾಂದ್‌ಪುರ ಜಿಲ್ಲೆಯ ಪುನರ್ವಸತಿ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿ, ಅಲ್ಲಿ ಆಶ್ರಯ ಪಡೆದಿರುವವರ ಜತೆ ಮಾತನಾಡಿತು. ಗವಾಯಿ ನೇತೃತ್ವದ ನಿಯೋಗದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಎಂ.ಎಂ.ಸುಂದರೇಶ್ ಮತ್ತು ಕೆ.ವಿ. ವೆಂಕಟೇಶ್ ಇದ್ದರು.

ಜಿಲ್ಲೆಯ ಲಮ್ಕಾದಲ್ಲಿರುವ ಮಿನಿ ಸೆಕ್ರೆಟರಿಯೇಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಕಾನೂನು ಸೇವಾ ಶಿಬಿರ ಮತ್ತು ವೈದ್ಯಕೀಯ ಶಿಬಿರವನ್ನು ವರ್ಚುವಲ್ ಆಗಿ ಉದ್ಘಾಟಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ಕೃಷ್ಣಕುಮಾರ್ ಮತ್ತು ನ್ಯಾಯಮೂರ್ತಿ ಗೋಲ್ಮೆ ಗೈಫುಲ್‌ಶಿಪು ಉಪಸ್ಥಿತರಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ನ್ಯಾಯಮೂರ್ತಿ ಗವಾಯಿ, 'ಸಂವಿಧಾನ ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಖಾತರಿಪಡಿಸುತ್ತದೆ' ಎಂದು ಹೇಳಿದರು.

ತಾವು ಕಾರ್ಯನಿರ್ವಾಹಕ ಅಧ್ಯಕ್ಷರಾಗಿರುವ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು, (ಎನ್‌ಎಎಲ್‌ಎಸ್‌ಎ) ಮಣಿಪುರ ಗಲಭೆಯಿಂದಾಗಿ ನಿರ್ವಸಿತಗರಾದವರಿಗೆ ಪರಿಹಾರ ಸಾಮಗ್ರಿಗಳನ್ನು ಒದಗಿಸಲು ₹2.5 ಕೋಟಿ ಮಂಜೂರು ಮಾಡಿದೆ. ಎನ್‌ಎಎಲ್‌ಎಸ್‌ಎ, ಈ ಹಿಂದೆ ₹1.5 ಕೋಟಿ ನೀಡಿತ್ತು ಎಂದು ತಿಳಿಸಿದರು.

ಮುಖ್ಯಾಂಶಗಳು
- ಮಣಿಪುರಕ್ಕೆ 'ಸುಪ್ರೀಂ' ನ್ಯಾಯಮೂರ್ತಿಗಳ ನಿಯೋಗ ಭೇಟಿ
- ನಿರ್ವಸತಿಗರ ಜತೆ ಮಾತುಕತೆ
- ಕಾನೂನು ಸೇವಾ ಶಿಬಿರ ಉದ್ಘಾಟನೆ

'ಗ್ರಾಮಸ್ಥರಿಗೆ ಕಾನೂನಾತ್ಮಕ ರಕ್ಷಣೆ ನೀಡಿ'

ಇಂಫಾಲ್ (ಪಿಟಿಐ): 'ಸಮುದಾಯದ ಜನರು ವಾಸಿಸುವ ಗ್ರಾಮಸ್ಥರಿಗೆ ಕಾನೂನಾತ್ಮಕವಾದ ರಕ್ಷಣೆ ಒದಗಿಸುವುದನ್ನು ಖಚಿತಪಡಿಸಬೇಕು' ಎಂದು ಚುರಾಚಾಂದ್‌ಪುರ ಮೈತೇಯಿ ಸಂಘಟನೆಯ ಮುಖಂಡರು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅದೇ ರೀತಿ, ಕುಕಿ ಬಹುಸಂಖ್ಯಾತರಾಗಿರುವ ಜಿಲ್ಲೆಗಳಿಂದ ಸ್ಥಳಾಂತರಗೊಂಡ ಮೈತೇಯಿ ನಿವಾಸಿಗಳ ಪುನರ್‌ವಸತಿಗೆ ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದ್ದಾರೆ.

ಸೌರಭ್ ಕೊಲೆ: ಮರಣೋತ್ತರ ಪರೀಕ್ಷೆಯಲ್ಲಿ ಕ್ರೌರ್ಯ ಬಯಲು

ಮೀರತ್ (ಉತ್ತರ ಪ್ರದೇಶ) (ಪಿಟಿಐ): ನೌಕಾಪಡೆಯ ಅಧಿಕಾರಿ ಸೌರಭ್ ರಜಪೂತ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಮರಣೋತ್ತರ ಪರೀಕ್ಷೆ ವರದಿಯು ಕ್ರೌರ್ಯದ ಭೀಕರತೆಯನ್ನು ತೆರೆದಿಟ್ಟಿದೆ.

ಸೌರಭ್ ಅವರ ಹೃದಯಕ್ಕೆ ಚಾಕುವಿನಿಂದ ಮೂರು ಬಾರಿ ಚುಚ್ಚಲಾಗಿತ್ತು. ಇದರಿಂದ ಅವರ ಹೃದಯದ ಆಳದವರೆಗೂ ತೂತಾಗಿತ್ತು. ನಂತರ ಡ್ರಮ್‌ನಲ್ಲಿ ಮೃತದೇಹವನ್ನು ಇರಿಸಲು ದೇಹ ಮತ್ತು ರುಂಡವನ್ನು ಬೇರೆ ಬೇರೆ ಮಾಡಲಾಗಿತ್ತು. ಎರಡೂ ಕೈಗಳನ್ನೂ ಮುಂಗೈವರೆಗೆ ಕತ್ತರಿಸಲಾಗಿತ್ತು, ಕಾಲುಗಳನ್ನು ಬಗ್ಗಿಸಲಾಗಿತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಾ.4ರಂದು ಸೌರಭ್ ಅವರ ಪತ್ನಿ ಮುಸ್ಕಾನ್ ರಸ್ತೋಗಿ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಇಬ್ಬರು ಸೇರಿ ಸೌರಭ್‌ಗೆ ಮದ್ಯ ಕುಡಿಸಿ, ಇರಿದು ಕೊಂದಿದ್ದರು. ನಂತರ ಮೃತದೇಹವನ್ನು ಡ್ರಮ್ ಒಳಗೆ ತುರುಕಿ, ಅದರ ಮೇಲೆ ಸಿಮೆಂಟ್ ಮುಚ್ಚಿದ್ದರು. ಬಳಿಕ ಇಬ್ಬರು ಹಿಮಾಚಲ ಪ್ರದೇಶಕ್ಕೆ ಹೋಗಿ ಪ್ರಕರಣದ ದಾರಿ ತಪ್ಪಿಸಲು ಯತ್ನಿಸಿದ್ದರು.


ತ್ವರಿತಗತಿಯ ವಿಶೇಷ ಕೋರ್ಟ್‌ನಲ್ಲಿ ವಿಚಾರಣೆಗೆ ಸಿದ್ಧತೆ: ಪ್ರಕರಣದ ವಿಚಾರಣೆಯನ್ನು ತ್ವರಿತಗತಿಯ ವಿಶೇಷ ನ್ಯಾಯಾಲಯದಲ್ಲಿ ನಡೆಸಲು ಚಿಂತನೆ ನಡೆಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ನರಸಿಂಹಾನಂದ ವಿರುದ್ಧ ಪ್ರಕರಣ

ಗಾಜಿಯಾಬಾದ್ (ಉತ್ತರ ಪ್ರದೇಶ) (ಪಿಟಿಐ): ಸಮಾಜದಲ್ಲಿ ದ್ವೇಷ ಹರಡುವ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ ಎಂಬ ಆರೋಪದ ಮೇಲೆ ಯತಿ ನರಸಿಂಹಾನಂದ ಗಿರಿ ವಿರುದ್ಧ ಪ್ರಕರಣ ದಾಖಲಾಗಿದೆ.

ದ್ವೇಷ ಹರಡುವಿಕೆ ಮತ್ತು ಪೊಲೀಸ್ ಅಧಿಕಾರಿಗಳನ್ನು ವಿಡಿಯೊದಲ್ಲಿ ನಿಂದಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಿದ್ದಾರೆ. ಕ್ರಿಮಿನಲ್ ಬೆದರಿಕೆಗೆ ಕಾರಣವಾಗುವಂತಹ ಹಾಗೂ ಮಾನಹಾನಕಾರಿ ಮತ್ತು ಸಾರ್ವಜನಿಕ ಶಾಂತಿಯನ್ನು ಭಂಗಗೊಳಿಸುವ ಉದ್ದೇಶದಿಂದಲೇ ಕೆಲವೊಂದು ಪದ ಬಳಸಿದ್ದಾರೆ. ಮಹಾತ್ಮಗಾಂಧಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಗಾಜಿಯಾಬಾದ್‌ನ ಪೊಲೀಸ್ ಕಮಿಷನರ್, ಲೋನಿಯ ಸಹಾಯಕ ಪೊಲೀಸ್ ಕಮಿಷನರ್ ವಿರುದ್ಧ ವಿಡಿಯೊದಲ್ಲಿ ನರಸಿಂಹಾನಂದ ಗಿರಿ ಅವರು ನಿಂದನಾತ್ಮಕ ಭಾಷೆ ಬಳಸಿದ್ದಾರೆ ಎಂದು ದೂರುದಾರರು ಆರೋಪಿಸಿದ್ದಾರೆ.


ಯತಿ ನರಸಿಂಗಾನಂದ

ಗಾಜಾ ಮೇಲೆ ದಾಳಿ, ಆಸ್ಪತ್ರೆ ಧ್ವಂಸ

ಜೆರುಸಲೇಂ (ಎ.ಪಿ): ಗಾಜಾಪಟ್ಟಿ ಮೇಲಿನ ದಾಳಿಯನ್ನು ತೀವ್ರಗೊಳಿಸಿರುವ ಇಸ್ರೇಲ್‌ನ ಸೇನೆ, ನೆಟ್‌ಜರಿಮ್ ಕಾರಿಡಾರ್‌ನಲ್ಲಿದ್ದ ಏಕೈಕ ವಿಶೇಷ ಕ್ಯಾನ್ಸರ್ ಆಸ್ಪತ್ರೆಯನ್ನು ಧ್ವಂಸಗೊಳಿಸಿದೆ. ಬಾಕಿ 59 ಒತ್ತೆಯಾಳುಗಳನ್ನು ಹಮಾಸ್ ಬಂಡುಕೋರರು ಬಿಡುಗಡೆ ಮಾಡದಿದ್ದಲ್ಲಿ, ದಾಳಿ ಇನ್ನಷ್ಟು ಬಿರುಸುಗೊಳ್ಳಲಿದೆ ಎಂದು ಎಚ್ಚರಿಸಿದೆ.

ಟರ್ಕಿ–ಪ್ಯಾಲೆಸ್ಟೀನ್ ಸಹಭಾಗಿತ್ವದಲ್ಲಿ ನಿರ್ಮಾಣವಾಗಿದ್ದ ಆಸ್ಪತ್ರೆ ಮೇಲೆ ದಾಳಿ ನಡೆಸಲಾಗಿದೆ. ಆಸ್ಪತ್ರೆಯ ಡಾ. ಝುಕಿ ಅಲ್ ಝುಕ್‌ಜೌಕ್, 'ಆಸ್ಪತ್ರೆಗೆ ತೀವ್ರ ಹಾನಿಯಾಗಿದೆ. ಕೆಲ ಸೌಲಭ್ಯಗಳಷ್ಟೇ ಸುಸ್ಥಿತಿಯಲ್ಲಿವೆ' ಎಂದಿದ್ದಾರೆ.

ಹೆಜ್ಬುಲ್ಲಾಗೆ ಕಟು ಎಚ್ಚರಿಕೆ (ಬೈರೂತ್ ವರದಿ): ಲೆಬನಾನ್‌ನಿಂದ ರಾಕೆಟ್ ದಾಳಿ ಮುಂದುವರಿದಿದ್ದೇ ಆದರೆ ತಕ್ಕ ಪರಿಣಾಮ ಎದುರಿಸಬೇಕಾದೀತು ಎಂದು ಹೆಜ್ಬುಲ್ಲಾ ಬಂಡುಕೋರರಿಗೆ ಇಸ್ರೇಲ್ ಎಚ್ಚರಿಸಿದೆ. ಲೆಬನಾನ್‌ನಿಂದ ನಡೆದ ರಾಕೆಟ್ ದಾಳಿಗೆ ಇಸ್ರೇಲ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಅಲ್ಲದೆ, ದಾಳಿಗೆ ಪ್ರತಿಯಾಗಿ ರಾಕೆಟ್ ದಾಳಿಯನ್ನು ಸೇನೆ ನಡೆಸಿದೆ.

ಉಕ್ರೇನ್: 3 ಸಾವು

ಕೀವ್ (ಎ.ಪಿ): ಉಕ್ರೇನ್‌ನ ಝಪೊರಿಝಿಯಾ ನಗರದ ಮೇಲೆ ರಷ್ಯಾದ ಸೇನೆ ಶನಿವಾರ ಡ್ರೋನ್ ದಾಳಿ ನಡೆಸಿದ್ದು, ಮೂವರು ಮೃತಪಟ್ಟು ಇತರೆ 12 ಮಂದಿ ಗಾಯಗೊಂಡರು. ಇನ್ನೊಂದೆಡೆ, ಉಕ್ರೇನ್ ಕೂಡಾ 47 ಡ್ರೋನ್‌ಗಳನ್ನು ಪ್ರಯೋಗಿಸಿದ್ದು, ಅದನ್ನು ತನ್ನ ಸೇನೆಯು ಹೊಡೆದುರುಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯವು ತಿಳಿಸಿದೆ.

ಒಲಿಂಪಿಕ್ಸ್ ಸ್ವರ್ಣ ವಿಜೇತ ಅಮೆರಿಕದ ಬಾಕ್ಸರ್

ಬಾಕ್ಸಿಂಗ್ ದಿಗ್ಗಜ ಫೋರ್‌ಮನ್ ಇನ್ನಿಲ್ಲ

ಲಾಸ್ ಏಂಜಲಿಸ್ (ಎಎಫ್‌ಪಿ): ಬಾಕ್ಸಿಂಗ್ ದಿಗ್ಗಜ, ಮಾಜಿ ವಿಶ್ವ ಹೆವಿವೇಟ್ ಚಾಂಪಿಯನ್ ಅಮೆರಿಕದ ಜಾರ್ಜ್ ಫೋರ್ಮನ್ (76) ಅವರು ಶುಕ್ರವಾರ ಇಲ್ಲಿ ನಿಧನರಾದರು ಎಂದು ಅವರ ಕುಟುಂಬ ತಿಳಿಸಿದೆ.

ಜೈರೆಯ ಕಿನ್ಶಾಸಾದಲ್ಲಿ 1974ರಲ್ಲಿ ನಡೆದ ಪ್ರಸಿದ್ಧ 'ರಂಬಲ್ ಇನ್ ದಿ ಜಂಗಲ್' ಸೆಣಸಾಟದಲ್ಲಿ ಮುಹಮ್ಮದ್ ಅಲಿ ವಿರುದ್ಧ ಸೋತಿದ್ದ ಫೋರ್‌ಮನ್ ಎರಡು ದಶಕಗಳ ನಂತರ ಹೆವಿವೇಟ್ ಪಟ್ಟವನ್ನು ಮರಳಿ ಪಡೆದಿದ್ದರು.

'ಬಿಗ್ ಜಾರ್ಜ್' ಎಂದೇ ಖ್ಯಾತ ರಾಗಿದ್ದ ಅಜಾನುಬಾಹು ಫೋರ್‌ಮನ್ ಶಾಲೆಯನ್ನು ಅರ್ಧದಲ್ಲೇ ಬಿಟ್ಟು ಬಾಕ್ಸಿಂಗ್‌ನಲ್ಲಿ ಎತ್ತರಕ್ಕೆ ಬೆಳೆದವರು. ಒಲಿಂಪಿಕ್ ಸ್ವರ್ಣ ಪದಕ ವಿಜೇತರಾದ ಅವರು ಎರಡು ಬಾರಿ ವಿಶ್ವ ಚಾಂಪಿಯನ್ ಆಗಿ ಮೆರೆದು ದಂತಕತೆಯಾದರು.ವೃತ್ತಿಪರನಾಗಿ 81 ಸೆಣಸಾಟಗಳಲ್ಲಿ ಭಾಗಿಯಾದ ಅವರು 76ರಲ್ಲಿ ಜಯಗಳಿಸಿ ದ್ದರು. ಇದರಲ್ಲಿ 68 ಸೆಣಸಾಟಗಳನ್ನು ನಾಕೌಟ್‌ನಲ್ಲಿ ಗೆದ್ದಿದ್ದು ಹೆಚ್ಚುಗಾರಿಕೆ.

1949ರ ಜನವರಿ 10ರಂದು ಟೆಕ್ಸಾಸ್‌ನಲ್ಲಿ ಜನಿಸಿದ ಫೋರಮನ್ ಬೆಳೆದಿದ್ದು ಹೌಸ್ಟನ್‌ನಲ್ಲಿ. 13ನೇ ವಯಸ್ಸಿಗೆ ಅವರು ಶಾಲೆ ತ್ಯಜಿಸಿದ್ದರು. ಆ ವೇಳೆಯೇ ಅವರು ಬಾಕ್ಸಿಂಗ್‌ನತ್ತ ಆಕರ್ಷಿತರಾದರು.

ಒಂದೇ ವರ್ಷದಲ್ಲಿ 25 ಸೆಣಸಾಟದಲ್ಲಿ ಭಾಗಿಯಾದ ಅವರು ಒಲಿಂಪಿಕ್ಸ್ ಚಿನ್ನದ ಪದಕ ಸಹ ಗೆದ್ದುಕೊಂಡರು. 1968ರ ಮೆಕ್ಸಿಕೊ ಒಲಿಂಪಿಕ್ಸ್‌ನಲ್ಲಿ ಹೆವಿವೇಟ್ ವಿಭಾಗದ ಸ್ವರ್ಣ ಅವರ ಪಾಲಾಯಿತು. ಆಗಿನ ವಿಶ್ವ ಚಾಂಪಿಯನ್ ಜೋ ಫ್ರೇಜಿಯರ್ ಅವರನ್ನು ಎರಡೇ ಸುತ್ತು ಗಳಲ್ಲಿ ಕೆಡವಿದ್ದರು. 1974ರ ಕಿನ್ಶಾಸಾ ಸೆಣಸಾಟದಲ್ಲಿ ಭಾಗಿಯಾಗುವ ಮೊದಲು 40 ವೃತ್ತಿಪರ ಸೆಣಸಾಟಗಳಲ್ಲೂ ಅವರು ಅಜೇಯರಾಗಿದ್ದರು. ಆದರೆ ಅಲಿ ಅವರ ಎದುರಿನ ಹಣಾಹಣಿಯ ಎಂಟನೇ ಸುತ್ತಿನಲ್ಲಿ ಸೋಲನುಭವಿಸಿದರು. ಈ ಸೋಲು ಅವರ ಸುತ್ತ ಹಬ್ಬಿದ್ದ ಪ್ರಭಾವಳಿಯನ್ನು ಮಸುಕುಗೊಳಿಸಿತು.

1977ರಲ್ಲಿ ಅವರು ಪ್ರಶಸ್ತಿಗೆ ಮತ್ತೊಂದು ಯತ್ನ ನಡೆಸಿದರೂ ಪೋರ್ಟೊರಿಕೊದಲ್ಲಿ ಜಿಮ್ಮಿ ಯಂಗ್ ಎದುರು ಸೋಲಬೇಕಾಯಿತು 28ನೇ ವಯಸ್ಸಿನಲ್ಲೇ ಅವರು ನಿವೃತ್ತಿ ಹೇಳಿದರು. ಆದರೆ 10 ವರ್ಷಗಳ ಬಳಿಕ ಪುನರಾಗಮನ ಮಾಡಿದರು. ನಂತರದ ಮೂರು ವರ್ಷಗಳಲ್ಲಿ ಅವರು 21 ಸೆಣಸಾಟಗಳಲ್ಲಿ ಭಾಗಿಯಾದರು. ಎಲ್ಲದರಲ್ಲಿ ಗೆದ್ದರು. ಆದರೆ 1991ರಲ್ಲಿ ಇವಾಂಡರ್ ಹೋಲಿಫೀಲ್ಡ್ ಮತ್ತು ಎರಡು ವರ್ಷಗಳ ಬಳಿಕ ಟಾಮಿ ಮಾರಿಸನ್ ಎದುರು ಸೋತರು.

ಹೋಲಿಫೀಲ್ಡ್ ಅವರನ್ನು ಸೋಲಿಸಿ ಚಾಂಪಿಯನ್ ಆಗಿದ್ದ ಮೈಕೆಲ್ ಮೂರರ್ ಅವರನ್ನು 1994ರ ನವೆಂಬರ್‌ನಲ್ಲಿ ಸೋಲಿಸಿ 20 ವರ್ಷಗಳ ಬಳಿಕ ಮರಳಿ ವಿಶ್ವ ಹೆವಿವೇಟ್ ಪ್ರಶಸ್ತಿ ಗೆದ್ದರು. ಅತಿ ಹಿರಿಯ (45 ವರ್ಷ, 299 ದಿನ) ಹೆವಿವೇಟ್ ಚಾಂಪಿಯನ್ ಎಂಬ ಹಿರಿಮೆ ಆಗ ಅವರದಾಗಿತ್ತು. 1997ರಲ್ಲಿ ಎರಡನೇ ಬಾರಿ ನಿವೃತ್ತಿ ಘೋಷಿಸಿದರು.


1996ರಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ತೋಳ್ಬಲ ಪ್ರದರ್ಶಿಸಿದ್ದ ಜಾರ್ಜ್ ಫೋರ್‌ಮನ — ಎಎಫ್‌ಪಿ ಚಿತ್ರ





ಯಲಹಂಕ ಕಾಫಿ ಡೇ ಬಳಿ ಮಳೆ ನೀರು ನಿಂತು ವಿಮಾನ ನಿಲ್ದಾಣದ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು (ಎಡಚಿತ್ರ) ಮಳೆಯಿಂದ ರಕ್ಷಣೆ ಪಡೆಯಲು ಮಹಿಳೆಯೊಬ್ಬರು ಕೈಚೀಲವನ್ನು ತಲೆಮೇಲೆ ಹಿಡಿದು ಸಾಗಿದರು ಪ್ರಜಾವಾಣಿ ಚಿತ್ರಗಳು

ಬಿರುಗಾಳಿ, ಗುಡುಗು, ಮಿಂಚು ಸಹಿತ ಸಂಜೆ ಸುರಿದ ಮುಸಲಧಾರೆ

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಪ್ರದೇಶಗಳಲ್ಲಿ ಶನಿವಾರ ಸಂಜೆ ಮಳೆ ಸುರಿದಿದ್ದು, ಉತ್ತರ ಹಾಗೂ ಪೂರ್ವ ಭಾಗದ ಕೆಲವು ಪ್ರದೇಶಗಳಲ್ಲಿ ಗುಡುಗು, ಮಿಂಚಿನೊಂದಿಗೆ ಭಾರಿ ಮಳೆಯಾಗಿದೆ.

ಶನಿವಾರ ಮಧ್ಯಾಹ್ನದ ನಂತರ ನಗರದಲ್ಲಿ ಬಿಸಿಲ ಝಳ ಕಡಿಮೆಯಾಗಿ, ಮೋಡದ ವಾತಾವರಣ ಸೃಷ್ಟಿಯಾಗಿತ್ತು. ಸಂಜೆ 5ರ ವೇಳೆಗೆ ಹಲವು ಭಾಗಗಳಲ್ಲಿ ಬಿರುಗಾಳಿ, ಗುಡುಗು ಸಹಿತ ಮಳೆಯಾಯಿತು. ಕೆಲವು ಪ್ರದೇಶಗಳಲ್ಲಿ ಆಲಿಕಲ್ಲು ಬಿದ್ದಿದೆ. ಹಲವು ದಿನಗಳಿಂದ ಬೇಸಿಗೆಯ ಧಗೆ ಹೆಚ್ಚಾಗಿದ್ದು, ಶನಿವಾರ ರಾತ್ರಿಯವರೆಗೂ ಹದವಾಗಿ ಸುರಿದ ಮಳೆ ತಂಪನೆಯ ಅನುಭವ ನೀಡಿತು. ಈ ವರ್ಷ ಮೊದಲ ಬಾರಿಗೆ ನಗರದೆಲ್ಲೆಡೆ ಶನಿವಾರ ಮಳೆ ಸುರಿದಿದೆ. ಮಾರ್ಚ್ 12ರಂದು ನಗರದ ಕೆಲವೆಡೆ ಮಾತ್ರ ತುಂತುರು ಮಳೆಯಾಗಿತ್ತು.

ನಗರದ ಹಲವು ರಸ್ತೆಗಳಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಬಿರುಗಾಳಿಗೆ ಕೆಲವು ಪ್ರದೇಶಗಳಲ್ಲಿ ಮರಗಳ ಕೊಂಬೆಗಳು ಮುರಿದುಬಿದ್ದವು. ಶನಿವಾರ ಸಂಜೆಯ ಮಳೆ, ಜನರ ವಾರಾಂತ್ಯದ ಓಡಾಟಕ್ಕೆ ಅಡ್ಡಿಯಾಗಿತ್ತು.

ಯಲಹಂಕ, ವಿದ್ಯಾರಣ್ಯಪುರ, ಹೊರಮಾವು, ಜಕ್ಕೂರು, ವರ್ತೂರು, ದೊಡ್ಡನೆಕ್ಕುಂದಿ, ಹಗದೂರು, ಕಾಡುಗೋಡಿ, ಚೌಡೇಶ್ವರಿಯಲ್ಲಿ ಹೆಚ್ಚು ಮಳೆಯಾಯಿತು. ಎಚ್‌ಎಸ್‌ಆರ್ ಲೇಔಟ್, ಎಚ್‌ಎಎಲ್ ವಿಮಾನ ನಿಲ್ದಾಣ, ಹಂಪಿನಗರ, ಕೆಂಗೇರಿ, ನಾಯಂಡಹಳ್ಳಿ, ರಾಜರಾಜೇಶ್ವರಿನಗರ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಬನಶಂಕರಿ, ಪದ್ಮನಾಭನಗರ, ಕೋರಮಂಗಲ, ಬಿಟಿಎಂ ಲೇಔಟ್, ಜಯನಗರ, ದೊರೆಸಾನಿಪಾಳ್ಯ, ಗೊಟ್ಟಿಗೆರೆ, ಅರೆಕೆರೆ, ವಿಶ್ವೇಶ್ವರಪುರ, ಸಂಪಂಗಿರಾಮನಗರ, ಪಟ್ಟಾಭಿರಾಮನಗರ, ಅಂಜನಾಪುರ, ಮಾರತ್‌ಹಳ್ಳಿ, ಹೂಡಿ, ಗರುಡಾಚಾರ್ ಪಾಳ್ಯ, ಶೆಟ್ಟಿಹಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ಯಲಹಂಕದ ಕಾಫಿ ಡೇ ಬಳಿ, ಕೊಡಿಗೇಹಳ್ಳಿ ಮೇಲ್ಸೇತುವೆಯಲ್ಲಿ ಮಳೆ ನೀರು ನಿಂತಿದ್ದರಿಂದ ವಿಮಾನ ನಿಲ್ದಾಣದ ಕಡೆಯ ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ನಾಗವಾರದಿಂದ ಹೆಬ್ಬಾಳ, ಕೋಗಿಲು ಮೇಲ್ಸೇತುವೆ, ಪುಟ್ಟೇನಹಳ್ಳಿ, ಕಸ್ತೂರಿ ನಗರ, ಎಂಎಂಟಿ (ಟಿನ್ ಫ್ಯಾಕ್ಟರಿ), ಸ್ಪರ್ಶ ಆಸ್ಪತ್ರೆ, ಹೊರಮಾವುನಿಂದ ಕೆ.ಆರ್. ಪುರ, ಕೆ.ಆರ್.ಪುರದಿಂದ ಹೊಸಕೋಟೆ, ರಾಮಮೂರ್ತಿ ನಗರದಿಂದ ಬಾಣಸವಾಡಿ ರಸ್ತೆ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಿಂದ ಎಂ.ಎಸ್. ರಸ್ತೆ, ಹಜ್ ಭವನದಿಂದ ಬೆಳ್ಳಹಳ್ಳಿ, ಕೋಗಿಲು ಸಿಗ್ನಲ್‌ನಿಂದ ಕೋಗಿಲು ಗ್ರಾಮದವರೆಗೆ, ಕಲ್ಯಾಣನಗರ ಕೆಳಸೇತುವೆಯಿಂದ ಬಾಬುಸಾಪಾಳ್ಯ, ಜಯಂತಿನಗರದಿಂದ ಹೊರಮಾವು, ಹುಣಸೆಮಾರನಹಳ್ಳಿಯಿಂದ ವಿಮಾನ ನಿಲ್ದಾಣ, ಹೆಬ್ಬಾಳದಿಂದ ಕೆ.ಆರ್. ಪುರ, ಕಾಡುಗೋಡಿ ಮೇಲ್ಸೇತುವೆಯಿಂದ ಬೆಳತ್ತೂರು, ವೀರಣ್ಣಪಾಳ್ಯದಿಂದ ನಾಗವಾರ, ಪರಪ್ಪನ ಅಗ್ರಹಾರದಿಂದ ರಾಯಸಂದ್ರ, ಸರ್ಜಾಪುರದಿಂದ ಕೊಡತಿ ಗೇಟ್, ರೂಪೇನ ಅಗ್ರಹಾರದಿಂದ ಹೊಸೂರು ರಸ್ತೆಗಳಲ್ಲಿ ಮಳೆ ನೀರು ನಿಂತಿದ್ದರಿಂದ ಈ ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ಚಾಮುಂಡಿನಗರ ಮುಖ್ಯರಸ್ತೆಯಲ್ಲಿ ಮರವೊಂದು ಬಿದ್ದಿದ್ದರಿಂದ ದಿಣ್ಣೂರು ಮುಖ್ಯರಸ್ತೆ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.





ರೂಪೇನ ಅಗ್ರಹಾರ ಬಳಿ ರಸ್ತೆಯಲ್ಲಿ ನಿಂತಿದ್ದ ಮಳೆ ನೀರು (ಎಡಚಿತ್ರ) ನಾಗವಾರ ಕಡೆಯಿಂದ ಹೆಬ್ಬಾಳ ಕಡೆಗೆ ಹೋಗುವ ರಸ್ತೆಯಲ್ಲಿ ಮಳೆ

ಮರ ಬಿದ್ದು ಮಗು ಸಾವು

ಭಾರಿ ಮಳೆ, ಗಾಳಿ ವೇಳೆ ಮರ ಬಿದ್ದ ಪರಿಣಾಮ ಮೂರು ವರ್ಷದ ಮಗು ಮೃತಪಟ್ಟಿರುವ ಘಟನೆ ದೇವರಜೀವನಹಳ್ಳಿಯ ಪೂರ್ವ ಉದ್ಯಾನ ಬಳಿ ಶನಿವಾರ ರಾತ್ರಿ ನಡೆದಿದೆ. ತಂದೆ ಸತ್ಯ ಅವರ ಜತೆ ರಕ್ಷಾ(3) ಬೈಕ್‌ನಲ್ಲಿ ಹೋಗುವಾಗ ಮರ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಸತ್ಯ ಅವರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪುಲಕೇಶಿ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಎಲ್ಲೆಲ್ಲಿ ಎಷ್ಟು ಮಳೆ? (ಸೆಂ.ಮೀ)			
ಚೌಡೇಶ್ವರಿ	5.25	ಬಿ.ಟಿ.ಎಂ.ಲೇಔಟ್	1.7
ಜಕ್ಕೂರು	5.0	ಕೊಡಿಗೇಹಳ್ಳಿ	1.6
ಹಗದೂರು	3.35	ರಾಮಮೂರ್ತಿ ನಗರ	1.55
ವಿ.ನಾಗೇನಹಳ್ಳಿ	3.35	ಕಾಡುಗೋಡಿ	1.5
ವಿದ್ಯಾರಣ್ಯಪುರ	3.2	ಕೆ.ಆರ್.ಪುರ	1.3
ಹೊರಮಾವು	2.05	ದೊರೆಸಾನಿಪಾಳ್ಯ	1.25
ಬಿಳೇಕಹಳ್ಳಿ	2.0	ಹೂಡಿ	1.25
ಬಸವನಪುರ	1.9	ದೊಡ್ಡನೆಕ್ಕುಂದಿ	1.2
ಗರುಡಾಚಾರ್ಪಾಳ್ಯ	1.85	ವಿದ್ಯಾಪೀಠ	1.2
		ಬೊಮ್ಮನಹಳ್ಳಿ	1.15

ಧರೆಗುರುಳಿದ 30 ಮರ

ನಗರದಲ್ಲಿ 30 ಮರ ಹಾಗೂ 42 ರೆಂಬೆ/ಕೊಂಬೆಗಳು ಧರೆಗುರುಳಿದ್ದು, ಅರಣ್ಯ ವಿಭಾಗದ ಸಿಬ್ಬಂದಿ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಯಲಹಂಕದ ಕ್ಯಾಲಿಫೋರ್ನಿಯಾ ರಮಣಶ್ರೀ ಅಪಾರ್ಟ್‌ಮೆಂಟ್‌ನಲ್ಲಿ ನಾಲ್ಕು ಪಂಪ್ ಗಳನ್ನು ಅಳವಡಿಸಿ ನೀರನ್ನು ತೆರವುಗೊಳಿಸಲಾಗುತ್ತಿದೆ ಎಂದಿದ್ದಾರೆ. ನಗರದಲ್ಲಿ ಮಳೆಯಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ವಲಯ ಆಯುಕ್ತರು, ರಸ್ತೆ ಮೂಲ ಸೌಕರ್ಯ ಮತ್ತು ಬೃಹತ್ ನೀರುಗಾಲುವೆ ವಿಭಾಗದ ಎಂಜಿನಿಯರ್‌ಗಳು ಹಾಗೂ ಅರಣ್ಯ ವಿಭಾಗದ ಸಿಬ್ಬಂದಿಗೆ, ರಸ್ತೆಗಳಲ್ಲಿ ನೀರು ನಿಂತಿರುವ ಹಾಗೂ ಮರ, ಮರದ ಕೊಂಬೆಗಳನ್ನು ಕೂಡಲೇ ತೆರವುಗೊಳಿಸಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ನಗರದಲ್ಲಿ ಮಳೆಯಿಂದ ಏನಾದರು ಸಮಸ್ಯೆಯಾಗಿದ್ದರೆ ಕೂಡಲೆ ಪಾಲಿಕೆಯ ಸಹಾಯವಾಣಿ 1533 ಗೆ ಕರೆ ಮಾಡಿ ದೂರು ನೀಡಬಹುದು ಎಂದಿದ್ದಾರೆ.

ನೀರಿಗಾಗಿ ಮಹಿಳೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದಿನ ಬಳಕೆಯ ನೀರು ಪೂರೈಸಲು ನಿರ್ಲಕ್ಷ್ಯ ವಹಿಸುತ್ತಿರುವ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ದಿನ್ನೂರು ಗ್ರಾಮದ ಮಹಿಳೆಯರು ಖಾಲಿ ಕೊಡ ಹಿಡಿದು ಪ್ರತಿಭಟಿಸಿದರು.

ಕಾಡುಗೋಡಿಯಿಂದ ವೈಟ್‌ಫೀಲ್ಡ್‌ನ ಐಟಿಪಿಎಲ್ ಸಂಪರ್ಕಿಸುವ ಮುಖ್ಯರಸ್ತೆಯನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು.

‘ದಿನ್ನೂರು ಗ್ರಾಮದಲ್ಲಿ ಕೆಲವು ದಿನಗಳಿಂದ ದಿನ ಬಳಕೆ ನೀರಿಗಾಗಿ ಪರಿತಪಿಸುವಂತಾಗಿದೆ. ಆದರೆ, ಬಿಬಿಎಂಪಿ ಅಧಿಕಾರಿಗಳು ಇತ್ತ ಗಮನಹರಿಸುತ್ತಿಲ್ಲ. ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಅಧಿಕಾರಿಗಳು ಬರುವವರೆಗೂ ರಸ್ತೆ ತೆರವು ಮಾಡುವುದಿಲ್ಲ’ ಎಂದು ಕೆಲಕಾಲ ರಸ್ತೆ ಬಂದ್ ಮಾಡಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಕಾಡುಗೋಡಿ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿ ರಸ್ತೆ ತೆರವು ಮಾಡಿದರು.

‘ದಿನ್ನೂರು ಗ್ರಾಮದಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರಿದ್ದು, ದಿನಗೂಲಿ ಕಾರ್ಮಿಕರಾಗಿದ್ದಾರೆ. ಕೆಲವು ದಿನಗಳಿಂದ ದಿನ ಬಳಕೆ ಹಾಗೂ ಕುಡಿಯುವ ನೀರಿಗಾಗಿ ಸಮಸ್ಯೆ ಎದುರಾಗಿದೆ. ಗ್ರಾಮದಲ್ಲಿ ಮೂರು ಕೊಳವೆಬಾವಿಗಳಿವೆ. ಆದರೆ, ಅವು ಕೆಟ್ಟು ನಿಂತಿವೆ. ಬಿಬಿಎಂಪಿ ಅಧಿಕಾರಿಗಳು ದುರಸ್ತಿ ಮಾಡಿಸದೆ ನಿರ್ಲಕ್ಷ್ಯ ತೋರಿದ್ದಾರೆ’ ಎಂದು ಗ್ರಾಮದ ನಿವಾಸಿ ಮುನೇಂದ್ರ.ಪಿ. ಆಕ್ರೋಶ ವ್ಯಕ್ತಪಡಿಸಿದರು.

‘ಹಲವು ದಿನಗಳಿಂದ ನೀರಿನ ಸಮಸ್ಯೆ ಬಿಗಾಡಿಯಿಸಿದೆ. ಕೆಲವೊಮ್ಮೆ ಬಿಬಿಎಂಪಿ ಅಧಿಕಾರಿಗಳು ಟ್ಯಾಂಕರ್ ನೀರನ್ನು ಗ್ರಾಮಕ್ಕೆ ಕಳುಹಿಸುತ್ತಾರೆ. ನೀರು ಶೇಖರಿಸಿ ಇಟ್ಟುಕೊಳ್ಳಲು ಪ್ರತಿ ಮನೆಗೆ ಎರಡು ಡ್ರಮ್ ಮಾತ್ರ ನೀರು ಬಿಡುತ್ತಾರೆ. ಇದು ನಮಗೆ ಸಾಕಾಗುವುದಿಲ್ಲ. ಡ್ರಮ್ ಇಲ್ಲದ ಮನೆಗಳಿಗೆ ನೀರು ಬಿಡುವುದಿಲ್ಲ. ದುಬಾರಿ ಹಣ ನೀಡಿ ಡ್ರಮ್ ಖರೀದಿಸುವುದು ಹೇಗೆ’ ಎಂದು ಗ್ರಾಮದ ಮಹಿಳೆ ಮುನಿಲಕ್ಷ್ಮಮ್ಮ ಪ್ರಶ್ನಿಸಿದರು.

‘ಬೇಸಿಗೆ ಕಾಲ ಆಗಿರುವುದರಿಂದ ದಿನ ಬಳಕೆಗೆ ನೀರು ಹೆಚ್ಚು ಬೇಕಿದೆ. ದಿನನಿತ್ಯದ ಬಳಕೆಗೆ ನೀರು ಸಿಗುತ್ತಿಲ್ಲ. ಮಹಿಳೆಯರಿಗೆ ಸ್ನಾನ ಮಾಡಲು ನೀರು ದೊರೆಯುತ್ತಿಲ್ಲ’ ಎಂದು ಗ್ರಾಮದ ನಿವಾಸಿ ಮುನಿವೆಂಕಟಮ್ಮ ದೂರಿದರು. ಪ್ರತಿಭಟನೆಯಲ್ಲಿ ರಾಜೇಂದ್ರ, ಮಂಜುನಾಥ್, ದೇವಕುಮಾರ್ ಭಾಗವಹಿಸಿದ್ದರು.



ದಿನ್ನೂರು ಗ್ರಾಮದ ನಿವಾಸಿಗಳು ಖಾಲಿ ಕೊಡ ಹಿಡಿದು ಪ್ರತಿಭಟಿಸಿದರು

ಗ್ರೆನೇಡ್ ಮಾದರಿಯ ವಸ್ತು ಇಟ್ಟುಕೊಂಡಿದ್ದ ಪ್ರಕರಣ

ಆರೋಪಿಯ ತೀವ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಗ್‌ನಲ್ಲಿ ಗ್ರೆನೇಡ್ ಮಾದರಿಯ ವಸ್ತು ಇಟ್ಟುಕೊಂಡಿದ್ದ ಹೋಟೆಲ್ ಸಿಬ್ಬಂದಿ ಅಬ್ದುಲ್ ರೆಹಮಾನ್ ಅವರನ್ನು ಕೇಂದ್ರ ತನಿಖಾ ಸಂಸ್ಥೆಗಳು ವಿಚಾರಣೆಗೆ ಒಳಪಡಿಸಿವೆ.

ಗ್ರೆನೇಡ್ ಮಾದರಿಯ ವಸ್ತು ಪತ್ತೆಯಾದ ಬೆನ್ನಲ್ಲೇ ರಾಜ್ಯ ಮತ್ತು ಕೇಂದ್ರ ಗುಪ್ತಚರ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು ಸಂಪಿಗೆಹಳ್ಳಿ ಪೊಲೀಸರ ವಶದಲ್ಲಿರುವ ಆರೋಪಿ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗ್ರೆನೇಡ್ ಮಾದರಿಯ ವಸ್ತು ಎಲ್ಲಿ ಸಿಕ್ಕಿದೆ? ಎಷ್ಟು ದಿನಗಳಿಂದ ಇಟ್ಟುಕೊಂಡಿದ್ದಿಯಾ? ಬಾಲ್ ಮಾದರಿಯಲ್ಲಿರುವ ಇದಕ್ಕೆ ರಾಸಾಯನಿಕ ವಸ್ತು ತುಂಬಿದವರು ಯಾರು? ಅದಕ್ಕೆ ಬತ್ತಿ ಜೋಡಿಸಿದವರು ಯಾರು? ಸೇರಿದಂತೆ ಹಲವು ಪ್ರಶ್ನೆಗಳನ್ನು ಆರೋಪಿಗೆ ಕೇಳಲಾಗಿದೆ.

‘ಚಿಂದಿ ಆಯುವ ವೇಳೆ ಸ್ಫೋಟಕ ಸಿಕ್ಕಿದ್ದು, ಅದನ್ನು ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದೆ. ಅದು ಅಪಾಯಕಾರಿ ಎಂಬುದು ಗೊತ್ತಿರಲಿಲ್ಲ’ ಎಂದು ವಿಚಾರಣೆ ವೇಳೆ ಹೇಳಿದ್ದಾನೆ. ಈತನ ಬ್ಯಾಂಕ್ ಖಾತೆಗಳ ಮಾಹಿತಿ ಪರಿಶೀಲಿಸಲಾಗುತ್ತಿದೆ. ಯಾವ ಸ್ಫೋಟಕ? ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ? ಎಲ್ಲಿ ತಯಾರಾಗಿದೆ? ಎಲ್ಲಿ ಬಳಸಲಾಗುತ್ತದೆ ಎಂಬುದು ಎಫ್‌ಎಸ್‌ಎಲ್ ವರದಿ ಬಳಿಕ ಸ್ಪಷ್ಟತೆ ಸಿಗಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೋಗಿಲು ಮುಖ್ಯರಸ್ತೆಯ ಬೆಳ್ಳಹಳ್ಳಿ ನಿವಾಸಿ ಅಬ್ದುಲ್, ಮೊದಲು ಬೆಳ್ಳಹಳ್ಳಿಯಲ್ಲಿ ಪರಿಚಿತರೊಬ್ಬರ ಬಳಿ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ. ಬಳಿಕ ಕೆಲಸ ಬಿಟ್ಟು, ಚಿಂದಿ ಆಯುತ್ತಿದ್ದ. ತಾಯಿ ಮತ್ತು ಮಲ ತಂದೆ ಜತೆ ವಾಸವಾಗಿದ್ದ. ನಾಲ್ಕೈದು ತಿಂಗಳ ಹಿಂದೆ ಪೋಷಕರ ಜತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೊರ ಬಂದಿದ್ದಾನೆ. ನಂತರ ಯಾವುದೇ ಉದ್ಯೋಗ ಸಿಗದ ಕಾರಣ ಚಿಂದಿ ಆಯುವ ಕೆಲಸ ಮಾಡುತ್ತಿದ್ದ’ ಎಂದು ಮೂಲಗಳು ಹೇಳಿವೆ.

ನಾಲ್ಕು ದಿನದ ಹಿಂದೆ ನೇಮಕ

ನಾಲ್ಕು ದಿನಗಳ ಹಿಂದೆ ಅಬ್ದುಲ್ ಕೆಲಸ ಕೇಳಿಕೊಂಡು ಥಣಿಸಂದ್ರದ ಮುಖ್ಯರಸ್ತೆಯ ಶ್ರೀದೇವಿ ವೈಭವ್ ಹೋಟೆಲ್‌ಗೆ ಬಂದಿದ್ದ. ಕೆಲಸ ನೀಡಿದ್ದ ಹೋಟೆಲ್ ಮಾಲೀಕರು ಉಳಿದುಕೊಳ್ಳಲು ಸಣ್ಣ ಕೊಠಡಿ ನೀಡಿದ್ದರು. ಆಧಾರ್ ಕಾರ್ಡ್ ನೀಡುವಂತೆ ಕೇಳಿದರೂ ಅಬ್ದುಲ್ ಕೊಟ್ಟಿರಲಿಲ್ಲ. ಆತನ ಕೊಠಡಿಯನ್ನು ಆಧಾರ್ ಕಾರ್ಡ್‌ಗಾಗಿ ಪರಿಶೀಲಿಸಿದಾಗ ಸ್ಫೋಟಕ ವಸ್ತು ಸಿಕ್ಕಿತ್ತು. ಪಿಎಸ್‌ಐ ಕುಪೇಂದ್ರ ನೀಡಿದ ದೂರಿನ ಅನ್ವಯ ಎಫ್‌ಐಆರ್ ದಾಖಲಾಗಿದೆ.

ಅಪರಾಧ ಸುದ್ದಿ

ಪತ್ನಿ ಕೊಂದು ಪರಾರಿಯಾಗಿದ್ದ ಪತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸಿದ್ದ ಪತಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾವರೆಕೆರೆಯ ಚಿಕ್ಕಮುತ್ತುರಾಜು (40) ಬಂಧಿತ. ಪತ್ನಿ ಶಿಲ್ಪಾ (35) ಖಾಸಗಿ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿದ್ದರು. ಗುರುವಾರ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶಿಲ್ಪಾ ಮೃತದೇಹ ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡರು.

‘ಖಾಸಗಿ ಆಸ್ಪತ್ರೆಯಲ್ಲಿ ಭದ್ರತಾ ಸಿಬ್ಬಂದಿ ಆಗಿದ್ದ ಚಿಕ್ಕಮುತ್ತುರಾಜು ಹಾಗೂ ಶಿಲ್ಪಾ ದಂಪತಿಗೆ 11 ವರ್ಷದ ಮಗಳಿದ್ದಾಳೆ. ಶಿಲ್ಪಾ ಮತ್ತೊಬ್ಬ ವ್ಯಕ್ತಿಯ ಜತೆ ಸಲುಗೆಯಿಂದ ಇದ್ದಾರೆ ಎಂದು ಅನುಮಾನಗೊಂಡು, ಜಗಳವಾಡುತ್ತಿದ್ದ. ಗುರುವಾರ ಮಧ್ಯಾಹ್ನ ದಂಪತಿ ನಡುವೆ ಜಗಳ ನಡೆದಿತ್ತು. ಕೋಪದಲ್ಲಿ ಶಿಲ್ಪಾ ಕಪಾಳಕ್ಕೆ ಹೊಡೆದ ಕಾರಣ ಅವರು ಮೃತಪಟ್ಟರು’ ಎಂದು ಪೊಲೀಸರು ಹೇಳಿದರು.

‘ಕೊಲೆ ಪ್ರಕರಣದಲ್ಲಿ ಸಿಕ್ಕಿ ಬೀಳುತ್ತೇನೆ ಎಂಬ ಭಯದಿಂದ ಶಿಲ್ಪಾ ಕೊರಳಿಗೆ ನೇಣು ಬಿಗಿದು ಫ್ಯಾನ್‌ಗೆ ನೇತಾಡಿಸಿದ್ದ. ಬಳಿಕ ಸಂಬಂಧಿಕರಿಗೆ ಕರೆ ಮಾಡಿ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಿ ಪರಾರಿಯಾಗಿದ್ದ. ಮೃತದೇಹ ಗಮನಿಸಿದಾಗ ಆತ್ಮಹತ್ಯೆಯಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿತ್ತು. ಆರೋಪಿಯನ್ನು ಪತ್ತೆ ಹಚ್ಚಿ, ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಹೇಳಿದ್ದಾನೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಿಖರ ಕಾರಣ ಗೊತ್ತಾಗಲಿದೆ’ ಎಂದು ಪೊಲೀಸರು ತಿಳಿಸಿದರು.

ರಿಯಲ್ ಎಸ್ಟೇಟ್ ಉದ್ಯಮಿ ಕೊಲೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಕಾರಿನಲ್ಲೇ ಕೊಲೆ ಮಾಡಿರುವ ಘಟನೆ ಸೋಲದೇವನಹಳ್ಳಿ ಠಾಣೆ ವ್ಯಾಪ್ತಿ ಯಲ್ಲಿ ಶನಿವಾರ ನಡೆದಿದೆ.

ಮಾಗಡಿ ತಾಲ್ಲೂಕಿನ ಕುದೂರು ಮೂಲದ ಲೋಕನಾಥ್ ಸಿಂಗ್(37) ಕೊಲೆಯಾದ ಉದ್ಯಮಿ.

ಕೃತ್ಯ ಎಸಗಿರುವ ಅಪರಿಚಿತ ವ್ಯಕ್ತಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಸಂಜೆ 6 ಗಂಟೆ ಸುಮಾರಿಗೆ ಬಿಜಿಎಸ್ ಲೇಔಟ್ ನಿರ್ಮಾಣ ಹಂತದ ಕಟ್ಟಡದ ಬಳಿ ಈ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಲೋಕನಾಥ್ ಸಿಂಗ್ ಶನಿವಾರ ಸಂಜೆ 5 ಗಂಟೆ ಸುಮಾರಿಗೆ ನಾಲ್ಕೈದು ಮಂದಿ ಸ್ನೇಹಿತರ ಜತೆ ಸೋಲದೇವನಹಳ್ಳಿಯ ಬಿಳಿಜಾಜಿಯ ಬಿಜಿಎಸ್ ಲೇಔಟ್‌ನಲ್ಲಿರುವ ನಿರ್ಮಾಣ ಹಂತದ ಕಟ್ಟಡದ ಬಳಿ ಕಾರಿನಲ್ಲಿ ಬಂದು ಮದ್ಯ ಸೇವಿಸಿದ್ದಾರೆ. ಈ ವೇಳೆ ಯಾವುದೋ ವಿಚಾರಕ್ಕೆ ಜತೆಯಲ್ಲಿದ್ದವರೇ ಲೋಕನಾಥ್ ಸಿಂಗ್ ಕುತ್ತಿಗೆಗೆ ಮಾರಕಾಸ್ತ್ರದಿಂದ ಚುಚ್ಚಿದ್ದಾರೆ. ಆದರೂ ಲೋಕನಾಥ್, ಪ್ರಾಣ ರಕ್ಷಣೆಗಾಗಿ ಆರೋಪಿಗಳನ್ನು ತಳ್ಳಿ ಕಾರಿನಿಂದ ಇಳಿದು ಸ್ವಲ್ಪ ದೂರ ಓಡಿ ಹೋದರು. ಆದರೆ, ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟರು ಎಂದು ಹೇಳಿದ್ದಾರೆ.

ಪೊಲೀಸರು ಘಟನಾ ಸ್ಥಳದ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದು, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದರು.

‘ಲೋಕನಾಥ್ ಸಿಂಗ್ ಜತೆ ಬಂದಿದ್ದ ಅವರ ಗನ್‌ಮ್ಯಾನ್ ಕೂಡ ನಾಪತ್ತೆಯಾಗಿದ್ದು, ಆತನ ಮೇಲೂ ಅನುಮಾನ ಇದೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಉದ್ಯಮಿಯಾಗಿದ್ದ ಲೋಕನಾಥ್ ಸಿಂಗ್ ವಿರುದ್ಧ ನಗರದ ಕೆಲ ಠಾಣೆಗಳಲ್ಲಿ ಮೂರಕ್ಕೂ ಹೆಚ್ಚು ವಂಚನೆ ಪ್ರಕರಣಗಳು ದಾಖಲಾಗಿವೆ. ಹಣಕಾಸಿನ ವಿಚಾರಕ್ಕೆ ಕೊಲೆ ನಡೆದಿರುವ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾಗಡಿ ಶಾಸಕರ ಆಪ್ತ?: ಕೊಲೆಯಾದ ಲೋಕನಾಥ್ ಸಿಂಗ್ ಮಾಗಡಿ ಶಾಸಕ ಬಾಲಕೃಷ್ಣ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಎನ್ನಲಾಗಿದೆ.

ಹಲ್ಲೆ ನಡೆಸಿ ಕೊಲೆಗೆ ಯತ್ನ

ಬೆಂಗಳೂರು: ಮದ್ಯದಂಗಡಿಗೆ ನುಗ್ಗಿ ಇಬ್ಬರ ಮೇಲೆ ಬಾಟಲಿಯಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ ಘಟನೆ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಗಂಭೀರವಾಗಿ ಗಾಯಗೊಂಡಿರುವ ನಗರದ ನಿವಾಸಿಗಳಾದ ವಂಶಿ ಕೃಷ್ಣ ಹಾಗೂ ಪವನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸರಸ್ವತಿ ನಗರ ಮುಖ್ಯ ರಸ್ತೆಯಲ್ಲಿರುವ ಸ್ಫೂರ್ತಿ ಬಾರ್‌ನಲ್ಲಿ ಇಬ್ಬರು ಸ್ನೇಹಿತರು ರಾತ್ರಿ ಮದ್ಯ ಸೇವಿಸುತ್ತಿದ್ದ ವೇಳೆ ಮೂವರು ಬಂದು ಬೀರು ಬಾಟಲಿಯಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿ, ಪರಾರಿಯಾಗಿದ್ದಾರೆ.

ಸ್ಥಳಕ್ಕೆ ಮಹಾಲಕ್ಷ್ಮೀ ಲೇಔಟ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಇಬ್ಬರ ಮೇಲೆ ಮೂವರು ವ್ಯಕ್ತಿಗಳು ಹಲ್ಲೆ ನಡೆಸಿದ್ದಾರೆ. ವೈಯಕ್ತಿಕ ದ್ವೇಷದಿಂದಾಗಿ ಹಲ್ಲೆ ನಡೆದಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಗಾಯಾಳುಗಳು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿಗಳ ಸುಳಿವು ಸಿಕ್ಕಿಲ್ಲ. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಪಿಎಸ್‌ಐ ಸಂತೋಷ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣ ಅಂಗಡಿಯಿಂದ ಚಿನ್ನ ಪಡೆದು ವಾಪಸ್ ನೀಡದೆ ದುರ್ನಡತೆ ತೋರಿದ ಕಾಟನ್‌ಪೇಟೆ ಠಾಣೆ ಪಿಎಸ್‌ಐ ಪಿ.ಜಿ.ಸಂತೋಷ್ ಅವರನ್ನು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅಮಾನತುಗೊಳಿಸಿದ್ದಾರೆ.

ಸಂತ್ರಸ್ತ ಧನಂಜಯ್ ಶ್ಯಾಮ್ ರಾವ್ ಮಾಲಿ ನೀಡಿದ ದೂರಿನ ಅನ್ವಯ ಹಲಸೂರು ಗೇಟ್ ಠಾಣೆಯಲ್ಲಿ ಸಂತೋಷ್ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಜೀವ ಬೆದರಿಕೆ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹಲಸೂರು ಗೇಟ್ ಠಾಣೆಯಲ್ಲಿ 2020ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪಿಎಸ್‌ಐ ಸಂತೋಷ್, ಸಿಟಿ ಸ್ಟ್ರೀಟ್ ರಸ್ತೆಯಲ್ಲಿರುವ ಧನಂಜಯ್ ಅವರ ಚಿನ್ನದಂಗಡಿಗೆ ಭೇಟಿ ನೀಡಿದ್ದರು. ಪ್ರಕರಣವೊಂದರಲ್ಲಿ ಜಪ್ತಿಯಾಗಿರುವ ಮಾಲು ತೋರಿಸಬೇಕಾಗಿರುವ ಕಾರಣ 950 ಗ್ರಾಂ ಚಿನ್ನದ ಗಟ್ಟಿ ಪಡೆದು, ಸಂಜೆ ವಾಪಸ್ ನೀಡುವುದಾಗಿ ಭರವಸೆ ನೀಡಿದ್ದರು. ತಿಂಗಳುಗಳೇ ಕಳೆದರೂ ಪಿಎಸ್‌ಐ ಚಿನ್ನವನ್ನು ವಾಪಸ್ ನೀಡಿರಲಿಲ್ಲ. ಹಲವು ಬಾರಿ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದರು.

₹64 ಲಕ್ಷ ಮೌಲ್ಯದ ಚಿನ್ನದ ಗಟ್ಟಿಯ ಬದಲಿಗೆ ಹನುಮಂತ ನಗರದಲ್ಲಿರುವ ತನ್ನ ಪತ್ನಿಯ ಹೆಸರಿನಲ್ಲಿರುವ ನಿವೇಶನವನ್ನು ನೋಂದಣಿ ಮಾಡಿಕೊಡುವುದಾಗಿ ಹೇಳಿದ್ದರು. ಆದರೆ, ಧನಂಜಯ್‌ಗೆ ಗೊತ್ತಾಗದಂತೆ ನಿವೇಶನವನ್ನು ಬೇರೊಬ್ಬರಿಗೆ ಮಾರಾಟ ಮಾಡಿದ್ದರು.

ನಂತರ ಸಂತೋಷ್ ನೀಡಿದ್ದ ಖಾಲಿ ಚೆಕ್‌ಗಳು ಬೌನ್ಸ್ ಆಗಿದ್ದವು. ಈ ಬಗ್ಗೆ ಪ್ರಶ್ನಿಸಿದಾಗ ಸುಳ್ಳು ಪ್ರಕರಣದಲ್ಲಿ ಬಂಧಿಸುವುದಾಗಿ ಬೆದರಿಸುತ್ತಿದ್ದ ಸಂತೋಷ್ ವಿರುದ್ಧ ಧನಂಜಯ್ ಅವರು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್‌ಗೆ ದೂರು ನೀಡಿದ್ದರು.

ದೂರಿನ ಆಂತರಿಕ ತನಿಖೆ ನಡೆಸಿ ವರದಿ ನೀಡುವಂತೆ ವಿಜಯನಗರ ಉಪವಿಭಾಗದ ಎಸಿಪಿ ಚಂದನ್ ಕುಮಾರ್ ಅವರಿಗೆ ಡಿಸಿಪಿ ಆದೇಶಿಸಿದ್ದರು. ವರದಿಯಲ್ಲಿ ಪಿಎಸ್‌ಐ ಸಂತೋಷ್ ಕರ್ತವ್ಯಲೋಪ, ದುರ್ನಡತೆ ಹಾಗೂ ವಂಚನೆ ಎಸಗಿರುವುದನ್ನು ದೃಢಪಡಿಸಿದ್ದರು. ಸಂತೋಷ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಕಮಿಷನರ್‌ಗೆ ಡಿಸಿಪಿ ಕೋರಿದ್ದರು.

ರಾಜ್ಯ ರೈತ ಸಂಘ, ಹಸಿರು ಸೇನೆ ಪದಾಧಿಕಾರಿಗಳಿಂದ ಡಿ.ಸಿ ಭೇಟಿ

ಸ್ಪಂದಿಸದ ಅಧಿಕಾರಿಗಳು, ರೈತರ ದೂರು

ಪ್ರಜಾವಾಣಿ ವಾರ್ತೆ

ಯಲಹಂಕ: ತಾಲ್ಲೂಕು ಕಚೇರಿಯ ವಿವಿಧ ವಿಭಾಗಗಳ ನೌಕರರು ಹಾಗೂ ಸಿಬ್ಬಂದಿ ರೈತರ ಕೆಲಸಗಳಿಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ, ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆಯ ಪದಾಧಿಕಾರಿಗಳು ಬೆಂಗಳೂರು ನಗರ ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್.ಕೆ.ನಾಯಕ್ ಅವರಿಗೆ ದೂರು ಸಲ್ಲಿಸಿದರು.

ಸಂಘದ ರಾಜ್ಯ ಕಾರ್ಯದರ್ಶಿ ಕಡತನಮಲೆ ನಂಜುಂಡಪ್ಪ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಮಾಡಿದ ಸಂಘದ ಸದಸ್ಯರು, ‘ರೈತರು ಹಾಗೂ ಸಾರ್ವಜನಿಕರ ಕೆಲಸಗಳಿಗೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಪರಿಣಾಮ, ದಿನನಿತ್ಯ ಕಚೇರಿಗಳಿಗೆ ಅಲೆದಾಡಬೇಕಾಗಿದೆ. ಸರ್ಕಾರಿ ನೌಕರರು ಸಾರ್ವಜನಿಕರ ಅಹವಾಲುಗಳಿಗೆ ನಿಗಧಿತ ಕಾಲಮಿತಿಯೊಳಗೆ ಪರಿಹಾರ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ಜನಸ್ಪಂದನ ಸಭೆ ನಡೆಸಬೇಕು. ಎನ್‌ಇಎಸ್ ಕಚೇರಿ ಬಳಿ ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಅಲ್ಲಿ ಪಾದಚಾರಿಗಳಿಗೆ ರಸ್ತೆದಾಟಲು ಅನುಕೂಲವಾಗುವಂತೆ ಸಿಬ್ಬಂದಿ ನೇಮಿಸಬೇಕು. ಬೆಟ್ಟಹಲಸೂರು ಕ್ರಾಸ್ ಬಳಿ ಮೆಟ್ರೊ ನಿಲ್ದಾಣ ಮತ್ತು ಸ್ಕೈವಾಕ್ ನಿರ್ಮಿಸಬೇಕು’ ಎಂದು ರೈತ ಮುಖಂಡರು ಆಗ್ರಹಿಸಿದರು.

ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ.72ರಿಂದ 163ರವರೆಗೂ ಸಾಗುವಳಿ ಮಾಡುತ್ತಿರುವ ರೈತರಿಗೆ ಮತ್ತು ಕಾರ್ಲಾಪುರ, ಕಾರ್ಲಾಪುರ ಪಾಳ್ಯ, ಕಾಮಾಕ್ಷಿಪುರ ಹಾಗೂ ಚಲ್ಲಹಳ್ಳಿ ಗ್ರಾಮಗಳ ರೈತರಿಗೆ ನ್ಯಾಯಾಲಯದ ಆದೇಶದ ಪ್ರಕಾರ ಸಾಗುವಳಿ ಚೀಟಿ ನೀಡಬೇಕು. ಫಾರಂ 50-53ರನ್ನು ಸಲ್ಲಿಸಿ, ಮಂಜೂರಾಗಿರುವ ರೈತರಿಗೆ ಪೋಡಿ ಮಾಡಿಕೊಡುವುದರ ಜೊತೆಗೆ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು.


ಸಂಘದ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಆಂಜನಮೂರ್ತಿ ಕಾರ್ಲಾಪುರ, ಗೌರವಾಧ್ಯಕ್ಷ ತರಬನಹಳ್ಳಿ ರಾಜಣ್ಣ, ರೈತ ಮುಖಂಡರಾದ ಟಿ.ಪಿ.ಪ್ರಕಾಶ್, ನಾಗರಾಜ ಬಾಬು, ಶೆಟ್ಟಿಗೆರೆ ಸೌಭಾಗ್ಯಮ್ಮ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ರೈತಸಂಘ ಮತ್ತು ಹಸಿರುಸೇನೆಯ ಪದಾಧಿಕಾರಿಗಳು, ಬೆಂಗಳೂರುನಗರ ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್.ಕೆ.ನಾಯಕ್ ಅವರಿಗೆ ದೂರು ಸಲ್ಲಿಸಿದರು

ನಗರದಲ್ಲಿ ಇಂದು

ದಕ್ಷಿಣ ಏಷ್ಯಾ ಅಂತರರಾಷ್ಟ್ರೀಯ ಶಾಂತಿ ಸಮ್ಮೇಳನ–2025: ಅತಿಥಿಗಳು: ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಶ್ರೀ ರವಿಶಂಕರ್ ಗುರೂಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಎಚ್.ಡಿ. ಕುಮಾರಸ್ವಾಮಿ, ಜಿ. ಪರಮೇಶ್ವರ, ಡಾ.ಸಿ.ಎನ್. ಮಂಜುನಾಥ್, ಮುನಿರತ್ನ, ಐಶ್ವರ್ಯಾ ಹೆಗ್ಡೆ, ಮಣಿವಣ್ಣನ್, ರಿಕ್ಕಿ ಕೇಜ್, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3192, ಸ್ಥಳ: ಡಾ. ಬಾಬುಜಗಜೀವನ್ ರಾಮ್ ಸಂಶೋಧನಾ ಸಂಸ್ಥೆ, ಸುಮನಹಳ್ಳಿ ವೃತ್ತದ ಹತ್ತಿರ, ಬೆಳಿಗ್ಗೆ 8.15




ನಿರ್ಮಲಾನಂದನಾಥ ಸ್ವಾಮೀಜಿ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಭಾಗವಹಿಸುವವರು: ವೀಣಾ ಯು., ಚಂದ್ರಮುಖಿ ಬೆಳಗೂರು, ಸಂಜೋತಾ ಭಂಡಾರಿ, ಕಾವೇರಿ ಸಿ. ಚಿಕ್ಕಡಿ, ಪೂರ್ಣಿಮಾ ಮಾಳಗಿಮನಿ, ತಾಹಿರಾ ಒಲಿ, ಡಾ. ರಾಜಶೇಖರ್ ಸಿ.ಜೆ., ಆಯೋಜನೆ: ಕರ್ನಾಟಕ ನವೋದಯ ಅಲೂಮ್ನಿ, ಸ್ಥಳ: ದೇವರಾಜ್ ಅರಸು ಭವನ, ಬೆಳಿಗ್ಗೆ 9ರಿಂದ

ಎಂಟನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ: ಗೀತ ಗಾಯನ: ರಮ್ಯಾ ಸೂರಜ್, ‘ನನ್ನ ಬದುಕು, ನನ್ನ ಆಯ್ಕೆ’ ಗೋಷ್ಠಿ: ಅಧ್ಯಕ್ಷತೆ: ಆರ್.ಕೆ. ಸರೋಜ್, ಆಶಯ ನುಡಿ: ಕೆ.ಎಸ್. ವಿಮಲಾ, ‘ಆಧುನಿಕ ಕಾಲಘಟ್ಟದಲ್ಲಿ ಮದುವೆ ಮತ್ತು ತಾಯ್ತನದ ವಿನ್ಯಾಸಗಳು’ ವಿಷಯ ಮಂಡನೆ: ಬಿ.ಯು. ಸುಮಾ, ‘ಮಹಿಳೆ ಮತ್ತು ಅಧಿಕಾರ ನಿರ್ವಹಣೆ’: ಕೆ.ವೈ. ನಾರಾಯಣಸ್ವಾಮಿ, ‘ಕೃಷಿ, ಪರಿಸರ ಮತ್ತು ಮಹಿಳೆ’: ಪಿ. ಚಂದ್ರಿಕಾ, ‘ಆಧುನಿಕತೆ ಹಾಗೂ ಅಸ್ಮಿತೆಯ ಅನ್ವೇಷಣಾ ಕ್ರಮಗಳು’ ಗೋಷ್ಠಿ: ಅಧ್ಯಕ್ಷತೆ: ತಾರಿಣಿ ಶುಭದಾಯಿನಿ, ಆಶಯ: ವೆಂಕಟೇಶಯ್ಯ ನೆಲ್ಲುಕುಂಟೆ, ‘ಕಾವ್ಯ ರೂಪಕ–ಕಲ್ಲರಳಿ ಹೆಣ್ಣಾಗಿ’ ನಾಟಕ ಪ್ರದರ್ಶನ: ನಿರ್ದೇಶನ: ಜಯಲಕ್ಷ್ಮಿ ಪಾಟೀಲ್, ಸಮಾರೋಪ ಸಮಾರಂಭ: ಶಿವರಾಜ ತಂಗಡಗಿ, ಬಾನು ಮುಷ್ತಾಕ್, ಪಿ.ಜಿ.ಆರ್. ಸಿಂಧ್ಯ, ಡಾ. ವಸುಂಧರಾ ಭೂಪತಿ, ಎಲ್. ಹನುಮಂತಯ್ಯ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಭವನ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆವರಣ, ಬೆಳಿಗ್ಗೆ 9.30ರಿಂದ

‘ವಿಶ್ವ ಜಲದಿನ–2025’ ಒಂದು ಸಂವಾದ: ಎಸ್. ಎನ್. ಪಾಂಡೆ, ಸನತ್ ಕುಮಾರ್, ಬಾಲಕೃಷ್ಣ ಮೆಹ್ತಾ, ಮಹಾರಾಣಿ ರಾಜೇಶ್ವರಿ ಆರ್., ಯು. ನಳಿನಾಕ್ಷಿ, ಆಯೋಜನೆ: ಏರಿಯೇಟರ್ ಅಳವಡಿಸಿ ಜಲ ಸಂರಕ್ಷಿಸಿ, ಸ್ಥಳ: ವಾಟರ್ ಥೀಮ್ ಪಾರ್ಕ್ ಜಯನಗರ, ಬೆಳಿಗ್ಗೆ 9.30

‘ಜೀನಾ ಇಸೀ ಕಾ ನಾಮ್’ ರಾಜ್ ಕಪೂರ್–100: ಸಂಜೆ 5ಕ್ಕೆ ಗಾಯನ: ರಾಮಚಂದ್ರ ಹಡಪದ್, ಸ್ಪರ್ಶ ಆರ್.ಕೆ., ಶ್ರುತಿ ವಿ.ಎಸ್., ಹರ್ಷ ರಂಜಿನಿ, ನಿರೂಪಣೆ: ರಾಘವೇಂದ್ರ ಕಾಂಚನ್, ಸಂಜೆ 7ಕ್ಕೆ ‘ಎರಡು ದೋಣಿ’ ದೃಶ್ಯಗೀತೆ ಲೋಕಾರ್ಪಣೆ: ಸಾಹಿತ್ಯ: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ಟಿ.ಎನ್. ಸೀತಾರಾಮ್, ಜ್ಯೋತಿ, ಸಂಗೀತ: ರಾಮಚಂದ್ರ ಹಡಪದ್, ಗಾಯನ: ಮಂಗಳಾ ರವಿ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ ಕ್ರಾಸ್



ರಾಜ್‌ಕಪೂರ್

ವೀರಲೋಕ ಸಾಹಿತ್ಯ ಯುಗಾದಿ 10 ಪುಸ್ತಕಗಳ ಬಿಡುಗಡೆ: ಅತಿಥಿಗಳು: ಗಿರೀಶ್ ಕಾಸರವಳ್ಳಿ, ಬೈರಮಂಗಲ ರಾಮೇಗೌಡ, ಸಹನಾ ವಿಜಯಕುಮಾರ್, ಬಸವರಾಜ ಸಬರದ, ಪ್ರಾಸ್ತಾವಿಕ ನುಡಿ: ವೀರಕಪುತ್ರ ಶ್ರೀನಿವಾಸ್, ಆಯೋಜನೆ: ವೀರಲೋಕ ಪ್ರಕಾಶನ, ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ಗಮಕ ವಾಚನ ಗಾಯನ ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಸುಪುಮಾ ಸುರೇಶ್ ಅವರ ‘ಪಾತಜ್ಜಿ’ ಪುಸ್ತಕ ಬಿಡುಗಡೆ: ಎಸ್.ಆರ್. ರಮೇಶ್, ಸಾನ್ನಿಧ್ಯ: ಸ್ವಾಮಿ ವೀರೇಶಾನಂದ ಸರಸ್ವತಿ, ಪುಸ್ತಕದ ಕುರಿತು: ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ರವೆ ಅಜ್ಜಿ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಜ್ಯೋತಿಷ ಹಾಗೂ ವಾಸ್ತು ವಿಜ್ಞಾನದ ಅಲ್ಪಾವಧಿ ಕೋರ್ಸ್‌ಗಳ ಉದ್ಘಾಟನೆ: ರಾಮಕೃಷ್ಣ ಪೆಜತ್ತಾಯ, ಅಧ್ಯಕ್ಷತೆ: ಎಸ್. ಅಹಲ್ಯ, ಅತಿಥಿ: ಅನಂತರಾಘವನ್, ಬಿ.ಎನ್., ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯದ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟ, ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 10

ಸುಗ್ಗಿ ಸಂಭ್ರಮ–2025: ಅತಿಥಿಗಳು: ಮಂಜುಳಾ ಕಿರುಗಾವಲು, ಸಂಜನಾ, ಸೈಯದ್ ಘನಿ ಖಾನ್, ಉಪಸ್ಥಿತಿ: ಜನಾರ್ದನ, ಸವಿತಾ ಸುರೇಶ್ ಬಾಬು, ಮುರಳಿ ಮೋಹನ್ ಕಾಟಿ, ಆಯೋಜನೆ: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ ಲರ್ನಿಂಗ್ ಆ್ಯಂಡ್ ಬದುಕು ಅಲುಮ್ನಿಗಳ ಸಹಭಾಗಿತ್ವ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

‘ಜನ್ಮಶತಾಬ್ದ’ ಸಾ.ಕೃ. ರಾಮಚಂದ್ರರಾವ್ ಅವರ ಸಂಗೀತ ಕೃತಿಗಳ ಪ್ರಸ್ತುತಿ: ವೀಣಾವಾದನ: ಆತ್ರೇಯ ಸಾಲಿಗ್ರಾಮ, ಪಿಟೀಲು: ಪ್ರದ್ಯುಮ್ನ ಸಾಲಿಗ್ರಾಮ, ಗಾಯನ: ಬೃಂದಾ ರಾವ್, ಪಕ್ಕವಾದ್ಯ: ಜಯಂತ್ ಎಂ., ಅಧ್ಯಕ್ಷತೆ: ಆರ್.ವಿ. ರಾಘವೇಂದ್ರ, ಆಯೋಜನೆ: ಪ್ರೊ.ಸಾ.ಕೃ. ರಾಮಚಂದ್ರರಾವ್ ಮೆಮೊರಿಯಲ್ ಟ್ರಸ್ಟ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30


ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಉತ್ಸವ ಹಾಗೂ ಸಾಧಕರಿಗೆ ಸನ್ಮಾನ, ರಂಗನಗೌಡ ಪಾಟೀಲ ಅವರು ಅನುವಾದಿಸಿರುವ ‘ದೇಶಭಕ್ತರು ಹಾಗೂ ದೇಶದ್ರೋಹಿಗಳು’ ಪುಸ್ತಕ ಬಿಡುಗಡೆ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ರಾಧಾಕೃಷ್ಣ ದೊಡ್ಡಮನಿ, ಎಸ್. ರಾಜಾರಾವ್, ಅಧ್ಯಕ್ಷತೆ: ಚಂದ್ರಕಾಂತ ಭಂಡಾರೆ, ಆಯೋಜನೆ: ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘ, ಸ್ಥಳ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಭಾಭವನ, ರೇಸ್‌ಕೋರ್ಸ್ ರಸ್ತೆ, ಗಾಂಧಿನಗರ, ಬೆಳಿಗ್ಗೆ 10.30

ಚಂದ್ರಕಾಂತ ವಡ್ಡು ಅವರ ‘ಚುಂಬಕ ಗಾಳಿ’ ಪುಸ್ತಕ ಬಿಡುಗಡೆ: ಬಿ.ಆರ್. ಪಾಟೀಲ, ಪುಸ್ತಕದ ಕುರಿತು: ಸುಭಾಷ್ ರಾಜಮಾನೆ, ‘ಲೋಹಿಯಾ ಸಮಾಜವಾದ ಮತ್ತು ಇಂದಿನ ಸರ್ಕಾರಗಳು’ ಉಪನ್ಯಾಸ: ಯೋಗೇಂದ್ರ ಯಾದವ್, ಶಿವಸುಂದರ್, ಅಧ್ಯಕ್ಷತೆ: ಜಯರಾಮ್ ರಾಯಪುರ, ಆಯೋಜನೆ: ಸಮಾಜಮುಖಿ, ಸ್ಥಳ: ಮಿಡಾಸ್ ಸ್ಕೂಲ್ ಆಫ್ ಎಂಟರ್ ಪ್ರೆನರಶಿಪ್, ಮೂರನೇ ಮಹಡಿ, ಶೇಷಾದ್ರಿಪುರ ಮುಖ್ಯರಸ್ತೆ, ಬೆಳಿಗ್ಗೆ 10.30

ಎಚ್.ಎನ್. ನಾಗಮೋಹನದಾಸ್ ಆಯೋಗಕ್ಕೆ ಮನವಿ ಪತ್ರ ಸಲ್ಲಿಕೆ, ಒಳ ಮೀಸಲಾತಿ ಕುರಿತು ರಾಜ್ಯಮಟ್ಟದ ವಿಚಾರಸಂಕಿರಣ: ಮನವಿ ಸ್ವೀಕರಿಸುವವರು: ಎಚ್.ಎನ್. ನಾಗಮೋಹನದಾಸ್, ವಿಚಾರಸಂಕಿರಣ: ಡಿ.ಜಿ.ಸಾಗರ್, ಡಿ. ಚಂದ್ರಶೇಖರಯ್ಯ, ವಿಷಯ ಮಂಡನೆ: ಅಪ್ಪಗೆರೆ ಸೋಮಶೇಖರ್, ನವೀನ್ ಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ಬಲಗೈ ಹೊಲೆಯ ಸಂಬಂಧಿತ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

ಡಾ. ರಾಮಮನೋಹರ ಲೋಹಿಯಾ ಜನ್ಮದಿನಾಚರಣೆ, ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಸ್ವೀಕರಿಸುವವರು: ಯೋಗೇಂದ್ರ ಯಾದವ್, ಅತಿಥಿಗಳು: ಬಿ.ಆರ್. ಪಾಟೀಲ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಅಭಿನಂದನೆ: ರಾಜೀವ್ ರಾಯ್, ಮೋಹನ್ ಕೊಂಡಜ್ಜಿ, ವೀಣಾ ಮಹಾಂತೇಶ್, ಆಯೋಜನೆ: ಭಾರತ ಯಾತ್ರಾ ಕೇಂದ್ರ, ಎಂ.ಪಿ. ಪ್ರಕಾಶ ಸಮಾಜಮುಖಿ ಟ್ರಸ್ಟ್, ಲೋಕನಾಯಕ ಜಯಪ್ರಕಾಶ್ ನಾರಾಯಣ ವಿಚಾರ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4

ಸ್ನೇಹ ಕಪ್ಪಣ್ಣ ಅವರ ‘ನೃತ್ಯ ಬೇರು’ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳ ಬಿಡುಗಡೆ: ಅತಿಥಿಗಳು: ಚಿರಂಜೀವಿ ಸಿಂಘ್, ಹಿ.ಚಿ. ಬೋರಲಿಂಗಯ್ಯ, ಮಣಿಮೇಖಲೈ ಮೋಹನ್, ಮೋಹನ್ ದಾಸ್, ಶೀಲಾ ಚಂದ್ರಶೇಖರ್, ನಿತಿನ್ ಷಾ, ಆಯೋಜನೆ: ಕಪ್ಪಣ್ಣ ಅಂಗಳ, ಸ್ಥಳ: ಡಾ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಚಿರಂಜೀವಿ ಸಿಂಘ್

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಓಂಕಾರನಾಥ್ ಹವಾಲ್ದಾರ್, ಮೃದಂಗ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಆಯೋಜನೆ: ಆನಂದ ನಾದೋತ್ಸವ, ಸ್ಥಳ: ನಂದಶ್ರೀ ಆರ್ಟ್ಸ್‌ಸ್ಪೇಸ್, ಎರಡನೇ ಮಹಡಿ, ಬಿಸಿಎಂಸಿ ಬಡಾವಣೆ, ರಘುವನಹಳ್ಳಿ, ಸಂಜೆ 5

ಸಂಗೀತ ಕಛೇರಿ: ಗಾಯನ: ಅಶ್ವತ್ಥ್ ನಾರಾಯಣನ್, ಪಿಟೀಲು: ಬಿ.ಕೆ. ರಘು, ಮೃದಂಗ: ಬಿ.ಆರ್. ಶ್ರೀನಿವಾಸ, ಘಟ: ಓಂಕಾರ್ ಜಿ. ರಾವ್, ಆಯೋಜನೆ: ಬಿ.ಟಿ.ಎಂ. ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಸಂಜೆ 5.30

ಸ್ವರ ಧಾರಾ: ಗಾಯನ: ಮೋನಿಕಾ ಶಾ, ತಬಲಾ: ಶಶಿಭೂಷಣ್ ಗುರ್ಜರ್, ಹಾರ್ಮೋನಿಯಂ: ವಿಘ್ನೇಶ ಭಾಗವತ್, ಸಿತಾರ್: ಸಂಜೀವ್ ಕೆ., ತಬಲಾ: ಕಾರ್ತಿಕ್ ಕೃಷ್ಣ, ಆಯೋಜನೆ: ಸಪ್ತಕ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SREE VENKATESHWARA ENGLISH SCHOOL, #1, V.S Layout, Krishnarajapura, Bangalore-560036. WANTED-TEACHERS B.Sc, B.Ed (Maths, Science) B.A B.Ed (Social, English) TCH D.Ed B.P.Ed M.P.Ed, B.Lib Attractive Salary Attend with original certificates. Contact: 080-25611873, 7411135627 Email: svs.krp.bangalore@gmail.com

VASAVI GROUP OF EDUCATIONAL INSTITUTIONS VIJAYANAGAR. BANGALORE-40. Applications are invited from Freshers and Experienced faculties (Pu & Degree departments) for PHYSICS CHEMISTRY MATHEMATICS, COMMERCE KANNADA ENGLISH SANSKRIT HINDI COMPUTER SCIENCE & OFFICE STAFF, Interested Candidates may apply for the post with updated resume and relevant documents to the vasaviintpu@gmail.com on or before 29th March 2025, Contact: 080-23203342, 080-23300532.

SREE VENKATESHWARA PU COLLEGE Krishnarajapuram Bangalore-560036 WANTED EXPERIENCED LECTURERS for Economics, English & Physical Education Attractive Salary Attend with Original Certificates Email-ID: svs.krp.bangalore@gmail.com. Contact: 9036068144, 7411135627

'Igniting young minds'
Auden School
(Affiliated to CBSE, New Delhi)
Scan for Location
No. 6, 7 th Block, BSK 3rd Stage, Bangalore 560085
Ph: 080-26722888 / 9448574888
Email: audenschool@gmail.com

Applications are invited for eligible candidates for the below Posts:

1. **Primary Co-ordinator (Grade 1 to 4)**
   B.Sc/BA with B.Ed having min. 5 years' experience as a Coordinator.
2. **Physics/Maths Teacher:**
   M.Sc, B.Ed having 5+ years of experience handling Physics and Maths for Higher Primary and High School Classes.
3. **Sanskrit Teacher: (Part Time)**
   MA in Sanskrit having relevant experience.
4. **Art and Craft Teacher:**
   B.A (Fine Arts) Fresher's can apply. **[Ladies Only]**
5. **Dance Teacher: (Full Time)**
   Having relevant experience in both Classical and Contemporary. **[Ladies Only]**

NOTE: Walk-in on any working day by **29th March 2025** (Monday to Friday) with your CV from 9.00am to 4.00pm. Salary not a constraint for deserving candidates.

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ COMPUTER TEACHERS/ PHYSICAL EDUCATION Salary Rs. 20000 to 35000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470 (Google Map location MATHA'S ENGLISH HIGH SCHOOL) #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917,8277258609

WANTED: PCMB-PU, Commerce-PU Maths & Science-SSLC Teachers in R.T.Nagar, Bangalore-8861560837

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail-maxmullerpublicschool.mlayout@gmail.com

NIRMAN INTERNATIONAL PUBLIC SCHOOL (CBSE),Near AutomatedRTO,7th Block, Vishweshwaraiah Layout, Bangalore-91 Requires Qualified,Experienced TEACHERS for All Subjects,from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

ACHIEVE SCHOOL, 17th Main Road, Near SLV, BDA Complex, Siddanna Layout, Banashankari Stage II, Bengaluru- 560070 Mob: 91642-22288 Requires TEACHERS. 1.SANSKRIT- High school 2. CHEMISTRY & BIOLOGY- High School 3.SS- Middle school

SRI HANUMAN GROUP OF EDUCATIONAL INSTITUTIONS ®
Affiliated To CBSE, New Delhi (Affiliation No-830249)
Bandappa Garden, Muthyalanagar, Gokul Extn, Bengaluru-560054. Ph No.080-23374802
E-mail: nps.principal@gmail.com website:www.npsblr.in

INVITES APPLICATION FOR TEACHING & NON TEACHING POSTS

We are seeking qualified and experienced teaching & non-teaching staff with excellent communication skills & proficiency in computer for the following posts.

KINDERGARTEN- NTT
PRT- English, Kannada, Hindi, Science, Mathematics & Social Studies.
TGT- English, Kannada, Hindi, Science, Mathematics, Social Studies, Computer Science & Physical Education
PGT (PART TIME)- Physics, Chemistry, Biology, Computer Science, Economics & Statistics
NON-TEACHING POSTS- Office Assistant

Eligible candidates may send their updated resume within **01.04.2025** to **hrnps54@gmail.com** or can submit their hard copy resume to the above address.

EAST WEST INSTITUTIONS
EAST WEST 1968
BENGALURU & MYSURU

EAST WEST ACADEMY
RAJAJINAGAR & MALLESHWARAM
Affiliated to CBSE New Delhi (Affiliation No. 831063)
3, 63rd & 64th Cross, 5th Block, Rajajinagar, Near Bhashyam Circle, Bengaluru-560010
Ph: 080-23404446, 23157577 Web: www.ewaschool.in

TEACHERS REQUIRED
PGTs | TGTs | NURSERY TEACHERS
Post Graduates / Graduates with B.Ed, Nursery and Montessory Trained
Physical Education, Music & Dance Teacher
With Excellent communication skills & Teaching experience in CBSE SCHOOLS
Eligible candidates may apply with your updated resume within 7 days.
Mail us: eastwestacademy@gmail.com
Attractive Package with all other benefits
SVM-24522

CAMLIN HIGH SCHOOL, 4th Cross, Hampinagar Bangalore-560104. Phone: 23301363. Required Trained Teachers for English, Social Science, Kannada, Maths, Hindi, Science, Drawing, Physical Education. Walk in interview or Send to e-mail: camlinschool84@gmail.com

MANASA EDUCATIONAL TRUST (R)
M.S.CONVENT
Sultanpalya, R.T.Nagar, Bangalore-32
TEACHERS REQUIRED
English, Science (High School)
Kannada, Computer Science (High School & Primary)
Admission Counselor & Office Admin
Graduates with B.Ed/M.Ed, M.Sc, MCA, MBA, M.A, B.Sc, BCA, B.Com
Walk-in interview
Send your updated resume to: manasa.edu.trust@gmail.com
9844043770 / 9844456549

ST BENEDICT'S GROUP OF INSTITUTIONS
Asirvanam, Anchepalya, Kumbalgodu PO, Bengaluru - 560074
TEACHERS WANTED
English, Science, Hindi, Mathematics, Chemistry, Physics, Social Studies, Computer Science, B.Sc Nursing & Physical Education Teachers.
Call: 98868 12398 91483 26177
Please post your resumes to stbenedictscbseschool74@gmail.com

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
REQUIREMRNT 2025-2026
TEACHERS
•NTT Trained •Social
•Computer •Maths
•Hindi •English
OTHERS
•Librarian
•Social Media Manager
•Physical Educator
•Music & Dance
Qualification: NTT, MTT, B.Ed/M.Ed with minimum 3 years of experience in CBSE/ICSE Board .
Email: srikkec@gmail.com
Ph: 9886535292

OXFORD PUBLIC SCHOOL Hongasandra, Bangalore TEACHER'S WANTED FOR HIGH SCHOOL All Subjects Good Faculty Bangalore-68 Phone: 8277677389

Accounts & Finance

TRAVEL COMPANY REQUIRED Accountant Cum Office Incharge B.Com`Graduate with Tally &.Latest`ERP Experience candidates in and`Around JP.Nagar Contact: 9972269972

General

PRAKASH POWER PLANNING Pvt Ltd.
SUPERGRADE ELECTRICAL CONTRACTORS
BANGALORE-560 076
www.prakashpower.net
WANTED
HARDWORKING, ENTHUSIASTIC ENGINEERS, TECHNICIANS, SAFETY OFFICERS, HELPERS
QUALIFICATION
Diploma/degree In Electrical Engineering, ITI Qualified Electricians, Welders, Nebosh Certified Safety Officers, SSSLC Pass/Fail Helpers, Experience Minimum 2 years
SALARY
negotiable comparable with peers
SEND YOUR CV TO:
satya.m@prakashpower.net
balaji.m@prakashpower.net
on whatsapp number
63638 87845

Architects

URGENTLY REQUIRED SITE SUPERVISORS and ARCHITECTURAL ASSISTANTS at Hunasamaranahalli near Yelahanka. Minimum Salary 15K. Send resume to rkitex@gmail.com

Hospital & Medical Jobs

VACANCY FOR the post of Consultant Radiologist/Sonologist in a private laboratory in Assam (near Guwahati). Accommodation will be provided. Salary - Negotiable. Call- 9864746179, 7896833100.

A DOCTOR With MBBS Wanted Immediately For Private Practice, For More Details Please Contact: 9972280981.

Wanted

WANTED EXPERIENCED MALE DATA ENTRY OPERATOR(Tally) Salary.Rs.15000 to Rs.20,000/-pm. Contact: G.Subramaniam BIMS Consulting Group,Near Shivananda Circle. (9448575683) bimsconsult@yahoo.com

REAL ESTATE SELLING

Sites

Anjanapura

ANJANAPURA 6TH BLOCK 30x40 #925 West`Facing. BANASHANKARI 6th`Stage 10th`Block 40x60 #1044 South Facing Site for Sale. 9880812364 9900268073.

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

20'X30' BDA Site for sale in Anjanapura 5th 'G' Block with Cauvery water,for Immediate registration Only:9008716584,68L

Banashankari

BDA SITE for Sale, Residential and Prime Commercial, Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 5TH Stage BDA, 30x40 North 19,000/-, parallel 80' Road Near Patalamma Temple, Mahalaxmi Enterprise -9845144365

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

Basaweshwaranagar

SITE FOR sale 40*60 SF BDA with 40 ft road Rs. 24000/- per sq/ft slightly negotiable Basaveshwaranagar. Contact : 9916826976.

Girinagar

"40X60 EAST BDA Semi-Commercial 40'feet Road Call for more details. "Sri Ganesh Estate"- 9845286505"

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jayanagar

JAYNAGAR 4TH T block near Shopping Complex two side Road 45x130, suitable for Apartment, 28,000/-Sft. -9731775536

JAYANAGAR 8TH Block BDA 30x50 EF SITE SALE Price 35,000/ Sqft Negotiable Good Location: 9845059328

BDA SITE for Sale, Residential and Prime Commercial, Jayanagara, JP Nagara, BMT Layout, HSR Layout, Koramangala 30x40, 40x60, 50x80. 9916592400

Kasturinagar

KASTURINAGAR, OMBR-LAYOUT Sadanandanagar. 50x80 BDA site 40x60 Houses for sale, only buyers. Call: 8660794550, 9844286556

Kempegowda Layout

KEMPEGOWDA LAYOUT 8th Block 40x60 E/F,Arkavathi alternate site,and VISHVESHWARAIAH LAYOUT 3rd Block 40x60 E/F.Contact: 9686469799

KEMPEGOWDA LAYOUT BDA Site Sale 40X60 East Facing, Close To 100Ft Road 5th Block Only Genuine Buyer Contact Owner: 9663005859

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

SITE FOR SALE KEMPEGOWDA LAYOUT 7th Block'L' Sector attached(BDA NOC) 30x40,6000/- slightly negotiable. Contact:9008800029

FOR SALE BDA allotted and BDA auction @ Kempegowda Layout Near to Chalagatta metro station Mysore road. 30x40, 40x60, 50x80 and 15000sqft Corner plot available. 9916592400

Nagarabhavi

40X60 PLOT N/F BDA 60ft Road, RHCS Layout Near 'D' Group Layout, Nagarabhavi, Bengaluru, Excellent Residential Location. Rs.17000 /sqft (Slightly Negotiable) Genuine Buyer Only Contact:9480217325

NAGARABHAVI BDA 1200 Sqft Plot 20k. Rental Income New Building 20x30. 1.2 Cr: 9036207777/ 9611146463

SALE, 30X40, 20X30, 30X50, 40X60, 50X80. ITI, SMV, Upkar, NGEF Layout Houses Rent/ Lease. 9035334418

30X50 WEST facing clear titled Residential site Rajajinagar Housing society Nagarabhavi Srigandadakaval. Immediate sale.Owner-9900966333

FOR RENT / LEASE



New Building fully furnished 52 Rooms with attached bathroom, and sitout for all rooms with OC and CC of BBMP available for Rent / Lease, ready to occupy at Central Revenue Layout, Middle of BDA Arkavathi layout behind Manyatha Tech park and near to Bhartiya City.

Contact
90359 43332 / 99457 78371/ 080-2351 2223

BDA SITE sale 30x40 N/F 'A' katha Health Layout Nagarabhavi. 14000/sqft slightly negotiable. 9844271742/ 9731560722

Kanakapura Road

BDA SITE for Sale, Residential and Commercial, Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road, 30x40, 40x60, 50x80. 9916592400

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Rajarajeshwari Nagar

41X40 W/S Corner Site sale University Layout, Rajarajeshwarinagar. Beautiful location, ₹19000/- Sqft. Direct Owner. 9591013777

Sadashiva Nagar

LOWER PALACE Orchid South-West Corner, 3420sqft with old house for sale at Sadashivnagar, Behind shell petrol pump. Call 9844039482

Rajajinagar

SITES FOR sale 25x41, 25x60, 60x40 Bhashyam circle Rajajinagar 5th block. Contact. 9845720810/ 9060406631.

Sanjaynagar

SANJAYNAGAR SOCIETY Site BDA Approved 1050-Sft North-West Corner 40-Feet Road,Excellent Location E-Khata done 9341260828

Vishweshwariah Layout

"50X80 NF RESIDENTIAL TOP LOCATION BDA SITE SALE 2ND BLOCK VISHVESHWARAIAH LAYOUT (GENUINE BUYERS)- 9845143579"

"AVAILABLE COMMERCIAL SITE 50x80 South in 4th Block Vishveshwaraiah Layout 80 feet Road. Contact: 9632788913"

"VISHVESHWARAIAH LAYOUT 2nd Block 30x40 North facing site for`sale (Brokers Execuse). Contact: "Krishna" 9886294610"

40X60 NORTH FACE HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site Sale Reasonable Price Call:9945191143 9945694783.

"VISHVESWARAIAH 1ST-BLOCK 30x40 South/ West facing Site Sale Near 100`ft Road Genuine Buyers only: 9845268611"

VISHWESHWARAIA LAYOUT 40x60 BDA SITE Sale 3rd Block East Facing 40 Feet Road. Excellent Location. Contact: 9035470616

"VISHVESHWARAIAH LAYOUT 6th Block near KLE.Law College 40x60`North 100% Vastu, 90% White. 7022218837"



BDA SITE SALE Vishveshwaryya Layout 6th Block 40x60 North Facing, Residential, 100% Vaastu. Contact: 8105688602.

BDA VISHWESHWARAIAH LAYOUT 4TH BLOCK 50X80 EAST FACE 80FT ROAD PARALLEL 7750 NEGOTIABLE CONTACT: 8892901567

DIRECT OWNER 30x40 BDA Site Sale 'VISHVESWARAIAH LAYOUT' Ready to Construction,Near 100ft Road. 9742681666

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER 9606866368

House

Banashankari

30X52 E/S CORNER VILLA 4BHK HOUSE SALE, Banashankari 6th`Stage. 10th.Block. Attached. Gated Community 2.5Cr. Full Cheque Payment 9799099699 9740075563.

20X30 FURNISHED 3 BHK newly constructed triplex house ready to occupy for sale at BDA Banashankari 6th Phase, 4th Block, ground floor parking, three floor, terrace cost Rs. 1.45 Cr contact owner Ramesh 9341250356



Basavanagudi

SALE 20X40, BDA Site with 3000sft Building, E Katha, Rental income, 2.40Cr. Nego. Owner: 9845743555

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

J P Nagar

SALE JPNAGAR 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

Jayanagar

JAYANAGAR 4TH `T`Block 44x120 Two corner 3 side 60' Road, Suitable Residential/ semi-commercial 35,000/-Sft., -9731775536

SALE 45X90 Jayanagar 4th Block With old House on 60feet Road Excellent Location Contact: 9844134068 8073859758

ಜನಸೇವಾ ವಿದ್ಯಾಕೇಂದ್ರ
ಬಾಲಕರ ನಿಲಯ ಶಾಲೆಗಳು

ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119, 9480609078
email: 123jsvkhighschool@gmail.com

2025–26ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯೊಂದಿಗೆ ಕನ್ನಡ ಮಾಧ್ಯಮ (ಸ್ಥಳೀಯ ವಿದ್ಯಾರ್ಥಿಗಳಿಗೆ ಕೂಡ ಅವಕಾಶವಿದೆ)
8ನೇ ತರಗತಿ:	ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಪ್ರಥಮ ಭಾಷೆ ಕನ್ನಡ/ಸಂಸ್ಕೃತ
9ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ

ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.250/– ಮಾತ್ರ ಯಾವುದೇ ಬ್ಯಾಂಕಿನ ಆನ್‌ಲೈನ್ ಅಥವಾ ನಗದು ಮೂಲಕ ಪಡೆಯಬಹುದು

Contact: 9241216119, 9480609078
ಪರಿಚಾಯಿಕೆ ಪಡೆಯಲು ಕೊನೆಯ ದಿನಾಂಕ 05.04.2025

ಪ್ರವೇಶ ಪರೀಕ್ಷೆಗಳು

5, 6, 7 ಮತ್ತು 9ನೇ ತರಗತಿಗಳು	06.04.2025 ಭಾನುವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ
8ನೇ ತರಗತಿ ಎಲ್ಲಾ ಜಿಲ್ಲೆಯವರಿಗೆ	06.04.2025 ಭಾನುವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ

ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys

Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com

ADMISSIONS OPEN FOR THE ACADEMIC YEAR 2025-26

First Year PUC — Science (PCMB/PCMCs) Commerce (SEBA & CEBA)

Excellent coaching by experienced and highly qualified faculty members, Very Good Hostel Facility in natural environment.

Local Students (Boys & Girls) may also apply

Application forms are available in the college Office between 10 a.m. to 5 p.m.
Mob: 080-23901414 / 9148275341

-Hon Secretary

MATHA'S INTERNATIONAL SCHOOL ICSE

(Affiliated to the council for the indian School Certificate Examinations (CISCE) New Delhi)













Dr. G.S. ASHOKA
Honorary General Secretary
MATHA'S EDUCATION SOCIETY (R)
Bharat Ratna Mother Teresa Gold Medal Awardee
Bharatiya Udyog Ratna Gold Medal Awardee
Best Citizen of India Gold Medal Awardee

AFFILIATION SCHOOL CODE KA470

ADMISSIONS ARE OPEN FOR 2025-2026

NURSERY | LKG | UKG | GRADE 1 TO GRADE 10

Transport Facility available within 2 km Rs.600/- PM

FOR ADMISSIONS CONTACT :

8277256859 / 9449814917 / 8277257669
8277258609 / 9606831599 / 9606829599

55/2B, 11th K.M. Hosur Main Road, Garuvebhavipalya, Rojamma Shamanna Reddy Layout, Bommanahalli Post, Bangalore - 560068

SESHADRIPURAM GROUP OF INSTITUTIONS

Seshadripuram Educational Trust SINCE 1930 INSTITUTIONS

BENGALURU • MYSURU • MANDYA • TUMAKURU
website: www.set.edu.in e-mail : info@set.edu.in

Heartily Congratulate
the following National Service Scheme State Awardees 2022-23



Dr. S. N. Venkatesh
Category : Best Unit
Seshadripuram First Grade College, Yelahanka.




Prof. Naveen Kumar K.S.
Category : Programme Officer
Seshadripuram First Grade College, Yelahanka.



Kum. Varsha K. C.
Category : Volunteer
Seshadripuram College, Seshadripuram.



Chi. Vishal S.
Category : Volunteer
Seshadripuram First Grade College, Yelahanka.



Kum. Latha Singh
Category : Volunteer
Seshadripuram Degree College, Mysuru.

N. R. Pandith Aradhya
President

Dr. Wooday P. Krishna
Honorary General Secretary

ಖಾಲಿ ನಿವೇಶನ: ಸ್ವಚ್ಛತೆಗೆ ಕ್ರಮ ಇಲ್ಲ

ಬಿಬಿಎಂಪಿ: ಏಳು ತಿಂಗಳ ಹಿಂದೆ ಆದೇಶವಾದರೂ ನೋಟಿಸ್ ಜಾರಿಯಾಗಿಲ್ಲ, ದಂಡ ವಿಧಿಸಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಖಾಲಿ ನಿವೇಶನಗಳ ಸ್ವಚ್ಛತೆಗೆ ಏಳು ದಿನಗಳ ಗಡುವು ನೀಡಿ, ಏಳು ತಿಂಗಳಾದರೂ, ನಿವೇಶನಗಳಲ್ಲಿ ತ್ಯಾಜ್ಯ, ಗಿಡ–ಗಂಟಿಗಳು ತೆರವಾಗಿಲ್ಲ. ನೆರೆಹೊರೆಯವರಿಗೆ ಸಂಕಷ್ಟ ಹೆಚ್ಚಾಗುತ್ತಿದೆ.

ಖಾಲಿ ನಿವೇಶನಗಳಲ್ಲಿರುವ ಗಿಡ–ಗಂಟಿ, ತ್ಯಾಜ್ಯ ತೆರವು ಮಾಡಲು ಮಾಲೀಕರಿಗೆ ನೋಟಿಸ್ ಜಾರಿ ಮಾಡಬೇಕು. ಒಂದು ವಾರದಲ್ಲಿ ಅವರು ಕ್ರಮ ಕೈಗೊಳ್ಳದಿದ್ದರೆ, ಪಾಲಿಕೆಯಿಂದಲೇ ತೆರವು ಕಾರ್ಯಾಚರಣೆ ಮಾಡಿ, ಅದರ ವೆಚ್ಚ ಮತ್ತು ದಂಡವನ್ನು ಆಸ್ತಿ ತೆರಿಗೆಯಲ್ಲಿ ಸೇರಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು 2024ರ ಆಗಸ್ಟ್‌ನಲ್ಲಿ ಆದೇಶ ಹೊರಡಿಸಿದ್ದರು.

ಖಾಲಿ ನಿವೇಶನಗಳಿಂದ ತ್ಯಾಜ್ಯ ವಿಲೇವಾರಿಗಾಗಿ, ಮಾಲೀಕರಿಂದ ಆಸ್ತಿ ತೆರಿಗೆಯಲ್ಲಿ ದಂಡ ಮತ್ತು ವಿಲೇವಾರಿಗೆ ತಗುಲಿದ ವೆಚ್ಚ ಸಂಗ್ರಹಿಸಲು ಘನತ್ಯಾಜ್ಯ ನಿರ್ವಹಣೆ ನಿಯಮಗಳು-2016, ಘನತ್ಯಾಜ್ಯ ನಿರ್ವಹಣೆ ಬೈ-ಲಾ 2020 ಮತ್ತು ಬಿಬಿಎಂಪಿ ಕಾಯ್ದೆ 2020ರ ಅಡಿಯಲ್ಲಿ ಹೊಸ ಆದೇಶ ಹೊರಡಿಸಲಾಗಿತ್ತು. ಆದರೆ, ಈ ಬಗ್ಗೆ ನಗರದ ಬಹುತೇಕ ಭಾಗಗಳಲ್ಲಿ ಕ್ರಮವಾಗಿಲ್ಲ.

ನಗರದ ಹಲವು ಭಾಗಗಳಲ್ಲಿ ಖಾಲಿ ನಿವೇಶನಗಳು ಸ್ವಚ್ಛವಾಗಿಲ್ಲ. ಕೆಲವರು ಕಾಂಪೌಂಡ್ ನಿರ್ಮಿಸಿದ್ದರೂ ಅದರಲ್ಲೂ ಸ್ವಚ್ಛತೆ ಇಲ್ಲ. ಪಕ್ಕದ ಪ್ರದೇಶದವರೋ ಅಥವಾ ವಾಹನಗಳಲ್ಲಿ ಹೋಗುವವರೋ ತ್ಯಾಜ್ಯವನ್ನು ಎಸೆದು ಹೋಗಿರುತ್ತಾರೆ. ಗಿಡ–ಗಂಟಿಗಳು ಬೆಳೆದುಕೊಂಡಿರುತ್ತವೆ. ತ್ಯಾಜ್ಯ ಇರುವುದರಿಂದ ನಾಯಿ, ಬೆಕ್ಕು, ಇಲಿ–ಹೆಗ್ಗಣಗಳ ಕಾಟ ಹೆಚ್ಚಾಗಿದೆ. ಕೆಲವು ಪ್ರದೇಶಗಳಲ್ಲಿ ಖಾಲಿ ನಿವೇಶನಗಳು ಹಾವುಗಳ ತಾಣವೂ ಆಗಿದ್ದು, ನೆರೆಹೊರೆಯವರಿಗೆ ಆತಂಕ ಸೃಷ್ಟಿಯಾಗಿದೆ.

‘ನಮ್ಮ ಬಡಾವಣೆ ಹಾಗೂ ಸುತ್ತಮುತ್ತ ಸಾಕಷ್ಟು ಖಾಲಿ ನಿವೇಶನಗಳಿವೆ. ಈ ನಿವೇಶನಗಳಲ್ಲಿ ಎಲ್ಲೆಲ್ಲಿಂದಲೋ ತ್ಯಾಜ್ಯ ತಂದು ಬಿಸಾಡಿ ಹೋಗಿರುತ್ತಾರೆ. ಗಿಡ–ಗಂಟಿಗಳು ಬೆಳೆದುಕೊಂಡಿವೆ. ಇದರಿಂದ ನೆರೆಹೊರೆ ನಿವಾಸಿಗಳಿಗೆ ದುರ್ನಾತದ ಜೊತೆಗೆ, ಬೀದಿನಾಯಿಗಳು ಆಹಾರಕ್ಕಾಗಿ ಕಿತ್ತಾಡುತ್ತಿರುತ್ತವೆ. ತ್ಯಾಜ್ಯವನ್ನು ಯಾರೂ ತೆಗೆಯುತ್ತಿಲ್ಲ. ಬಿಬಿಎಂಪಿಯವರಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ’ ಎಂದು ಆರ್.ಆರ್. ನಗರದ ಜಯಣ್ಣ ಬಡಾವಣೆಯ ಟಿ.ಇ. ಶ್ರೀನಿವಾಸ್ ದೂರಿದರು.

‘ನಮ್ಮ ಮನೆಗೆ ಹೊಂದಿಕೊಂಡಂತೆ ಖಾಲಿ ನಿವೇಶನವಿದೆ. ಅಲ್ಲಿ ಕಸ ಬಿಸಾಡುತ್ತಾರೆ. ಸುತ್ತಮುತ್ತಲು ಕಟ್ಟಡ ನಿರ್ಮಿಸುವವರು ಅಲ್ಲಿನ ತ್ಯಾಜ್ಯವನ್ನು ರಾತ್ರೋರಾತ್ರಿ ತಂದು ಸುರಿದಿರುತ್ತಾರೆ. ಯಾರೂ ತಪ್ಪನ್ನು ಒಪ್ಪಿಕೊಳ್ಳುತ್ತಿಲ್ಲ. ನಿವೇಶನದ ಮಾಲೀಕರನ್ನು ಕೇಳಿದರೆ, ಕಳೆದ ತಿಂಗಳು ಸ್ವಚ್ಛಗೊಳಿಸಿದ್ದೆ, ನಾನೇನು ಮಾಡಲಿ ಎನ್ನುತ್ತಾರೆ. ಖಾಲಿ ನಿವೇಶನದ ಸ್ವಚ್ಛತೆ ಬಗ್ಗೆ ಬಿಬಿಎಂಪಿಯವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲೇಬೇಕು’ ಉಲ್ಲಾಳು ಮುಖ್ಯರಸ್ತೆಯ ಗೌಡಯ್ಯ ಅವರು ಆಗ್ರಹಿಸಿದರು.



ರಾಜರಾಜೇಶ್ವರಿನಗರದ ಪಟ್ಟಣಗೆರೆ ಮುಖ್ಯರಸ್ತೆಯ ಬಳಿ ಇರುವ ನಿವೇಶನದಲ್ಲಿ ಬೆಳೆದಿರುವ ಗಿಡ–ಗಂಟಿ

‘ವಲಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’

‘ಆರೋಗ್ಯ ವಿಭಾಗಕ್ಕೆ ತ್ಯಾಜ್ಯ ವಿಲೇವಾರಿ ನಿರ್ವಹಣೆ ಜವಾಬ್ದಾರಿ ಈಗಿಲ್ಲ. ನಿವೇಶನಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಕ್ರಮ ಕೈಗೊಳ್ಳಬೇಕು. ಮಾಲೀಕರಿಗೆ ಸ್ಥಳೀಯ ಎಂಜಿನಿಯರ್‌ಗಳು ನೋಟಿಸ್ ನೀಡಿ, ಅವರಿಂದ ದಂಡ, ತೆರವು ವೆಚ್ಚ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು. ವಲಯ ಆಯುಕ್ತರು ಕ್ರಮ ಕೈಗೊಳ್ಳಬೇಕು’ ಎಂದು ಬಿಬಿಎಂಪಿ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಕೈಗೊಳ್ಳಬೇಕಾದ ಕ್ರಮಗಳೇನು?

- ಖಾಲಿ ನಿವೇಶನದಲ್ಲಿನ ತ್ಯಾಜ್ಯ ತೆಗೆದುಹಾಕಲು ಅಥವಾ ತೆರವುಗೊಳಿಸಲು ಏಳು ದಿನಗಳ ನಿರ್ದಿಷ್ಟ ಅವಧಿಯನ್ನು ಸೂಚಿಸಿ ಮಾಲೀಕರಿಗೆ ನೋಟಿಸ್ ನೀಡಬೇಕು
- ಮಾಲೀಕರು ನಿರ್ದೇಶನಗಳನ್ನು ಪಾಲಿಸಲು ವಿಫಲರಾದರೆ, ಪಾಲಿಕೆಯಿಂದ ನಿವೇಶನದಲ್ಲಿನ ತ್ಯಾಜ್ಯವನ್ನು ತೆರವುಗೊಳಿಸಬೇಕು. ಅದರ ವೆಚ್ಚ ಮತ್ತು ದಂಡವನ್ನು ಆಸ್ತಿ ತೆರಿಗೆಯ ಬೇಡಿಕೆ ಸೂಚನೆಯಲ್ಲಿ ಪ್ರತ್ಯೇಕ ಕೋಷ್ಠಕದಲ್ಲಿ ನಮೂದಿಸಿ ಏಳು ದಿನಗಳೊಳಗೆ ಆಸ್ತಿ ಮಾಲೀಕರಿಗೆ ನೀಡಬೇಕು.
- ದಂಡ ಮತ್ತು ವೆಚ್ಚವನ್ನು ಆಸ್ತಿ ತೆರಿಗೆಯ ಪುಸ್ತಕಗಳಲ್ಲಿ ನಮೂದಿಸಬೇಕು. ಆಸ್ತಿ ತೆರಿಗೆ ಸಂಗ್ರಹಣೆಯೊಂದಿಗೆ ಬಾಕಿ ಮೊತ್ತ ಎಂದು ನಮೂದಿಸಿ, ಸಂಗ್ರಹಿಸಬೇಕು.
- ನಿಗದಿತ ಅವಧಿಯಲ್ಲಿ ಪಾವತಿಸಲು ವಿಫಲವಾದಲ್ಲಿ ವಲಯ ಆಯುಕ್ತರು ಅನ್ವಯಿತ ಬಡ್ಡಿಯನ್ನೂ ವಿಧಿಸಬೇಕು.



ಬೆಳಗಾವಿಯಲ್ಲಿ ರಾಜ್ಯದ ಬಸ್ ಚಾಲಕನ ಹಲ್ಲೆ ವಿರೋಧಿಸಿ ಭಾರತೀಯರ ಸೇವಾ ಸಮಿತಿ, ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ತಿನ ಪದಾಧಿಕಾರಿಗಳು ಕೆ.ಆರ್.ಪುರದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ಮಾಡಿದರು. ರವಿ ಶೆಟ್ಟಿ ಬೈಂದೂರು, ಚಿಂತಾಮಣಿ ಅಮರ್, ಶ್ರೀಕಾಂತ್ ರಾವತ್, ಶ್ರೀನಿವಾಸ್ ಭಾಗವಹಿಸಿದ್ದರು

ಮಡಿಕೇರಿ: ನಿವೃತ್ತ ಸೈನಿಕರ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಭೂಸೇನೆ ಸದರ್ನ್ ಕಮಾಂಡ್ ವಿಭಾಗದ ನಿವೃತ್ತ ಸೈನಿಕರ ಸಮಾವೇಶ ನಗರದ ‘ಕ್ರಿಸ್ಟಲ್ ಕೋರ್ಟ್’ ಹೋಟೆಲ್ ಸಭಾಂಗಣದಲ್ಲಿ ಮಾರ್ಚ್ 24ರಂದು ನಡೆಯಲಿದೆ’ ಎಂದು ಜಿಲ್ಲಾ ಮಾಜಿ ಸೈನಿಕರ ಸಂಘದ ಗೌರವ ಕಾರ್ಯದರ್ಶಿಮೇಜರ್ ಓ.ಎಸ್.ಚಿಂಗಪ್ಪ ತಿಳಿಸಿದರು.

‘ದಕ್ಷಿಣ ಭಾರತದ ಭೂ ಸೇನಾ ಮುಖ್ಯಸ್ಥರಾದ ಲೆಫ್ಟಿನೆಂಟ್ ಜನರಲ್, ಅತಿ ವಿಶಿಷ್ಟ ಸೇವಾಪದಕ ವಿಜೇತ ಧೀರಜ್ ಸೇತ್, ನಿವೃತ್ತ ಸೈನಿಕರು, ವಿಧವೆಯರು ಹಾಗೂ ಅವಲಂಬಿತರ ಕುಂದು-ಕೊರತೆಗಳನ್ನು ಆಲಿಸಲಿದ್ದಾರೆ. ಈ ವಿಭಾಗದ ಒಟ್ಟು 8 ಆಡಳಿತ ಕೇಂದ್ರಗಳ ಪ್ರತಿನಿಧಿಗಳು ಸ್ಥಳದಲ್ಲೇ ಕುಂದುಕೊರತೆಗಳನ್ನು ಪರಿಹರಿಸಲಿದ್ದಾರೆ.ಇದೇ ವೇಳೆ ವೈದ್ಯಕೀಯ ತಪಾಸಣೆ ನಡೆಯಲಿದೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ನಿವೃತ್ತ ಸೈನಿಕರೆಲ್ಲರೂ ಪಾಲ್ಗೊಂಡು ಸ್ಥಳದಲ್ಲೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಹೊರ ಜಿಲ್ಲೆಯ ಮಾಜಿ ಸೈನಿಕರೂ ಭಾಗವಹಿಸಬಹುದು’ ಎಂದರು.

ಪದಾಧಿಕಾರಿಗಳಾದ ಸುಬೇದಾರ್ ಮೇಜರ್ ವಾಸಪ್ಪ ಅಗರಿಮನೆ, ಹವಾಲ್ದಾರ್ ಕುಟ್ಟಂಡ ನಂದ ಮಾದಪ್ಪ, ಹವಾಲ್ದಾರ್ ಮಾದೆಯಂಡ ನಾಚಪ್ಪ, ಹವಾಲ್ದಾರ್ ಕೂಪದಿರಾ ಮುತ್ತಣ್ಣ, ಸುಬೇದಾರ್ ಮೇಜರ್ ನಾಟೋಳಂಡ ಸೋಮಯ್ಯ ಭಾಗವಹಿಸಿದ್ದರು.

ಮಾಹಿತಿಗೆ ಮೊ : 9845331431

ರಾಜ್ಯ ಯುವ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಎಚ್‌ಬಿಆರ್, ವಿದ್ಯಾನಗರ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಬಿಆರ್ ಬಿ.ಸಿ ಮತ್ತು ಡಿವೈಇಎಸ್ ವಿದ್ಯಾನಗರ ತಂಡಗಳು ರಾಜ್ಯ ಯುವ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಬಸವನಗುಡಿಯ ಎಂಎನ್‌ಕೆ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ರಿಷಿತ್ ಭೂಸೇರಿ (29) ಅವರ ಅಮೋಘ ಆಟದ ಬಲದಿಂದ ಎಚ್‌ಬಿಆರ್ ತಂಡವು 53–43ರಿಂದ ಆತಿಥೇಯ ಎಂಎನ್‌ಕೆ ಪಾರ್ಕ್ ತಂಡವನ್ನು ಮಣಿಸಿತು. ಎಂಎನ್‌ಕೆ ತಂಡದ ವಶಿಷ್ಠ 15 ಅಂಕ ಮತ್ತು ಉಜ್ವಲ್ ಜಾಧವ್ 13 ಅಂಕ ಗಳಿಸಿದರು.

ಬಾಲಕಿಯರ ವಿಭಾಗದ ರೋಚಕ ಫೈನಲ್ ಪಂದ್ಯದಲ್ಲಿ ವಿದ್ಯಾನಗರ ತಂಡವು 66–65ರಿಂದ ಮೈಸೂರು ಜಿಲ್ಲೆ ಎ ತಂಡವನ್ನು ಸೋಲಿಸಿತು. ವಿದ್ಯಾನಗರ ಪರ ಇಶಿತಾ 29 ಮತ್ತು ನಿರೀಕ್ಷಾ 16 ಅಂಕ ಗಳಿಸಿದರು. ಮೈಸೂರು ತಂಡದ ಪರ ಶರ್ವಾಣಿ ಎಸ್. ಮತ್ತು ಆಂಚಲ್ ಕ್ರಮವಾಗಿ 32 ಮತ್ತು 16 ಅಂಕ ಗಳಿಸಿದರು.

ಬಾಲಕರ ವಿಭಾಗದಲ್ಲಿ ಬೀಗಲ್ಸ್ ಮತ್ತು ಪಿಪಿಸಿ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದವು. ಬಾಲಕಿಯರ ವಿಭಾಗದಲ್ಲಿ ಪಿಪಿಸಿ ತೃತೀಯ ಮತ್ತು ಎಂಸಿಎಚ್‌ಎಸ್ ನಾಲ್ಕನೇ ಸ್ಥಾನ ಗಳಿಸಿದವು. ವಿಜೇತ ತಂಡಕ್ಕೆ ₹30 ಸಾವಿರ, ರನ್ನರ್ಸ್ ಅಪ್ ತಂಡಕ್ಕೆ ₹20 ಸಾವಿರ ಮತ್ತು ಮೂರನೇ ಸ್ಥಾನ ಪಡೆದ ತಂಡಕ್ಕೆ ₹10 ಸಾವಿರ ನಗದು ಬಹುಮಾನ ನೀಡಲಾಯಿತು.

ಸಮಾರೋಪ ಸಮಾರಂಭದಲ್ಲಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್, ಕೆಎಸ್‌ಬಿಬಿಎ ಉಪಾಧ್ಯಕ್ಷ ಆರ್.ರಾಜನ್, ಮಾಜಿ ಒಲಿಂಪಿಯನ್ ಜಿ.ದಿಲೀಪ್, ಎಂಎನ್‌ಕೆ ರಾವ್ ಪಾರ್ಕ್ ಕ್ಲಬ್‌ನ ಖಜಾಂಚಿ ಹಿತೇಶ್ ಭಾಗವಹಿಸಿದ್ದರು.



ರಾಜ್ಯ ಯುವ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಡಿವೈಇಎಸ್ ವಿದ್ಯಾನಗರ ತಂಡ. ಎಡದಿಂದ (ಕುಳಿತವರು) ಚೈತ್ರಾ ರಾಮ ನಾಯ್ಕ್, ವಿಭಾ ಎಸ್.ಎಂ, ಸಮೀಕ್ಷಾ ಎನ್. ಬಡಿಗೇರ, ವರ್ಷಿಣಿ ಎಂ. (ನಿಂತವರು) ವೈಷ್ಣವಿ, ಶೀತಲ್ ಎಂ.ಆರ್, ಸತ್ಯನಾರಾಯಣ ಕೆ (ಕೋಚ್), ಇಶಿತಾ ಐ.ಎಸ್.ಗೌಡ ಮತ್ತು ನಿರೀಕ್ಷಾ ಬಿ.ಸಿ – ಚಿತ್ರ:ಎಸ್.ಕೆ. ದಿನೇಶ್

ಬುರ್ಖಾ ಧರಿಸಿ ಹಾಸ್ಟೆಲ್‌ಗೆ ನುಗ್ಗಿದ ಯುವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನೊಬ್ಬ ಬುರ್ಖಾ ಧರಿಸಿ ಜ್ಞಾನಭಾರತಿ ಕ್ಯಾಂಪಸ್ ಆವರಣದಲ್ಲಿರುವ ರಮಾಬಾಯಿ ಹಾಸ್ಟೆಲ್‌ಗೆ ನುಗ್ಗಿರುವ ಘಟನೆ ನಡೆದಿದೆ.

ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ, ಗುರುವಾರ ರಾತ್ರಿ 9 ಗಂಟೆ ಸುಮಾರಿಗೆ ಯುವಕ ಹಾಸ್ಟೆಲ್ ಪ್ರವೇಶಿಸಿದ್ದಾನೆ. ಇದನ್ನು ಗಮನಿಸಿದ ವಿದ್ಯಾರ್ಥಿನಿಯರು ಪೊಲೀಸರಿಗೆ ಮಾಹಿತಿ ನೀಡಿದರು. ಪೊಲೀಸರು ಬಂದು ಯುವಕನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದರು.

ಬಳಿಕ ಆತನಿಗೆ ಎಚ್ಚರಿಕೆ ನೀಡಿ ಕಳುಹಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 23 ಮಾರ್ಚ್ 2025




ಸಂಗೀತದ ಸಂಪತ್ತು ಅನೂರರಿಗೆ ಅರವತ್ತು 11



ಮೋಹಕ ಮೇರು ಚಾಂದಿ ಬೆಂತಾರು 13

ಬಿಡುಗಡೆಯ ಕನವರಿಕೆಯಲಿ...



ವಿನಾಯಕ ಕೆ.ಎಸ್

‘ಸಿನಿಮಾ ನಿರ್ಮಾಣಕ್ಕಿಂತ ಅದನ್ನು ಬಿಡುಗಡೆ ಮಾಡುವುದೇ ದೊಡ್ಡ ಸಾಹಸ’– ನಿರ್ಮಾಪಕರು, ನಿರ್ದೇಶಕರು ಹೇಳುವ ಮಾತಿದು. ಹೌದು, ಇದಕ್ಕೆ ನಿದರ್ಶನವೆಂಬಂತೆ ಆರು ವರ್ಷಗಳಲ್ಲಿ 760ಕ್ಕೂ ಹೆಚ್ಚು ಕನ್ನಡ ಸಿನಿಮಾಗಳು ಬಿಡುಗಡೆ ಕಾಣದೆ ಕೊಳೆಯುತ್ತಿವೆ. ಈ ಕುರಿತಾದ ವಿಶ್ಲೇಷಣಾತ್ಮಕ ಲೇಖನ ಇಲ್ಲಿದೆ.

ಈ ಲೇಖನವನ್ನು ಒಂದಿಷ್ಟು ಅಂಕಿಸಂಖ್ಯೆಗಳ ಮೂಲಕವೇ ಆರಂಭಿಸುತ್ತೇನೆ. ಕನ್ನಡ ಚಿತ್ರೋದ್ಯಮದಲ್ಲಿ 2019–2024ರ ಅವಧಿಯಲ್ಲಿ ಒಟ್ಟು 1,870 ಕನ್ನಡ ಸಿನಿಮಾಗಳು ಸೆನ್ಸಾರ್ ಆಗಿವೆ. ಡಬ್ ಆದ ಸಿನಿಮಾಗಳು, ದೂರದರ್ಶನ, ಜಾಹೀರಾತು, ವಿಡಿಯೊಗಳು ಸೇರಿ ಒಟ್ಟು 2,650 ಸಿನಿಮಾಗಳಿಗೆ ಸೆನ್ಸಾರ್ ಪ್ರಮಾಣಪತ್ರ ನೀಡಲಾಗಿದೆ. ಈ ಆರು ವರ್ಷಗಳಲ್ಲಿ 1,109 ಸಿನಿಮಾಗಳು ತೆರೆ ಕಂಡಿವೆ. ಸುಮಾರು 760 ಸಿನಿಮಾಗಳು ತೆರೆ ಕಾಣದೆ ಉಳಿದಿವೆ! ಕನ್ನಡ ಚಿತ್ರೋದ್ಯಮ ವರ್ಷಕ್ಕೆ ಸರಾಸರಿ 300 ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದೆ. ಇದರಲ್ಲಿ ವರ್ಷಕ್ಕೆ 250–300 ಸಿನಿಮಾಗಳು ಸೆನ್ಸಾರ್ ಆಗುತ್ತಿವೆ. ಹಾಗೆಯೇ ಅಂದಾಜು 25–30 ಸಿನಿಮಾಗಳು ಚಿತ್ರೀಕರಣವನ್ನೇ ಪೂರ್ಣಗೊಳಿಸುವುದಿಲ್ಲ.

ಹಾಗಿದ್ದರೆ, ಪೂರ್ಣಗೊಂಡ ಸಿನಿಮಾಗಳು ತೆರೆ ಕಾಣದೇ ಇರಲು ಇರುವ ಕಾರಣಗಳಾದರೂ ಏನು? ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿದೆ.

ಸಬ್ಸಿಡಿ ಸಿನಿಮಾಗಳು

ವರ್ಷಕ್ಕೆ 20–30 ಸಿನಿಮಾಗಳು ಚಿತ್ರೋತ್ಸವಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣಗೊಳ್ಳುತ್ತವೆ. ಈ ಕಲಾತ್ಮಕ ಸಿನಿಮಾಗಳಲ್ಲಿ ಅರ್ಧದಷ್ಟು ಚಿತ್ರಮಂದಿರಗಳಿಗೆ ಬರುವುದೇ ಇಲ್ಲ. ಪ್ರೇಕ್ಷಕರನ್ನು ಮನರಂಜಿಸುವ ಉದ್ದೇಶದಿಂದ ಹೊರತಾದ ಒಂದಷ್ಟು ಸಿನಿಮಾಗಳು ಸೆನ್ಸಾರ್ ಪ್ರಮಾಣಪತ್ರ ಪಡೆಯುವುದು, ಸರ್ಕಾರ ನೀಡುವ ಸಬ್ಸಿಡಿ ಹಣ ಪಡೆಯುವುದಕ್ಕಾಗಿ. ‘₹6 ಲಕ್ಷ ಖರ್ಚು ಮಾಡಿ ಸಿನಿಮಾ ಮಾಡಿರುತ್ತಾರೆ. ಅವರು ಸರ್ಕಾರ ನೀಡುವ ಸಬ್ಸಿಡಿ ಹಣವನ್ನೇ ಅವಲಂಬಿಸಿರುವವರು. ₹15 ಲಕ್ಷ ಖರ್ಚು ಮಾಡಿ ಚಿತ್ರ ಬಿಡುಗಡೆ ಮಾಡುವುದಿಲ್ಲ. ಸಿನಿಮಾ ಹಾಗೆಯೇ ಉಳಿಯುತ್ತದೆ. ಸಬ್ಸಿಡಿಗಾಗಿ ಕಳಪೆ ಸಿನಿಮಾಗಳನ್ನು ಮಾಡಿದರೆ ಸರ್ಕಾರ ಮುಂದೊಂದು ದಿನ ಸಬ್ಸಿಡಿಯನ್ನೇ ನಿಲ್ಲಿಸುತ್ತದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನೋಂದಣಿ ಮಾಡಿಕೊಳ್ಳುವ ನಿರ್ಮಾಪಕರಿಗೆ ಪ್ರಾರಂಭದಲ್ಲಿಯೇ ಸಿನಿಮಾದಲ್ಲಿನ ಲಾಭ ನಷ್ಟಗಳ ಕುರಿತು ಮಾಹಿತಿ ನೀಡುತ್ತೇವೆ’ ಎನ್ನುತ್ತಾರೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಎನ್.ಎಂ.ಸುರೇಶ್.

ವಾರಕ್ಕೆ ಒಂದು ಡಜನ್ ಸಿನಿಮಾಗಳು ತೆರೆಗೆ ಬಂದಿದ್ದೂ ಇದೆ. ವರ್ಷಪೂರ್ತಿ ಸಿನಿಮಾ ಬಿಡುಗಡೆಗೆ ಸಕಾಲವಲ್ಲ ಎಂಬ ನಂಬಿಕೆಯೂ ಇದೆ. ಹೀಗಾಗಿ ಸೂಕ್ತ ಸಮಯದಲ್ಲಿ ಬಿಡುಗಡೆಗಾಗಿ ಕಾಯುತ್ತಿರುವವರೂ ಇದ್ದಾರೆ. ದೊಡ್ಡ ಸಿನಿಮಾಗಳ ಎದುರು ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಲು ಹೆಚ್ಚಿನ ನಿರ್ಮಾಪಕರು ಹಿಂದೇಟು ಹಾಕುತ್ತಾರೆ. ಅಲ್ಲದೇ ಚಿತ್ರಮಂದಿರಗಳ ಕೊರತೆಯೂ ಆ ಸಮಯದಲ್ಲಿರುತ್ತದೆ.

ಚಿತ್ರೋದ್ಯಮದಲ್ಲಿ ಸಕ್ರಿಯವಾಗಿರುವವರು ಮಾತ್ರ ಸಿನಿಮಾ ಮಾಡುತ್ತಾರೆ ಎನ್ನುವಂತಿಲ್ಲ. ಹೀಗಾಗಿ ಎಷ್ಟೋ ಮಂದಿ ಹೊಸಬರಿಗೆ ಸಿನಿಮಾ ಪ್ರಾರಂಭಿಸುವ ಮೊದಲು ಚಿತ್ರೋದ್ಯಮ ಕುರಿತು ಕನಿಷ್ಠ ತಿಳಿವಳಿಕೆಯೂ ಇರುವುದಿಲ್ಲ. ರಂಗಭೂಮಿ, ಕಿರುತೆರೆಯ ಅನೇಕರು ಚಿತ್ರರಂಗದಲ್ಲಿ ಸಕ್ರಿಯವಾಗಿದ್ದಾರೆ. ಇದಲ್ಲದೇ ಸಾಫ್ಟ್‌ವೇರ್ ಸೇರಿದಂತೆ ವಿವಿಧ ಕ್ಷೇತ್ರಗಳಿಂದ ಚಿತ್ರೋದ್ಯಮಕ್ಕೆ ಬರುವವರು ಸಾಕಷ್ಟಿದ್ದಾರೆ. ಸಿನಿಮಾ ಬಿಡುಗಡೆ, ಸೋಲು, ಗೆಲುವು ಎಲ್ಲದಕ್ಕಿಂತ ಒಂದು ಚಿತ್ರವನ್ನು ಪೂರ್ಣಗೊಳಿಸುವುದೇ ಸಂಭ್ರಮ ಎನ್ನುವವರೂ ಇದ್ದಾರೆ.

‘ನಮ್ಮಲ್ಲಿ ಈತನಕ ಬಹುತೇಕ ಸಿನಿಮಾಗಳು ಡಬ್ಬಿಂಗ್ ಹಕ್ಕು, ಸ್ಯಾಟಲೈಟ್, ಒಟಿಟಿ ಹಕ್ಕುಗಳನ್ನು ನಂಬಿಕೊಂಡು ನಿರ್ಮಾಣಗೊಳ್ಳುತ್ತಿದ್ದವು. ಕಳೆದ ನಾಲ್ಕೈದು ವರ್ಷಗಳಿಂದ ಯಾವ ಹಕ್ಕುಗಳೂ ಮಾರಾಟವಾಗುತ್ತಿಲ್ಲ. ಹಕ್ಕುಗಳು ಮಾರಾಟವಾಗಲಿ ಎಂದು ಒಂದಷ್ಟು ನಿರ್ಮಾಪಕರು ಸಿನಿಮಾ ಬಿಡುಗಡೆ ಮಾಡದೆ ಕಾಯ್ದುಕೊಂಡು ಕುಳಿತಿದ್ದಾರೆ’ ಎನ್ನುತ್ತಾರೆ ಅನುಭವಿ ನಿರ್ಮಾಪಕ ಜಯಣ್ಣ.

₹700 ಕೋಟಿ ಉದ್ಯಮ



ಅಂದಾಜಿನ ಪ್ರಕಾರ ಕನ್ನಡದಲ್ಲಿ ₹15 ಲಕ್ಷದಿಂದ ₹15 ಕೋಟಿ ಬಜೆಟ್‌ವರೆಗಿನ ಸಿನಿಮಾಗಳು ನಿರ್ಮಾಣಗೊಳ್ಳುತ್ತಿವೆ. ಕೆಲವೇ ಕೆಲವು ಸೂಪರ್ ಸ್ಟಾರ್‌ಗಳ ಸಿನಿಮಾಗಳು ಮಾತ್ರ ₹50, ₹100 ಕೋಟಿ ಬಜೆಟ್ ಗಡಿ ದಾಟಿವೆ. ‘ಕನ್ನಡ ಚಿತ್ರೋದ್ಯಮದ ವಾರ್ಷಿಕ ವಹಿವಾಟು ಅಂದಾಜು ₹500–700 ಕೋಟಿ. ಸಿನಿಮಾ ಎರಡು ವಾರ ಹೌಸ್‌ಫುಲ್ ಎನಿಸಿಕೊಂಡರೆ ರಾಜ್ಯದಲ್ಲಿನ ಚಿತ್ರಮಂದಿರಗಳಿಂದ ₹5–8 ಕೋಟಿ ಲಾಭ ಬರಬಹುದು. ಮಾರಾಟ ಹಕ್ಕುಗಳು ಸೇರಿ ಒಟ್ಟು ₹15 ಕೋಟಿ ಲಾಭವಾಗಬಹುದು’ ಎನ್ನುತ್ತಾರೆ ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್.

ಬಿಡುಗಡೆಯೇ ದುಬಾರಿ


ಸಿನಿಮಾ ಬಿಡುಗಡೆ, ಪ್ರಚಾರಕ್ಕೆ ಇಂತಿಷ್ಟೇ ಬಜೆಟ್ ಎಂದಿಲ್ಲ. ಅದು ನಿರ್ಮಾಪಕನ ಜೇಬಿನ ಗಾತ್ರವನ್ನು ಅವಲಂಬಿಸಿರುತ್ತದೆ. ಏನೇನೂ ಪ್ರಚಾರ ಮಾಡದೆ, ಏಕಪರದೆಗಳಿಲ್ಲದೆ ಕೇವಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ಬಿಡುಗಡೆ ಮಾಡುತ್ತೇವೆ ಎಂದರೂ ವಿವಿಧ ರೀತಿಯ ಶುಲ್ಕಗಳಿಗಾಗಿ ಕನಿಷ್ಠ ₹5 ಲಕ್ಷ ಖರ್ಚಾಗುತ್ತದೆ. ಸಿನಿಮಾ ಬಿಡುಗಡೆ ಮಾಹಿತಿಯನ್ನು ಜನರಿಗೆ ತಲುಪಿಸಲು ಹಲವಾರು ವೇದಿಕೆಗಳಿವೆ. ಡಿಜಿಟಲ್ ಮಾಧ್ಯಮ, ಟ್ರೋಲ್‌ಪೇಜ್‌ಗಳು, ಪತ್ರಿಕೆ ಮತ್ತು ಟಿವಿ ವಾಹಿನಿಗಳಲ್ಲಿ ಜಾಹೀರಾತು ನೀಡುವುದು, ಮಾಲ್‌ಗಳಲ್ಲಿ ಸ್ಟ್ಯಾಂಡಿ ಅಳವಡಿಕೆ, ನಗರ ಪ್ರದೇಶಗಳಲ್ಲಿ ಗೋಡೆಗಳ ಮೇಲೆ ಪೋಸ್ಟರ್ ಅಂಟಿಸುವುದು, ಬ್ಯಾನರ್ ಕಟ್ಟುವುದು, ಚಿತ್ರಮಂದಿರದ ಎದುರು ನಾಯಕನ ಕಟೌಟ್ ನಿಲ್ಲಿಸುವುದು, ಆಟೊಗಳ ಹಿಂದೆ ಪೋಸ್ಟರ್ ಹಚ್ಚುವುದು, ಹೆದ್ದಾರಿಗಳಲ್ಲಿ ಬೃಹತ್ ಹೋರ್ಡಿಂಗ್‌ಗಳನ್ನು ಅಳವಡಿಸುವುದು ರೂಢಿಗತವಾಗಿ ಬಂದಿರುವ ಪ್ರಚಾರದ ತಂತ್ರಗಳು.



ಚಿತ್ರೀಕರಣವೆನ್ನುವುದು ಸಾಹಸವೇ!

ದೊಡ್ಡ ಬಜೆಟ್‌ನ ‘ಎ’ ಕೆಟಗರಿ ಸ್ಟಾರ್‌ಗಳ ಸಿನಿಮಾಗಳ ಪೋಸ್ಟರ್‌ಗಳನ್ನು ವಿಮಾನ, ರೈಲು, ಬಸ್ಸು, ಮೆಟ್ರೊಗಳಲ್ಲಿ ಹಾಕುವುದು, ಬಿಡುಗಡೆ ಪೂರ್ವದಲ್ಲಿ (ಪ್ರೀ ರಿಲೀಸ್ ಇವೆಂಟ್) ದೊಡ್ಡ ಕಾರ್ಯಕ್ರಮ ಆಯೋಜಿಸುವ ತಂತ್ರಗಳನ್ನು ಮಾಡಲಾಗುತ್ತದೆ. ಸೋಷಿಯಲ್ ಮೀಡಿಯಾಗಳಲ್ಲಿನ ಕಂಟೆಂಟ್ ಕ್ರಿಯೇಟರ್‌ಗಳಿಂದ ಪ್ರಚಾರ ಮಾಡಿಸಲಾಗುತ್ತದೆ. ‘ಬಿ’ ಮತ್ತು ‘ಸಿ’ ಕೆಟಗರಿ ನಾಯಕರ ಸಿನಿಮಾಗಳ ಪ್ರಚಾರ ಮತ್ತು ಬಿಡುಗಡೆಗೆ ಪ್ರಮುಖ ನಿರ್ಮಾಣ ಸಂಸ್ಥೆಗಳು ಕನಿಷ್ಠ ₹80 ಲಕ್ಷದಿಂದ ₹1.5 ಕೋಟಿ ಖರ್ಚು ಮಾಡುತ್ತಿವೆ. ಸ್ಟಾರ್‌ಗಳ ಸಿನಿಮಾಗಳ ಬಿಡುಗಡೆಗೆ ₹2 ರಿಂದ ₹3 ಕೋಟಿ ಖರ್ಚು ಮಾಡಲಾಗುತ್ತಿದೆ. ‘ತೀರ ಹೊಸಬರು, ಮಿತವಾದ ಬಜೆಟ್‌ನಲ್ಲಿ ಸಿನಿಮಾ ಬಿಡುಗಡೆ ಮಾಡುತ್ತೇವೆ ಎನ್ನುವವರು ₹10 ಲಕ್ಷದೊಳಗೆ ಖರ್ಚು ಮಾಡುತ್ತಿದ್ದಾರೆ. ಆದರೆ ಸಿನಿಮಾ ಬಿಡುಗಡೆಯಾಗಿದ್ದೇ ಯಾರಿಗೂ ಗೊತ್ತಾಗುವುದಿಲ್ಲ. ಉದ್ಯಮದಲ್ಲಿ ಚಿರಪರಿಚಿತ ‘ಬಿ’ ಕೆಟಗೆರಿ ನಾಯಕರಿದ್ದರೆ, ಬಿಡುಗಡೆಗೆ ₹15 ಲಕ್ಷ ಬೇಕು. ಅದೇ ಸಿನಿಮಾ ಹೊಸಬರದ್ದಾಗಿದ್ದರೆ ಬಿಡುಗಡೆಗೆ ₹ 30 ಲಕ್ಷ ಖರ್ಚಾಗುತ್ತದೆ. ₹1.5 ಕೋಟಿ ಬಜೆಟ್‌ನಲ್ಲಿ ಸಿನಿಮಾ ಮುಗಿಸಿದ್ದರೂ, ಸರಿಯಾಗಿ ಜನಕ್ಕೆ ತಲುಪಿಸಿ ಬಿಡುಗಡೆ ಮಾಡುತ್ತೇವೆ ಎಂದರೂ ಈಗ ₹1 ಕೋಟಿ ಬೇಕೇಬೇಕು’ ಎನ್ನುತ್ತಾರೆ ನಿರ್ಮಾಪಕ ನಾಗೇಶ್‌ಕುಮಾರ್ ಯು.ಎಸ್.

> “ಸಾಲ ಮಾಡಿ ಸಿನಿಮಾ ಮುಗಿಸಿರುತ್ತೇವೆ. ಸಿನಿಮಾ ಬಿಡುಗಡೆಗಾಗಿ ಇನ್ನಷ್ಟು ಸಾಲ ಮಾಡಿಕೊಳ್ಳಲು ಇಷ್ಟವಿಲ್ಲ. 2022ರಲ್ಲಿ ನಮ್ಮ ಸಿನಿಮಾ ಸೆನ್ಸಾರ್ ಆಗಿದೆ. ಇವತ್ತು ಹಣ ಮರಳಿ ಪಡೆಯುವುದು ಕಷ್ಟವಿದೆ. ಯಾರಾದರೂ ಸಿನಿಮಾ ಬಿಡುಗಡೆಗೆ ಮುಂದೆ ಬಂದರೆ ಮಾತ್ರ ಬಿಡುಗಡೆ ಮಾಡುತ್ತೇವೆ.”
>
> **ಸಂಜಯ್ ಎನ್.ಟಿ**
> ‘ಐ ಆ್ಯಮ್ ಪ್ರೆಗ್ನೆಂಟ್’ ಸಿನಿಮಾದ ನಿರ್ದೇಶಕ, ನಿರ್ಮಾಪಕ



> “ದೊಡ್ಡ ಸ್ಟಾರ್‌ಗಳ ಸಿನಿಮಾಗಳು ಬಿಡುಗಡೆಯಾಗದೇ ಬಾಕಿ ಉಳಿಯುವುದಿಲ್ಲ. ಹೊಸಬರ ಸಿನಿಮಾಗಳು ಜನ ಮನ್ನಣೆ ಗಳಿಸುತ್ತಿಲ್ಲ. ಹೀಗಾಗಿ ಅನೇಕ ಹೊಸ ನಿರ್ಮಾಪಕರು ಸಿನಿಮಾ ಬಿಡುಗಡೆ ಮಾಡದೇ ಆ ಹಣ ಉಳಿಸಿಕೊಳ್ಳಬಹುದು ಎಂಬ ಮನಸ್ಥಿತಿಯಲ್ಲಿರುತ್ತಾರೆ. ಮತ್ತೊಂದಷ್ಟು ಸಿನಿಮಾಗಳು ಬಿಡುಗಡೆಗೆ ಯೋಗ್ಯವಾಗಿಲ್ಲ ಎಂದು ತಂಡಕ್ಕೇ ಅನ್ನಿಸಿರುತ್ತದೆ”
>
> **ಮಾರ್ಸ್ ಸುರೇಶ್,** ಸಿನಿಮಾ ವಿತರಕ

ಸ್ವಲ್ಪ ಉತ್ತಮವಾಗಿರುವ, ಹೊಸಬರ ಸಿನಿಮಾಗಳ ಬಿಡುಗಡೆಗೆ ಕೆಆರ್‌ಜಿ ಸಂಸ್ಥೆ ವಿತರಣೆಯಲ್ಲಿ ಸಹಾಯ ಮಾಡುತ್ತಿದೆ. ನಿಗದಿತ ಶುಲ್ಕ ತೆಗೆದುಕೊಂಡು ಚಿತ್ರಮಂದಿರಗಳ ಲಭ್ಯತೆಯ ವ್ಯವಸ್ಥೆ ಮತ್ತು ಕನಿಷ್ಠ ಪ್ರಮಾಣದ ಪ್ರಚಾರವನ್ನು ಮಾಡಿಕೊಡುತ್ತಿದೆ. ಇದಲ್ಲದೆ ಹಲವು ವಿತರಕರು ನಿಗದಿತ ಶುಲ್ಕಕ್ಕೆ, ಕಮಿಷನ್ ಆಧಾರದಲ್ಲಿ ಚಿತ್ರ ಬಿಡುಗಡೆ ಮಾಡಿಕೊಡುವ ಮೂಲಕ ಬಿಡುಗಡೆ ಹೇಗೆ ಮಾಡಬೇಕು ಎನ್ನುವುದೇ ಗೊತ್ತಿಲ್ಲದ ನಿರ್ಮಾಪಕರಿಗೆ ನೆರವಾಗುತ್ತಿದ್ದಾರೆ. ಪಿಆರ್‌ಕೆ, ಪರಂವಃ, ಡಾಲಿ ಪಿಕ್ಚರ್ಸ್ ಸಂಸ್ಥೆಗಳು ಬೇರೆಯವರ ಚಿತ್ರಗಳನ್ನು ಪ್ರೆಸೆಂಟ್ ಮಾಡಿ, ಬಿಡುಗಡೆ ಮಾಡುತ್ತಿವೆ. ನಿಗದಿತ ಶುಲ್ಕ ಅಥವಾ ನಿರ್ಮಾಣದಲ್ಲಿ ತಮ್ಮದು ಇಷ್ಟು ಪ್ರಮಾಣದ ಷೇರು ಎಂಬ ಮಾದರಿಯಲ್ಲಿ ಅವು ಕೆಲಸ ಮಾಡುತ್ತಿವೆ.

‘ಉತ್ಪ್ರೇಕ್ಷೆ ಮತ್ತು ಸುಳ್ಳು’

ಸಾಕಷ್ಟು ನಿರ್ಮಾಪಕರಿಗೆ ನಿರ್ಮಾಣಕ್ಕೆ ಮೊದಲು ಚಿತ್ರೋದ್ಯಮದ ಕುರಿತು ಕನಿಷ್ಠ ಜ್ಞಾನವೂ ಇರುವುದಿಲ್ಲ. ಯಾರನ್ನೋ ನಂಬಿ ಬಂಡವಾಳ ಹೂಡುತ್ತಾರೆ. ಹೀಗಾಗಿಯೇ ಕನ್ನಡ ಚಿತ್ರೋದ್ಯಮ ದಿಕ್ಕು ತಪ್ಪಿರುವುದು ಎಂಬ ಮಾತು ಆಗಾಗ ಮುನ್ನೆಲೆಗೆ ಬರುತ್ತಿರುತ್ತದೆ. ಸಿನಿಮಾ ನಿರ್ಮಾಣ ಮತ್ತು ವ್ಯಾಪಾರ–ವ್ಯವಹಾರ ಕುರಿತು ಆಸಕ್ತರಿಗೆ ತಿಳಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ. ನಿರ್ದೇಶಕ, ನಿರ್ಮಾಪಕ ನಾಗತಿಹಳ್ಳಿ ಚಂದ್ರಶೇಖರ ತಮ್ಮ ‘ಟೆಂಟ್ ಸಿನಿಮಾ’ ಶಾಲೆಯಲ್ಲಿ ಆಗಾಗ ಚಿತ್ರರಂಗಕ್ಕೆ ಸಂಬಂಧಿಸಿದ ಕಾರ್ಯಾಗಾರ ನಡೆಸುತ್ತಾರೆ. ಗುರು ದೇಶಪಾಂಡೆ ಕೂಡ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಲವರು ತಮ್ಮದೇ ಸಂಸ್ಥೆಗಳ ಮೂಲಕ ಸಿನಿಮಾ ನಿರ್ಮಾಣ ಇತ್ಯಾದಿ ಪ್ರಕ್ರಿಯೆಗಳ ಕುರಿತು ಅರಿವು ಮೂಡಿಸುವ ಯತ್ನ ಮಾಡುತ್ತಿದ್ದಾರೆ.

11ನೇ ಪುಟಕ್ಕೆ...



ಕೃಷಿ ಖುಷಿಯಲ್ಲಿ ಮಿಂದ ಯುವಜನ



ಬೆಳಾಲಿನ ಗದ್ದೆಯ ಬದುವಿನಲ್ಲಿ ಹೆಜ್ಜೆ ಹಾಕಿದ ಯುವ ಕೃಷಿಕರು...

ಪ. ರಾಮಕೃಷ್ಣ ಶಾಸ್ತ್ರಿ

ಪಾಳು ಬಿದ್ದ ನಾಲ್ಕೂವರೆ ಎಕರೆ ಹೊಲವನ್ನು ಹೊಸ ವ್ಯವಸಾಯದ ಕಳೆಯೇರುವಂತೆ ಉತ್ತು ಭತ್ತದ ಸಸಿ ನೆಟ್ಟು ಬೆಳೆದ ಹೊಂಗದಿರ ಪೈರನ್ನು ಕಟಾವು ಮಾಡುವ ಅಭೂತಪೂರ್ವ ಕಾರ್ಯಕ್ರಮ ಅದು. ಏಕಕಾಲಕ್ಕೆ ಸಾವಿರ ಮಂದಿ ಯುವಕ, ಯುವತಿಯರು ಹೊಲಕ್ಕಿಳಿದು ಪೈರು ಕೊಯ್ದರು. ಪೈರಿನ ಸೂಡಿಗಳನ್ನು ಪೇರಿಸಿ ತಲೆಯ ಮೇಲೆ ಹೊತ್ತು ತಂದು ಹೊಡೆದು ಕಾಳು ಬೇರ್ಪಡಿಸಿದರು. ಮರೆಯಾಗುತ್ತಿರುವ ಭತ್ತದ ವ್ಯವಸಾಯದಲ್ಲಿ ಯುವಜನರನ್ನು ಅದರಲ್ಲೂ ವಿದ್ಯಾವಂತರನ್ನು ತೊಡಗಿಸುವ ಮೂಲಕ ಕೃಷಿ ಪರಂಪರೆಗೆ ಪುನರುಜ್ಜೀವನ ನೀಡುವುದು ಈ ಕೃಷಿ ಕಾಯಕದ ಉದ್ದೇಶವಾಗಿತ್ತು. ವ್ಯವಸಾಯ ಮಾಡಿದ ಹೊಲ ಇದದ್ದು ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಬಳಿಯ ಬೆಳಾಲು ಎಂಬಲ್ಲಿ. ಈ ಕಾರ್ಯಕ್ರಮದ ರೂವಾರಿ ಉಜಿರೆಯ ‘ಬದುಕು ಕಟ್ಟೋಣ ಬನ್ನಿ’ ತಂಡದ ಮೋಹನಕುಮಾರ್, ರಾಜೇಶ್ ಪೈ ಮತ್ತು ಸ್ನೇಹಿತರು.

ಕಳೆದ ಅಕ್ಟೋಬರ್‌ನಲ್ಲಿ ಹೊಲದಲ್ಲಿ ಭತ್ತದ ನಾಟಿ ಮಾಡಲಾಯಿತು. ಪ್ರಾಯೋಗಿಕವಾಗಿ ಇಂತಹ ಕಾರ್ಯಕ್ರಮ ಚಾರ್ಮಾಡಿಯ ಕೊಳಂಬೆ ಮತ್ತು ಕಲ್ಮಂಜದಲ್ಲಿ ನಡೆದಿದ್ದರೂ ದಾಖಲೆಯ ಕಾರ್ಯಕ್ರಮ ಹಮ್ಮಿಕೊಂಡದ್ದು ಬೆಳಾಲಿನಲ್ಲಿ.

ಭತ್ತ ಅಳತೆ ಮಾಡುವ ಕಳಸೆಯಲ್ಲಿ ಅಡಕೆಯ ಹಿಂಗಾರವನ್ನು ಅರಳಿಸುವ ಮೂಲಕ ನಾಟಿ ಮಾಡುವ ಕಾರ್ಯ ಆರಂಭವಾಯಿತು. ಬಳಿಕ ನಡೆದದ್ದು ಅತ್ಯಪೂರ್ವ ಮೆರವಣಿಗೆ. ದೇವಾಲಯದ ಬಳಿಯಿಂದ ಪಲ್ಲಕ್ಕಿಯಲ್ಲಿರಿಸಿದ ನೇಜಿಯ ಸೂಡಿಗಳನ್ನು ಸಾಗಿಸುವಾಗ 500 ವಿದ್ಯಾರ್ಥಿಗಳು, 400 ಸಾರ್ವಜನಿಕರೂ ಜೊತೆಗೂಡಿದ್ದರು. ಇನ್ನೊಂದೆಡೆ ಕೊಂಬು ಕಹಳೆ, ಚಂಡೆ, ವಾದ್ಯಗಳ ನಿನಾದ. ಕಂಬಳದ ಕೋಣಗಳನ್ನು ಇದೇ ಮೆರವಣಿಗೆಯಲ್ಲಿ ಹೊಲಕ್ಕೆ ಕೊಂಡೊಯ್ಯುವ ಉತ್ಸವವೇ ರೋಮಾಂಚಕಾರಿಯಾಗಿತ್ತು.

ನೇಜಿ ನಾಟಿ ಮಾಡುವ ಮೊದಲು ಗದ್ದೆಗೆ ಹಾಲು ಮತ್ತು ಸೀಯಾಳದ ನೀರನ್ನು ಅರ್ಪಿಸುವ ‘ತನು ಸಮರ್ಪಣೆ’ಯು ಕಾರ್ಯಕ್ರಮದ ವಿಶೇಷಗಳಲ್ಲಿ ಒಂದಾಗಿತ್ತು. ಬಳಿಕ ಕೋಣಗಳನ್ನು ಹೊಲಕ್ಕಿಳಿಸಿ ಉತ್ತು ಹದಗೊಳಿಸಿದರು. ಭತ್ತದ ನಾಟಿಯ ಮಾಹಿತಿ ಸ್ವಲ್ಪವೂ ತಿಳಿದಿರದ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿಗಳು ಹೊಲಕ್ಕಿಳಿದರು. 735 ಮಂದಿ ನಾಟಿ ಕೈಗೊಂಡರು. ಎಲ್ಲರೂ ಸಮವಸ್ತ್ರ ತೊಟ್ಟು ತಲೆಗೆ ಮುಟ್ಟಾಳೆ ಹಾಕಿದ್ದರು. ನಾಟಿ ಮಾಡುವ ವಿಧಾನದ ಬಗೆಗೆ ಅವರಿಗೆ ಹಿರಿಯ ರೈತರು ಮಾರ್ಗದರ್ಶನ ಮಾಡಿದರು. ಹೀಗೆ ಕೆಲ ಹೊತ್ತಿನಲ್ಲೇ ನೇಜಿ ನಾಟಿ ಮುಗಿದುಹೋಯಿತು.

ನಾಟಿ ಕಾರ್ಯದ ನೇರಪ್ರಸಾರವನ್ನು ‘ಗೋಲ್ಡನ್ ಬುಕ್ ಆಫ್ ದ ರೆಕಾರ್ಡ್’ ಕಚೇರಿಯಲ್ಲಿ ವೀಕ್ಷಣೆಗಾಗಿ ವ್ಯವಸ್ಥೆ ಮಾಡಲಾಗಿತ್ತು. ಇದೀಗ ಕೊಯ್ಲಿನ ವೇಳೆಗೆ ಅದು ದಾಖಲೆಗೊಂಡ ಅಧಿಕೃತ ಪತ್ರ ‘ಬದುಕು ಕಟ್ಟೋಣ ಬನ್ನಿ’ ತಂಡದ ಕೈಸೇರಿದೆ.

ನಾಟಿ ಮಾಡಿ ನಾಲ್ಕು ತಿಂಗಳಾಗಿತ್ತು. ಹಚ್ಚ ಹಸಿರಿನ ಪೈರು ವಿಶಾಲವಾಗಿ ಹರಡಿ ಬೆಳೆದು ಕದಿರು ಚಾಚಿ ಒಣಗಿ ಹೊಂಬಣ್ಣಕ್ಕೆ ತಿರುಗಿತ್ತು. ಸುಮಾರು 100 ಮುಡಿ (1 ಮುಡಿ ಎಂದರೆ 40 ಕೆ.ಜಿ ತೂಕ) ಭತ್ತ ಬರಬಹುದೆಂಬುದು ನಿರೀಕ್ಷೆ. ಇದರಿಂದ ಬಂದ ಫಸಲಿನ ಅಕ್ಕಿಯನ್ನು ದೇವಾಲಯಗಳಿಗೆ ನೈವೇದ್ಯಕ್ಕಾಗಿ ಅರ್ಪಿಸಿ ಒಣಹುಲ್ಲನ್ನು ಕಳಂಜದ ಗೋಶಾಲೆಗೆ ಒದಗಿಸಲು ನಿರ್ಧರಿಸಲಾಗಿತ್ತು. ಭತ್ತದ ಕೊಯ್ಲಿಗೂ ಯಂತ್ರಗಳನ್ನು ಬಳಸಬಾರದು, ಪಾರಂಪರಿಕ ವಿಧಾನದಲ್ಲೇ ಕೊಯ್ಲು ಮಾಡಬೇಕೆಂಬುದು ತಂಡದ ಆಶಯವಾಗಿತ್ತು.

ಸುಗ್ಗಿ ಸಂಭ್ರಮ...

ಅಂದು ಹೊಲದ ಪೈರಿನ ಕೊಯ್ಲು ಮಾಡುವ ದಿನ. ಒಂದು ಸಾವಿರ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೇರೆ ಬೇರೆ ಸಂಘಟನೆಗಳಿಗೆ ಸೇರಿದ ಯುವಕರು ಸ್ವಯಂಸೇವಕರಾಗಿ ಬಂದಿದ್ದರು. ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆಯೇ 500ಕ್ಕಿಂತ ಅಧಿಕವಾಗಿತ್ತು. ಸೇವಾದಳದ ವಿದ್ಯಾರ್ಥಿಗಳೂ ಇದ್ದರು. ಪುರುಷರು ಸಾಂಪ್ರದಾಯಿಕ ಕೆಂಪು ಲುಂಗಿ, ಬೂದುಬಣ್ಣದ ಅಂಗಿಯ ಸಮವಸ್ತ್ರ ಧರಿಸಿದ್ದರೆ, ಹೆಂಗಳೆಯರು ವರ್ಣಮಯವಾದ ಸೀರೆ, ಕುಪ್ಪಸಗಳಲ್ಲಿ ಮಿಂಚುತ್ತಿದ್ದರು. ದೇವಾಲಯದ ಅರ್ಚಕರ ಮಂಗಳಮಂತ್ರ ಘೋಷದೊಂದಿಗೆ ಕೊಯ್ಲಿನ ಕಾರ್ಯಕ್ಕೆ ಚಾಲನೆ ಸಿಕ್ಕಿತು. ಹೊಲದಲ್ಲಿ ಬೆಳೆದು ನಿಂತು ಬಂಗಾರ ಬಣ್ಣದ ತೆನೆದೂಗುತ್ತಿದ್ದ ಭತ್ತದ ಕೊಯ್ಲು ಸರಸರನೆ ನಡೆಯಿತು. ಜನಪದ ಹಾಡು, ಪಾಡ್ದನ, ನಗು, ಸರಸ ಮಾತುಗಳಲ್ಲಿ ಸಮಯ ಕಳೆದುದೇ ತಿಳಿಯಲಿಲ್ಲ. ಸಂಘಟಕರು ಕಾಲಕಾಲಕ್ಕೆ ಪೂರೈಸುತ್ತಿದ್ದ ಪಾನೀಯ, ತಿಂಡಿ ಆಯಾಸದ ಅರಿವು ಮೂಡಲು ಬಿಡಲಿಲ್ಲ. ಬೆಳಗ್ಗೆ ಹತ್ತೂವರೆಗೆ ಕೊಯ್ಲು ಆರಂಭವಾಗಿ ಹನ್ನೊಂದೂವರೆಗೆ ಪೂರ್ಣಗೊಂಡಿತು. ಮಧ್ಯಾಹ್ನ ಸಮೀಪಿಸುವಾಗ ಕಾಳು ಬೇರ್ಪಡಿಸುವ ಕೆಲಸವೂ ಮುಕ್ತಾಯವಾಗಿತ್ತು.



ಸೂಡಿಗಳನ್ನು ಬಡಿದು ಕಾಳು ಬೇರ್ಪಡಿಸುವುದು ಹೀಗೆ ನೋಡಿ...

11ನೇ ಪುಟಕ್ಕೆ...



ಸಹಕಾರ ಹೇಗೆ ಮರೆಯಲಿ ನಿನ್ನ...?

ಭಾರತಿ ಎ.ಕೊಪ್ಪ

ಅದು ತೊಂಬತ್ತರ ದಶಕ. ನಾನು ಉಡುಪಿಯಲ್ಲಿ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಕಾಲೇಜು ಓದುತ್ತಿದ್ದೆ. ಹಾಸ್ಟೆಲ್‌ನ ಗೆಳತಿಯರು ಅಪರೂಪಕ್ಕೆ ಹೊರಗೆ ಹೋಗುತ್ತಿದ್ದರು. ಆಗ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಗೆಳತಿಯರು ಹಸಿರು-ಬಿಳಿ ಪಟ್ಟಿಯ ‘ಸಹಕಾರ ಸಾರಿಗೆ’ ಬಸ್ಸನ್ನು ನೋಡಿದೊಡನೆ ಪುಳಕಗೊಳ್ಳುತ್ತಿದ್ದರು. ‘ನಮ್ಮೂರಿಗೆ ಹೋಗುವ ಬಸ್’ ಎಂದು ಅಭಿಮಾನದಿಂದ ಹೇಳುತ್ತಿದ್ದರು. ತಾವೇ ಊರಿಗೆ ಹೋಗಿ ಬಂದಷ್ಟೇ ಖುಷಿಪಡುತ್ತಿದ್ದರು. ‘ಸಹಕಾರ ಸಾರಿಗೆ’ ಎಂಬ ಕಾಫಿನಾಡಿನ ಸಾರಿಗೆ ವ್ಯವಸ್ಥೆ ಜನರ ಜೀವನಾಡಿಯಾಗಿತ್ತು.

72 ಬಸ್‌ಗಳು, 200ಕ್ಕೂ ಹೆಚ್ಚು ಕಾರ್ಮಿಕರನ್ನು ಹೊಂದಿದ್ದ ಟ್ರಾನ್ಸ್‌ಪೋರ್ಟ್ ಕೋ–ಅಪರೇಟಿವ್ ಸೊಸೈಟಿ (ಟಿಸಿಎಸ್) ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಆಡಳಿತ ಕಚೇರಿ ಹೊಂದಿತ್ತು. ಕಾರ್ಮಿಕರೇ ಮಾಲೀಕರಾಗಿ ಘಟ್ಟಪ್ರದೇಶದ ಜಟಿಲ ಕಾನನದ ಮೂಲೆ ಮೂಲೆಯ ಹಳ್ಳಿಗಳಿಗೂ ಬಸ್ ಸೌಲಭ್ಯ ಒದಗಿಸಿದ ಅಪರೂಪದ ಬಸ್ ಸೇವಾ ಸಂಸ್ಥೆ ಇದು. ಇದರ ಇತಿಹಾಸವನ್ನು ಹಿಂತಿರುಗಿ ನೋಡಿದರೆ, ಮಲೆನಾಡಿನಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿದ್ದ ‘ಶಂಕರ್ ಟ್ರಾನ್ಸ್‌ಪೋರ್ಟ್ ಕಂಪನಿ’ 1991ರಲ್ಲಿ ನಷ್ಟದ ಕಾರಣ ಮುಚ್ಚಲಾಯಿತು. ಈ ವೇಳೆ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸುಮಾರು 300 ಕಾರ್ಮಿಕರ ಬದುಕು ಬೀದಿಗೆ ಬಿದ್ದಿತ್ತು. ಈ ಸಂದರ್ಭದಲ್ಲಿ ದಿವಂಗತ ಬಿ.ಕೆ.ಸುಂದರೇಶ್ ಮತ್ತು ಹೋರಾಟಗಾರ ಸಿರಿಮನೆ ನಾಗರಾಜ್ ಇದೇ ಕಾರ್ಮಿಕರನ್ನು ಒಟ್ಟುಗೂಡಿಸಿ ಎಲ್ಲರೂ ತಮ್ಮ ಕೈಲಾದ ಹಣವನ್ನು ಕ್ರೋಡೀಕರಿಸಿ ₹12 ಲಕ್ಷ ಬಂಡವಾಳದಲ್ಲಿ ಹುಟ್ಟು ಹಾಕಿದ ಸಂಸ್ಥೆಯೇ ‘ಸಹಕಾರ ಸಾರಿಗೆ’ ಸಂಸ್ಥೆ. ಇಡೀ ದೇಶದಲ್ಲೇ ಕಾರ್ಮಿಕರೇ ಮಾಲೀಕರಾಗಿ ಆರಂಭಿಸಿದ ಮೊದಲ ಸಂಸ್ಥೆ ಇದು. ಏಷ್ಯಾ ಖಂಡದಲ್ಲಿ ಸಹಕಾರ ತತ್ವದಲ್ಲಿ ನಡೆಯುತ್ತಿದ್ದ ಏಕಮಾತ್ರ ಸಾರಿಗೆ ವ್ಯವಸ್ಥೆ ಎಂಬ ಹೆಗ್ಗಳಿಕೆಯೂ ಸಂಸ್ಥೆಗಿತ್ತು.

ಬಣ್ಣವೂ ಒಂದು ಸೋಜಿಗ

ಮಲೆನಾಡೆಂದರೆ ಹಸಿರುಟ್ಟ ಭೂರಮೆ. ಕಲ್ಲುಮಣ್ಣುಗಳ ಬೆಟ್ಟಗುಡ್ಡ. ಹಸಿರು ಸಸ್ಯರಾಶಿಯ ಉಪಮೆ ಎಂಬಂತೆ ಸಹಕಾರ ಸಾರಿಗೆ ಬಸ್ಸಿಗೆ ಹಸಿರುಪಟ್ಟಿಯ ಬಣ್ಣ, ಅಂತೆಯೇ ಪಾವನ ಮಣ್ಣಿನ ಕಣದಂತೆ ಮಣ್ಣಿನ ರಸ್ತೆಗಳಲ್ಲಿ ಸಂಚರಿಸಿ ಬಿಳಿ ಪಟ್ಟಿಗಳೂ ಕಂದು ಬಣ್ಣಕ್ಕೆ ತಿರುಗಿದ್ದವು. ಮಲೆನಾಡಿನ ಮನೆ ಮನೆಯ ಒಬ್ಬ ಸದಸ್ಯ ಎಂಬಂತೆ ಈ ಬಸ್ಸುಗಳಿದ್ದವು.

ಪ್ರತಿ ಹಳ್ಳಿ ಹಳ್ಳಿಗೂ ಸಂಚರಿಸುವಾಗ ಬಸ್‌ನ ಉಪನಾಮವೂ ವಿಶಿಷ್ಟವಾಗಿ ಕಾಣುತ್ತಿತ್ತು. ರಸ್ತೆಯಲ್ಲಿ ಬಸ್ಸು ಹಾದು ಹೋಗುವಾಗ ಆ ಬಸ್ಸುಗಳ ಹೆಸರು ಓದುವುದೇ ಚಂದ. ಶ್ರೀ ಶಾರದಾ ದೇವಿ, ಆಶಾಕಿರಣ, ಗೋವರ್ಧನ, ಪಯಣಿಗ, ಪ್ರಕೃತಿ, ವರ್ಷಧಾರೆ, ಪಂಚಮಿ, ಜಯ ಭಾರತಿ, ವಿಜಯ ಭಾರತಿ...ಹೀಗೆ ಪ್ರತಿಯೊಂದು ಬಸ್‌ಗಳ ಹೆಸರೂ ಆಪ್ತವಾಗಿದ್ದವು.

11ನೇ ಪುಟಕ್ಕೆ...

ಸಂಗೀತದ ಸಂಪತ್ತು ಆನೂರರಿಗೆ ಅರವತ್ತು

ಕಟ್ಟೆ ಗುರುರಾಜ್

ಮಾರ್ಚ್ 29ಕ್ಕೆ ಅವರು 60ಕ್ಕೆ ಕಾಲಿಡುತ್ತಿದ್ದಾರೆ. ಈ ನೆಪದಲ್ಲಿ ಅವರ ಶಿಷ್ಯರು ಹಾಗೂ ಅಭಿಮಾನಿಗಳು ಗಾಯನ ಸಮಾಜದಲ್ಲಿ ಮಧ್ಯಾಹ್ನ 3.30ರಿಂದ ಸಂಗೀತ ಸಮಾರಾಧನೆ ಏರ್ಪಡಿಸಿದ್ದಾರೆ.



ಆನೂರು ಶಿವು ಅಂದಾಗ.ತುಂಬು ಗಡ್ಡ, ಲಲಾಟದ ಮಧ್ಯೆ ನಗುವ ಕುಂಕುಮ. ತುಂಬು ತೋಳಿನ ಜುಬ್ಬ, ಪಂಚೆ. ಅದರೊಳಗೊಂದು ಅಜಾನುಬಾಹುದೇಹ. ಕೈಯ್ಯ ಬೆರಳುಗಳ ಅಂಚಲ್ಲಿ ಬೋಲುಗಳ ಮಿಡಿತ, ತುಟಿಯಂಚಿನಲಿ ಕೊನ್ನಕ್ಕೋಲು. ತಲೆಯಲ್ಲಿ ನೂರಾರು ಲಯಕಾರಿ ಲೆಕ್ಕಾಚಾರದ ವ್ಯಕ್ತಿ ಕಣ್ಣಮುಂದೆ ಬಂದು ಬಿಡುತ್ತಾರೆ.

ಇವರ ದೇಹ ತೂಕದ ಐವತ್ತೋ, ನೂರೋ ಪಟ್ಟು ಪಾಂಡಿತ್ಯ. ವೇದಿಕೆ ಹೊರತಾಗಿ ಅದನ್ನು ಯಾವತ್ತಿಗೂ, ಎಲ್ಲಿಯೂ ತೋರ್ಪಡಿಸಿಕೊಳ್ಳದ ಸದ್ಗುಣ. ವಿದ್ವಾನ್, ಪಂಡಿತ್- ಹೀಗೆಲ್ಲಾ ಕರೆದಾಗಲಂತೂ ಮುಜುಗರದ ಮುದ್ದೆ ಆಗಿಬಿಡುತ್ತಾರೆ ಈ ಆನೂರು ಅನಂತ ಕೃಷ್ಣಶರ್ಮ. ಇದು ಮೂಲ ಹೆಸರು.

ಶಿವು ಅನ್ನೋದು ಜನಪ್ರಿಯ ನಾಮ. ಶಿವು ಕೈಯಿಟ್ಟರೆ ನುಡಿಯದ ವಾದ್ಯವಿಲ್ಲ. ಅವರು ನುಡಿಸುವ ವಾದ್ಯಗಳನ್ನು ಸುಮ್ಮನೆ ಲೆಕ್ಕ ಹಾಕೋಣ. ಮೃದಂಗ, ತಬಲ, ತವಿಲ್, ಡೋಲು, ಡೋಲಕ್, ಡೋಲ್ಕಿ, ಪಖ್ವಾಜ್, ಶ್ರೀಖೋಲ್, ಕಾಂಗೋಡ್ರಮ್ಸ್, ಬೋರಾನ್, ಡುಕಿತರಂಗ್, ತಮಟೆ, ಖಂಜಿರ, ದಮಡಿ, ಉಡುಕೆ, ಕರಟವಾದ್ಯ, ನಾದಪುಂಜ, ಶುದ್ಧಮದ್ದಳಂ, ಪಂಬೆ, ನಕಾರ, ಘಟಸಿಂಗಾರಿ... ಅಲ್ಲದೇ ಕೊನ್ನಕ್ಕೋಲ್, ಹಾಡುಗಾರಿಕೆ, ವೀಣೆ, ಪಿಟೀಲು...

ವಿಶೇಷವಾಗಿ, ತಬಲ ಮತ್ತು ಮೃದಂಗ. ಎರಡರದ್ದೂ ವೈರುಧ್ಯ ನುಡಿಸಾಣಿಕೆ. ಮೃದಂಗದ ಫಿಂಗರಿಂಗೇ ಬೇರೆ, ತಬಲದ ಬೆರಳಾಟವೇ ಬೇರೆ. ಹಾಗೇ ಶ್ರೀಖೋಲ್- ಮೃದಂಗ ಕೂಡ. ಆದರೂ, ಎಲ್ಲವನ್ನೂ ಅದದೇ ಶಾಸ್ತ್ರಚೌಕಟ್ಟಿನಲ್ಲಿ ನುಡಿಸುವ ಸಂಗೀತ ಜಗತ್ತಿನ ಅತ್ಯಪರೂಪ ಏಕೈಕ ಕಲಾವಿದರು ಅಂದರೆ ಈ ಶಿವು.

ಶಾಸ್ತ್ರೀಯ ಸಂಗೀತ ಪರಂಪರೆಯನ್ನು, ಭಜನೆಗಳಿಗೂ, ಭಕ್ತಿ, ಸಿನಿಮಾ, ಫ್ಯೂಷನ್, ತಾಳವಾದ್ಯ, ಜನಪದ, ಸುಗಮ ಸಂಗೀತಕ್ಕೂ ವಿಸ್ತರಿಸಿದ್ದಾರೆ. ಹಾಗಾಗಿ, ಇವೆಲ್ಲದರ ಜೊತೆ ನೃತ್ಯ, ಬ್ಯಾಲೆ ಪ್ರಕಾರಗಳಲ್ಲೂ ಶಿವು ಛಾಪಿದೆ.

ಶಿವು ಒಂಥರ ಸಂಗೀತ ಸಂತರೇ. ಯಾರೇ ಹೊಸದು ಹಾಡಲಿ, ವಾದ್ಯಗಳನ್ನು ನುಡಿಸಲಿ ಅವರ ಪಾಂಡಿತ್ಯ ಪಕ್ಕಕ್ಕೆ ಇಟ್ಟು ಕೇಳುತ್ತಾರೆ. ಹೊಸತಿದ್ದರೆ ಅವರಿಂದ ಹೆಕ್ಕಿಕೊಳ್ಳುತ್ತಾರೆ. 'ಇದನ್ನು ಹಿಂಗೆ ಮಾಡ್ಕೊಬಹುದಾ...' ಅಂತ ವಿನಮ್ರವಾಗಿ ತಿದ್ದುತ್ತಾರೆ. ಮತ್ತೆ ಪುಟ್ಟ ಮಗುವಿನಂತೆ ಅವರನ್ನು ಆಲಿಸುತ್ತಾರೆ.

ಸಂಗೀತವನ್ನು ಕಲಿಯುವುದು, ಅರಗಿಸಿಕೊಳ್ಳುವುದು, ಸ್ವತಂತ್ರವಾಗಿ ವಿಚಾರ ಮಾಡಿ, ಅದನ್ನು ಮುಂದಿನ ತಲೆಮಾರುಗಳಿಗೆ ಪ್ರತಿಫಲಾಪೇಕ್ಷೆ ಇಲ್ಲದೆ ವ್ರತದಂತೆ ಹಂಚುವ ಬದ್ಧತೆ ತಂದೆ ದಿವಂಗತ ಆನೂರು ರಾಮಕೃಷ್ಣ ಅವರಿಂದ ಬಂದ ಸಂಸ್ಕಾರ. ಇವರ ಶಿಷ್ಯವೃಂದ ಬಹಳ ದೊಡ್ಡದಿದೆ. ಅವರೆಲ್ಲರೂ ಕನಿಷ್ಠ ಮೂರು-ನಾಲ್ಕು ವಾದ್ಯಗಳನ್ನು ನುಡಿಸುವುದರಲ್ಲಿ 'ಶಿವುಗುಣ' ಸಂಪನ್ನರು.

ಶಿವು ಕಿವಿಗೆ ಎಂಥದೇ ಶಬ್ದ ಬಿದ್ದರು, ಅದು ಸಂಗೀತವಾಗಿ ಬೆರಳ ತುದಿಗೆ ಬರುತ್ತದೆ. ಯಾವುದೇ ವಾದ್ಯದ ನಾದ ಕೇಳಿಸಿಕೊಂಡರೂ, ಅದರ ಗುಣಧರ್ಮವನ್ನು ಮನದಲ್ಲಿ ಎಣಿಸಿ, ನುಡಿಸುವ 'ನಾದವೇಧಿ' ಗುಣವಿದೆ.

ಶಿವು ಪಾಠ ಮಾಡುವ ಶೈಲಿಯಂತು ಭಿನ್ನ. ಒಂದು ಸಲ ತಮ್ಮ ಶಿಷ್ಯವರ್ಗದೊಂದಿಗೆ ಕಾರಿನಲ್ಲಿ ಜಯನಗರ ಸೌತ್ ಎಂಡ್ ವೃತ್ತಕ್ಕೆ ಬಂದಾಗ ಸಿಗ್ನಲ್ ಬಿತ್ತು. 'ಅರುಣಾ, 60 ಸೆಕೆಂಡ್ ಗೆ ಒಂದು ತಾಳ ಹಾಕಮ್ಮ' ಅಂದರು ಶಿವು. ತಕ್ಷಣ ಹಾಕಿ ತೋರಿಸುತ್ತಿದ್ದಂತೆ, ಲಾಲ್‌ಬಾಗ್ ಸಿಗ್ನಲ್‌ಗೆ ಕಾರು ಬಂತು. ಸ್ಟೇರಿಂಗ್ ಮುಂದೆ ಕೈ ಕುಣಿಸಿ ಅಲ್ಲಿ ನೂರಿಪ್ಪತ್ತು ಸೆಕೆಂಡುಗಳಿಗೆ ಮಿಶ್ರಛಾಪಲ್ಲಿ ತಾಳ ಹೆಣೆದಾಗ ಎಲ್ಲರೂ ನಿಬ್ಬೆರಗು.

***

ಈಗಲೂ ಶಿವು ಪ್ರತಿದಿನ ತಿಂಡಿ-ಊಟಕ್ಕೆ ಅವರ ಪತ್ನಿ ಪದ್ಮಿನಿ ಅವರಿಗೆ ತರಕಾರಿ ಹೆಚ್ಚಿಕೊಡುವ ರೂಢಿ ಇಟ್ಟುಕೊಂಡಿದ್ದಾರೆ. ಈರುಳ್ಳಿ, ಹುರುಳಿಕಾಯಿ, ಆಲೂಗಡ್ಡೆಗಳ ಎದೆ ಸೀಳುವಾಗಲೂ ಅಲ್ಲೂ ಪ್ರಯೋಗಾತ್ಮಕವಾದ ಲಯ ಹುಡುಕಾಟಿಕೆ ಇದ್ದೇ ಇರುತ್ತದೆ. ಆಂತರಿಕವಾಗಿ ಆವಿಷ್ಕಾರಗೊಳಿಸಿಕೊಳ್ಳುವ ಲಯಗಳನ್ನು ಅವರು ಬಾಹ್ಯಜಗತ್ತಿಗೆ ಎಷ್ಟು ಬೇಕೋ ಅಷ್ಟು ನಿಬ್ಬೆರಗಾಗುವಂತೆ ನೀಡುತ್ತಾರೆ. ಸ್ವತಂತ್ರವಾಗಿ ಸಂಗೀತವನ್ನು ಧ್ಯಾನಿಸಿದರೂ, ಮನೋಸಂಗೀತಕ್ಕೆ ಬೇಲಿ ಹಾಕುವುದು ಬಹಳ ಚೆನ್ನಾಗಿ ಗೊತ್ತು. ಶಿವು ಅವರಿಗೆ ಸಂಗೀತವೇ ಜೀವ; ಅದೇ ಸರ್ವಸ್ವ. ಮನೆಯಲ್ಲಿ ಲೋಟ ಕೆಳಗೆ ಬಿದ್ದ ಸದ್ದಲ್ಲೂ ಲಯವನ್ನೂ ಹುಡುಕುತ್ತಾರೆ. ತೆಂಗಿನ ಚಿಪ್ಪಲ್ಲೂ ಸಂಗೀತ ಹುಟ್ಟಿಸುತ್ತಾರೆ. ಇವರು ಹುಡುಕಾಟಕ್ಕೆ ಎಣೆ ಇಲ್ಲ. ಹಳೇ ಪಾತ್ರೆ, ಅಕ್ಕಿ ಕೇರುವ ಮರ, ಒನಕೆಗಳಲ್ಲಿ ಅಡಗಿರುವ ಲಯದ ಲಾವಣ್ಯವನ್ನು ಜಗತ್ತಿಗೆ ತೋರಿಸಿದ್ದಾರೆ.
ಹಿಂದೂಸ್ತಾನಿಯ ಲಯಕಾರಿಗಳಾಗಲಿ, ಕರ್ನಾಟಕದ ತನಿಗಳಾಗಲಿ ಇವರಿಗೆ ಸೋದರ ಸಂಬಂಧಿಗಳೇ. ಹಾಗಾಗಿ, ಶಿವು ವೇದಿಕೆಯ ಮೇಲೆ ವಾದ್ಯಗಳು, ಸ್ವರಗಳು, ಬೋಲುಗಳು, ಸೊಲ್ಲುಕಟ್ಟುಗಳೊಂದಿಗೆ ಕೂತು ಸಂಧಾನ ಮಾಡುವ ರೀತಿಯೇ ಅನನ್ಯ.

***

ಶಿವು ಯಾವತ್ತಿಗೂ ಸಂಗೀತವನ್ನು ಬಿಕರಿಗೆ ಇಟ್ಟವರಲ್ಲ. ಕಾಸಿಗೆ ತಕ್ಕಂತೆ ಕಜ್ಜಾಯ ಅನ್ನೋದು ಅವರಿಗೆ ತಿಳಿದಿಲ್ಲ ಅನ್ನೋದಕ್ಕೆ ಈ ಘಟನೆ.

ಒಂದು ಸಲ ಶಿವು ಅವರ ತಾಳವಾದ್ಯ ಕಛೇರಿ ಗಾಯನ ಸಮಾಜದಲ್ಲಿ ಏರ್ಪಾಟಾಗಿತ್ತು. ಕಛೇರಿ ಮುಗಿದ ತಕ್ಷಣ ಶಿವು ಗ್ರೀನ್ ರೂಮಿಗೆ ಬಂದು ಕುಳಿತರು. ಅಷ್ಟರಲ್ಲಿ ಆಯೋಜಕರು ಸಂಭಾವನೆಯ ಒಂದು ಕವರ್ ಇವರ ಕೈಗಿತ್ತಿದ್ದರು. ಶಿವು, ಅದನ್ನು ಎಷ್ಟು ಅಂತ ಕೂಡ ಎಣಿಸದೆ, 'ಬನ್ರಯ್ಯಾ', ಅಂತ ಒಬ್ಬೊಬ್ಬರೇ ಶಿಷ್ಯಂದಿರನ್ನು ಕರೆದು 'ಇವತ್ತು ಇಷ್ಟೇ ಕಣೋ.. ಇಟ್ಕೊಳೋ' ಅಂತ ಕೊಡುತ್ತಿದ್ದರು. ಕವರ್‌ನಲ್ಲಿರುವ ಹಣ ತಳ ಮುಟ್ಟಿದಾಗ ಉಳಿದದ್ದು ಕೇವಲ 500 ರೂಪಾಯಿ.

'ನೋಡ್ರೋ, ನಾನು ಇಷ್ಟು ತಗೊಂಡಿದ್ದೀನಿ' ಅಂತ 500 ರೂಪಾಯಿ ನೋಟು ಎತ್ತಿ ತೋರಿಸಿ ಜೇಬಲ್ಲಿ ಇಟ್ಟುಕೊಂಡರು. ತಕ್ಷಣ, ಶಿಷ್ಯ ವೃಂದ ಓಡಿ ಬಂದು. 'ಸಾರ್, ಇದು ಇಟ್ಕೊಳಿ' ಅಂತ ಹಣ ಕೊಡಲು ಮುಂದಾದರೆ, 'ನೋಡ್ರೋ, ನನಗೆ ದಕ್ಕಿದ್ದು ನನಗೆ, ನಿಮಗೆ ದಕ್ಕಿದ್ದು ನಿಮಗೆ. ಇಟ್ಕೊಳಿ. ಇನ್ನು ಚೆನ್ನಾಗಿ ನುಡಿಸಿ' ಅಂತ ಹೇಳಿ, ಎದ್ದು ಹೊರಟೇ ಬಿಟ್ಟರು. ಇಂಥ ಶಿವು ಅವರಿಗೆ ಈಗ 60. ಸಂಗೀತಕ್ಕೆ ವಯಸ್ಸಿನ ಹಂಗಿಲ್ಲ; ಶಿವುಗೂ ಕೂಡ.

ಕನವರಿಕೆಯಲಿ...


10ನೇ ಪುಟದಿಂದ...

'ಬಹಳಷ್ಟು ನಿರ್ಮಾಪಕರಿಗೆ ಸಿನಿಮಾದ ಬೇಸಿಕ್ ಕೂಡ ಗೊತ್ತಿರುವುದಿಲ್ಲ. ದುಡ್ಡಿದ್ದರೆ ಸಿನಿಮಾ ಆಗುತ್ತದೆ ಎಂಬುದು ಸುಳ್ಳು. ಈಗ ದುಡ್ಡು ಹಾಕಿ ಆಮೇಲೆ ನೋಡಿಕೊಳ್ಳೋಣ ಎಂಬ ಮನಸ್ಥಿತಿಯಲ್ಲಿ ಕೆಲವರು ಸಿನಿಮಾ ಪ್ರಾರಂಭಿಸುತ್ತಾರೆ. ಅಂಥ ಸಿನಿಮಾಗಳು ಮೂಲೆ ಸೇರುತ್ತವೆ. ಸಿನಿಮಾ ಒಂದೇ ದಿನಕ್ಕೆ ₹5 ಕೋಟಿ ದುಡಿಯಿತು, ₹50 ಕೋಟಿ ಲಾಭ ಬಂತು ಎಂಬಿತ್ಯಾದಿ ಉತ್ಪ್ರೇಕ್ಷೆ ಮತ್ತು ಸುಳ್ಳನ್ನು ನಂಬಿ ಹಲವರು ಚಿತ್ರರಂಗಕ್ಕೆ ಬರುತ್ತಾರೆ. ಆಮೇಲೆ ವಾಸ್ತವದ ಅರಿವಾಗುತ್ತದೆ. ಸಿನಿಮಾಗಳು ಡಬ್ಬಿಯಲ್ಲಿಯೇ ಉಳಿದುಕೊಳ್ಳಲು ಇದೇ ಮುಖ್ಯ ಕಾರಣ. ಹೀಗಾಗಿ 'ಟೆಂಟ್ ಸಿನಿಮಾ' ಮೂಲಕ ಕೇವಲ ಸಿನಿಮಾ ನಿರ್ಮಾಣ ಮಾತ್ರವಲ್ಲ; ಪ್ರಚಾರ, ಮಾರಾಟ, ಬಿಡುಗಡೆ ಕುರಿತು ಪ್ರಾರಂಭದಿಂದಲೇ ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದೇವೆ. ಆಗಾಗ ವಿತರಕರು, ಮಾರ್ಕೆಟಿಂಗ್ ಸಂಪನ್ಮೂಲ ವ್ಯಕ್ತಿಗಳು, ಮೊದಲಾದವರನ್ನು ಕರೆಸಿ ಕಾರ್ಯಾಗಾರ ನಡೆಸುತ್ತಿರುತ್ತೇವೆ' ಎನ್ನುತ್ತಾರೆ ನಾಗತಿಹಳ್ಳಿ ಚಂದ್ರಶೇಖರ.

ತೊಂಬತ್ತೊಂದು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಚಿತ್ರೋದ್ಯಮದಲ್ಲಿ ಈಗಾಗಲೇ ಐದು ಸಾವಿರಕ್ಕೂ ಹೆಚ್ಚು ಸಿನಿಮಾಗಳು ತೆರೆಕಂಡಿವೆ. ಈಗಲೂ ಕಾಣುತ್ತಲೇ ಇವೆ. ಆದರೆ ಪೂರ್ಣಗೊಂಡ ಕೆಲವು ಸಿನಿಮಾಗಳಿಗೆಲ್ಲಾ ಬಿಡುಗಡೆ ಭಾಗ್ಯವಿಲ್ಲ. ಏಕೆಂದರೆ, ಚಿತ್ರೋದ್ಯಮದಲ್ಲಿ ತೊಡಗಿಸಿಕೊಳ್ಳುವ ಹೊಸಬರಲ್ಲಿ ವೃತ್ತಿಪರತೆಯ ಕೊರತೆ ಇದೆ. ಸಿನಿಮಾವನ್ನು ಆರಂಭಿಸುವಾಗಿನ ಪ್ರೀತಿ, ಹುಮ್ಮಸ್ಸು ಅದನ್ನು ಪೂರ್ಣಗೊಳಿಸಿ, ಬಿಡುಗಡೆ ಮಾಡುವ ಹೊತ್ತಿಗೆ ನಾನಾ ಕಾರಣಗಳಿಂದ ಮಾಯವಾಗಿರುತ್ತದೆ.

ಮೇರುನಟ ರಾಜಕುಮಾರ್ ನಿರ್ಮಾಪಕರನ್ನು 'ಅನ್ನದಾತ' ಎಂದು ಬಾಯಿತುಂಬ ಕರೆಯುತ್ತಿದ್ದರು. ನಿರ್ಮಾಪಕ ಉಳಿದರೆ ಚಿತ್ರೋದ್ಯಮ ಉಳಿಯುತ್ತದೆ, ಬೆಳೆಯುತ್ತದೆ. ಆದರೆ ಈ 'ಅನ್ನದಾತ'ನಲ್ಲಿ ಮೊದಲು ಶಿಸ್ತು ಬರಬೇಕು. ವೃತ್ತಿಪರತೆಯನ್ನು ಮೈಗೂಡಿಸಿಕೊಳ್ಳಬೇಕು. ಉದ್ಯಮದ ಒಳ-ಹೊರಗು, ಆಳ-ಅಗಲವನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಸಿನಿಮಾಗಳು ವರ್ಷಗಟ್ಟಲೆ ಕೊಳೆಯದೇ ಬಿಡುಗಡೆ ಭಾಗ್ಯವನ್ನು ಕಾಣಬಹುದು. ಇದಕ್ಕೆ ಮೊದಲು ಚಿತ್ರೋದ್ಯಮದಲ್ಲಿ ಶಿಸ್ತು ಬರಬೇಕು ಅಷ್ಟೆ.

"ಮೊದಲ ಸಿನಿಮಾ ಮಾಡುವಾಗ ಬರವಣಿಗೆ, ಕಂಟೆಂಟ್, ಪ್ರೇಕ್ಷಕರನ್ನು ಹೇಗೆ ಒಪ್ಪಿಸುವುದು ಎಂಬಿತ್ಯಾದಿಯನ್ನು ಮಾತ್ರ ಯೋಚಿಸುತ್ತಿರುತ್ತೇವೆ. ಆದರೆ ಬಿಡುಗಡೆ, ವಿತರಣೆ ಕುರಿತಾಗಿ ಸಿನಿಮಾ ಪೂರ್ಣಗೊಳ್ಳುವವರೆಗೂ ತಲೆಕೆಡಿಸಿಕೊಂಡಿರುವುದಿಲ್ಲ. ಒಂದು ರೀತಿ ಸಿನಿಮಾದೊಂದಿಗೆ ಭಾವನಾತ್ಮಕ ನಂಟು ಹೊಂದಿರುತ್ತೇವೆ. ಬಿಡುಗಡೆಗೆ ಹೊರಟಾಗಲೇ ನಮಗೆ ಇದೆಂಥ ಸಮುದ್ರ ಎಂದು ಗೊತ್ತಾಗುತ್ತದೆ"



ಗುರುರಾಜ ಕುಲಕರ್ಣಿ.
ನಿರ್ದೇಶಕ, ನಿರ್ಮಾಪಕ

"ವೃತ್ತಿಪರ ನಿರ್ಮಾಪಕರಿಗೆ ಸಿನಿಮಾವನ್ನು ಹೇಗೆ ಬಿಡುಗಡೆ ಮಾಡಬೇಕು ಎನ್ನುವುದು ಚೆನ್ನಾಗಿ ಗೊತ್ತಿರುತ್ತದೆ. ನಮ್ಮಂತಹ ಹೊಸಬರು ಸ್ಕ್ರಿಪ್ಟ್ ಮೇಲೆ ತುಂಬ ಶ್ರಮ ಹಾಕಿರುತ್ತೇವೆ. ಆದರೆ ಬಿಡುಗಡೆ ವಿಷಯಕ್ಕೆ ಬಂದಾಗ ಅದೊಂದು ಹೊಸ ಲೋಕ. ಇಲ್ಲಿ ಎಲ್ಲರೂ ಬಗೆಬಗೆಯ ಸಲಹೆ ನೀಡುತ್ತಾರೆ. ಹೀಗಾಗಿ ನಾವು ಗೊಂದಲದಲ್ಲಿ ಇರುತ್ತೇವೆ. ಕೊನೆಗೊಂದು ದಾರಿ ಆಯ್ದುಕೊಳ್ಳಲೇಬೇಕು. ಸಿನಿಮಾ ನಿರ್ಮಾಣ ಫಸ್ಟ್ ಹಾಫ್ ಆದರೆ, ಬಿಡುಗಡೆ ಸೆಕೆಂಡ್ ಹಾಫ್"



ಹಯವದನ
ಸಿನಿಮಾ ನಿರ್ದೇಶಕ

ಸಹಕಾರ ಹೇಗೆ ಮರೆಯಲಿ ನಿನ್ನ...?

10ನೇ ಪುಟದಿಂದ...

ಟಿಸಿಎಸ್ ಎಂಬ ದೊಡ್ಡ ಹೆಸರು ದೂರದಿಂದ ನೋಡುತ್ತಲೇ, ಕೆಳಗೆ ಇರುವ ಉಪನಾಮ ಓದುವ ಕುತೂಹಲ ಕೂಡ ಅನೇಕ ಪ್ರಯಾಣಿಕರಿಗಿತ್ತು. ಹೊಸ ಬಸ್ ರಸ್ತೆಗಿಳಿದಾಗಲಂತೂ ಅದರ ಉಪನಾಮ ಯಾವ ವಿಶೇಷವಾದದು ಆಗಿರಬಹುದು ಎಂಬ ಕುತೂಹಲ ಇರುತ್ತಿತ್ತು.

ಶಿಕ್ಷಣಕ್ಕೂ ಸಹಕಾರಿ...

ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಮನೆಗಳು ಅಲ್ಲೊಂದು, ಇಲ್ಲೊಂದು ಇರುವುದು ಸಾಮಾನ್ಯ. ಕಚ್ಚಾರಸ್ತೆಗಳು ಇರುವ ಹಳ್ಳಿಗಳಿಗೂ ಬಸ್ ತೆರಳಿ ಆ ಭಾಗದ ಮಕ್ಕಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹ ಕೊಟ್ಟ ಕೀರ್ತಿ ಈ ಸಂಸ್ಥೆಗಿದೆ. ಗ್ರಾಮೀಣ ಭಾಗದ ಮಕ್ಕಳು ತಾಲ್ಲೂಕು ಕೇಂದ್ರ ಕೊಪ್ಪದ ಕಾಲೇಜಿನಲ್ಲಿ ಪಿಯುಸಿ ಮತ್ತು ಪದವಿ ತನಕವೂ ಓದಿ, ಹಳ್ಳಿಯ ಮಕ್ಕಳು ಕೂಡ ಪದವೀಧರರಾಗಿ ಬದುಕು ಕಟ್ಟಿಕೊಳ್ಳುವಲ್ಲಿ ಸಹಕಾರ ಸಾರಿಗೆಯ ಪಾತ್ರ ಅನನ್ಯವಾದುದು. ಇಂದಿಗೂ ದೇಶ ಮತ್ತು ವಿದೇಶಗಳಲ್ಲಿ ಉದ್ಯೋಗ ಮಾಡುತ್ತಾ ಬದುಕು ಕಟ್ಟಿಕೊಂಡಿರುವ ಅನೇಕರು ತಮ್ಮ ಶೈಕ್ಷಣಿಕ ಜೀವನ ಮೊಟಕುಗೊಳ್ಳದೇ ಶಿಕ್ಷಣ ಪಡೆಯುವಲ್ಲಿ ಸಹಕಾರ ಸಾರಿಗೆ ಬಸ್ ಕಾರಣ ಎಂಬುದನ್ನು ಅಭಿಮಾನದಿಂದ ಹೇಳುತ್ತಾರೆ.
ಈಗ ಅನೇಕ ಹಳ್ಳಿಗಳಲ್ಲಿ ಬಸ್ ವ್ಯವಸ್ಥೆಯೇ ಇಲ್ಲದೇ ಮಕ್ಕಳು ಪ್ರೌಢಶಾಲಾ ಮತ್ತು ಕಾಲೇಜು ಶಿಕ್ಷಣಕ್ಕಾಗಿ ಪಕ್ಕದ ಊರುಗಳಿಗೆ ತೆರಳಲು ಪೋಷಕರೇ ದುಬಾರಿ ಹಣ ನೀಡಿ ಆಟೊ ಅಥವಾ ಬೇರೆ ವಾಹನದ ವ್ಯವಸ್ಥೆ ಮಾಡಿಕೊಳ್ಳುವಂತಾಗಿದೆ. ಪಟ್ಟಣಕ್ಕೆ ಹೊಂದಿಕೊಂಡಂತೆ 4-5 ಕಿಲೋಮೀಟರ್ ದೂರದಲ್ಲಿರುವ ಮಕ್ಕಳಲ್ಲಿ ಅನೇಕರು ಆಟೊಗೆ ಹಣ ತೆರಲಾಗದೆ ಕಾಲ್ನಡಿಗೆಯಲ್ಲೇ ತೆರಳುವ ಅಥವಾ ಕಾಲೇಜು ಶಿಕ್ಷಣ ಮೊಟಕುಗೊಳಿಸುವ ಪರಿಸ್ಥಿತಿ ಎದುರಾಗಿದೆ.

ರೈತರ ಒಡನಾಡಿ

ಮಲೆನಾಡಿನ ಜೀವನಾಡಿ ಕೃಷಿ. ಕೃಷಿ ಚಟುವಟಿಕೆಗೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ತೆರಳುವ ಕಾರ್ಮಿಕರಿಗೆ ಬಸ್ ಸೇವೆ ಬಹಳ ಅನುಕೂಲವಾಗಿತ್ತು. ಈಗ ಬಸ್ ಸೇವೆ ಇಲ್ಲದೆ ಕೃಷಿ ಕಾರ್ಮಿಕರು ಖಾಸಗಿ ವಾಹನಗಳಲ್ಲಿ ತಂಡಗಳಲ್ಲಿ ತೆರಳುವ ಪರಿಸ್ಥಿತಿ ಇದೆ. ಅಥವಾ ಕೃಷಿ ತೋಟದ ಮಾಲೀಕರೇ ಕಾರ್ಮಿಕರಿಗೆ ವಾಹನ ವ್ಯವಸ್ಥೆ ಮಾಡಿ ಕೆಲಸಕ್ಕೆ ಕರೆಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಮಲೆನಾಡಿನ ಕೃಷಿಯ ಹತ್ತಾರು ಸವಾಲುಗಳ ನಡುವೆ ಕಾರ್ಮಿಕರ ಸಾರಿಗೆ ವ್ಯವಸ್ಥೆ ಕೂಡ ಕೃಷಿ ಚಟುವಟಿಕೆಗಳಿಗೆ ಸವಾಲಾಗಿದೆ. ಅಲ್ಲದೇ ಸಣ್ಣ ರೈತರು ತಾವು ಬೆಳೆದ ಬೆಳೆಗಳನ್ನು ಸಂತೆಯಲ್ಲಿ ಮಾರಾಟ ಮಾಡಲು ಮತ್ತು ಪಟ್ಟಣದ ವ್ಯಾಪಾರಿ ಮಂಡಿಗಳಲ್ಲಿ ಮಾರಲು ಸಹಕಾರ ಸಾರಿಗೆಯ ಬಸ್ ಅವಲಂಬಿಸಿದ್ದರು. ಬಸ್‌ನ ಹಿಂದಿನ ಸೀಟ್‌ನ ಅಡಿಯಲ್ಲಿ ಕೃಷಿಕರ ಸಣ್ಣಪುಟ್ಟ ಮೂಟೆಗಳು ಸುಲಭವಾಗಿ ಪಟ್ಟಣ ಸೇರುತ್ತಿದ್ದವು. ಈಗ ಸಣ್ಣಮಟ್ಟದ ಬೆಳೆಗಾರರು ಕೂಡ ಬಾಡಿಗೆ ವಾಹನ ಮಾಡಿಕೊಂಡು ಸಾಗಾಟ ಮಾಡುವಂತಾಗಿದೆ. ರಸ್ತೆಯೇ ಇಲ್ಲದ ಹಳ್ಳಿಗಳಿಗೂ ಸಹಕಾರ ಸಾರಿಗೆ ಸೇವೆ ನೀಡುತ್ತಾ ಕಚ್ಚಾ ರಸ್ತೆ ಮೂಲಕ ಸಾಗುತ್ತ ರೈತರ ಬದುಕಿನ ಭಾಗವೇ ಆಗಿತ್ತು.



ಸದ್ದು ನಿಲ್ಲಿಸಿದ ಬಸ್!

ಸಹಕಾರ ಸಾರಿಗೆ ಸಂಸ್ಥೆ ಆರ್ಥಿಕ ಸಂಕಷ್ಟದ ಕಾರಣದಿಂದ ಫೆಬ್ರುವರಿ 16, 2020 ರಂದು ತನ್ನ ಸೇವೆ ನಿಲ್ಲಿಸಿತು. ಸಂಸ್ಥೆ ಬೀಗಮುದ್ರೆಗೆ ಒಳಗಾಯಿತು. ನ್ಯಾಯಾಲಯ, ಮಂತ್ರಿ ಮಹೋದಯರ ತನಕ ವಿಚಾರ ಹೋದರೂ ಸಮಸ್ಯೆ ಇನ್ನೂ ಪರಿಹಾರ ಕಂಡಿಲ್ಲ. ಕೊಪ್ಪದಲ್ಲಿರುವ ಈ ಸಂಸ್ಥೆಯ ಕೇಂದ್ರ ಕಚೇರಿಯ ಆವರಣ ಮತ್ತು ಅಲ್ಲೇ ರಸ್ತೆಯ ಇಕ್ಕೆಲೆಗಳಲ್ಲಿ ತುಕ್ಕು ಹಿಡಿಯುತ್ತಾ ಈ ಬಸ್ಸುಗಳು ಅನಾಥವಾಗಿವೆ. ಸರ್ಕಾರದ ಸಹಾಯದಿಂದಲೋ, ಕಾನೂನು ತೊಡಕುಗಳನ್ನು ನಿವಾರಿಸಿಕೊಂಡೋ ಈ ಬಸ್‌ಗಳು ಮಲೆನಾಡ ಹಸಿರಿನ ನಡುವಿನ ರಸ್ತೆಗಳಲ್ಲಿ ಮತ್ತೆ ಸಂಚಾರ ಆರಂಭಿಸುತ್ತವೆ ಎಂಬುದು ಜನಸಾಮಾನ್ಯರ ನಿರೀಕ್ಷೆಯಾಗಿದೆ. ಬದುಕಿನ ಭಾಗವಾಗಿದ್ದ ಬಸ್ ಮತ್ತೆ ಬದುಕಿನ ಪಯಣದಲ್ಲಿ ಜೊತೆಯಾಗಲಿ.



ಕೃಷಿ ಖುಷಿಯಲ್ಲಿ...

10ನೇ ಪುಟದಿಂದ...

ಈ ಕೊಯ್ಲಿಗಾಗಿಯೇ ಒಂದು ಸಾವಿರ ಕುಡುಗೋಲುಗಳನ್ನು ಮಾಡಿಸಲಾಗಿತ್ತು. ಕಂಗಿನ ಹಾಳೆಯ ಮುಟ್ಟಾಳೆಗಳು ತುಳುನಾಡಿನ ರೈತ ಸಂಸ್ಕೃತಿಯ ಹೆಗ್ಗುರುತಾಗಿ ಯುವಕ, ಯುವತಿಯರ ತಲೆ ಮೇಲಿದ್ದವು. ಭತ್ತದ ಬೇಸಾಯ ಎಂಬ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಪುನರುಜ್ಜೀವನಗೊಳಿಸಿದ ಈ ಸಾಧನೆಯ ಜೊತೆಗೆ ಒಂದು ಸಾವಿರ ಮಂದಿ ಸಾಲುಸಾಲಾಗಿ ನಿಂತು ಒಣಗಿದ ಪೈರನ್ನು ಸರಸರನೆ ಕೊಯ್ಯುತ್ತಿದ್ದ ದೃಶ್ಯವಂತೂ ಗತಕಾಲದ ನೆನಪಿನ ಸಿಹಿ ಬುಗ್ಗೆಯಾಗಿ ಗೋಚರಿಸಿತು.

ಪೈರು ಕಟಾವು ಮಾಡಲು ಹೊರಟ ಸಡಗರದ ಉತ್ಸವವಂತೂ ಅವರ್ಣನೀಯ. ಮುಟ್ಟಾಳೆ ಧರಿಸಿ, ಕುಡುಗೋಲು ಹಿಡಿದು ಚಂಡೆ ಮುಂತಾದ ವಾದ್ಯ ವಾದನಗಳ ನಿನಾದದಲ್ಲಿ ತುಳುನಾಡಿನ ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದ್ದ ಮಂದಿಯೂ ಪೈರು ಬೆಳೆದ ಹೊಲದತ್ತ ಸಾಗುವ ದೃಶ್ಯ ವಿಶಿಷ್ಟವಾಗಿತ್ತು. ಪೈರನ್ನು ಕಟಾವು ಮಾಡಿ ಪಲ್ಲಕಿಯಲ್ಲಿ ಹೊತ್ತುಕೊಂಡು ಬರುವ ಪದ್ಧತಿಯೂ ನಡೆಯಿತು. ಸೂಡಿ ಕಟ್ಟಿ ಹೊತ್ತುಕೊಂಡು ಒಬ್ಬರ ಹಿಂದೊಬ್ಬರಂತೆ ಬಂದು ದೇವಾಲಯದ ಅಂಗಣದಲ್ಲಿ ಸಾಲು ಸಾಲಾಗಿ ಜೋಡಿಸಿಟ್ಟಿರುವ ಹೊಡೆ ಮಣೆಗಳಿಗೆ ಬಡಿದು ಕಾಳುಗಳನ್ನು ಬೇರ್ಪಡಿಸಿದರು. ಜಳ್ಳು ತೂರಿದರು. ಸಾಂಪ್ರದಾಯಿಕ ವಿಧಾನದಲ್ಲೇ ಕರಾವಳಿಯ ಅಳತೆ ಸಾಧನ ಕಳಸೆಯಲ್ಲಿ ಅಳತೆಯನ್ನೂ ಮಾಡಿದರು. ಭತ್ತ ಬೇರ್ಪಟ್ಟ ಹುಲ್ಲನ್ನು ಕ್ರಮಬದ್ಧವಾಗಿ ಪೇರಿಸಿಟ್ಟರು. ಒಂದೇ ದಿನದಲ್ಲಿ ಕೆಲಸ ಪೂರ್ಣಗೊಂಡಿತು. ಕೃಷಿಯ ಕಷ್ಟಗಳೇನು ಎಂಬುದನ್ನು ತಿಳಿಯದ ಯುವಜನರಿಗೆ ಇದೊಂದು ವಿಶೇಷ ಅನುಭವ ಹೊಸ ಹುರುಪನ್ನು ತುಂಬಿತು.

ಸಾವಿರ ಮಂದಿ ಒಂದುಗೂಡಿ ನಡೆಸಿದ ಈ ಕಟಾವಿನ ಕಾರ್ಯಕ್ರಮ 'ಗೋಲ್ಡನ್ ಬುಕ್ ಆಫ್ ದ ರೆಕಾರ್ಡ್'ನ ಪುಟಗಳಲ್ಲಿ ದಾಖಲೆಯಾಗಬೇಕಾಗಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಾಡುಗೋಡು

ಕಾಡುಗೋಡು (ನಾ). ಕಾಡಿನ ಎತ್ತರವಾದ ಪ್ರದೇಶ
(ಕಾಡು + ಕೋಡು)

ಅಶೋಕವನದಲ್ಲಿ ಸೀತೆಯಿದ್ದ ಕಾಡಿನ ಎತ್ತರ ಪ್ರದೇಶವನ್ನು ವರ್ಣಿಸುವಾಗ ಕವಿಯು 'ಕಾಡುಗೋಡು' ಎಂದು ನವೀನ ಪದ ಸೃಷ್ಟಿಸಿದ್ದಾರೆ.

ಕಾಡುಗೋಡೆತ್ತರದೊಳಿರ್ದ
ಪುಲ್ಮನೆಯೊಳಿರ್ದು ಸೀತಾದೇವಿ ತಾನುತ್ಕಂಠೆ,
ನೋಡುತಿರ್ದಳ್ ತರಂಗೋಲ್ಲಾಸಮಂ.

ಕಿರುಗಜ್ಜ

ಕಿರುಗಜ್ಜ (ನಾ). ಕಿರುಗರ್ಜನೆ; ಕಿರುಗುಡುಗು
(ಕಿರು + ಕಜ್ಜ)
ಗಜ್ಜ (ನಾ). ಗರ್ಜನೆ; ಗುಡುಗು
ಗಜ್ಜ ವೃಷ್ಟಿ (ನಾ). ಗರ್ಜನೆಯಿಂದ ಕೂಡಿದ ಮಳೆ; ಗುಡುಗಿನಿಂದ ಕೂಡಿದ ಮಳೆ

ಕಾಡು ತಾನೇ ಅಳುವಂತೆ ಅನಾಥ ಶಿಶು ರೋದಿಸುತ್ತಿತ್ತು. ಆ ರೋದನವು ರಾಮಾಯಣ ಕಥೆಯ ಮುಂದಿನ ಮಹಾದುಃಖದ ಕಾಡಿನ ಬೆಂಕಿಗೆ – ತನ್ನ ಕಿರುಗರ್ಜನೆಯ, ಮಳೆಯಲ್ಲಿ ಹೊಮ್ಮಿಸಿದ ಮಿಂಚಿನ ಕಿಡಿ-ಮುನ್ನುಡಿಯಿಡುವ ವಿಧಿವಿಲಾಸದಂತಿತ್ತು.

ಕವಿಯು ಶಿಶುರೋದನವನ್ನು ಮತ್ತು ಮುಂದೆ ರಾಮಾಯಣ ಕಥೆಯಲ್ಲಿ ಎಲ್ಲರೂ ರೋದಿಸುವ ದಾವಾನಳಕ್ಕೆ ಪ್ರತಿಮಾತ್ಮಕವಾಗಿ 'ಕಿರುಗಜ್ಜ' ಪದ ಸೃಷ್ಟಿಸಿದ್ದಾರೆ.

ಮುಂದಣ ಮಹಾದುಃಖ ದಾವಾನಳಕೆ ತನ್ನ
ಕಿರುಗಜ್ಜದಾ ಒಂದೆ ಕಿಡಿಯ
ಮುನ್ನುಡಿಯಿಡುವ
ವಿಧಿವಿಲಾಸದಲಿ!

ಕವರ್ತೆವಟ್ಟೆ

ಕವರ್ತೆವಟ್ಟೆ (ನಾ). ಅಪಹಾರ ಮಾಡುವ ರೀತಿ; ಅಪಹಾರ ಮಾರ್ಗ
(ಕವರ್ತೆ + ಬಟ್ಟೆ)

ಚಂದ್ರನಖಿಯು ರಾಮ ಮತ್ತು ಲಕ್ಷ್ಮಣರು ತನ್ನನ್ನು ತಿರಸ್ಕರಿಸಿ ಅಪಮಾನ ಮಾಡಿದ್ದನ್ನು ಅಣ್ಣ ರಾವಣನಿಗೆ ತಿಳಿಸುವಳು. ನೀನು ಆ ವೈರಿಯ ಲಲನೆಯನ್ನು ಪಡೆದರೆ ಅವನು ಹತನಾಗುವನು ಎಂದು ಉಪದೇಶಿಸುವಳು. ಆಗ ಅವನಲ್ಲಿ ಕಾಮುಕತೆಯ ಪಶುತ್ವ ಮೆಲುಕು ಹಾಕಿತು. ಆಗ ಅವನು ಏಕಾಂತದಲ್ಲಿ ಕುಳಿತು ಸೀತೆಯನ್ನು ಅಪಹರಿಸುವ ಮಾರ್ಗವನ್ನು ಉಕ್ಕೆವ ಅಂದರೆ ಉತ್ಸಾಹದಲ್ಲಿ ಯೋಚಿಸಿದನು. ಆ ಸನ್ನಿವೇಶವನ್ನು ಕುವೆಂಪು ಅವರು ಹೀಗೆ ವರ್ಣಿಸಿದ್ದಾರೆ.

'ಚಿಂತಿಸಿದನ್ ಏಕಾಮತದೊಳ್ ಉಕ್ಕೆವದ
ಕವರ್ತ ವಟ್ಟೆಯಂ'

ಮುನ್ನೋಟ 23-03-2025 ರಿಂದ 29-03-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಬಂಧುಗಳ ನಡುವೆ ಗಲಾಟೆ ಬೇಡ. ತಾಳ್ಮೆಯಿಂದ ಕೆಲಸವನ್ನು ಮಾಡಿಕೊಳ್ಳಿರಿ. ಹೈನುಗಾರಿಕೆ ಮಾಡುವವರಿಗೆ ಆದಾಯ ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಮಕ್ಕಳಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ಕೆಲವರಿಗೆ ಉಸಿರಾಟದ ತೊಂದರೆ ಕಾಣಿಸಬಹುದು. ಸಂಗಾತಿಯ ಖರ್ಚುಗಳು ಬಹಳಷ್ಟು ಹೆಚ್ಚಾಗುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಕೃಷಿ ಸಂಬಂಧಿತ ಉತ್ಪನ್ನಗಳನ್ನು ಮಾರುವವರಿಗೆ ಲಾಭವಿರುತ್ತದೆ. ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದು. ಸರ್ಕಾರಿ ವ್ಯವಹಾರಗಳಲ್ಲಿ ಸ್ವಲ್ಪ ಮಟ್ಟಿನ ಲಾಭವಿರುತ್ತದೆ. ಕೆಲವು ಮಹಿಳೆಯರಲ್ಲಿ ಆರೋಗ್ಯ ವ್ಯತ್ಯಾಸಗಳಾಗಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ವ್ಯವಹಾರದಲ್ಲಿ ಹೆಚ್ಚು ಎಚ್ಚರವಾಗಿರಿ. ಆದಾಯ ಕಡಿಮೆಯಿದ್ದು, ಖರ್ಚಿನಲ್ಲಿ ಹಿಡಿತವಿಲ್ಲದಿದ್ದರೆ ಸಾಲ ಮಾಡಬೇಕಾಗಬಹುದು. ನಿಮ್ಮ ಪರಿಶ್ರಮದಿಂದ ಬಂಧುಗಳನ್ನು ಗೆಲ್ಲಬಹುದು. ಉತ್ಸಾಹದಿಂದ ಕೆಲಸ ಮಾಡಿ ವೃತ್ತಿಯಲ್ಲಿ ಮೇಲ್ದರ್ಜೆಗೆ ಏರಬಹುದು. ಮಕ್ಕಳಿಗೆ ಉದ್ಯೋಗ ಕೊಡಿಸುವಲ್ಲಿ ನಿಮ್ಮ ಮಾತು ನಡೆಯುತ್ತದೆ. ಸಂಗಾತಿಯ ಅನಿರೀಕ್ಷಿತ ಖರ್ಚುಗಳು ನಿಮಗೆ ಗಾಬರಿ ಮೂಡಿಸುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಆದಾಯ ಕಡಿಮೆ ಇದ್ದರೂ ಹಿರಿಯರ ಸಲಹೆಗಳನ್ನು ಪಾಲಿಸಿದಲ್ಲಿ ಆದಾಯ ಹೆಚ್ಚು ಮಾಡಿಕೊಳ್ಳಬಹುದು. ನಿಮ್ಮ ಒಳ್ಳೆಯ ಕೆಲಸಕ್ಕೆ ಹಿರಿಯರ ಬೆಂಬಲ ದೊರೆಯುತ್ತದೆ. ಭೂಮಿಯ ವ್ಯವಹಾರಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಹಿನ್ನಡೆಯಾಗಬಹುದು. ದೊಡ್ಡ ಹೂಡಿಕೆಗೆ ಕೈಹಾಕುವುದು ಉತ್ತಮವಲ್ಲ. ಸಂಗಾತಿಯ ಜೊತೆ ಕೆಲವೊಮ್ಮೆ ಸೌಮ್ಯವಾಗಿರುವುದು ಒಳ್ಳೆಯದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ವಾರದ ಆರಂಭದಲ್ಲಿ ನಿರಾಸಕ್ತಿ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಆದರೆ ಬೇರೆ ಮಾರ್ಗಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಕಟ್ಟಡ ನಿರ್ಮಾಣಕಾರರಿಗೆ ಹೆಚ್ಚಿನ ಆದಾಯವಿರುತ್ತದೆ. ಕಟ್ಟಡ ಕಾರ್ಮಿಕರಿಗೂ ಹೆಚ್ಚಿನ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಸಂಗಾತಿ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಆದಾಯವು ಸಾಮಾನ್ಯವಾಗಿರುತ್ತದೆ. ನಿಮ್ಮ ಬಂಧುಗಳಿಂದ ಉತ್ತಮ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಕೃಷಿಯಿಂದ ಹೆಚ್ಚು ಲಾಭವಿರುತ್ತದೆ. ಸಂಗಾತಿಯು ಹಲವಾರು ದಾರಿಗಳಿಂದ ಹಣ ಗಳಿಸಲು ಪ್ರಯತ್ನ ಪಡುವರು. ಕೆಲವು ಹಿರಿಯರಿಗೆ ವಿದೇಶಯಾನ ಮಾಡುವ ಯೋಗ ಬರುತ್ತದೆ. ಈಗ ಕೃಷಿಯಿಂದ ಅನಿರೀಕ್ಷಿತ ಆದಾಯ ಬರುವ ಸಾಧ್ಯತೆ ಇದೆ. ಹಿರಿಯರಿಂದ ಧನ ಸಹಾಯ ದೊರೆಯಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ನಿಮ್ಮ ಮನಸ್ಸು ಗೊಂದಲದ ಗೂಡಾಗಿರುತ್ತದೆ. ನಿಮ್ಮ ನಿರ್ಧಾರಗಳು ಕಾರ್ಯಗತವಾಗದೆ ಚಿಂತೆಗೀಡಾಗುವಿರಿ. ಆದಾಯವು ಕಡಿಮೆ ಇರುತ್ತದೆ. ಲೋಹಶಾಸ್ತ್ರವನ್ನು ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಗಣಿಗಾರಿಕೆಯಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ. ಯಾವುದೋ ಒಂದು ಸಂದರ್ಭದಲ್ಲಿ ಸಾಲಗಾರರು ಕಾಟ ಕೊಡಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಆತ್ಮವಿಶ್ವಾಸವನ್ನು ಹೆಚ್ಚು ಮಾಡಿಕೊಳ್ಳುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ವಿದೇಶಿ ಭಾಷಾ ಕಲಿಕೆ ಮಾಡುವವರಿಗೆ ಸೂಕ್ತ ಅವಕಾಶಗಳು ದೊರೆಯುತ್ತವೆ. ವಿದೇಶಿ ಸಂಸ್ಥೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವವರಿಗೆ ಆದಾಯ ಹೆಚ್ಚುತ್ತದೆ. ಕೆಲವರಿಗೆ ಮೂಳೆ ತೊಂದರೆಗಳು ಕಾಣಿಸಬಹುದು. ಕೃಷಿಯಿಂದ ಆದಾಯ ಕಡಿಮೆಯಾಗುತ್ತದೆ. ನಿಮ್ಮ ಸಂಗಾತಿ ನಿಮ್ಮ ಗೌರವವನ್ನು ಕಾಪಾಡುವರು.


ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ವಾರದ ಆರಂಭ ಬಹಳ ಸಂತೋಷದಾಯಕವಾಗಿರುತ್ತದೆ. ಆದಾಯ ಕಡಿಮೆ ಇದ್ದರೂ ಅದನ್ನು ನಿಭಾಯಿಸುವ ಶಕ್ತಿಯನ್ನು ನೀವು ಹೊಂದಿರುವಿರಿ. ಶತ್ರುಗಳನ್ನು ಮಟ್ಟ ಹಾಕುವ ಕಲೆ ನಿಮಗೆ ಸಿದ್ಧಿಸಿರುತ್ತದೆ. ವಿದೇಶಿ ವ್ಯವಹಾರಗಳಲ್ಲಿ ನಿಮಗೆ ಸರ್ಕಾರದ ಸಹಾಯ ಹಸ್ತ ದೊರೆಯುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ನಿಮ್ಮ ಅತಿಯಾದ ಶ್ರದ್ಧೆಗೆ ಉದ್ಯೋಗದ ಸ್ಥಳದಲ್ಲಿ ನಿಮಗೆ ಹೆಚ್ಚು ಕೆಲಸ ಹೇಳಬಹುದು. ಕೆಲವು ರಾಜಕಾರಣಿಗಳು ಮಾತನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡು ಮುಂದುವರೆಯುವರು. ಆದಾಯವು ಕಡಿಮೆ ಇರುತ್ತದೆ. ವಿದೇಶಿ ಸ್ನೇಹಿತರ ಸಹವಾಸದಿಂದ ವಿದ್ಯೆಯಲ್ಲಿ ಸಾಧನೆ ಮಾಡಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ವಿದೇಶಿ ವ್ಯವಹಾರಗಳಿಂದ ಹೆಚ್ಚು ಹಣ ಗಳಿಸಬಹುದು. ಹಿರಿಯರಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ಕ್ರೀಡಾ ತರಬೇತಿ ನೀಡುವವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ. ತಾಯಿ ಆರೋಗ್ಯದಲ್ಲಿ ಬಹಳ ಸುಧಾರಣೆಯನ್ನು ಕಾಣಬಹುದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ನಿಮ್ಮ ನಿರ್ಧಾರಗಳು ಮತ್ತು ನಿಮ್ಮ ಕಾರ್ಯಗಳಲ್ಲಿ ಹೊಂದಾಣಿಕೆ ಇರಲಿ. ನಿಮ್ಮ ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ವೃತ್ತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಭಾಷಾ ಕಲಿಕೆಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ತಲೆನೋವು ಕೆಲವರನ್ನು ಬಾಧಿಸಬಹುದು.

ಪದಬಂಧ 2884



ಮೇಲಿನಿಂದ ಕೆಳಕ್ಕೆ

1. ದೇಶದ ಆಡಳಿತ ಸೂತ್ರವನ್ನು ಹಿಡಿದಿರುವ ಮುಖ್ಯಸ್ಥ 5
2. ಕಾಡನ್ನು ತನ್ನ ಒಡಲಲ್ಲಿಟ್ಟ ಭೂಮಿ 3
4. ರಥವನ್ನು ಚಲಾಯಿಸುವ ಕೃಷ್ಣನಂತಹ ರೂವಾರಿ 3
5. ಮದುವೆಗೆ ಕೊಡುಗೆಯಾಗಿ ನೀಡುವ ನಗದು 5
6. ತಮಿಳುನಾಡಿನ ಸುಬ್ರಹ್ಮಣ್ಯ ಕ್ಷೇತ್ರ 3
7. ಇನ್ನೂ ಶೇಷ ಉಳಿದಿದೆ 3
8. ತಲೆಯ ಮೇಲೆ ಮೂಡಿರುವ ಊರು 3
9. ಮೂರನೆಯ ಅವರ್ಗೀಯ ವ್ಯಂಜನಕ್ಕೆ ಹಚ್ಚಿದ ಅಲ್ಪಖಾರ 3
14. ಮಕ್ಕಳಿಗೆ ಇಷ್ಟವಾಗುವ ಸಿಹಿ ತಿನಿಸು 3
16. ಉದಾಸೀನದ ಅಪರಾವತಾರ 3
17. ಸಂಗೀತದ ಆಲಾಪನೆ ಕೂಡಲು 5
18. ಆಕಾಶಕ್ಕೆ ಮುಟ್ಟುವ ರಾಮ ಜಪ 3
19. ಗಟ್ಟಿಯಾಗಿ ಹಾಡುವವನ ಪಕ್ಕಕ್ಕೆ ಬರುವ ಚರ್ಮ ವಾದ್ಯ 3
20. ಕೋಗಿಲೆಗೆ ಇಷ್ಟವಾದ ಮಾವಿನಮರ 3
21. ಹಿಂದಿಯಲ್ಲಿ ನಮ್ಮ ನಿಮ್ಮೆಲ್ಲರ ಕಥೆ 3
22. ಒಂದು ರೀತಿ ಎಲ್ಲವನ್ನೂ ತ್ಯಜಿಸಿದ ಸಾಧು ಸಂತ 5
27. ದೇವಗಣಕ್ಕೆ ವಿರುದ್ಧವಾಗಿ ಹೋಗುವ ದಾನವ 3
29. ರಕ್ಷಣಾ ಪಡೆಯಲ್ಲಿರುವ ಯುವಕ 3

ಎಡದಿಂದ ಬಲಕ್ಕೆ

1. ಮಂದಿಯೇ ದೊರೆಗಳೆಂಬ ತತ್ವ 5
3. ಮಧುರ ದ್ರವದ ಆಸ್ವಾದನೆ 5
6. ಹೊರಗೆ ಮೈ ಮುಳ್ಳುಗಳು, ಒಳಗೆ ತೊಳೆ ತೊಳೆಗಳ ರಸ 3
8. ಎಲ್ಲವೂ ಸಡಿಲವಾಗಿ ಪಾಲು ರೂಪಕ್ಕೆ ಬಂದಿದೆ 3
10. ಒಳ್ಳೆಯದಕ್ಕೆ ಪ್ರತೀಕವಾದ ಕೆಂಪು ಗ್ರಹ 3
11. ಸಂಗ್ರಹಿಸುವ ಶಿವ 3
12. ಬಯಕೆಯ ಕಣ್ಣುಳ್ಳ ಕಂಚಿಯ ವರದೇವತೆ 3
13. ರೆಪ್ಪೆ ಹಾಕುವ ಲೆಕ್ಕದಿಂದ ಗಂಟೆಯ ಅರವತ್ತನೇ ಒಂದು ಭಾಗ 3
15. ಸಿನಿಮಾ ತಾರೆಯ ಹೊಳಪಿನ ವಾದ್ಯ 3
18. ತಾಯಿಯಂತೆ ರಕ್ಷಿಸುವ ಯಂತ್ರ 3
20. ಮನ್ಮಥನ ವಿಧ್ವಂಸಕ ಅಸ್ತ್ರ 3
23. ಹಳ್ಳಿ ಪೆದ್ದ ಮನ್ಮಥನಂತಿದ್ದಾನೆ 3
24. ಹೇಗೆ ನೋಡಿದರೂ ಇವನ ಪವಾಡ ಹೆಚ್ಚು 3
25. ಶಾಲೆಗೆ ಬಂದುದಕ್ಕೆ ಹಾಕುವ ದಾಖಲೆ 3
26. ಆಧುನಿಕ ಆತ್ಮ ರಕ್ಷಣೆಯ ಕಲೆ 3
28. ಬೆಳದಿಂಗಳಂತೆ ಬೆಳಗುವ ಹೆಣ್ಣು 3
30. ಕುಡಿತಕ್ಕೆ ತುತ್ತಾಗಿ ದುಃಖಕ್ಕೆ ಒಳಗಾದವ 5
31. ಮಂದಿಯ ನೆಚ್ಚಿನ ಒಡೆಯ 5

ಪದಬಂಧ ಉತ್ತರ -2883

ಮೇಲಿಂದ ಕೆಳಕ್ಕೆ

1.ಜೋಗದನಿಧಿ 2.ನನಸು 3.ಅಂಕಣ 4.ಲಟಾಪಟಿ 9.ಸಾರಸ್ವತ 10.ತಿರುವೆಂಕಟ 12.ಸಿದ್ಧರಾಮ 14. ಗಂಗಾಧರ 16.ರಮ್ಯಸಾಲು 19.ತಿಪ್ಪರಲಾಗ 21.ಕಾಗುಣಿತ 24.ಕಮಾನು 25.ಮಂತ್ರಿತ

ಎಡದಿಂದ ಬಲಕ್ಕೆ

1. ಜೋಪಾನ 3.ಅಂಚಲ 5.ನಕ್ಷತ್ರಲೋಕ 6.ಟಾಕೀಸು 7.ದಕ್ಕಿಸು 8.ಐಟ್ಟಪ 9.ಸಾಹಿತಿ 11.ಟಿಸಿಲು 13.ಧಿಗಂಬರ 15.ರುಧಿರ 17. ತಟಾಕ 18.ಸಾರಮತಿ 20.ಕಾರಕಾ 22.ಟಪಾಲು 23.ಗುಟಕ 25.ಮಂದಾರ 26.ತರುಣಿ 27.ಮಾನಸಪುತ್ರಿ 28.ತರಿನು 29.ತರಂಗ

‘ಚುಂಬಕ ಗಾಳಿ’ಯ ಚನ್ನಬಸವಣ್ಣ

ಜಿ ಎನ್ ಮೋಹನ್



ಮಾರ್ಚ್ 23 ಎಂದರೆ ನಮಗೆ ಲೋಹಿಯಾ ಪ್ರಕಾಶನದ ಪುಸ್ತಕಗಳದ್ದೇ ಗುಂಗು. ಒಂದು ಸಂಕ್ರಾಂತಿ, ಒಂದು ಯುಗಾದಿ, ಒಂದು ದೀಪಾವಳಿಯ ಬರವಿಗೆ ನಾವು ಹೇಗೆಲ್ಲಾ ಕಾತರದಿಂದ ಕಾಯುತ್ತಿದ್ದೆವೋ ಅದಕ್ಕೆ ಇನ್ನೂ ಒಂದು ದಿನವನ್ನು ಜೋಡಿಸಿಬಿಟ್ಟವರು ಸಿ.ಚನ್ನಬಸವಣ್ಣ. ಬ್ಯಾಂಕ್ ಉದ್ಯೋಗಿಯಾಗಿದ್ದ ಚನ್ನಬಸವಣ್ಣನವರು ನೆಲದ ಮರೆಯ ನಿಧಾನದಂತೆ ಕನ್ನಡದ ಹೋರಾಟ, ಪರ್ಯಾಯ ರಾಜಕಾರಣದ ಅವಶ್ಯಕತೆ, ಪರಿಸರದ ಉಳಿವಿನ ಕಾಳಜಿಯನ್ನು ದಾಟಿ ಪುಸ್ತಕ ಪ್ರಕಾಶನ ಲೋಕದಲ್ಲಿ ನೆಲೆ ನಿಂತರು. ಲೋಹಿಯಾರವರನ್ನು ಇನ್ನಿಲ್ಲದಂತೆ ಮನಸ್ಸಿಗೆ ಹಚ್ಚಿಕೊಂಡಿದ್ದ ಅವರು ಲೋಹಿಯಾ ಹೆಸರನ್ನೇ ತಮ್ಮ ಪ್ರಕಾಶನಕ್ಕೂ ಇಟ್ಟರು. ಕನ್ನಡ ಪ್ರಕಾಶನ ರಂಗದಲ್ಲಿ ಅದು ಮಹತ್ವದ ಮೈಲುಗಲ್ಲಾಯಿತು.

ಕನ್ನಡ ಪುಸ್ತಕ ಲೋಕ ಇಂದಿಗೂ ನೆನಪಿಸಿಕೊಳ್ಳುವ ಎರಡು ಪ್ರಕಾಶನ ಸಂಸ್ಥೆಗಳೆಂದರೆ ಅದು ‘ನೆಲಮನೆ ಪ್ರಕಾಶನ ’ ಹಾಗೂ ‘ಲೋಹಿಯಾ ಪ್ರಕಾಶನ’. ಈ ಎರಡೂ ಪ್ರಕಾಶನಗಳು ಹೊರತಂದ ಪುಸ್ತಕಗಳು ಕನ್ನಡ ನಾಡಿನ ಪ್ರಜ್ಞೆಯನ್ನು ವಿಸ್ತರಿಸಿವೆ.

ಕೇವಲ 12 ಕಥೆಗಳನ್ನು ಬರೆದರೂ ಕೂಡ ಪ್ರಮುಖ ಕಥೆಗಾರರಾಗಿ ಹೆಸರು ಮಾಡಿದ ರಾಜಶೇಖರ ನೀರಮಾನ್ವಿ ಅವರ ಎರಡನೆಯ ಕಥಾ ಸಂಕಲನವನ್ನು ತರಲು ಯಾವ ಪ್ರಕಾಶಕರೂ ಮುಂದಾಗಲಿಲ್ಲ. ಈ ಅಸಮಾಧಾನವೇ ಲೋಹಿಯಾ ಪ್ರಕಾಶನದ ಹುಟ್ಟಿಗೆ ಕಾರಣವಾಯಿತು. ಬ್ಯಾಂಕ್, ಬ್ಯಾಂಕ್ ಯೂನಿಯನ್ ಜೊತೆಗೆ ಇನ್ನೊಂದು ಜವಾಬ್ದಾರಿ ಚನ್ನಬಸವಣ್ಣನವರಿಗೆ ಜೊತೆಯಾಯಿತು.

“ಪ್ರಕಾಶನ ಕ್ಷೇತ್ರದ ಬಗ್ಗೆ ನಮಗೆ ಏನೆಂದರೆ ಏನೂ ಗೊತ್ತಿರಲಿಲ್ಲ. ಆದರೆ ಅಣ್ಣ, ನೀರಮಾನ್ವಿಯವರ ಕಥೆಗಳ ಮೇಲಿದ್ದ ಪ್ರೀತಿ ಹಾಗೂ ಅವರು ಹೊರಹಾಕಿದ ಸಿಟ್ಟು ಎರಡೂ ನನಗೆ ಆ ಕ್ಷಣಕ್ಕೆ ಅವರ ಪುಸ್ತಕ ಪ್ರಕಟಣೆ ಮಾಡಲೇಬೇಕು ಎನ್ನುವ ನಿರ್ಧಾರ ಕೈಗೊಳ್ಳುವಂತೆ ಮಾಡಿತು. ಅವರಿಂದ ಆ ಆರು ಕಥೆಗಳ ಕಟ್ಟನ್ನು ತೆಗೆದುಕೊಂಡವನೇ ನೇರ ಬೆಂಗಳೂರಿನ ಬಸ್ ಹಿಡಿದೆ. ಎಷ್ಟು ಖರ್ಚು ಬಿತ್ತೋ ಅಷ್ಟನ್ನು ಮಾತ್ರವೇ ಪುಸ್ತಕದ ಬೆಲೆಯಾಗಿ ನಿಗದಿ ಮಾಡಿದೆವು. ಪುಸ್ತಕದ ಬೆಲೆ ಹೇಗೆ ನಿರ್ಧರಿಸಬೇಕು ಎನ್ನುವುದು ತಾನೇ ನಮಗೆಲ್ಲಿ ಗೊತ್ತಿತ್ತು?” ಎಂದು ಚನ್ನಬಸವಣ್ಣ ಮುಗುಳ್ನಕ್ಕರು.

ಮುಧೋಳದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನನ್ನ ಪ್ರಧಾನ ಭಾಷಣ ಕೇಳಿದ ಚನ್ನಬಸವಣ್ಣನವರು ಗುರುತು ಪರಿಚಯವಿಲ್ಲದ ನನ್ನ ಬೆನ್ನು ಹತ್ತಿದ್ದರು. ಚಂಪಾ, ರವಿ ಬೆಳಗೆರೆ.. ಹೀಗೆ ಹಲವರನ್ನು ಸಂಪರ್ಕಿಸಿ ನನ್ನ ಫೋನ್ ನಂಬರ್ ಹಾಗೂ ವಿವರ ಪಡೆದಿದ್ದರು. ನಾನು ಕ್ಯೂಬಾಗೆ ಹೋಗಿ ಬಂದಿದ್ದೆ. ಅದರ ಪ್ರವಾಸ ಕಥನ ಬರೆದು ಕೊಡುತ್ತೇನೆ ಎಂದೂ ಹೇಳಿದ್ದೆ. ಆದರೆ ಆ ವೇಳೆಗೆ ಕಲಬುರ್ಗಿಯಲ್ಲಿ ತಾಜಾ ಕಥೆ, ಕವಿತೆಗಳು ಅರಳುತ್ತಿದ್ದವು. ವಿಕ್ರಮ ವಿಸಾಜಿ ನನ್ನ ಮನೆಯಲ್ಲಿ ನಡೆದ ಮಿನಿ ಗೋಷ್ಠಿಯಲ್ಲಿ ‘ತಮಾಷಾ’ ಕವಿತೆ ಓದಿದ್ದೇ ತಡ ಇದನ್ನು ಕಲಬುರ್ಗಿಯ ಗಡಿ ದಾಟಿಸಲೇಬೇಕು ಎಂದು ನಿರ್ಧರಿಸಿದೆ. ಅದೇ ವೇಳೆಗೆ ರಾಜಶೇಖರ ಹತಗುಂದಿ, ಚಿತ್ರಶೇಖರ ಕಂಠಿ, ಕಲಿಗಣನಾಥ ಗುಡದೂರ ತಮ್ಮೊಳಗಿನ ಬೇಗುದಿಯನ್ನೆಲ್ಲ ಬಸಿದು ಕಥೆಗಳನ್ನು ಬರೆದಿದ್ದರು. ನಾನು ಅವರ ಮುಂದೆ ಹಸ್ತಪ್ರತಿ ಪೇರಿಸುತ್ತಾ ಹೋದಂತೆಲ್ಲಾ ಅದನ್ನು ಇನ್ನಿಲ್ಲದ ಕಾಳಜಿಯಿಂದ ಪ್ರಕಟಿಸುತ್ತಾ ಹೋದರು.

ಮಾರಾಟ ಮಾಡಿಕೊಡುವಂತೆ ಕೋರಿ ಯುಗಾದಿಗೆ ಬೇಕಾದ ಮಾವಿನ ಎಲೆಗಳಂತೆ ಚನ್ನಬಸವಣ್ಣನವರು ಪುಸ್ತಕದ ಕಟ್ಟು ಕಳುಹಿಸುತ್ತಿದ್ದರು. ನಾವೂ ಆ ಪುಸ್ತಕಗಳನ್ನು ಮಾರುವುದನ್ನು ಯುಗಾದಿಯಂತೆಯೇ ಸಂಭ್ರಮಿಸುತ್ತಿದ್ದೆವು. ಅವರ ಯಶಸ್ಸು ಇರುವುದು ಇಲ್ಲೂ ಕೂಡಾ. ಅವರಿಗೆ ಪುಸ್ತಕದ ಮಾರಾಟ ಅಂಗಡಿಗಳು ಬೇಕೇ ಇರಲಿಲ್ಲ, ಪುಸ್ತಕ ಅಂಗಡಿಗಳು ನಮ್ಮ ಪುಸ್ತಕಗಳ ಮೂರು ಮತ್ತೊಂದು ಪ್ರತಿ ಮಾತ್ರ ಕೊಳ್ಳುತ್ತಾರೆ ಎಂದು ದೂರುತ್ತಲೂ ಇರಲಿಲ್ಲ. ರಾಜ್ಯದ ಎಲ್ಲೆಡೆ ನನ್ನಂತಹ ನೂರಾರು ಅನಧಿಕೃತ ಮಾರಾಟಗಾರರು ಇದ್ದೆವು. ನಮ್ಮ ವಿಳಾಸವೇ ಒಂದು ರೀತಿಯಲ್ಲಿ ಲೋಹಿಯಾ ಪ್ರಕಾಶನದ ಬ್ರ್ಯಾಂಚ್ ಆಫೀಸ್‌ಗಳಾಗಿರುತ್ತಿತ್ತು.

ಅವರು ಒಂದು ರೀತಿಯಲ್ಲಿ ಪುಸ್ತಕೋದ್ಯಮದ ಅಭಿರುಚಿಯನ್ನೇ ತಿದ್ದಿದರು ಎಂದರೆ ಅತಿಶಯೋಕ್ತಿಯಲ್ಲ. ಪುಸ್ತಕಗಳ ಗುಣ, ಅದನ್ನು ಹೊರತರುತ್ತಿದ್ದ ರೀತಿಯಲ್ಲಿನ ಗುಣಮಟ್ಟ, ಸಂಭಾವನೆ ನೀಡುವುದರಲ್ಲಿ ಇದ್ದ ಪ್ರೀತಿ, ಬಿಡುಗಡೆ ಮಾಡುವಲ್ಲಿ ತೋರಿಸುತ್ತಿದ್ದ ಉತ್ಸಾಹ, ಮಾರಾಟ ಮಾಡುವಲ್ಲಿ ಇದ್ದ ಜಾಣತನ ಇವು ಪುಸ್ತಕ ಎಂದರೆ ಅದೂ ಇನ್ನೊಂದು ‘ಪಾಕಂಪಪ್ಪು’ ಎಂದುಕೊಂಡವರಿಗೆ ಪರೋಕ್ಷ ನೀತಿ ಪಾಠವಾಗಿತ್ತು. ಅಷ್ಟೇ ಅಲ್ಲ, ಅವರು ಬರಹಗಾರರ ಅಭಿರುಚಿಯನ್ನೂ ತಿದ್ದುತ್ತಿದ್ದರು. ಅವರು ಪ್ರಕಟಿಸಿದ ಹಲವು ಪುಸ್ತಕಗಳಿಗೆ ಅವರೊಡನೆ ಜೊತೆ ಜೊತೆಯಾಗಿ ಓಡಾಡಿದ ನಾನು ಪ್ರತೀ ಬಾರಿ ‘ಇಷ್ಟು ಹಚ್ಚನೆ ಹಸಿರು ಗಿಡದಿಂ ಎಂತು ಮೂಡಿತು ಬೆಳ್ಳಗೆ’ ಎಂದು ಅಚ್ಚರಿಗೊಳ್ಳುತ್ತಿದ್ದೆ. ಚನ್ನಬಸವಣ್ಣ ಒಂದು ಅರ್ಥದಲ್ಲಿ ‘ಲೇಖಕರ ಪ್ರಕಾಶಕ’. ಲೇಖಕರ ಬೆನ್ನತ್ತಿ ಬರೆಸುವುದರಿಂದ ಆರಂಭಿಸಿ ಪ್ರತಿಯೊಂದು ಪುಸ್ತಕವನ್ನೂ ಲೇಖಕ ಕಂಡ ಕನಸಿನಂತೆ ರೂಪಿಸುವುದೂ, ಅವಕಾಶವಿದ್ದಾಗಲೆಲ್ಲಾ ಲೇಖಕರ ಕನಸನ್ನೇ ಇನ್ನೂ ಶ್ರೀಮಂತಗೊಳಿಸುವುದು ಅವರ ಅತಿ ಇಷ್ಟದ ಸಂಗತಿಯಾಗಿತ್ತು.

ಮಾರ್ಚ್ 23, ಲೋಹಿಯಾ ಅವರ ಹುಟ್ಟುಹಬ್ಬವನ್ನು ಲೋಹಿಯಾ ಪ್ರಕಾಶನ ನಾಡಿನ ಎಲ್ಲಾ ಸಾಹಿತಿಗಳ, ಓದುಗರ ಹಬ್ಬವಾಗಿಸಿಬಿಡುತ್ತಿತ್ತು. ಮೊದಲು ಬಳ್ಳಾರಿಯಲ್ಲಿ ಮಾತ್ರ ಆಗುತ್ತಿದ್ದ ಪುಸ್ತಕ ಬಿಡುಗಡೆ ನಂತರ ಒಂದೇ ದಿನದಂದು ಹತ್ತಾರು ಕೇಂದ್ರಗಳಲ್ಲಿ ಏಕಕಾಲಕ್ಕೆ ಬಿಡುಗಡೆ ಆಗುವಂತೆ ಹಬ್ಬಿಬಿಟ್ಟಿತ್ತು. ಕನ್ನಡದ ಖ್ಯಾತ ಸಾಹಿತಿಗಳನ್ನು ತಮ್ಮ ಊರುಗಳ ಗಡಿ ದಾಟಿಸಿ ಬೇರೆ ಊರುಗಳಲ್ಲಿ ಕಾರ್ಯಕ್ರಮಕ್ಕೆ ಹಾಜರಾಗುವಂತೆ ಮಾಡಿದ, ಆ ಮೂಲಕ ಅಲ್ಲಿನ ಊರುಗಳವರಿಗೆ ಕನ್ನಡದ ಸಾಹಿತಿಗಳ ಜೊತೆ ಒಡನಾಡುವಂತೆ ಮಾಡಿದ ಹೆಮ್ಮೆ ಅವರದ್ದು. ಇದರ ಹಿಂದೆ ಇದ್ದದ್ದು ಅವರ ವಿನಾಕಾರಣ ಪ್ರೀತಿ. ಬಳ್ಳಾರಿಯ ಅವರ ಮನೆ ‘ಕ್ಷಿತಿಜ’ಕ್ಕೆ ಚನ್ನಬಸವಣ್ಣನವರದ್ದೇ ಗುಣ. ಅಥವಾ ಚನ್ನಬಸವಣ್ಣನವರಿಗೆ ಕ್ಷಿತಿಜದಂತಹ ವಿಸ್ತಾರ ಗುಣ.

(ಲೋಹಿಯಾ ಪ್ರಕಾಶನದ ಮೂಲಕ ಪುಸ್ತಕ ಲೋಕದ ಸಂಭ್ರಮವನ್ನು ಹೆಚ್ಚಿಸಿದವರು ಬಳ್ಳಾರಿಯ ಸಿ.ಚನ್ನಬಸವಣ್ಣ, ಲೋಹಿಯಾ ಜನ್ಮದಿನವಾದ ಮಾರ್ಚ್ 23 ರಂದು ಅವರಿಗೆ ಬೆಂಗಳೂರಿನಲ್ಲಿ ‘ಚುಂಬಕ ಗಾಳಿ’ ಗ್ರಂಥವನ್ನು ಅರ್ಪಿಸಿ ಸನ್ಮಾನಿಸಲಾಗುತ್ತದೆ.)

ಕಥೆ

ಮೂಲ: ರಮಾನಾಥ ರಾಯ್ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್ ಅವರ

ಗಲ್ಲು ಶಿಕ್ಷೆಯ ಕಾಮೆಂಟ್ರಿ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಎಂ.ಕೆಂಪರಾಜ್ ಅವರ

ಮಣ್ಣ ಬಣ್ಣದವರು

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೊದಲ ಓದು

ವಿಶಿಷ್ಟ ಮಾದರಿಯ ವ್ಯಕ್ತಿಚಿತ್ರಗಳು

ಕೆ.ಶಿವರಾಮ ಕಾರಂತರ ಬಾಲವನ ಸಾಹಿತ್ಯ ಪ್ರಿಯರಿಗೆ ಚಿರಪರಿಚಿತ. ಆದರೆ ಅದರ ನೊಗ ಎಳೆಯಲು ಕಾರಂತರು ಅನುಭವಿಸಿದ ನೋವಿನ ಪರಿಚಯ ಹೆಚ್ಚಿನವರಿಗೆ ಇಲ್ಲ. ಸಣ್ಣ ವಯಸ್ಸಿನಲ್ಲೇ ಮೃತರಾದ ಸಾಹಿತಿ ಪೇಜಾವರ ಸದಾಶಿವರಾಯರ ಬಗ್ಗೆ ಗೊತ್ತಿರುವವರು ಎಷ್ಟು ಮಂದಿ? ತಮ್ಮ ವೈಚಾರಿಕ ಗೆರೆಯನ್ನು ದಾಟಿ, ಪುತ್ರನೇ ಅದರ ತದ್ವಿರುದ್ಧ ಸಿದ್ಧಾಂತವನ್ನು ಅಪ್ಪಿಕೊಂಡಾಗ ಸಾಹಿತಿಯೊಬ್ಬರು ಪಡುವ ಸಂಕಟ, ಮಾಸ್ತಿಯವರ ಜೀವನದಲ್ಲಿ ನಡೆದ ಸಣ್ಣ ಘಟನೆಯೊಂದು ಮುಂದೆ ಇಡೀ ಸಾಹಿತ್ಯ ಚಳವಳಿಗೆ ಪ್ರೇರಣೆಯಾಗಿದ್ದು… ಹೀಗೆ ಸಾಹಿತ್ಯ ಪ್ರಪಂಚದ ಮೇರು ವ್ಯಕ್ತಿಗಳ ವ್ಯಕ್ತಿತ್ವವನ್ನು ಕಟ್ಟಿಕೊಡುವ ಕೃತಿಯೇ ‘ನೆನದವರ ಮನದಲ್ಲಿ’. ಕನ್ನಡ ಸಾರಸ್ವತ ಲೋಕವನ್ನು ಬೆಳಗಿಸಿ, ಚಿಪ್ಪಿನೊಳಗಿನ ಮುತ್ತಿನಂತೆ ಪ್ರವರ್ಧಮಾನಕ್ಕೆ ಬಾರದೇ ಹೋದ ಹಲವರ ಪರಿಚಯವೂ ಈ ಪುಸ್ತಕದಲ್ಲಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಎಸ್.ಆರ್. ವಿಜಯಶಂಕರ್ ಅವರ ಈ ಕೃತಿ 27 ವ್ಯಕ್ತಿ ಚಿತ್ರಗಳ ಸಂಗ್ರಹ. ಲೇಖಕ ತಮ್ಮ ಒಡನಾಡಿಗಳ, ತಮಗಿಂತ ಹಿರಿಯ, ಕಿರಿಯ ಸಾಹಿತಿಗಳ ವ್ಯಕ್ತಿತ್ವ, ಅವರ ವೈಚಾರಿಕ ನಿಲುವುಗಳು, ಅವರ ಬರಹ ಹಾಗೂ ವೈಯಕ್ತಿಕ ಜೀವನವನ್ನು ದಾಖಲಿಸಿದ್ದಾರೆ. ಬಹುಪಾಲು ಓದುಗರಿಗೆ ತಿಳಿಯದ ಅವರ ಇನ್ನೊಂದು ಮಗ್ಗುಲನ್ನೂ ಈ ಪುಸ್ತಕ ಪರಿಚಯ ಮಾಡಿಕೊಡುತ್ತದೆ. ಅವರ ಸಾಹಿತ್ಯದ ಒಳನೋಟವನ್ನು ಗ್ರಹಿಸಿ ಓದುಗರ ಮುಂದಿಟ್ಟಿರುವುದು ಲೇಖಕರ ಅಧ್ಯಯನ ಹಾಗೂ ವಿಷಯ ಜ್ಞಾನದ ಬಗ್ಗೆ ಇರುವ ಪ್ರತೀಕ.



ಪು: 234 ₹280

ನೆನೆದವರ ಮನದಲ್ಲಿ
ಲೇ: ಎಸ್. ಆರ್. ವಿಜಯಶಂಕರ
ಪ್ರ: ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ
ಸಂ: 080-40129027

ವ್ಯಕ್ತಿಚಿತ್ರದ ಸಿದ್ಧ ಮಾದರಿಯನ್ನು ಬಿಟ್ಟು ತಮ್ಮದೇ ಶೈಲಿಯಲ್ಲಿ ವಿಷಯಗಳನ್ನು ದಾಖಲಿಸಿದ್ದಾರೆ. ಇಲ್ಲಿ ಕೆಲವು ಸಾಹಿತಿಗಳ ಒಂದಕ್ಕಿಂತ ಹೆಚ್ಚಿನ ಲೇಖನಗಳಿದ್ದರೂ, ಎಲ್ಲದರಲ್ಲೂ ಭಿನ್ನ ಅಂಶಗಳಿವೆ. ಜನರ ನಡುವೆ ಚರ್ಚಿತವಾದ ವಿಷಯಗಳನ್ನು ಬದಿಗಿಟ್ಟು, ವಿಭಿನ್ನ ಸಂಗತಿಗಳನ್ನು ದಾಖಲಿಸುವ ಪ್ರಯತ್ನವನ್ನು ಪುಸ್ತಕದಲ್ಲಿ ಕಾಣಬಹುದು. ಬಂಡಾಯ, ನವ್ಯ, ನವೋದಯ ಕಾಲದ ಮಹನೀಯರ ಬಗ್ಗೆಯೂ ಪುಸ್ತಕದಲ್ಲಿ ಅಡಕವಾಗಿದೆ. ಅಲ್ಲಲ್ಲಿ ಸಾಮಾಜಿಕ ಆಯಾಮದ ಬಗ್ಗೆಯೂ ಲೇಖಕ ಪ್ರಸ್ತಾಪಿಸಿದ್ದಾರೆ. ಒಡನಾಡಿ ಸಾಹಿತಿಗಳ ಬಗ್ಗೆ ದಾಖಲಿಸುವಾಗ ಯಾವುದೇ ಉತ್ಪ್ರೇಕ್ಷೆಗಳು ಕಾಣಿಸುವುದಿಲ್ಲ. ವಿಶಿಷ್ಟ ಶೀರ್ಷಿಕೆ ಹಾಗೂ ಸರಳ ನಿರೂಪಣೆ ಪುಸ್ತಕದ ತೂಕ ಹೆಚ್ಚಿಸಿದೆ. ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಬಲ್ಲ ಪುಸ್ತಕ ಇದು.

ಕುವೆಂಪು, ಪಿ.ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಲೇಖನಗಳೂ ಬೇಕಿತ್ತು ಎನ್ನುವ ಸಣ್ಣ ನಿರಾಸೆಯೊಂದು ಕೊನೆಗೆ ಉಳಿದು ಬಿಡುತ್ತದೆ.

ಸಾಂಗತ್ಯ ಪ್ರಕಾರದಲ್ಲಿ ರಾಮಾಯಣ

ಕನ್ನಡ ಸಾಹಿತ್ಯದಲ್ಲಿ ಕಾವ್ಯರೂಪದ ರಾಮಾಯಣ ಹೊಸದೇನಲ್ಲ. ಈ ಪಟ್ಟಿಗೆ ಹೊಸ ಸೇರ್ಪಡೆ ‘ರಾಮ ಸಾಂಗತ್ಯ’. ಕವಯತ್ರಿ ಇಂದಿರಾ ಜಾನಕಿ ಎಸ್.ಶರ್ಮ ಅವರು ಛಂದಸ್ಸಿನ ಪ್ರಕಾರಗಳಲ್ಲಿ ಒಂದಾದ ಸಾಂಗತ್ಯದಲ್ಲಿ (ನಾಲ್ಕು ಸಾಲುಗಳ ಪದ್ಯ) ರಾಮಾಯಣವನ್ನು ಹೇಳಿದ್ದಾರೆ. ಇಂದಿರಾ ಅವರ ತಂದೆ ಸಾಹಿತಿ, ತಾಳಮದ್ದಳೆ ಅರ್ಥಧಾರಿ ದೇರಾಜೆ ಸೀತಾರಾಮಯ್ಯ ಅವರು ಬರೆದಿರುವ ‘ಶ್ರೀರಾಮಚರಿತಾಮೃತಮ್’, ದೇರಾಜೆ ರಾಮಾಯಣ ಎಂದೇ ಪ್ರಸಿದ್ಧ. ತಂದೆಯಿಂದಲೇ ಸ್ಫೂರ್ತಿ ಪಡೆದಿರುವ ಇಂದಿರಾ ಅವರು ಈ ಕೃತಿ ರಚಿಸಿದ್ದಾರೆ. ಸಾಹಿತ್ಯ ರೂಪದಲ್ಲಿ ಬಂದಿರುವ ಎಲ್ಲ ರಾಮಾಯಣಗಳಿಗೂ ಮೂಲ ವಾಲ್ಮೀಕಿ ರಾಮಾಯಣ. ಕೃತಿ ರಚನಾಕಾರರು ತಮ್ಮ ಸಿದ್ಧಾಂತ, ನಿಲುವುಗಳಿಗೆ ಅನುಸಾರ ಕಥೆಯನ್ನು ಹೇಳಿದ ಉದಾಹರಣೆಗಳಿವೆ. ಆದರೆ, ಇಲ್ಲಿ ಕವಯಿತ್ರಿ ವಾಲ್ಮೀಕಿ ರಾಮಾಯಣಕ್ಕೆ ನಿಷ್ಠರಾಗಿದ್ದಾರೆ. ‘ಎನ್ನಳವೆಗೆ ತೋರಿದಂತೆ’ (ನನ್ನ ಅರಿವಿಗೆ ನಿಲುಕಿದಂತೆ) ರಾಮಪುಣ್ಯಚರಿತೆಯನ್ನು ಹೇಳಿರುವುದಾಗಿ ಅವರೇ ಬರೆದುಕೊಂಡಿದ್ದಾರೆ.

ಸಾಂಗತ್ಯ ಪ್ರಕಾರದಲ್ಲಿ ಉಪಮೆ, ರೂಪಕಗಳನ್ನು ಬಳಸುವುದಕ್ಕೆ ಸಾಕಷ್ಟು ಅವಕಾಶವಿದ್ದರೂ, ಇಂದಿರಾ ಅವರು ಈ ಅಲಂಕಾರಗಳನ್ನು ಹೆಚ್ಚಾಗಿ ಬಳಸದೆ ನೇರವಾಗಿ ಕಥೆ ಹೇಳುತ್ತಾ ಹೋಗಿದ್ದಾರೆ. ಇಲ್ಲಿನ ಪದ್ಯಗಳಲ್ಲಿ ಆದಿ ಪ್ರಾಸಗಳಿಲ್ಲ. ಬದಲಿಗೆ, ಎರಡನೇ ಮತ್ತು ನಾಲ್ಕನೇ ಸಾಲಿನ ಅಂತ್ಯಕ್ಕೆ ಪ್ರಾಸ ಬಂದಿದೆ. ಇಲ್ಲಿನ ರಾಮಾಯಣವು ಬಾಲಕಾಂಡದಿಂದ ಹಿಡಿದು ಯುದ್ಧಕಾಂಡದವರೆಗೂ ಸಾಗುತ್ತದೆ. ಕೆಲವು ಘಟನೆಗಳನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಉದಾ: ಅರಣ್ಯಕಾಂಡದಲ್ಲಿ ಬರುವ ಶಬರಿ ಕಥೆಯು 10 ಪದ್ಯಗಳಲ್ಲಿ ಮುಗಿಯುತ್ತದೆ. ಇಡೀ ಕೃತಿ ರಾಮ ಕೇಂದ್ರಿತವಾಗಿದೆ. ಸೀತಾಪಹರಣದ ಪ್ರಸಂಗವು ಮನೋಜ್ಞವಾಗಿ ಚಿತ್ರಿತವಾಗಿದೆ. ಸಾಹಿತ್ಯದಲ್ಲಿ ಛಂದಸ್ಸುಗಳ ಬಳಕೆ ಕಡಿಮೆಯಾಗಿರುವ ಈ ಹೊತ್ತಿನಲ್ಲಿ, ಇಂದಿರಾ ಜಾನಕಿಯವರ ಪ್ರಯತ್ನ ಮೆಚ್ಚುವಂತಹದ್ದು.



ಪು: 294 ₹300

ರಾಮ ಸಾಂಗತ್ಯ
ಲೇ: ಇಂದಿರಾಜಾನಕಿ ಎಸ್.ಶರ್ಮ
ಪ್ರ: ದೇರಾಜೆ ಸೀತಾರಾಮಯ್ಯ ಸಂಸ್ಮರಣ ಸಮಿತಿ
ಸಂ:9845764657

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರವಿ	+	ಮನ	+	ಬೇ	=	
2	ಬಾಗು	+	ನರಿ	+	ಳಿ	=	
3	ಸೇತು	+	ನಾಕ	+	ಡಿ	=	
4	ಜನ	+	ಲಾಯ	+	ನ	=	
5	ಲಕ್ಷ	+	ಮಣ	+	ಳೆ	=	

ಪದಬೆಸುಗೆ

ಇಲ್ಲಿ ಕೊಟ್ಟಿರುವ ಮಧ್ಯದಲ್ಲಿನ ಒಂದು ಅಕ್ಷರಕ್ಕೆ ಪದಪಟ್ಟಿಯಿಂದ ಸೂಕ್ತವಾದ ಎರಡು ಪದಗಳನ್ನು ಆಯ್ದು ಹಿಂದೊಂದು ಮುಂದೊಂದು ತುಂಬಿದರೆ ಐದು ಅಕ್ಷರಗಳ ಹೊಸ ಅರ್ಥಬದ್ಧ ಪದ ಆಗುವುದು. ಪ್ರಯತ್ನಿಸಿ

1		ಣಾ	
2		ದೋ	
3		ಭೋ	
4		ರ	
5		ಳ	
6		ವಿ	
7		ಣಾ	
8		ಪಂ	
9		ಗೋ	
10		ಜ	

ಪದ ಪಟ್ಟಿ

ಶರ	ಕರು	ಗತಿ	ಜರ	ಹಿತ
ಪುರ	ಬಣ್ಣ	ವನ	ಕುಳಿ	ಗುಡಿ
ವಾಯು	ಚಿತ್ರ	ಹಾರ	ಗತ್ತು	ವಾರ
ಗಿಳಿ	ತಡೆ	ಜನ	ಮಂಗ	ಕರ



ಪದಶೋಧ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಇಡೀ ಜಗತ್ತೇ ಕೊಂಡಾಡುತ್ತಿರುವ ಓರ್ವ ಗಗನಯಾನಿಯ ಹೆಸರನ್ನು ಗುರುತಿಸಿ..

1. ಮುಸುಕು ಹಾಕು
2. ಜೇನಿನ ಹನಿ
3. ವಾತಾವರಣ
4. ನವಿಲುಗರಿ
5. ಮಲಿನ ನೀರು
6. ನ್ಯಾಯದೇವತೆ
7. ಥಮ್ಸ್‌ಅಪ್


ಉತ್ತರ:..................................

ಬೆಡಗಿನ ಭಾಗಾಕಾರ ÷

14622047999: ಇದೊಂದು ಸ್ವಾರಸ್ಯಕರ ಸಂಖ್ಯೆ. ಇದನ್ನು **10**ರಿಂದ ಭಾಗಿಸಿದರೆ ಶೇಷ **9**, **9**ರಿಂದ ಭಾಗಿಸಿದರೆ ಶೇಷ **8**, **8**ರಿಂದ ಭಾಗಿಸಿದರೆ ಶೇಷ **7**, **7**ರಿಂದ ಭಾಗಿಸಿದರೆ ಶೇಷ **6**, **6**ರಿಂದ ಭಾಗಿಸಿದರೆ ಶೇಷ **5**, **5**ರಿಂದ ಭಾಗಿಸಿದರೆ ಶೇಷ **4**, **4**ರಿಂದ ಭಾಗಿಸಿದರೆ ಶೇಷ **3**, **3**ರಿಂದ ಭಾಗಿಸಿದರೆ ಶೇಷ **2**, **2**ರಿಂದ ಭಾಗಿಸಿದರೆ ಶೇಷ **1** ಉಳಿಯುವುದು. ಭಾಗಿಸಿ ನೋಡಿ ಖಾತ್ರಿ ಮಾಡಿ.

ಡಣ್ಣ ಚಿಕ್ಕು ಕೇಶ್ರಪ್ಪು ಕಥೆಯ — ಏಲಿಯನ್ ಬಂತು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಡ್ರೋನ್ ಹಾರಿಸುತ್ತಿದ್ದ. ಆ ಸಂದರ್ಭದಲ್ಲಿ ಆಕಾಶದಲ್ಲಿ ನೀಲಿ ಮೋಡಗಳ ನಡುವೆ ಹಾರುವ ತಟ್ಟೆಯಂಥ ವಸ್ತುವೊಂದು ಕಂಡಂತೆ ಆತನಿಗೆ ಅನಿಸಿತು. ನೋಡ ನೋಡುತ್ತಿದ್ದಂತೆಯೇ ಡ್ರೋನ್ ಆ ನೀಲಿ ಮೋಡದ ಒಳಗೆ ಮರೆಯಾಯಿತು. ಡ್ರೋನ್ ಎಲ್ಲಿ ಹೋಯಿತು ಎಂದು ಗುಂಡ ಹುಡುಕುತ್ತಿರುವಾಗಲೇ, ಡ್ರೋನ್ ಮೇಲೆ ಕುಳಿತು ಅನ್ಯಗ್ರಹ ಜೀವಿಯೊಂದು ಗುಂಡನತ್ತ ಹಾರಿಬಂತು. ಇದನ್ನು ಕಂಡ ಗುಂಡ ಗಾಬರಿಯಲ್ಲಿ ಕಿರುಚುತ್ತಾ ಅಲ್ಲಿಂದ ಓಡಿದ...

ಮೋENGLISHನ

ಇಲ್ಲಿ ಆರಂಭದ ಅಕ್ಷರ ಹಾಗೂ ಕೊನೆಯ ಅಕ್ಷರ ಒಂದೇ ಆಗಿರುವ 10 ಪದಗಳನ್ನು ಪತ್ತೆ ಹಚ್ಚಿ. (ಶಬ್ದದಲ್ಲಿ ಎಷ್ಟು ಅಕ್ಷರಗಳಾದರೂ ಇರಲಿ)

1	A		A
2	B		B
3	C		C
4	D		D
5	G		G
6	H		H
7	K		K
8	L		L
9	M		M
10	R		R

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಜವಾರಿತಳಿ 2.ಜೀವನಶೈಲಿ 3.ಹೊಸತೆರಿಗೆ 4.ಅನಾಗರಿಕ 5.ತೂಕದಮಾತು

ಪದರಚನಾ ಕಸರತ್ತು: 1.ಸರ್ದಾರ 2.ಸರ್ಕಾರ 3.ಸಮರ 4.ಸವಾರ 5.ಸದರ 6.ಕೇಸರ 7.ನೇಸರ 8.ಆಸರ 9.ಕೀಸರ 10.ಬೇಸರ 11.ಸರತಿ 12.ಸರಕು 13.ಸರಳ 14.ಸರಣಿ 15.ಸರಗಿ

ಸೋಪಿನ ಹೆಸರು: LIRIL




ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಆರಾಧ್ಯ ಎಚ್.
ಸಿಂಧನೂರು



ಶುಜಾ
ಕೆ.ಆರ್. ಪೇಟೆ.



ಲಕ್ಷಿತ್ ಜಿ.ಎನ್.
ಮೈಸೂರು



ವಿಕಾಸ್ ಕಂದಕೂರ
ಕೊಪ್ಪಳ



ಸಮನ್ವಿತ ಬಿ. ಸರಾಫ
ನರಗುಂದ



ಚಿನ್ಮಯಿ ಆರ್.
ಮೈಸೂರು

ಇಂಡೋನೇಷ್ಯಾದ ಬಾಲಿ ಮತ್ತು ನುಸಾ ಪೆನಿಡ ದ್ವೀಪಗಳಲ್ಲಿ ಎದ್ದು ಕಾಣುವ ಮೇರು ಗೋಪುರಗಳು ಹಾಗೂ ಚಾಂದಿ ಬೆಂತಾರುಗಳ ಆಕರ್ಷಣೆಗೆ ಸೋಲದ ಮನಸ್ಸುಗಳೇ ಇಲ್ಲ! ಅವುಗಳ ರಚನೆ ಮತ್ತು ಹಿಂದಿರುವ ಹಿಂದೂ ಮತ್ತು ಬೌದ್ಧ ಧರ್ಮೀಯರ ನಂಬಿಕೆಗಳು ಸ್ವಾರಸ್ಯಕರವಾಗಿವೆ.

ಮೋಹಕ ಮೇರು ಚಾಂದಿ ಬೆಂತಾರು



ಬಾಲಿಯ ದೇವಸ್ಥಾನವೊಂದರ ಮಹಾದ್ವಾರ



ಉಲುನ್ ದಾನು ಬ್ರಟಾನ್ ಮೇರು ಗೋಪುರ

ಎಚ್. ಎಸ್. ನಂದಕುಮಾರ್

ಇಂಡೋನೇಷ್ಯಾದ ಬಾಲಿ ಮತ್ತು ನುಸಾ ಪೆನಿಡ ದ್ವೀಪಗಳು ಅಸಾಧಾರಣ ಪ್ರಕೃತಿ ಸೌಂದರ್ಯ, ಕಣ್ಮನ ಸೆಳೆಯುವ ದೇವಾಲಯಗಳು, ಆಕರ್ಷಕ ಕುಟುಂಬ ದೇವಾಲಯಗಳು, ಸೌಧಗಳು, ಭವನಗಳಿಂದ ಪ್ರವಾಸಿಗರ ನೆಚ್ಚಿನ ತಾಣಗಳಾಗಿವೆ. ಇವೆಲ್ಲಕ್ಕೂ ಕಳಶಪ್ರಾಯದಂತಿರುವ ಅತ್ಯಾಕರ್ಷಕ 'ಮೇರು ಗೋಪುರ'ಗಳು ಹಾಗೂ 'ಚಾಂದಿ ಬೆಂತಾರು'ಗಳು ಈ ದ್ವೀಪಗಳ ಪ್ರಮುಖ ಆಕರ್ಷಣೆಗಳು.

ಹಿಂದೂ ಹಾಗೂ ಬೌದ್ಧ ಪುರಾಣಗಳಲ್ಲಿ ದೇವತೆಗಳು 'ಮಹಾ ಮೇರು ಪರ್ವತ'ದಲ್ಲಿ ವಾಸಿಸುತ್ತಾರೆ ಎಂಬ ನಂಬಿಕೆಯಿದೆ. ಈ ಮಹಾ ಮೇರು ಪರ್ವತವನ್ನು ಸಂಕೇತಿಸುವ ಮೇರು ಗೋಪುರಗಳನ್ನು ಇಂಡೊನೇಷ್ಯಾದ ಬಾಲಿ ದ್ವೀಪದ ಎಲ್ಲಾ ದೇವಸ್ಥಾನಗಳು ಹಾಗೂ ಕೆಲವೊಂದು ಕುಟುಂಬ ದೇವಾಲಯಗಳಲ್ಲಿ ನಿರ್ಮಿಸಿದ್ದಾರೆ. ಈ ಮೇರು ಗೋಪುರ ಉತ್ತರ ಹಾಗೂ ದಕ್ಷಿಣ ಭಾರತದ ದೇವಾಲಯಗಳಲ್ಲಿ ಕಂಡು ಬರುವ 'ಶಿಖರ' ಹಾಗೂ 'ವಿಮಾನ'ಗಳ ಶೈಲಿಯನ್ನು ಹೋಲುತ್ತದೆ. ಇಟ್ಟಿಗೆ ಹಾಗೂ ಗಾರೆ ಅಥವಾ ಕಲ್ಲಿನ ಚೌಕಾಕಾರದ ತಳಪಾಯದ ಮೇಲೆ ಒಂದರ ಮೇಲೆ ಒಂದರಂತೆ 1,3,5,7,9,11ರ ಬೆಸಸಂಖ್ಯೆಯಲ್ಲಿರುವ ಹಾಗೂ ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗುವ ಮರದ ಚೌಕಟ್ಟಿನಲ್ಲಿ ನಿರ್ಮಿಸಿರುವ ಸಕ್ಕರೆ ತಾಳೆ ಹುಲ್ಲಿನ ಮಾಡುಗಳ 'ಮೇರು ಗೋಪುರಗಳು' ದೈವತ್ವದ ಪ್ರತೀಕವೆಂದು ಇಲ್ಲಿನ ನಿವಾಸಿಗಳ ನಂಬಿಕೆ. ಕಡು ಕಪ್ಪು ಬಣ್ಣದ ಹುಲ್ಲಿನ ಮಾಡುಗಳಿಂದಾಗಿ ಈ ಮೇರು ಗೋಪುರಗಳಿಗೆ ವಿಶಿಷ್ಟವಾದ ಹಾಗೂ ಅತ್ಯಂತ ಸೊಗಸಾದ ಹೊರನೋಟವಿದೆ. ಫಕ್ಕನೆ ನೋಡಿದಾಗ ಈ ಹುಲ್ಲಿನ ಮಾಡುಗಳು ತಲೆಕೂದಲಿಗೆ ಮಾಡಿದ 'ಮಶ್ರೂಮ್ ಕಟ್'ನಂತೆ ಕಾಣುತ್ತವೆ.

ಇವುಗಳಲ್ಲಿರುವ ಮಹಡಿಯ ಸಂಖ್ಯೆ ಯಾವ ಹಿಂದೂ ದೇವರಿಗೆ, ಸ್ಥಳೀಯ ದೇವತೆಗಳಿಗೆ ಹಾಗೂ ಪೂರ್ವಜರ ಪವಿತ್ರಾತ್ಮಗಳಿಗೆ ಅರ್ಪಿತವಾಗಿದೆಯೋ ಆ ದೇವರ, ಪವಿತ್ರಾತ್ಮಗಳ ಪ್ರಾಮುಖ್ಯತೆ ಹಾಗೂ ಸ್ಥಾನಮಾನವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಮೂರು ಅಂತಸ್ತಿನ ಗೋಪುರಗಳು ಪೂರ್ವಜರ ಪವಿತ್ರಾತ್ಮಗಳಿಗೆ, ಗ್ರಾಮ ದೇವತೆಗಳಿಗೆ ಹಾಗೂ 15-16ನೇ ಶತಮಾನದಲ್ಲಿದ್ದ ಬಾಲಿಯ ಹಿಂದೂಗಳ ಸರ್ವೋಚ್ಚ ಧಾರ್ಮಿಕ ನಾಯಕನೆಂದು ಪರಿಗಣಿಸಲ್ಪಟ್ಟಿರುವ 'ಡ್ಯಾಂಗ್ಹ್ಯಾಂಗ್ ನಿರ್ಥನಿ'ಗೆ, ಐದು ಅಂತಸ್ತಿನ ಗೋಪುರಗಳು ಮೌಂಟ್ ಅಗುಂಗ್ ಪರ್ವತದ ದೇವತೆ 'ಭತಾರ ಮಹಾಜಯ' ದೇವತೆಗೆ ಹಾಗೂ ಹನ್ನೊಂದು ಅಂತಸ್ತಿನ ಗೋಪುರಗಳು ತ್ರಿಮೂರ್ತಿಗಳಾದ 'ಬ್ರಹ್ಮ, ವಿಷ್ಣು, ಶಿವ'ರಿಗೆ ಮೀಸಲಾಗಿವೆ.



ಕುಟುಂಬ ದೇವಾಲಯವೊಂದರಲ್ಲಿನ ಮೇರು ಗೋಪುರ

'ಪೆಲಿಂಗಿಸ್' ಎಂದು ಕರೆಯಲ್ಪಡುವ ಗೋಪುರದ ತುತ್ತತುದಿಯಲ್ಲಿ ಅದು ಯಾವ ದೇವತೆ, ಪೂರ್ವಜರಿಗೆ ಅರ್ಪಿತವಾಗಿದೆಯೋ ಆ ದೇವರ, ಪೂರ್ವಜರ ಇರುವನ್ನು ಸೂಚಿಸುವ ಸಾಮಗ್ರಿಗಳು ಅಥವಾ ವಿಗ್ರಹಗಳನ್ನು ಇರಿಸಿರುತ್ತಾರೆ. ಈ ಗೋಪುರಗಳಲ್ಲಿ ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಪೂರ್ವಜರು, ದೇವತೆಗಳು ಇಲ್ಲಿ ತಂಗುತ್ತಾರೆ ಹಾಗೂ ಇವು ಅವರ ತಾತ್ಕಾಲಿಕ ಅರಮನೆಗಳೆಂದು ಬಾಲಿಯ ಹಿಂದೂಗಳ ನಂಬಿಕೆಯಾಗಿದೆ. ಆದ್ದರಿಂದ ಬಾಲಿಯ ಹಿಂದೂಗಳ ಧಾರ್ಮಿಕ ಕಾರ್ಯಕ್ರಮಗಳು, ಆಚರಣೆಗಳ ಸಂದರ್ಭದಲ್ಲಿ ಈ ಮೇರು ಗೋಪುರಗಳು ಕೇಂದ್ರಬಿಂದು.

ಈ ಮೇರು ಗೋಪುರಗಳ ನಿರ್ಮಾಣದಲ್ಲಿ ಹಿಂದೂ, ಬೌದ್ಧ ಮತಗಳ ಪ್ರಭಾವ ಅಧಿಕವಾಗಿದೆ. ಇದಕ್ಕೆ ಕಾರಣ ಸುಮಾರು 1ನೇ ಶತಮಾನದಿಂದಲೇ ಭಾರತೀಯ ನಾವಿಕರು, ವಿದ್ವಾಂಸರು, ವ್ಯಾಪಾರಿಗಳು ಅದರಲ್ಲೂ ತಮಿಳುನಾಡಿನ ವ್ಯಾಪಾರಿಗಳು ಈಗಿನ ಇಂಡೊನೇಷ್ಯಾಕ್ಕೆ ವ್ಯಾಪಾರ, ವ್ಯವಹಾರಗಳ ಸಲುವಾಗಿ ಭೇಟಿ ನೀಡಲು ಪ್ರಾರಂಭಿಸಿದ್ದರು. ಹಾಗೆ ಹೋದ ನಾವಿಕರು, ವ್ಯಾಪಾರಿಗಳು ತಮ್ಮೊಂದಿಗೆ ತಮ್ಮ ಧಾರ್ಮಿಕ ನಂಬಿಕೆ, ಆಚರಣೆಗಳು ಹಾಗೂ ದೇವರುಗಳನ್ನೂ ತೆಗೆದುಕೊಂಡು ಹೋದರು. ಹೀಗೆ ಬೌದ್ಧ ಧರ್ಮ ಹಾಗೂ ಹಿಂದೂ ಧರ್ಮ ಇಂಡೊನೇಷ್ಯಾ ಪ್ರವೇಶಿಸಿದವು.

ಈ ಧರ್ಮಗಳಿಗೆ ಇಂಡೊನೇಷ್ಯಾದ 'ಮಾತರಮ್', 'ಸಿಂಘಸಾರಿ', 'ಶ್ರೀ ವಿಜಯ' ಮುಂತಾದ ರಾಜಮನೆತನಗಳ ರಾಜಾಶ್ರಯವೂ ದೊರೆಯಿತು. ಅಂತೆಯೇ ಈಗ ಇಂಡೊನೇಷ್ಯಾದ ಭಾಗವಾದ ಪ್ರದೇಶಗಳೊಂದಿಗೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯೂ ಸಹ ಆಗಿನಿಂದಲೇ ಪ್ರಾರಂಭವಾಗಿತ್ತು. ಸುಮಾರು 9ನೇ ಶತಮಾನದ ಹೊತ್ತಿಗಾಗಲೇ ಬಾಲಿ ದ್ವೀಪದಲ್ಲಿ ಹಿಂದೂ ಧರ್ಮ ಬಲವಾಗಿ ಬೇರೂರಿತ್ತು. ಹೀಗಾಗಿ ಬಾಲಿ ಜನರ ಆಚರಣೆಗಳು, ದೇವಾಲಯಗಳ ನಿರ್ಮಾಣ, ಕಟ್ಟಡ, ಭವನಗಳ ವಾಸ್ತುಶಿಲ್ಪ ಮುಂತಾದ ಎಲ್ಲಾ ಚಟುವಟಿಕೆಗಳಲ್ಲೂ ಹಿಂದೂ ಧರ್ಮದ ಪ್ರಭಾವ ಗಾಢವಾಗಿತ್ತು. ಸುಮಾರು 13ನೇ ಶತಮಾನದಿಂದ 16ನೇ ಶತಮಾನದ ಕೊನೆಯವರೆಗೆ ಇಂಡೊನೇಷ್ಯಾದ ಭಾಗವಾಗಿರುವ ಪ್ರದೇಶಗಳು ಹಿಂದೂ/ಬೌದ್ಧ ಧರ್ಮಾವಲಂಬಿಗಳಾಗಿದ್ದ 'ಮಜಾಪಹಿತ್' ರಾಜಮನೆತನದ ಆಡಳಿತದಲ್ಲಿದ್ದವು. ಆ ಸಮಯದಲ್ಲಿ ಈ ಮೇರು ಗೋಪುರಗಳ ರಚನೆಗೆ ಸ್ಪಷ್ಟವಾದ ರೂಪುರೇಷೆ ನೀಡಲಾಯಿತು. ಮಜಾಪಹಿತ್ ಆಡಳಿತ ಕೊನೆಗೊಂಡ ಮೇಲೂ ಈ ಮೇರು ಗೋಪುರಗಳ ನಿರ್ಮಾಣವು ಅಭಿವೃದ್ಧಿ ಹೊಂದುತ್ತಲೇ ಹೋಗಿ ಈಗ ಸುಂದರ ಕಾಷ್ಠಶಿಲ್ಪದೊಂದಿಗೆ ಬಾಲಿಯ ಎಲ್ಲಾ ಕುಟುಂಬ ದೇವಾಲಯಗಳ, ಸಾರ್ವಜನಿಕ ದೇವಾಲಯಗಳ ಅದರಲ್ಲೂ ಮುಖ್ಯವಾಗಿ 'ಬೆಸಾಕಿಹ್', 'ತಮನ್ ಅಯೂನ್', 'ಉಲುನ್ ದಾನು ಬ್ರಟಾನ್' ಮುಂತಾದ ದೇವಾಲಯಗಳಲ್ಲಿ ಪ್ರಮುಖ ಆಕರ್ಷಣೆಗಳಾಗಿವೆ.

ಚೆಲುವಿನ ಚಾಂದಿ ಬೆಂತಾರು

ಪ್ರವಾಸದ ವೇಳೆ ನಮ್ಮನ್ನು ಬಹುವಾಗಿ ಆಕರ್ಷಿಸಿದ ಇನ್ನೊಂದು ನಿರ್ಮಿತಿ 'ಚಾಂದಿ ಬೆಂತಾರು'. ಒಂದು ಕಲಾತ್ಮಕ ದ್ವಾರವನ್ನು ಮೇಲಿಂದ ಕೆಳಗೆ ಲಂಬವಾಗಿ ಸೀಳಿ, ಮಧ್ಯ ಓಡಾಡಲು ಜಾಗ ಬಿಟ್ಟು ಒಂದರ ಎದುರು ಇನ್ನೊಂದನ್ನು ಇಟ್ಟಂತೆ ಕಾಣುವ ಅನನ್ಯ ಆಕರ್ಷಣೆ ಈ 'ಚಾಂದಿ ಬೆಂತಾರು'. ಇದು 'ವಿಭಜಿತ ದ್ವಾರ'. ದೇವಾಲಯಗಳ, ಕೆಲವೊಂದು ಕುಟುಂಬ ದೇವಾಲಯಗಳ, ಅರಮನೆಗಳ, ಸೌಧ/ಭವನಗಳ ಹಾಗೂ ಸ್ಮಶಾನಗಳ ಎದುರಿನಲ್ಲಿ ಪ್ರವೇಶದ್ವಾರದಂತೆ ನಿರ್ಮಿಸಲಾಗಿದೆ. ಈ ವಿಭಜಿತ ದ್ವಾರಗಳು ಮನುಷ್ಯರ ಭೌತಿಕ ಪ್ರಪಂಚದಿಂದ ಆಧ್ಯಾತ್ಮಿಕ ಪ್ರಪಂಚಕ್ಕೆ ಇರುವ ಕೊಂಡಿಗಳು. ಇವುಗಳ ಮೂಲಕ ಹಾದುಹೋಗುವ ಮುನ್ನ ಎಲ್ಲಾ ಪ್ರಾಪಂಚಿಕ ಮನೋವ್ಯಾಪಾರವನ್ನು ಹೊರಗೇ ಬಿಟ್ಟು ಅಂತರಂಗ ಶುದ್ಧಿಯೊಂದಿಗೆ ಆಧ್ಯಾತ್ಮಿಕ ಚಿಂತನೆ ಮಾಡಬೇಕು ಎಂಬುದನ್ನು ವಿಭಜಿತ ದ್ವಾರಗಳು ಸೂಚಿಸುತ್ತವೆ ಎನ್ನುವುದು ಬಾಲಿ ಹಾಗೂ ಜಾವಾ ದ್ವೀಪದ ಹಿಂದೂಗಳ ನಂಬಿಕೆ. ಹಾಗಾಗಿ ಚಾಂದಿ ಬೆಂತಾರುಗಳು ಬಾಲಿ ದ್ವೀಪವಾಸಿಗಳ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳ ಪ್ರಭಾವ ಇಲ್ಲಿ ಎಷ್ಟಿದೆ ಎಂದರೆ ಇಂಡೊನೇಷ್ಯಾದ ಕೆಲವೊಂದು ಮಸೀದಿಗಳ ಮುಂದೆಯೂ ಈ ವಿಭಜಿತ ದ್ವಾರಗಳನ್ನು ನಿರ್ಮಿಸಿದ್ದಾರೆ! ಈಗ ಇಂಡೊನೇಷ್ಯಾದ ಸರ್ಕಾರ ಪ್ರಾಂತೀಯ ಅಸ್ಮಿತೆಯನ್ನು ಉಳಿಸುವ ಸಲುವಾಗಿ ಈ ವಿಭಜಿತ ದ್ವಾರಗಳನ್ನು ನಿರ್ಮಿಸಲು ಪ್ರೋತ್ಸಾಹ ನೀಡುತ್ತಿದೆ.

ಕಪ್ಪು, ಕೆಂಪು ಶಿಲೆಗಳು, ಇಟ್ಟಿಗೆ ಹಾಗೂ ಗಾರೆಯಿಂದಲೂ ನಿರ್ಮಿಸಿರುವ ಚಾಂದಿ ಬೆಂತಾರುಗಳ ಮಧ್ಯದ ಭಾಗ ಯಾವ ಕೆತ್ತನೆಗಳೂ ಇಲ್ಲದೆ ಸಪಾಟಾಗಿರುತ್ತದೆ. ಬದಿಯ ಭಾಗಗಳು ಬಹಳ ಸಂಕೀರ್ಣವಾದ ಕಲಾತ್ಮಕ ಕೆತ್ತನೆಗಳಿಂದ ಕಣ್ಮನ ಸೆಳೆಯುತ್ತವೆ. ಇಲ್ಲಿ ಭಯ ಹುಟ್ಟಿಸುವ ದೈತ್ಯರಂತೆ ಕಾಣುವ ಪುರಾಣ ಪುರುಷರು, ದೇವತೆಗಳ ಕೆತ್ತನೆಗಳೂ ಇವೆ. ಇವು ದ್ವಾರಪಾಲಕರಂತೆ ದುಷ್ಟಶಕ್ತಿಗಳಿಂದ, ರಾಕ್ಷಸರಿಂದ ರಕ್ಷಣೆ ನೀಡುತ್ತವೆ. ದ್ವಾರದ ಎರಡು ಭಾಗಗಳು ಕತ್ತಲೆ-ಬೆಳಕಿನ ಪ್ರತೀಕ ಎಂದು ಬಾಲಿಯ ಹಿಂದೂಗಳು ನಂಬುತ್ತಾರೆ. ಇದು ಕಾಲ್ಪನಿಕ ಮೇರು ಪರ್ವತದ ಎರಡು ಭಾಗಗಳನ್ನು ಪ್ರತಿನಿಧಿಸುತ್ತದೆ ಎಂಬುದು ಇನ್ನೊಂದು ನಂಬಿಕೆ. ಆದರೆ ಕೆಲವು ವಿದ್ವಾಂಸರ ಪ್ರಕಾರ ಇದು ಕೇವಲ ದೇವಾಲಯಗಳ, ಅರಮನೆಗಳ, ಕುಟುಂಬ ದೇವಾಲಯಗಳ ಸೌಂದರ್ಯ ಹೆಚ್ಚಿಸಲು ನಿರ್ಮಿಸಿದ ವಿಭಜಿತ ದ್ವಾರಗಳಾಗಿವೆ.

ಅದು ಏನೇ ಇರಲಿ, ಈ ಚಾಂದಿ ಬೆಂತಾರುಗಳು ಬಾಲಿಯ ಎಲ್ಲಾ ದೇವಾಲಯಗಳು, ಕುಟುಂಬ ದೇವಾಲಯಗಳು, ಸೌಧ/ಭವನಗಳ ಚೆಲುವನ್ನು ಇಮ್ಮಡಿಗೊಳಿಸಿ ಪ್ರವಾಸಿಗರನ್ನು ಸೆಳೆಯುತ್ತಿವೆ.



ಕೃಣಾಲ್ ಕೈಚಳಕ • ಸಾಲ್ಟ್, ಕೊಹ್ಲಿ ಅಜೇಯ ಅರ್ಧಶತಕ • ರಜತ್ ಮಿಂಚು

ಕೋಲ್ಕತ್ತ 'ಚಾಲೆಂಜ್' ಗೆದ್ದ ಬೆಂಗಳೂರು



ಆರ್‌ಸಿಬಿ ತಂಡದ ಕೃಣಾಲ್ ಪಾಂಡ್ಯ

ಆರ್‌ಸಿಬಿಯ ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಜೊತೆಯಾಟ – ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ರಜತ್ ಪಾಟೀದಾರ್ ನಾಯಕತ್ವದಲ್ಲಿ ಮೊದಲ ಪಂದ್ಯವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಈಡನ್ ಗಾರ್ಡನ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಬಳಗವು 7 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಆಘಾತ ನೀಡಿತು.

175 ರನ್‌ಗಳ ಗುರಿ ಬೆನ್ನಟ್ಟಿದ್ದ ತಂಡವು ವಿರಾಟ್ ಕೊಹ್ಲಿ ಅಜೇಯ ಅರ್ಧಶತಕ ಮತ್ತು ಫಿಲ್ ಸಾಲ್ಟ್ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಸುಲಭವಾಗಿ ಜಯಿಸಿತು. ಪಂದ್ಯ ಮುಗಿದಾಗ ಇನಿಂಗ್ಸ್‌ನಲ್ಲಿ 22 ಎಸೆತಗಳು ಬಾಕಿ ಇದ್ದವು. ವಿರಾಟ್ (ಔಟಾಗದೇ 59; 36ಎ, 4X4, 6X3) ಮತ್ತು ಫಿಲ್ ಸಾಲ್ಟ್ (56; 31ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 95 (50ಎಸೆತ) ರನ್ ಸೇರಿಸಿದರು. ಸತತ 18ನೇ ಆವೃತ್ತಿಯ ಟೂರ್ನಿ ಆಡುತ್ತಿರುವ ವಿರಾಟ್ 56ನೇ ಅರ್ಧಶತಕ ದಾಖಲಿಸಿದರು.

ಈ ಬಾರಿ ಬೆಂಗಳೂರು ತಂಡಕ್ಕೆ ಸೇರ್ಪಡೆ ಯಾಗಿರುವ ಸಾಲ್ಟ್ ಅವರು ಉತ್ತಮ ಆರಂಭ ನೀಡಿದರು. ಕೆಕೆಆರ್ ತಂಡದ 'ಟ್ರಂಪ್ ಕಾರ್ಡ್' ವರುಣ್ ಚಕ್ರವರ್ತಿ ಸೇರಿದಂತೆ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. 9ನೇ ಓವರ್‌ನಲ್ಲಿ ಸಾಲ್ಟ್ ಅವರ ವಿಕೆಟ್ ಗಳಿಸುವಲ್ಲಿ ಚಕ್ರವರ್ತಿ ಯಶಸ್ವಿಯಾದರು.

ಇಂಗ್ಲೆಂಡ್ ಆಟಗಾರ ಸಾಲ್ಟ್ 9 ಬೌಂಡರಿ ಮತ್ತು 2 ಸಿಕ್ಸರ್ ಹೊಡೆದರು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ದೇವದತ್ತ ಪಡಿಕ್ಕಲ್ ಒಂದು ಬೌಂಡರಿಯೊಂದಿಗೆ 10 ರನ್ ಹೊಡೆದರು. ಆದರೆ ಸುನಿಲ್ ನಾರಾಯಣ್ ಎಸೆತದಲ್ಲಿ ಔಟಾದರು.

ಕ್ರೀಸ್‌ಗೆ ಬಂದ ನಾಯಕ ರಜತ್ ನಿರ್ಭೀತಿಯಿಂದ ಬ್ಯಾಟ್ ಬೀಸಿದರು. ಕೊಹ್ಲಿ ತಮ್ಮ ಆಟಕ್ಕೆ ಅಲ್ಪವಿರಾಮ ನೀಡಿ ರಜತ್ ಆಟಕ್ಕೆ ಅನುವು ಮಾಡಿಕೊಟ್ಟರು.

ಹರ್ಷಿತ್ ರಾಣಾ ಅವರ ಒಂದೇ ಓವರ್‌ನಲ್ಲಿ 4 ಬೌಂಡರಿಗಳನ್ನು ಚಚ್ಚಿದ ರಜತ್ ತಂಡವನ್ನು ಗೆಲುವಿನ ಸನಿಹ ತಂದರು. ಅವರು ಔಟಾದ ನಂತರ ವಿರಾಟ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ (ಔಟಾಗದೇ 15; 5ಎಸೆತ, 4X2, 6X1) ತಂಡವನ್ನು ಜಯದ ದಡ ಸೇರಿಸಿದರು.

ಕೃಣಾಲ್ ಸ್ಪಿನ್ ಅಜಿಂಕ್ಯ ಅರ್ಧಶತಕ : ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಈ ಬಾರಿ ಆರ್‌ಸಿಬಿ ತಂಡದಲ್ಲಿ ಸ್ಥಾನ ಪಡೆದಿರುವ ಎಡಗೈ ಸ್ಪಿನ್ನರ್ ಕೃಣಾಲ್ ಪಾಂಡ್ಯ (29ಕ್ಕೆ3) ಮಿಂಚಿದರು. ಅವರ ನಿಖರ ದಾಳಿಯಿಂದಾಗಿ ಕೋಲ್ಕತ್ತ ತಂಡಕ್ಕೆ ಬೃಹತ್ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 174 ರನ್ ಗಳಿಸಿತು. ಕೋಲ್ಕತ್ತ ತಂಡದ ನಾಯಕ ಅಜಿಂಕ್ಯ ರಹಾನೆ ಅರ್ಧಶತಕ (31 ಎಸೆತಗಳಲ್ಲಿ 56) ಗಳಿಸಿದರು. ಅವರು ಸುನಿಲ್ (26 ಎಸೆತಗಳಲ್ಲಿ 44 ರನ್) ಜೊತೆಗೂಡಿ 103 ರನ್ ಸೇರಿಸಿದರು. ಅಜಿಂಕ್ಯ ನಾಲ್ಕು ಭರ್ಜರಿ ಸಿಕ್ಸರ್ ಮತ್ತು ಅರ್ಧ ಡಜನ್ ಬೌಂಡರಿ ಗಳಿಸಿದರು.

ಅಜಿಂಕ್ಯ, ವೆಂಕಟೇಶ್ ಅಯ್ಯರ್ ಮತ್ತು ರಿಂಕು ಸಿಂಗ್ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡ ಕೃಣಾಲ್ ಕೋಲ್ಕತ್ತದ ಓಟಕ್ಕೆ ಕಡಿವಾಣ ಹಾಕಿದರು.

ವಿರಾಟ್ ಕಾಲಿಗೆ ಬಿದ್ದ ಅಭಿಮಾನಿ: ಪಂದ್ಯದ ವೇಳೆ ಅಭಿಮಾನಿಯೊಬ್ಬ ರಕ್ಷಣಾ ಬೇಲಿಯನ್ನು ದಾಟಿ ಬ್ಯಾಟಿಂಗ್ ಮಾಡುತ್ತಿದ್ದ ವಿರಾಟ್ ಕೊಹ್ಲಿ ಅವರ ಕಾಲಿಗೆ ಎರಗಿದ. ನಂತರ ಆತನನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 8ಕ್ಕೆ174 (ಸುನಿಲ್ ನಾರಾಯಣ್ 44, ಅಜಿಂಕ್ಯ ರಹಾನೆ 56, ಅಂಗಕ್ರಿಷ್ ರಘುವಂಶಿ 30, ರಿಂಕು ಸಿಂಗ್ 12, ಜೋಶ್ ಹ್ಯಾಜಲ್‌ವುಡ್ 22ಕ್ಕೆ2, ಕೃಣಾಲ್ ಪಾಂಡ್ಯ 29ಕ್ಕೆ3). **ರಾಯಲ್ ಚಾಲೆಂಜರ್ಸ್ ಬೆಂಗಳೂರು:** 16.2 ಓವರ್‌ಗಳಲ್ಲಿ 3ಕ್ಕೆ177 (ಫಿಲಿಪ್ ಸಾಲ್ಟ್ 56, ವಿರಾಟ್ ಕೊಹ್ಲಿ ಔಟಾಗದೇ 59, ರಜತ್ ಪಾಟೀದಾರ್ 34, ಲಿಯಾಮ್ ಲಿವಿಂಗ್‌ಸ್ಟೋನ್ ಔಟಾಗದೇ 15, ವೈಭವ್ ಅರೋರಾ 41ಕ್ಕೆ1, ವರುಣ್ ಚಕ್ರವರ್ತಿ 43ಕ್ಕೆ1, ಸುನಿಲ್ ನಾರಾಯಣ್ 27ಕ್ಕೆ1)
ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 7 ವಿಕೆಟ್‌ಗಳ ಜಯ.
ಪಂದ್ಯದ ಆಟಗಾರ: ಕೃಣಾಲ್ ಪಾಂಡ್ಯ

ಮುಂಬೈ ತಂಡಕ್ಕೆ ಚೆನ್ನೈ ಸವಾಲು

ಚೆನ್ನೈ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ತಲಾ ಐದು ಸಲ ಪ್ರಶಸ್ತಿ ಜಯಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಭಾನುವಾರ ಮುಖಾಮುಖಿಯಾಗಲಿವೆ.

ಋತುರಾಜ್ ಗಾಯಕವಾಡ ನಾಯಕತ್ವದ ಚೆನ್ನೈ ತಂಡವು ತನ್ನ ಸ್ಪಿನ್ ವಿಭಾಗದ ಮೇಲೆ ಹೆಚ್ಚು ವಿಶ್ವಾಸ ಇಟ್ಟುಕೊಂಡಿದೆ. ರವೀಂದ್ರ ಜಡೇಜ ಅವರೊಂದಿಗೆ ಆಫ್‌ಸ್ಪಿನ್ ದಂತಕಥೆ ಆರ್. ಅಶ್ವಿನ್, ನೂರ್ ಅಹಮದ್, ಕನ್ನಡಿಗ ಶ್ರೇಯಸ್ ಗೋಪಾಲ್ ಮತ್ತು ದೀಪಕ್ ಹೂಡಾ ತಂಡದಲ್ಲಿದ್ದಾರೆ. ಆಲ್‌ರೌಂಡರ್ ರಚಿನ್ ರವೀಂದ್ರ ಕೂಡ ಇವರಿಗೆ ಜೊತೆ ನೀಡುತ್ತಾರೆ. ನಾಯಕ ಋತುರಾಜ್, ರಾಹುಲ್ ತ್ರಿಪಾಠಿ, ಡೆವೊನ್ ಕಾನ್ವೆ ಹಾಗೂ ಮಹೇಂದ್ರಸಿಂಗ್ ಧೋನಿ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಮುಂಬೈ ತಂಡದ ಬೌಲಿಂಗ್ ಶಕ್ತಿ ಜಸ್‌ಪ್ರೀತ್ ಬೂಮ್ರಾ ಕಣಕ್ಕಿಳಿಯುವುದು ಖಚಿತವಾಗಿಲ್ಲ. ನಾಯಕ ಹಾರ್ದಿಕ್ ಅವರು ಈ ಪಂದ್ಯದಲ್ಲಿ ಆಡುತ್ತಿಲ್ಲ. ಹೋದ ವರ್ಷದ ಟೂರ್ನಿಯ 3 ಪಂದ್ಯಗಳಲ್ಲಿ ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಮುಗಿಸದ ಕಾರಣ ಒಂದು ಪಂದ್ಯದ ಅಮಾನತು ಶಿಕ್ಷೆಗೆ ಒಳಗಾಗಿದ್ದರು. ಅದು ಈ ಪಂದ್ಯದಲ್ಲಿ ಜಾರಿಯಾಗಲಿದೆ. ಸೂರ್ಯಕುಮಾರ್ ಯಾದವ್ ನಾಯಕತ್ವ ವಹಿಸುವರು. ಇದರಿಂದಾಗಿ ಕಿವೀಸ್ ವೇಗಿ ಟ್ರೆಂಟ್ ಬೌಲ್ಟ್, ದೀಪಕ್ ಚಾಹರ್ ಅವರ ಮೇಲೆ ಅವಲಂಬಿತವಾಗಬಹುದು. ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಪ್ರಮುಖರಾಗಿದ್ದಾರೆ. ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ. ಸೂರ್ಯ, ರೋಹಿತ್, ತಿಲಕ್ ವರ್ಮಾ, ರಿಯಾನ್ ರಿಕೆಲ್ಟನ್ ಅವರು ಅಬ್ಬರಿಸುವ ನಿರೀಕ್ಷೆ ಇದೆ.



ಮಹೇಂದ್ರ ಸಿಂಗ್ ಧೋನಿ –ಪಿಟಿಐ ಚಿತ್ರ

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್ ಸ್ಟಾರ್

ಸನ್‌ರೈಸರ್ಸ್–ರಾಯಲ್ಸ್ ಮುಖಾಮುಖಿ ಇಂದು

ಹೈದರಾಬಾದ್ (ಪಿಟಿಐ): ಉತ್ತಮ ಬ್ಯಾಟಿಂಗ್ ಲೈನ್‌ಅಪ್ ಮತ್ತು ಅನುಭವಿ ಬೌಲರ್‌ಗಳನ್ನು ಹೊಂದಿರುವ ಹಾಲಿ ರನ್ನರ್ಸ್ ಅಪ್ ಸನ್‌ರೈಸರ್ಸ್ ಹೈದರಾಬಾದ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್‌ನ 18ನೇ ಆವೃತ್ತಿಯಲ್ಲಿ ಭಾನುವಾರ ರಾಜಸ್ಥಾನ ರಾಯಲ್ಸ್ ವಿರುದ್ಧ ತವರಿನಲ್ಲಿ ಅಭಿಯಾನ ಆರಂಭಿಸಲಿದೆ.

ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರಂತಹ ಸ್ಫೋಟಕ ಬ್ಯಾಟ್ಸ್‌ಮನ್‌ಗಳನ್ನು ಒಳಗೊಂಡ ಆತಿಥೇಯ ತಂಡವು ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬೃಹತ್ ಮೊತ್ತವನ್ನು ಗಳಿಸುವ ನಿರೀಕ್ಷೆಯಿದೆ. ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಗಾಯದಿಂದ ಚೇತರಿಸಿಕೊಂಡಿರುವುದು ತಂಡದ ಬಲ ಹೆಚ್ಚಿಸಿದೆ. ಅನುಭವಿ ವೇಗಿಗಳಾದ ನಾಯಕ ಪ್ಯಾಟ್ ಕಮಿನ್ಸ್, ಮೊಹಮ್ಮದ್ ಶಮಿ, ಸ್ಪಿನ್ನರ್ ಆ್ಯಡಂ ಜಂಪಾ ಅವರು ಬೌಲಿಂಗ್ ವಿಭಾಗದ ಪ್ರಮುಖ ಅಸ್ತ್ರವಾಗಿದ್ದಾರೆ.

ರಾಜಸ್ಥಾನ ತಂಡವನ್ನು ಮೊದಲ ಮೂರು ಪಂದ್ಯಗಳಲ್ಲಿ ರಿಯಾನ್ ಪರಾಗ್ ಮುನ್ನಡೆಸಲಿದ್ದಾರೆ. ಗಾಯದಿಂದ ಚೇತರಿಸಿಕೊಂಡಿರುವ ಕಾಯಂ ನಾಯಕ ಸಂಜು ಸ್ಯಾಮ್ಸನ್ ಸಂಜು ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದರೆ ಆಶ್ಚರ್ಯ ವಿಲ್ಲ. ಇಂಗ್ಲೆಂಡ್‌ನ ಜೋಸ್ ಬಟ್ಲರ್ ಅವರನ್ನು ತಂಡದಿಂದ ಬಿಡುಗಡೆ ಮಾಡಿರುವುದರಿಂದ ಬ್ಯಾಟಿಂಗ್ ಬಲ ಕೊಂಚ ಕಡಿಮೆಯಾಗಿದೆ. ಹೀಗಾಗಿ, ಶಿಮ್ರಾನ್ ಹೆಟ್ಮೆಯರ್, ಧ್ರುವ್ ಜುರೆಲ್, ನಿತೀಶ್ ರಾಣಾ ಮತ್ತು ಯಶಸ್ವಿ ಜೈಸ್ವಾಲ್ ಅವರ ಮೇಲೆ ಹೆಚ್ಚಿನ ನಿರೀಕ್ಷೆಯಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಎಲೀಟ್, ಪ್ಲೇಟ್ ಗುಂಪು

ಹಳೆ ಮಾದರಿಗೆ ಮರಳಿದ ದುಲೀಪ್ ಟ್ರೋಫಿ

ಕೋಲ್ಕತ್ತ (ಪಿಟಿಐ): ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯು ಮತ್ತೆ ಅಂತರ ವಲಯ ತಂಡಗಳ ಮಾದರಿಯಲ್ಲಿ ನಡೆಯಲಿದೆ. ಇದರೊಂದಿಗೆ ತನ್ನ ಹಳೆಯ ಸಾಂಪ್ರದಾಯಿಕ ಮಾದರಿಗೆ ಮರಳಲಿದೆ. ಆರು ವಲಯ ತಂಡಗಳು ಆಡಲಿವೆ.

ಹೋದ ವರ್ಷ ದುಲೀಪ್ ಟ್ರೋಫಿಯನ್ನು ಚಾಲೆಂಜರ್ ಟ್ರೋಫಿ ಮಾದರಿಯಲ್ಲಿ ನಡೆಸಲಾಗಿತ್ತು. ಆ ವರ್ಷದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರನ್ನು ಆಯ್ಕೆ ಮಾಡಿ ಎ,ಬಿ, ಸಿ ಮತ್ತು ಡಿ ತಂಡಗಳನ್ನಾಗಿ ರಚಿಸಲಾಗಿತ್ತು. ಈ ವರ್ಷ ಮತ್ತೆ ಹಳೆಯ ಮಾದರಿಗೆ ಮರಳಿದ್ದು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಕೇಂದ್ರ ಮತ್ತು ಈಶಾನ್ಯ ವಲಯ ತಂಡಗಳು ಆಡಲಿವೆ.

ಶನಿವಾರ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

1961–62 ರಿಂದ 2014–15ರವರೆಗಿನ ಅವಧಿಯಲ್ಲಿ ದುಲೀಪ್ ಟ್ರೋಫಿ ಟೂರ್ನಿಯು ಅಂತರ ವಲಯ ಟೂರ್ನಿ ಮಾದರಿಯಲ್ಲಿ ನಡೆದಿತ್ತು. 2015ರಲ್ಲಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥರಾಗಿ ನೇಮಕಗೊಂಡ ರಾಹುಲ್ ದ್ರಾವಿಡ್ ಅವರು ದುಲೀಪ್ ಟ್ರೋಫಿ ಟೂರ್ನಿಯನ್ನು ಚಾಲೆಂಜರ್ಸ್ ಟ್ರೋಫಿ ಮಾದರಿಯಲ್ಲಿ ಆಯೋಜಿಸಲು ಸಲಹೆ ನೀಡಿದ್ದರು. ಆ ಪ್ರಕಾರ ಇಂಡಿಯಾ ಬ್ಲ್ಯೂ, ರೆಡ್, ಗ್ರೀನ್ ತಂಡಗಳನ್ನು ಆಯ್ಕೆ ಮಾಡಲಾಗಿತ್ತು. ಈ ಮಾದರಿಯು 2019ರವರೆಗೂ ನಡೆಯಿತು.

ಕೋವಿಡ್ ಸಾಂಕ್ರಾಮಿಕದಿಂದಾಗಿ ದುಲೀಪ್ ಟ್ರೋಫಿ ಟೂರ್ನಿ 2020 ಮತ್ತು 2021ರಲ್ಲಿ ಆಯೋಜನೆಯಾಗಿರಲಿಲ್ಲ. 2022 ಮತ್ತು 2023ರಲ್ಲಿ ವಲಯ ಮಾದರಿಯಲ್ಲಿ ನಡೆದಿತ್ತು. ಆದರೆ ಹೋದ ವರ್ಷ ಮತ್ತೆ ಚಾಲೆಂಜರ್ಸ್ ಮಾದರಿಯಲ್ಲಿ ನಡೆದಿತ್ತು. ತಂಡಗಳನ್ನು ಎನ್‌ಸಿಎ ಆಯ್ಕೆ ಮಾಡಿತ್ತು. ಆದರೆ ದೇಶದಾದ್ಯಂತ ಆಟಗಾರರ ಸಂಖ್ಯೆ ಹೆಚ್ಚಿದೆ. ಎಲ್ಲ ರಾಜ್ಯದವರಿಗೂ ಪ್ರಾತಿನಿಧ್ಯ ಸಿಗಬೇಕು ಎಂಬ ಉದ್ದೇಶದಿಂದ ವಲಯವಾರು ತಂಡಗಳ ಮಾದರಿಗೆ ಮರಳಲು ಬಿಸಿಸಿಐ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಎಲೀಟ್, ಪ್ಲೇಟ್ ವಿಭಾಗ: ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಮತ್ತು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಗಳಲ್ಲಿ ಎಲೀಟ್ ಮತ್ತು ಪ್ಲೇಟ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು. ಒಟ್ಟು 38 ತಂಡಗಳು ಈ ಟೂರ್ನಿಗಳಲ್ಲಿ ಆಡುತ್ತವೆ. 2025–26ರ ಋತುವಿನಿಂದ ಈ ಪದ್ಧತಿ ಬರಲಿದೆ.

ಕಳೆದ ಋತುವಿನ ಟೂರ್ನಿಗಳಲ್ಲಿ ಕೊನೆಯ ಆರು ಸ್ಥಾನಗಳಲ್ಲಿರುವ ತಂಡಗಳು ಪ್ಲೇಟ್ ಗುಂಪಿನಲ್ಲಿ ಸೆಣಸಲಿವೆ. ಉಳಿದ ತಂಡಗಳು ಎಲೀಟ್ ಗುಂಪಿನಲ್ಲಿ ಆಡುತ್ತವೆ. ಈ ಗುಂಪಿನಲ್ಲಿ ಕೊನೆಯ ಸ್ಥಾನ ಪಡೆಯುವ ತಂಡವು ಪ್ಲೇಟ್ ಗುಂಪಿಗೆ ಇಳಿಯುತ್ತದೆ. ಅದೇ ಪ್ಲೇಟ್ ಗುಂಪಿನ ಚಾಂಪಿಯನ್ ತಂಡವು ಎಲೀಟ್ ಗುಂಪಿಗೆ ಬಡ್ತಿ ಪಡೆಯುತ್ತದೆ.

ಸ್ಕೋರರ್‌ಗೆ ಏಕರೂಪ ಸಂಭಾವನೆ: ಎಲ್ಲ ರಾಜ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಸ್ಕೋರರ್‌ಗಳಿಗೆ ಏಕರೂಪದ ಸಂಭಾವನೆ ನೀಡಲು ಮಂಡಳಿ ನಿರ್ಧರಿಸಿದೆ. ಆ ಪ್ರಕಾರ ದೇಶಿ ಮತ್ತು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಕಾರ್ಯನಿರ್ವಹಿಸುವ ಸ್ಕೋರರ್‌ಗಳಿಗೆ ₹15 ಸಾವಿರ (ದಿನವೊಂದಕ್ಕೆ) ನೀಡಲು ತೀರ್ಮಾನಿಸಿದೆ.

ಅಕ್ಟೋಬರ್‌ನಲ್ಲಿ ಭಾರತ–ವಿಂಡೀಸ್ ಟೆಸ್ಟ್ ಸರಣಿ

12 ವರ್ಷಗಳ ನಂತರ ವೆಸ್ಟ್ ಇಂಡೀಸ್ ತಂಡವು ಭಾರತದಲ್ಲಿ ಟೆಸ್ಟ್ ಸರಣಿ ಆಡಲಿದೆ. ಇದೇ ಅಕ್ಟೋಬರ್‌ನಲ್ಲಿ ವೆಸ್ಟ್ ಇಂಡೀಸ್ ತಂಡವು ಭಾರತಕ್ಕೆ ಆಗಮಿಸಲಿದ್ದು 2 ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಆಡಲಿದೆ. ನವೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ಕೂಡ ಭಾರತ ಪ್ರವಾಸ ಮಾಡಲಿದೆ. ಎಲ್ಲ ಮಾದರಿಗಳ ಸರಣಿಗಳಲ್ಲಿ ಆಡಲಿದೆ.

ವೆಸ್ಟ್ ಇಂಡೀಸ್ ತಂಡವು ಮೊಹಾಲಿ (ಅ.2ರಿಂದ) ಮತ್ತು ಕೋಲ್ಕತ್ತ (ಅ.10ರಿಂದ) ನಗರಗಳಲ್ಲಿ ಟೆಸ್ಟ್ ಪಂದ್ಯಗಳನ್ನು ಆಡಲಿದೆ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ತಿಳಿಸಿದ್ದಾರೆ.

2013–14ರಲ್ಲಿ ವಿಂಡೀಸ್ ಬಳಗವು ಭಾರತದಲ್ಲಿ ಟೆಸ್ಟ್ ಸರಣಿ ಆಡಿತ್ತು. ಅದು ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ವಿದಾಯದ ಸರಣಿ ಕೂಡ ಆಗಿತ್ತು. ದಕ್ಷಿಣ ಆಫ್ರಿಕಾ ತಂಡವು ಎರಡು ಟೆಸ್ಟ್, ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನುಆಡಲಿದೆ.

'ಭಾರತ–ದಕ್ಷಿಣ ಆಫ್ರಿಕಾ ತಂಡಗಳ ಮೊದಲ ಟೆಸ್ಟ್ ಪಂದ್ಯವು ದೆಹಲಿಯಲ್ಲಿ ಹಾಗೂ ಎರಡನೇ ಯದ್ದು ಗುವಾಹಟಿಯಲ್ಲಿ ನಡೆಯಲಿದೆ. ಗುವಾಹಟಿಯಲ್ಲಿ ನಡೆಯಲಿರುವ ಚೊಚ್ಚಲ ಟೆಸ್ಟ್ ಕೂಡ ಇದಾಗಲಿದೆ' ಎಂದು ಶುಕ್ಲಾ ತಿಳಿಸಿದರು.

ಅಭಿನಯಾಗೆ ಹೈಜಂಪ್ ಚಿನ್ನ

ಬೆಂಗಳೂರು: ಜೆಎಸ್‌ಡಬ್ಲ್ಯು ಪ್ರತಿನಿಧಿಸುತ್ತಿರುವ ಕರ್ನಾಟಕದ ಅಭಿನಯಾ ಎಸ್.ಶೆಟ್ಟಿ ಅವರು ನಾಲ್ಕನೇ ಇಂಡಿಯನ್ ಓಪನ್ ಜಂಪ್ಸ್ ಚಾಂಪಿಯನ್‌ಷಿಪ್ಸ್‌ನಲ್ಲಿ ಶನಿವಾರ ಹೈಜಂಪ್ ಚಿನ್ನ ಗೆದ್ದರು.

ಕೆಂಗೇರಿಯ ಅಂಜು ಬಾಬಿ ಸ್ಪೋರ್ಟ್ಸ್ ಹೈಪರ್ಫಾರ್ಮೆನ್ಸ್ ಸೆಂಟರ್‌ನಲ್ಲಿ ನಡೆದ ಈ ಕೂಟದಲ್ಲಿ ಅಭಿನಯಾ 1.80 ಮೀ. ಎತ್ತರ ಜಿಗಿದರು. ರೈಲ್ವೇಸ್‌ನ ಸುಪ್ರಿಯಾ ಎಸ್.ಬಿ. (1.74 ಮೀ.) ಮತ್ತು ಕರ್ನಾಟಕದ ಪಲ್ಲವಿ ಪಾಟೀಲ್ (1.74 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಪೋಲ್ ವಾಲ್ಟ್‌ನಲ್ಲಿ ಕರ್ನಾಟಕದ ಸಿಂಧುಶ್ರೀ ಜಿ (3.80 ಮೀ.) ಅಗ್ರಸ್ಥಾನ ಪಡೆದರು.

20 ವರ್ಷದೊಳಗಿನ ಬಾಲಕಿಯರ ವಿಭಾಗದ ಲಾಂಗ್ ಜಂಪ್‌ನಲ್ಲಿ ಕರ್ನಾಟಕದ ದೀಶಾ ಗಣಪತಿ ಚಿನ್ನ ಗೆದ್ದರು. 18 ವರ್ಷದೊಳಗಿನ ಬಾಲಕರ ಹೈಜಂಪ್‌ನಲ್ಲಿ ಕರ್ನಾಟಕದ ರೋಹಿತ್ ಕುಮಾರ್ (1.80 ಮೀ.) ಮೂರನೇ ಸ್ಥಾನ ಪಡೆದರು. ಇದೇ ವಯೋವರ್ಗದ ಬಾಲಕಿಯರ ಲಾಂಗ್‌ಜಂಪ್‌ನಲ್ಲಿ ಕರ್ನಾಟಕದ ದಿಶಾಶ್ರೀ ಎಲ್. 5.90 ಮೀ. ದೂರ ಜಿಗಿದು ಎರಡನೇ ಸ್ಥಾನ ಪಡೆದರು.



ಹೈಜಂಪ್ ಪದಕ ವಿಜೇತರು: (ಎಡದಿಂದ) ಮೂರನೇ ಸ್ಥಾನ ಪಡೆದ ಕರ್ನಾಟಕದ ಪಲ್ಲವಿ ಪಾಟೀಲ, ಮೊದಲ ಸ್ಥಾನ ಪಡೆದ ಜೆಎಸ್‌ಡಬ್ಲ್ಯುವಿನ ಅಭಿನಯಾ ಎಸ್‌.ಶೆಟ್ಟಿ ಮತ್ತು ಎರಡನೇ ಸ್ಥಾನ ಪಡೆದ ರೈಲ್ವೇಸ್‌ನ ಸುಪ್ರಿಯಾ ಎಸ್‌.ಬಿ.

ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಭಾರತಕ್ಕೆ ನಿರಾಸೆ

ಬಾಸೆಲ್ (ಪಿಟಿಐ): ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು.

ಸಂಕ್ಷಿಪ್ತ ಸುದ್ದಿ

ಡಬ್ಲ್ಯುಟಿಸಿಯಲ್ಲಿ ಬದಲಾವಣೆ: ಏಪ್ರಿಲ್ ಸಭೆಯಲ್ಲಿ ನಿರ್ಧಾರ

ಕೋಲ್ಕತ್ತಾ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಮುಂದಿನ (2025–27) ಆವೃತ್ತಿಯಲ್ಲಿ ಉದ್ದೇಶಿತ ಬದಲಾವಣೆಗಳನ್ನು ತರುವುದಕ್ಕೆ ಸಂಬಂಧಿಸಿದಂತೆ ಸೌರವ್ ಗಂಗೂಲಿ ನೇತೃತ್ವದ ಕ್ರಿಕೆಟ್ ಸಮಿತಿ ಮುಂದಿನ ತಿಂಗಳು ಅಂತಿಮ ನಿರ್ಧಾರಕ್ಕೆ ಬರಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಅಧ್ಯಕ್ಷ ಜಯ್ ಶಾ ಶನಿವಾರ ಖಚಿತಪಡಿಸಿದರು.
ಗಂಗೂಲಿ ನೇತೃತ್ವದ 16 ಮಂದಿಯ ಕ್ರಿಕೆಟ್ ಸಮಿತಿಯಲ್ಲಿ ವಿ.ವಿ.ಎಸ್. ಲಕ್ಷ್ಮಣ್, ಡೇನಿಯಲ್ ವೆಟ್ಟೋರಿ, ಮಹೇಲ ಜಯವರ್ಧನೆ, ಶಾನ್ ಪೊಲಾಕ್ ಮೊದಲಾದವರಿದ್ದಾರೆ. ಮೊದಲ ಎರಡು ಆವೃತ್ತಿಗಳಲ್ಲಿ ದೊರೆತ ಪ್ರತಿಕ್ರಿಯೆಗಳ ಆಧಾರದಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಐಸಿಸಿ ಪರಿಶೀಲನೆ ನಡೆಸುತ್ತಿದೆ ಎನ್ನಲಾಗಿದೆ.

ಜಿಮ್ನಾಸ್ಟಿಕ್ಸ್: ಪ್ರಣತಿಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಜಿಮ್ನಾಸ್ಟ್ ಪ್ರಣತಿ ನಾಯಕ್, ಟರ್ಕಿಯ ಅಂತ್ಯಾಲದಲ್ಲಿ ನಡೆಯುತ್ತಿರುವ ಎಫ್‌ಐಜಿ ಕಲಾತ್ಮಕ ಜಿಮ್ನಾಸ್ಟಿಕ್ಸ್ ಅಪಾರೆಟಸ್ ವಿಶ್ವಕಪ್‌ನಲ್ಲಿ ಶನಿವಾರ ಕಂಚಿನ ಪದಕ ಗೆದ್ದುಕೊಂಡರು.
ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ 29 ವರ್ಷ ವಯಸ್ಸಿನ ಪ್ರಣತಿ 13.417 ಸ್ಕೋರ್‌ನೊಡನೆ ಮೂರನೇ ಸ್ಥಾನ ಪಡೆದರು.

ಅಮೆರಿಕದ ಜಾಯ್ಲಾ ಹಂಗ್ (13.667) ಮತ್ತು ಕ್ಲಾರ್ ಪೇಸ್ (13.567) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.